ಶನಿವಾರ, ಮೇ 31, 2025 | ₹ 7.00
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net prajavani prajavani prajavani

ರೋಹಿತ್ 'ಸಿಕ್ಸರ್ ತ್ರಿಶತಕ'

ಮುಂಬೈ ಇಂಡಿಯನ್ಸ್ ತಂಡದ 'ಹಿಟ್‌ಮ್ಯಾನ್' ಖ್ಯಾತಿಯ ಬ್ಯಾಟರ್ ರೋಹಿತ್ ಶರ್ಮಾ ಐಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ಅತಿ ಹೆಚ್ಚು ಸಿಕ್ಸರ್ ದಾಖಲಿಸಿದ ಎರಡನೇ ಬ್ಯಾಟರ್ ಆಗಿದ್ದಾರೆ. ಅವರು ಏಳು ಸಾವಿರಕ್ಕೂ ಹೆಚ್ಚು ರನ್ ಗಳಿಸಿದ ಸಾಧನೆಯನ್ನೂ ಮಾಡಿದ್ದಾರೆ...

ಹೆಚ್ಚು ಸಿಕ್ಸರ್ ಹೊಡೆದವರು

357 ಕ್ರಿಸ್ ಗೇಲ್

302 ರೋಹಿತ್

291 ವಿರಾಟ್ ಕೊಹ್ಲಿ

ಏಳು ಸಾವಿರ ರನ್ ದಾಟಿದವರು

ವಿರಾಟ್ ಕೊಹ್ಲಿ (8618) ರೋಹಿತ್ ಶರ್ಮಾ (7038)

ಜಾಹೀರಾತು

"ಇಂಡಿಯನ್ ಸಾಫ್ಟ್ ಬಾಲ್ ಕ್ರಿಕೆಟ್ ಫೌಂಡೇಶನ್"
"ಕರ್ನಾಟಕ ಸಾಫ್ಟ್ ಬಾಲ್ ಪ್ರೀಮಿಯರ್ ಲೀಗ್"

ISCF INDIAN SOFTBALL CRICKET FOUNDATION

ಕ್ರಿಕೆಟ್ ಕ್ರಿಕೆಟ್ ಕ್ರಿಕೆಟ್ ಎಲ್ಲಿನೋಡಿದರು, ಎಲ್ಲಿ ಕೇಳಿದರು ಈಗ ಕ್ರಿಕೇಟ್ ಯುಗ ಅನ್ನುವ ಕಾಲ ಬಂದಿದೆ,

ಅವಕಾಶಕ್ಕಾಗಿ ಕಾಯುವ ಬಾಲಕರು, ಬಾಲಕಿಯರು ಎಲ್ಲೆಂದರಲ್ಲಿ ಕಾಣಸಿಗುತ್ತಾರೆ, ಯಾಕಂದರೆ ಈಗ ಕ್ರಿಕೆಟ್ ಹಬ್ಬ ನಡಿತಾ ಇದೆ.

ISCL KSPL-2

ಭಾರತದಲ್ಲಿ ಕ್ರಿಕೆಟ್ ತಂಡದಲ್ಲಿ ಅವಕಾಶ ಸಿಗುವುದು ಹನ್ನೊಂದು ಜನರಿಗೆ ಮಾತ್ರ, ಆ ಹನ್ನೊಂದರಲ್ಲಿ ಸ್ಥಾನ ಗಳಿಸಲು ಎನೆಲ್ಲ ಪ್ರಯತ್ನ ಪಡಬೇಕು, ಕಠಿಣ ಪರಿಶ್ರಮ ಪಡದಿದ್ದರೆ ಸಾಧನೆ ಶೂನ್ಯ ಅನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಎಲ್ಲಾ ಪ್ರಯತ್ನಗಳಿದ್ದರು ಅವಕಾಶಕ್ಕಾಗಿ ಕಾದು ಕೂಡುವ ಪರಸ್ಥಿತಿ ಬಂದಿದೆ ದಿನ ನಿತ್ಯ ಬೇಳೆಯುತ್ತಿರುವ ಜನಸಂಖ್ಯೆ ಈಗ 140 ಕೋಟಿಗು ಅಧಿಕವಾಗಿದೆ ನಮ್ಮ ಜನಸಂಖ್ಯೆ.

ಕ್ರಿಕೆಟ್ ಜಗತ್ತಿನಲ್ಲಿ ಹೊಸ ಅಧ್ಯಾಯವೊಂದು ಶುರುವಾಗುತ್ತಿದೆ, ಶುರುವಾಗಿದೆ ಕೂಡ, ಅದು ನಮ್ಮ ಹೆಮ್ಮೆಯ ಭಾರತದಲ್ಲಿ ಅದರಲ್ಲು ನಮ್ಮ ಕರ್ನಾಟದಲ್ಲಿ "ಇಂಡಿಯನ್ ಸಾಫ್ಟ್ ಬಾಲ್ ಕ್ರಿಕೆಟ್ ಫೌಂಡೇಶನ್" "(Indian Softball Cricket Foundation) ISCF ಅರಂಭವಾಗಿದೆ.

ಕ್ರಿಕೆಟ್ ಅಂದರೆ ಯಾರಿಗೆ ಇಷ್ಟ ಇಲ್ಲ ಹೇಳಿ.? ಭಾರತದಲ್ಲಿ ಅಷ್ಟೇ ಅಲ್ಲ ಹೊರ ದೇಶದ ಮಕ್ಕಳಲ್ಲು ಕ್ರಿಕೆಟ್ ಬಗ್ಗೆ ಪ್ರೀತಿ, ತಾನು ಕೂಡ ಒಂದು ದಿನ ಬ್ಯಾಟ್ ಹಿಡಿದು ಕ್ರಿಕೆಟ್ ಆಡಿಲ್ಲ ಅಂದರೆ ತನ್ನ ಬಾಲ್ಯವೇ ಅಪೂರ್ಣ ಎನ್ನುವ ಭಾವನೆಗೆ ಬಂದಿರುತ್ತಾರೆ, ಅದರಲ್ಲು ಕೆಲವರು ತಾವು ಕೂಡ ಸರ್ ಅಲನ್ ಬ್ರಾಡ ಮನ್, ಸಚೀನ ತಂಡೋಲ್ಕರ್, ಕಫೀಲ್ ದೇವ, ಗವಾಸ್ಕಾರ, ಬ್ರೀಯನ್ ಲಾರ್, ಜಾಂಟಿ ರೇಡ್ಸ, ಮಹೇಂದ್ರ ಸಿಂಗ್ ದೊನಿ ಅಲ್ಲದೇ ವಿರಾಟ್ ಕೊಹಿಲಿ ತರಹ ತಾವು ಆಡಬೇಕು ಹೆಸರು ಮಾಡಬೇಕು ಅಂತ ಕನಸ್ಸುಗಳಿರುತ್ತವೆ. ಹಗಲ ಗನಸ್ಸುಗಳನ್ನು ನನಸಾಗಿಸಲು ಶ್ರಮ ಪಡುವುದನ್ನು ನಾವು ದಿನ ನಿತ್ಯ ನೊಡುತ್ತೇವೆ. ಅದಕ್ಕಾಗಿ ತರಬೇತಿ ಸಂಸ್ಥೆಗಳು, ಶಾಲೆಗಳು ಹುಟ್ಟಿಕೊಂಡಿವೆ, ಕ್ರೀಡಾ ಮನೊಭಾವನೆ ಇರುವ ಪೊಷಕರು ತಮ್ಮ ಮಕ್ಕಳನ್ನು ತರಬೇತಿ ಶಾಲೆಗೆ ಕಳಿಸುತ್ತಿದ್ದಾರೆ, ತಮ್ಮ ಮಕ್ಕಳಿಗೆ ತರಬೇತಿ ಕೊಡಿಸುವುದರ ಜೊತೆಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಆಡಬೇಕು ಅಂತ ಕನಸು ಕಂಡಿರುತದತಾರೆ, ಎಷ್ಟೊ ಜನ ಬಡ ಪ್ರತಿಭಾವಂತರು ಬೆಳಕಿಗೆ ಬರದಂತೆ ದೂರ ಉಳಿದಿದ್ದಾರೆ, ಛಲ ಬಿಡದವ ಬಡವರು ತಮ್ಮ ಮಕ್ಕಳ ಭವಿಷಕ್ಕಾಗಿ ಮನೆ-ಮಠಗಳನ್ನು ಮಾರಿ ಹಣ ಹೊಂದಿಸುತ್ತಿದ್ದಾರೆ ಆದರೆ ಅವಕಾಶ ಸಿಗದಿದ್ದರೆ ಅಂತವರ ಸ್ಥಿತಿ ಬೆರೆನೇ ಇರುತ್ತ ಇರಲಿ, ಪ್ರತಿಭಾವಂತರಿಗೆ ಅವಕಾಶ ಕೊಡುವ ನಿಟ್ಟಿನಲ್ಲಿ ಹೊಸ ಪ್ರಯತ್ನ ಇಂಡಿಯನ್ ಸಾಫ್ಟ್ ಬಾಲ್ ಕ್ರಿಕೆಟ್ ಫೌಂಡೇಶನ್ ವತಿಯಿಂದ ನಡೆದಿದೆ,

ನಾವು ದಿನ ನಿತ್ಯ ನೊಡುವ ದೃಶ್ಯಗಳಲ್ಲಿ ತಾವು ಕೂಡ ಕ್ರಿಕೆಟ್ ಆಡಲೇ ಬೇಕು ಅಂತ ಶಾಲೆ/ಕಾಲೇಜುಗಳಿಗೆ ರಜೆ ಹಾಕಿ ರಜೆ ಕೊಡದಿದ್ದರೆ ಚಕ್ಕರ ಹೊಡೆದು ತಮ್ಮ ಸುತ್ತಲಿನ ಪರಿಸರದಲ್ಲಿ ಸಣ್ಣ ಪುಟ್ಟ ಟೂರ್ನಿಗಳಲ್ಲಿ ಅವಕಾಶ ಸಿಕ್ಕರೆ ಸಾಕು ಅನ್ನುವವರು, ಉದ್ಯೋಗ ಬಿಟ್ಟು ಕುಟುಂಬದ ಎಲ್ಲಾ ಸಿಹಿ-ಕಹಿ ಕ್ಷಣಗಳನ್ನು ತೊರೆದು ಮೂರೋತ್ತು ಆಟವಾಡುತ್ತ ನಾವು ಕೂಡ ರಣಜಿ, T-20 ಕ್ರಿಕೆಟ್‌ನ ಆಟಗಾರನಿಗು ಕಡಿಮೆ ಎನ್ ಇಲ್ಲ ಎಂದು ಕನಸು ಕಟ್ಟಿಕೊಂಡು ಅವಕಾಶಕ್ಕಾಗಿ ಊರು ಊರು ಸುತ್ತಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಿದ್ದಾರೆ, ಇಂತಹ ಗ್ರಾಮೀಣ ಭಾಗದ ಕ್ರಿಕೆಟ್ ಆಟಗಾರರನ್ನು ವೃತ್ತಿಪರ ಕ್ರಿಕೆಟಿಗರನ್ನಾಗಿ ಮಾಡುವ ಸದುದ್ದೇಶದಿಂದ ಆರಂಭವಾದ ಹೊಸ ಅಧ್ಯಾಯವೆ ಇಂಡಿಯನ್ ಸಾಫ್ಟ್ ಬಾಲ್ ಕ್ರಿಕೆಟ್ ಫೌಂಡೇಶನ್ (ಐಖಿಅಈ). ಸಾಫ್ಟ್ ಬಾಲ್ ಕ್ರಿಕೆಟಿ ನ್ನು ಉನ್ನತ ದರ್ಜೆಗೆ ಸ್ಥಾನ-ಮಾನ ಕೊಡಿಸುವ ಕನಸ್ಸು ಕಾಣುತ್ತಿರುವ ಕನ್ನಡಿಗ ನಮ್ಮ ಕರ್ನಾಟಕದ ಡಾ.ಗಂಗಾಧರ್ ರಾಜು ಎನ್ನುವುದು ಮತ್ತೊಂದು ಖುಷಿ ವಿಚಾರವೆ.

ಕೆಎಸ್ ಪಿಎಲ್ ಸೀಸನ್-1 2024 ವಿನ್ನರ್ ಹಾಸನ್ ರಾಕರ್ಸ್ ವಿಜೀತ ತಂಡ

2021 ರಲ್ಲಿ "ಕರ್ನಾಟಕ ಸಾಫ್ಟ್ ಬಾಲ್ ಕ್ರಿಕೆಟ್ ಪ್ರೀಮಿಯರ್ ಲೀಗ್" ಸಂಸ್ಥೆಯನ್ನು ಹುಟ್ಟು ಹಾಕಿದರು, 2021 ರಿಂದ 2024ರ ವರೆಗೆ ಕರ್ನಾಟಕ ರಾಜ್ಯದ ಉದ್ದಗಲಕ್ಕು ಸಂಚರಿಸಿ ಸಾವಿರಾರು ಕ್ರಿಕೆಟ್ ಆಟಗಾರರನ್ನು ಹಾಗೂ ಕ್ರೀಡಾ ಪ್ರೇಮಿಗಳನ್ನು ಬೇಟಿ ಮಾಡಿ ಆಯ್ಕೆ ಪ್ರಕ್ರಿಯೆ ಪ್ರಾರಂಭಿಸಿದರು. ರಾಜ್ಯದಲ್ಲಿ 700 ಜನ ಉತ್ತಮ ಆಟಗಾರರನ್ನು ಆಯ್ಕೆಮಾಡಿ 32 ತಂಡ ರಚಿಸಿ, 32 ತಂಡದ ಮಾಲಿಕತ್ವ ಜವದ್ಬಾರಿ ಕೊಟ್ಟು, 8 ವಿಭಾಗಗಳೊಂದಿಗೆ ಸತತ 30 ದಿನಗಳ ಕಾಲ 65 ಕ್ರಿಕೆಟ್ ಪಂದ್ಯಾವಳಿ ಮೂಲಕ "ಕರ್ನಾಟಕ ಸಾಫ್ಟ್ ಬಾಲ್ ಪ್ರೀಮಿಯರ್ ಲೀಗ್" (KSPL 2024) ಸೀಸನ್-1 ಅರಂಭಿಸಿದರು.

ಅಂತರಾಷ್ಟ್ರೀಯ ಮಟ್ಟದ ಕ್ರಿಕೆಟ್ ಮಾನದಂಡಗಳಿಂದಾಗಿ ಹೊಸ ಇತಿಹಾಸವನ್ನೆ ಬರೆಯುತ್ತಾ ಪರೀಣಿತರಿಂದ ಉತ್ಕೃಷ್ಟವಾದ ನಿರೂಪಣೆ, ವೀಕ್ಷಕ ವಿವರಣೆ, ದೂರದರ್ಶನದ ಪ್ರಸಾರ ಮತ್ತು ಪ್ರಾಯೋಜಕತ್ವದಲ್ಲಿನ ಸುಸಜ್ಜಿತ ಮೈದಾನದಲ್ಲಿ ಸಾಫ್ಟ್ ಬಾಲ್ ಕ್ರಿಕೆಟ್ ನಡೆಸಿ ಯಶಸ್ಸು ಕಂಡಿತು.

ಕರ್ನಾಟಕದ ಅತಿದೊಡ್ಡ ಕ್ರಿಕೆಟ್ ಸಮರ

ಹೌದು ಇದು ಕರ್ನಾಟಕದ ಅತಿದೊಡ್ಡ ಕ್ರಿಕೆಟ್ ಸಮರ ಎಂಬ ಹೆಮ್ಮೆಗೆ ಪಾತ್ರವಾದ ಕರ್ನಾಟಕ ಸಾಫ್ಟ್ ಬಾಲ್ ಕ್ರಿಕೆಟ್ ಪ್ರೀಮಿಯರ್ ಲೀಗ್ ದೊಡ್ಡ ಮಟ್ಟದಲ್ಲಿ ಯಶಸ್ಸು ಪಡೆದು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ದೂರದರ್ಶನ ಮತ್ತು ಸಾಮಾಜಿಕ ಜಾಲತಾಣಗಳ ಮುಖೇನ ಜನರ ಮನ ತಲುಪುವಂತ ವ್ಯವಸ್ಥೆ ಮಾಡಿದ್ದು ಸಂಸ್ಥಾಪಕ ಡಾ.ಗಂಗಾಧರ ರಾಜು ಮತ್ತು 32 ತಂಡದವರು ಹಾಗೂ ಆಯೋಜಕರು.

ಸಾಫ್ಟ್ ಬಾಲ್ ಕ್ರಿಕೆಟ್ 2024ರ ಸೀಸನ್-1 ನಲ್ಲಿ ಯಶಸ್ಸು ಮತ್ತು ಅನುಭವವನ್ನು ಪಡೆದ ತಂಡ ಇದೀಗ ತನ್ನ ಕದಂಭ ಬಾಹುಗಳನ್ನು ರಾಷ್ಟ ವ್ಯಾಪ್ತಿಯಲ್ಲಿ ಕೈ ಚಾಚುತ್ತಿದೆ, "ಇಂಡಿಯನ್ ಸಾಫ್ಟ್ ಬಾಲ್ ಕ್ರಿಕೆಟ್ ಫೌಂಡೇಶನ್" ಸ್ಥಾಪಿಸಿ ದೇಶದ 28 ರಾಜ್ಯಗಳ ಜೊತೆಗೆ ಅಂಡಮಾನ್ ನಿಕೋಬಾರ್, ಲಕ್ಷದ್ವೀಪ. ಪಾಂಡಿಚೇರಿ ಮುಂತಾದ 8 ಕೇಂದ್ರಾಡಳಿತ ಪ್ರದೇಶಗಳನ್ನು ಒಗ್ಗೂಡಿಸಿಕೊಂಡು 32 ತಂಡಗಳಾಗಿ ಭಾರತ ದೇಶವನ್ನು ಏಕತೆಗೋಳಿಸುವ ದೂರದೃಷ್ಟಿಯಿಂದ ದೇಶದ ಅತಿದೊಡ್ಡ ಸಾಫ್ಟ್ ಬಾಲ್ ಕ್ರಿಕೆಟ್ ಲೀಗ ಕಾರ್ಯತಂತ್ರವನ್ನು ರೂಪಿಸಿ ಅದಕ್ಕೆ ಇಂಡಿಯನ್ ಸಾಫ್ಟ್ ಬಾಲ್ ಕ್ರಿಕೆಟ್ ಲೀಗ್ ISCL ಎಂದು ಹೆಸರಿಡಲಾಯಿತು.

ಸುರೇಶ ರೈನಾ
ISCL - ರಾಯಭಾರಿ

ಡಾ. ಶಿವರಾಜ ಕುಮಾರ
KSPL - ರಾಯಭಾರಿ

ಸಾಫ್ಟ್ ಬಾಲ್ ಕ್ರಿಕೆಟ್ ರಾಯಭಾರಿಗಳು

ಸಾಫ್ಟ್ ಬಾಲ್ ಕ್ರಿಕೆಟ್ ISCL. ಗೆ 2011 ವಲ್ಡ್ ಕಫ್ ಹೀರೋಗಳಲ್ಲಿ ಒಬ್ಬರಾದ ಜಂಟಲ್ ಮ್ಯಾನ್ ಎಂದೇ ಖ್ಯಾತ ನಾಮರಾದ ಭಾರತ ತಂಡದ ಮಾಜಿ ಆಟಗಾರರಾದ ಹಾಗೂ ಭಾರತೀಯ ಕ್ರಿಕೆಟ್ ರೋಲ್ ಮಾಡೇಲ್ **ಸುರೇಶ ರೈನಾ** ರವರು ರಾಯಭಾರಿ ಯಾಗಿದ್ದಾರೆ.

ಅಲ್ಲದೇ 2025ರ KSPL ಲೀಗಗೆ ಕರ್ನಾಟಕದ ಕನ್ನಡ ಚಲನಚಿತ್ರ ನಟ **ಡಾ. ಶಿವರಾಜ ಕುಮಾರ** ರವರನ್ನು ರಾಯಭಾರಿಯಾಗಿದ್ದಾರೆ.

ಅಲ್ಲದೇ ಭಾರತೀಯ ಮಹಿಳಾ ತಂಡದ ಆಟಗಾರ್ತಿ ಶ್ರೇಯಾಂಕ ಪಾಟೀಲ್ ರವರು ಸೇರಿದಂತೆ ಪೂಜಾಗಾಂಧಿ, ಶುಭ ಪೂಂಜ, ಪ್ರಿಯಾಂಕ ಉಪೇಂದ್ರ, ರಂಜನಿ ರಾಘವನ್, ನವೀನ ಶಂಕರ ರವರಂತಹ ಹಲವಾರು ಸಿನಿಮಾ ನಟ-ನಟಿಯರು, ಕ್ರಿಕೆಟ್ ಲೋಕದ ತಾರೆಯರು ಗಣ್ಯವ್ಯಕ್ತಿಗಳಿಂದ ಪ್ರತಿದಿನ ಕ್ರೀಡಾಂಗಣದಲ್ಲಿ ಕ್ರೀಡಾ ಪಟುಗಳ ಹೊಸ ಹುಮ್ಮಸ್ಸನ್ನೆ ತರುವ ಜೊತೆಗೆ ಕರ್ನಾಟಕ ರಾಜ್ಯದ ಕ್ರಿಕೆಟ್ ಪ್ರೀಯರಿಗಂತು ರಸದೌತಣವೆ ಆಗಿತ್ತು. ಅಲ್ಲದೇ ಸಾಮಾಜಿಕ ಜಾಲತಾಣಗಳಲ್ಲಿ ಹಾಸನ ತಂಡದ ಪ್ರಶಾಂತ್ ಪಿಳ್ಳೈ, ಶಿಮಮೊಗ್ಗ ತಂಡದ ಪ್ರಜ್ವಲ್ ಗಂಗೊಳ್ಳಿ, ಕೊಪ್ಪಳ ತಂಡದ ವಿಘ್ನೇಶ ಪಟ್ಟಾಭಿ ರವರಂತ ಅಸಾಮಾನ್ಯ ಆಟಗಾರರು ಕಡೆಯ ಓವರ್ ನ ಕಡೆಯ ಬಾಲ್ ನಲ್ಲಿ ತಂಡವನ್ನು ಗೆಲುವಿನ ಗುರಿ ಮುಟ್ಟಿಸುವಂತಹ ಆಟಗಾರರ ವೀಡಿಯೋಗಳು ಲಕ್ಷ ಲಕ್ಷ ವೀಕ್ಷಣೆ ಪಡೆದಿರುವುದು ಮತೊಂದು ವಿಶೇಷವಾಗಿವೆ.

ರಾಷ್ಟ್ರ ಮಟ್ಟದಲ್ಲಿ ಸಾಫ್ಟ್ ಬಾಲ್ ಕ್ರಿಕೆಟ್ ಹೊಸ ಅಧ್ಯಾಯ ಶುರುವಾಗಿದೆ .. ಶ್ರೇಯಾಂಕ ಪಾಟೀಲ್ ಅಷ್ಟು ಮಟ್ಟದಲ್ಲಿ ಸಾಫ್ಟ್ ಬಾಲ್ ಕ್ರಿಕೆಟ್ ಮಾದರಿಗೆ ಒಂದು ಉತ್ತಮ ಅವಕಾಶವನ್ನು ಈ ಸಂಸ್ಥೆ ಸೃಷ್ಟಿಮಾರಿಕೊಡುತ್ತಿರುವುದು ಸಂತೊಷದ ವಿಷಯ ಹಾಗೂ ಸ್ವಾಗತಾರ್ಹ ಎಂದು ಬಣ್ಣಿಸಿ, ಸಾಫ್ಟ ಬಾಲ್ ಕ್ರಿಕೆಟ್ ಲೀಗನ ಆಯೋಜಕರು ಹೊಸ ಹೊಸ ಪ್ರತಿಗಳನ್ನು ಹುಡುಕಿ ಹೊರ ತರಲಿ ಎಂದರು. ಬೆಂಗಳೂರಿನ ಆಚಾರ್ಯ ಮೈದಾನದಲ್ಲಿ ನಡೆದ ಪಂದ್ಯವನ್ನು ಉದ್ಘಾಟಿಸಿ ಮಾತನಾಡಿದ ಭಾರತದ ಮಹಿಳಾ ತಂಡದ ಆಟಗಾರ್ತಿಯಾದ ಶ್ರೇಯಾಂಕ ಪಾಟೀಲ್ ಪಂಧ್ಯವನ್ನು ಕಣ್ಣು ತುಂಬಿಕೊಂಡರು,

ಸೀಸನ್-1 2024, ಸರಣಿ ಶ್ರೇಷ್ಠ : ಕೊಪ್ಪಳ ತಂಡದ ಗಣೇಶ

ಸೀಸನ್-1 ರ ಬೆಸ್ಟ್ ಆಫ್ ಕರ್ನಾಟಕ ವಿಜೇತ ತಂಡ

2024ರ ಬೆಸ್ಟ್ ಆಫ್ ಇಂಡಿಯಾ ಹಾಗೂ ಬೆಸ್ಟ್ ಆಫ್ ಕರ್ನಾಟಕ ತಂಡಗಳ ನಡುವೆ ಪಂದ್ಯದಲ್ಲಿ ಬೆಸ್ಟ ಆಪ್ ಕರ್ನಾಟಕ್ ತಂಡವು 28 ರನ್ ಗಳಿಂದ ರೆಸ್ಟ್ ಆಫ್ ಇಂಡಿಯಾ ತಂಡದ ವಿರುದ್ಧ ಗೆದ್ದು ಸೀಸನ್-1 ರ ಕಿರಿಟವನ್ನು ತನ್ನ ಮುಡಿಗೆ ಎರಿಸಿಕೊಂಡಿತು.

ಸಾಫ್ಟ ಬಾಲ್ ಕ್ರಿಕೆಟ್ ಲೀಗನ ಅಂಗವಾದ ವಿಶೇಷ ಪಂದವಳಿಯನ್ನು ಆಯೋಜಿಸಿದ್ದು ಖುಷಿತರುವಂತದ್ದು, ಯಾಕೆಂದರೆ ಇಂಡಿಯಾದಲ್ಲಿ ಸಾಫ್ಟ ಬಾಲ್ ಕ್ರಿಕೆಟ್ ಆಟವಾಡುತ್ತಿರುವ ಉತ್ತಮ ಆಟಗಾರರು "ಬೆಸ್ಟ್ ಆಫ್ ಇಂಡಿಯಾ" ದಲ್ಲಿದ್ದರೆ, ಆ ಸೀಸನಿನ ಲೀಗನಲ್ಲಿ ಆಟವಾಡುತ್ತಿರುವ ಉತ್ತಮ ಆಟಗಾರರು "ಬೆಸ್ಟ್ ಆಫ್ ಕರ್ನಾಟಕ" ದಲ್ಲಿರುತ್ತಾರೆ, ಆಟಗಾರರಿಗೆ ಮತ್ತಷ್ಟು ಪ್ರೊತ್ಸಾಹಿಸುವ ಉದ್ದೇಶದಿಂದ ನಡೆಸುವ ಬೆಸ್ಟ್ ಆಫ್ ಇಂಡಿಯಾ ಹಾಗೂ ಬೆಸ್ಟ್ ಆಫ್ ಕರ್ನಾಟಕ ಪಂಧ್ಯ ಆಡಲು ಆಟಗಾರರು ಕಾಯುತ್ತಿರುತ್ತಾರೆ.

ಬೆಂಗಳೂರಿನಲ್ಲಿ ನಡೆದ ಸಾಫ್ಟ್‌ಬಾಲ್ ಕ್ರಿಕೆಟ್ ಸೀಸನ್-1ರ ಕಪ್ಪನ್ನು ಗೆದ್ದ ಬೆಸ್ಟ ಆಪ್ ಕರ್ನಾಟಕ್ ತಂಡದ ಆಟಗಾರರು ಟ್ರೋಫೀಯೊಂದಿಗೆ ಸಂಭ್ರಮಿಸಿದರು. ಭಾರತದ ಮಹಿಳಾ ತಂಡದ ಆಟಗಾರ್ತಿಯಾದ ಶ್ರೇಯಾಂಕ ಪಾಟೀಲ್ ಪಂಧ್ಯಧ ಉದ್ಘಾಟಣೆಗೆ ಬಂದಿದ್ದರಿಂದ ಯುವಕ ಯುವತಿಯರಲ್ಲಿ ಹೊಸ ಚೇತನವನ್ನು ತಂದತಾಯಿತು.

2024 ಸೀಸನ್-1ರ ಪ್ರಶಸ್ತಿ ಪಡೆದ "ಬೆಸ್ಟ್ ಆಫ್ ಕರ್ನಾಟಕ"

ಇಂಡಿಯನ್ ಸಾಫ್ಟ್‌ಬಾಲ್ ಕ್ರಿಕೆಟ್ ಲೀಗ್‌ನ ಮುಂಬರುವ ಪಂದ್ಯಾವಳಿಯ ಉದ್ಘಾಟಣೆ

ಮುಂದಿನ ಪಂದ್ಯಾವಳಿಗಾಗಿ ನಿರೀಕ್ಷೆ ಹೆಚ್ಚಾಗಿದೆ!

- ಇಂಡಿಯನ್ ಸಾಫ್ಟ್‌ಬಾಲ್ ಕ್ರಿಕೆಟ್ ಲೀಗ್ (ಐಎಸ್‌ಸಿಎಲ್) ಪಂದ್ಯಾವಳಿಯು ನಮ್ಮ ಪ್ರಿಮಿಯರ್ ಟೂರ್ನಾಮೆಂಟ್ ಆಗಿದ್ದು, ರಾಜ್ಯಾದ್ಯಂತ ಇರುವ ಅತ್ಯುತ್ತಮ ಆಟಗಾರರ ಪ್ರತಿಭೆಯನ್ನು ಬೆಳಕಿಗೆ ತರಲಿದೆ.
- ಭಾರತದ ಎಲ್ಲಾ 28 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 32 ತಂಡಗಳು, ಉನ್ನತ ಮಟ್ಟದಲ್ಲಿ ಹಾಗೂ ಸ್ಪರ್ಧಾತ್ಮಕ ವಾತಾವರಣದಲ್ಲಿ ಪರಸ್ಪರ ಎದುರಾಗಲಿವೆ.
- ಕಣಕ್ಕಿಳಿಯಲಿರುವ ಸುಮಾರು 699 ಪ್ರತಿಭಾವಂತ ಸಾಫ್ಟ್‌ಬಾಲ್ ಕ್ರಿಕೆಟ್ ತಾರೆಗಳ ನವ ಪೀಳಿಗೆಯನ್ನು ಪರಿಚಯಿಸುವುದು ಮತ್ತು ಅಭಿವೃದ್ಧಿಪಡಿಸುವುದೇ ಐಎಸ್‌ಸಿಎಲ್ ಗುರಿಯಾಗಿದೆ.
- ಅಷ್ಟೇ ಅಲ್ಲದೆ, ಐಎಸ್‌ಸಿಎಲ್ ಪಂದ್ಯಗಳು ರಾಷ್ಟ್ರೀಯ ಟೆಲೆವಿಷನ್‌ಗಳಲ್ಲಿ ಪ್ರಸಾರಗೊಳ್ಳುವ ಮೂಲಕ ದೇಶಾದ್ಯಂತ ಕ್ರೀಡೆಯ ವೀಕ್ಷಣೆ ಮತ್ತು ಅಭಿಮಾನಿಗಳಲ್ಲಿನ ಉತ್ತೇಜನ ಹೆಚ್ಚಳವಾಗುತ್ತದೆ.
- ಪ್ರತಿಭೆಯನ್ನು ಪೋಷಿಸಿ ಕ್ರೀಡೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ, ಪಂದ್ಯಾವಳಿಯಲ್ಲಿ ಏಕತಾ ಮನೋಭಾವ ಹೆಚ್ಚಿಸಿ, ಕ್ರೀಡಾಪಟುಗಳಲ್ಲಿ ಹೆಮ್ಮೆಯ ಭಾವ ತುಂಬಿ, ವೀಕ್ಷಕರಿಗೂ ಉತ್ತೇಜನ ನೀಡುವ ಮೂಲಕ, ಐಎಸ್‌ಸಿಎಲ್ ಸಂಸ್ಥೆಯು ಕ್ರಿಕೆಟ್ ವಿಭಾಗದಲ್ಲಿ ಗಮನಾರ್ಹ ಬದಲಾವಣೆ ತರಲು ನಿರ್ಧರಿಸಿದೆ.

ಕೆಎಸ್‌ಪಿಎಲ್ ತಂಡವನ್ನು ಪ್ರೋತ್ಸಾಹಿಸುತ್ತಿರುವ ಸಿನಿತಾರೆಯರು

ಲೀಗ್ ಪಂದ್ಯಾವಳಿಯ ವಿವರ

1) ಗುಂಪು ಹಂತ (32 ತಂಡಗಳು)
- ತಲಾ 4 ತಂಡಗಳ 8 ಗುಂಪುಗಳು (ಎ-ಎಚ್).
- ಎ ಸುತ್ತಿನಲ್ಲಿ ತಲಾ ಗುಂಪಿಗೆ 6 ರೋಚಕ ಪಂದ್ಯಗಳು ರೌಂಡ್-ರಾಬಿನ್ ಮಾದರಿಯಲ್ಲಿ.
- ಪ್ರತಿ ಗುಂಪಿನಿಂದ 2 ಟಾಪ್ ಟೀಮ್‌ಗಳು ಹೊರಹೊಮ್ಮುತ್ತವೆ!

2) ರೌಂಡ್ ಆಫ್ 16 (16 ತಂಡಗಳು)
- ನಾಕೌಟ್ ಹಣಾಹಣಿ ಆರಂಭ!
- 8 ಉನ್ನತ ಮಟ್ಟದ ಪಂದ್ಯಗಳು.
- ಸೂಪರ್ 8 ಹಂತಕ್ಕೆ ವಿಜೇತರ ಪ್ರವೇಶ!

3) ಸೂಪರ್ 8 ಹಂತ (8 ತಂಡಗಳು)
- ಸೆಮಿಫೈನಲ್‌ಗೆ ಸ್ಥಾನ ಗಿಟ್ಟಿಸಲು ತಂಡಗಳ ರೂಪದಲ್ಲಿ 4 ರೋಚಕ ಹಣಾಹಣಿ

4) ಸೆಮಿಫೈನಲ್ಸ್ (4 ತಂಡಗಳು)
- ಚಾಂಪಿಯನ್‌ಶಿಪ್ ಪಂದ್ಯಕ್ಕೆ ಸ್ಥಾನ ಗಿಟ್ಟಿಸಿಕೊಳ್ಳಲು ನಾಲ್ಕು ಅಂತಿಮ ಮುಖಾಮುಖಿ ಪಂದ್ಯಗಳು!

5) ಗ್ರ್ಯಾಂಡ್ ಫಿನಾಲೆ (2 ತಂಡಗಳು)
- ಅಂತಿಮವಾಗಿ ಚಾಂಪಿಯನ್‌ಶಿಪ್ ಮುಡಿಗೇರಿಸಿಕೊಳ್ಳುವ ಒಂದು ಕೊನೆಯ ಪ್ರದರ್ಶನ!

ಹೆಚ್ಚುವರಿ ರೋಚಕತೆಗಾಗಿ ಭಾರತ, ಶ್ರೀಲಂಕಾ ಮತ್ತು (ಆಯ್ಕೆಯಾಗಬಹುದಾದ ಪಾಕಿಸ್ತಾನ) ಸೇರಿದಂತೆ ಒಂದು ವಿಶೇಷ ಪ್ರದರ್ಶನ ಪಂದ್ಯ!

ಭಾರತದ ಹೆಸರಾಂತ ಸಾಫ್ಟ್ ಬಾಲ್ ಆಟಗಾರರಾದ ಕೃಷ್ಣ ಸಾತ್ ಪುತ್ತೇ ರವರಿಗೆ ಶ್ರೇಯಾಂಕ ಪಾಟೀಲ ಗೌರವಿಸಿ ಫಲಕ ನೀಡುತ್ತಿರುವುದು

ಕೆಎಸ್‌ಪಿಎಲ್ 2024ರ ತೆರೆಮರೆಯ ನಾಯಕರು ಕೆಎಸ್‌ಪಿಎಲ್ 2024 ಕೇವಲ ಒಂದು ಪಂದ್ಯಾವಳಿ ಆಗಿರದೆ ಧೈರ್ಯ, ಪ್ರತಿಭೆ ಮತ್ತು ಉದಯೋನ್ಮುಖ ತಾರೆಯರ ಪ್ರದರ್ಶನವಾಗಿತ್ತು:

KSPL -2024 ಸೀಸನ್- 1 ರ ಪ್ರಶಸ್ತಿಗಳು

ಹರೀಶ್ (ಮಂಗಳೂರು)	:	ಅತ್ಯುತ್ತಮ ಬ್ಯಾಟ್ಸಮನ್ (ವಿಜೇತ ತಂಡ)
ರಿಶಾಲ್	:	ಅತ್ಯುತ್ತಮ ಬೌಲರ್ (ವಿಜೇತ ತಂಡ)
ಪ್ರಶಾಂತ ಪಿಳ್ಳೈ (ಹಾಸನ)	:	ಅತ್ಯುತ್ತಮ ಬ್ಯಾಟ್ಸಮನ್ ಮತ್ತು ಕ್ಯಾಚ್ (ರನ್ನರ್‌ಅಪ್)
ಇರ್ಫಾನ್ ಮುಧೋಳ್ (ವಿಜಯನಗರ)	:	ಗರಿಷ್ಠ ರನ್‌ಗಳ ಸಾಧಕ
ಗಣೇಶ್ (ಕೊಪ್ಪಳ)	:	ಮ್ಯಾನ್ ಆಫ್ ದಿ ಸಿರೀಸ್ (ಆಲ್-ರೌಂಡರ್)
ಸಲೀಮ್ (ಚಿಕ್ಕಬಳ್ಳಾಪುರ)	:	ಅತ್ಯುತ್ತಮ ಆಲ್ ರೌಂಡರ್
ಸಂದೀಪಕುಮಾರ್ ಸ್ಯಾಂಡಿ (ರಾಯಚೂರು)	:	ಅತ್ಯುತ್ತಮ ಬ್ಯಾಟ್ಸಮನ್ ಹರೀಶ್
(ಬೆಂಗಳೂರು ಶೌರ್ಯಾಸ್)	:	ಸಿರೀಸ್‌ನಲ್ಲಿ ಎರಡು ಅರ್ಧ ಶತಕಗಳು
ವಿಘ್ನೇಶ್ ಪಟ್ಟಾಭಿ (ಕೊಪ್ಪಳ)	:	ಚೇಸಿಂಗ್‌ನಲ್ಲಿ ಅತ್ಯುತ್ತಮ ಬ್ಯಾಟ್ಸ್‌ಮನ್
ಪ್ರಜ್ವಲ್ ಗಂಗೊಳಿ (ಶಿವಮೊಗ್ಗ)	:	ಅತ್ಯುತ್ತಮ ಫಿನಿಷರ್

ಕೆಎಸ್‌ಪಿಎಲ್-2025 ಸೀಸನ್-2 ರ ತಂಡಗಳ ಆಯ್ಕೆಯ ಪ್ರಕ್ರಿಯೆ

ಆಯಾ ಜಿಲ್ಲೆಗಳಲ್ಲಿ ಜೂನ್ 1 ರಿಂದ ಪ್ರಾರಂಭವಾಗುವುದು. ಹೆಚ್ಚಿನ ಮಾಹಿತಿಗಾಗಿ ವಾಟ್ಸಪ್ ವೆಬ್‌ಸೈಟ್ ಇನ್ಸ್ಟಾಗ್ರಾಂ ಟ್ವಿಟರನಲ್ಲಿ ಸಂಪರ್ಕಿಸಿ.

ಈ ಆಂದೋಲನದಲ್ಲಿ ಪಾಲ್ಗೊಳ್ಳಿರಿ

ನೀವು ಆಟಗಾರರಾಗಿರಲಿ, ತರಬೇತುದಾರರಾಗಿರಲಿ, ಅಭಿಮಾನಿಗಳಾಗಿರಲಿ ಅಥವಾ ಪ್ರಾಯೋಜಕರಾಗಿರಲಿ – ಈ ಕ್ಷಣವು ಮಾತ್ರ ನಿಮ್ಮದಾಗಿರಲಿ.

ಕೆಎಸ್‌ಪಿಎಲ್ ಸೀಸನ್ 2ರ ಪಂದ್ಯಾವಳಿಗಳು 2025 ನವಂಬರ್ 1 ರಿಂದ 30 ರವರೆಗೆ

ಐಎಸ್‌ಸಿಎಲ್ ನ್ಯಾಷನಲ್ ಲೀಗ್ ಪಂದ್ಯಾವಳಿಗಳು 2025 ಡಿಸಂಬರ್ 1 ರಿಂದ 28 ರವರೆಗೆ

ಕಿರಿದಾದ ಗಲ್ಲಿಗಳಿಂದ ರಾಷ್ಟ್ರೀಯ ಕ್ರೀಡಾಂಗಣಗಳವರೆಗೆ, ಇದು ಭಾರತದ ಸಾಫ್ಟ್‌ಬಾಲ್ ಕ್ರಿಕೆಟ್‌ನ ಕ್ರಾಂತಿ.

Sl.No	Team Name	Owner Name
1	BAGALKOT BULLS	Shrishail M Jogajinni
2	BELLARI LEGENDS	Shashidhar S. M / K.S. Nagaraj
3	BENGALURU GLADIATORS	Sreekanth V
4	BENGALURU RURAL KEMPEGOWDAS	Suresh
5	BENGALURU SHOURYAS	Aditya
6	CHAMARAJANAGAR TUSKERS	Lakshmi K / Rakshitha K
7	CHIKKABALLAPUR CHAMPIONS	Ravikumar S.K
8	CHIKKAMAGALURU CRICKET CLUB	S L Manjunath
9	CMM LIONS HAVERI	Ganesh Javour
10	DAVANAGERE CHALLENGERS	Naveen Kumar
11	AYCOS DHARWAD	Ramesh
12	GADAG POWERS	Kaveri / Swetha
13	HASSAN ROCKERS	Darshan K A
14	KALABURAGI KSHATRIYAS	Rakshita Hiremath
15	KOLAR CHAKRAWORTHYS	Suresh
16	KOPPAL KNIGHTSRIDER	Marutesh Ramanna Jana / Satish Mural
17	RAPID WARRIORS CHITHRADURGA	Lokesha A G
18	MANAGALURU PANTHERS	K R Prakasha
19	MANDYA MASTERS	Bagegowda M V/ Mohan
20	MYSURU MAHARAJA'S	Ambika B.N
21	ROYAL FIGHTERS BENGALURU	Ananya
22	YOGASHREE RAICHUR KINGS	Mallanna and Vani Shree T
23	RAJA SH1VAJI BELAGAVI	Anjali Thayi Foundation/Jignesh Hamlai
24	SHIVAMOGGA TIGERS	Chethan D S
25	AKUL TOURISM KODAGU	H M Akul
26	TEAM BIDAR BADSHAH'S	Santosh
27	TUMAKURU TITANS	Raghu T S
28	UDUPI WARRIORS	Umesh / Sharadha
29	UTTARA KANNADA	Meenakshi Vasantha Raju/ Jayalakshmi Baratam
30	VIJAYANAGAR CONQUERORS	Manjunatha B R
31	VIJAYAPURA VEERA'S	Siddaram Iranna Desai
32	YADGIR YODDHAS	Suma H C/Ranjith

ಸರಣಿ ಪಂದ್ಯಾವಳಿಯಲ್ಲಿ ಗೆದ್ದ ತಂಡಕ್ಕೆ ಪ್ರಶಸ್ತಿ ಪ್ರಧಾನ ಮಾಡುತ್ತಿರುವ ನಾಗರಾಜ ಕೆ.ಎಸ್.

ನುಡಿ ನಮನ

ಎಚ್ಚೆಸ್ವಿ ದೀಪ ನಂದಿತು ದೀಪದಲ್ಲಿ

● ಎಂ.ಆರ್. ದತ್ತಾತ್ರಿ

ಸಾಲು ಮುಗಿದು ಸಂಗೀತ ಕರಗಿ ಆರ್ದ್ರ ಭಾವಗೀತೆಯೊಂದು ಮೌನಕ್ಕೆ ಜಾರಿದಂತೆ ಕವಿ ಎಚ್ಚೆಸ್ವಿಯವರು ನಮ್ಮನ್ನು ಅಗಲಿದ್ದಾರೆ. ಅವರದೇ 'ಗಂಧವ್ರತ' ಕವಿತೆಯ ಅಗರುಬತ್ತಿಯಂತೆ ನಿರಂತರವಾಗಿ ಉರಿಯುತ್ತ ಸಾಹಿತ್ಯವನ್ನು ವ್ರತದಂತೆ ಸ್ವೀಕರಿಸಿ, ಆಯುಷ್ಯ ಸವೆಸಿ ನಡೆದಿದ್ದಾರೆ. ಹೋದ ತಿಂಗಳ ತನಕವೂ, ಹಾಸಿಗೆಯಿಂದ ಏಳಲಾಗದಾಗಲೂ, ಕ್ಯಾನ್ಸರ್‌ನಿಂದ ಕೃಶವಾದ ದೇಹದ ಅಸಾಧ್ಯ ಭಾದೆಯಲ್ಲೂ, ಕಾವ್ಯದ ಮಾತುಗಳನ್ನಾಡಿದರೆ ಅವರ ಮುಖವು ಅರಳುತ್ತಿತ್ತು, ಕಣ್ಣುಗಳಲ್ಲಿ ಬೆಳಕು ಹೊಮ್ಮುತ್ತಿತ್ತು. ನೋವಿನ ಅರೆಪ್ರಜ್ಞೆಯಲ್ಲೂ ಕವಿತೆ ಓದಲು ಹಂಬಲಿಸುತ್ತಿದ್ದರು. ಇನ್ನೊಂದಿಷ್ಟು ಸಾನೆಟ್ಟುಗಳನ್ನು ಬರೆಯುವುದಿದೆ ಎಂದಿದ್ದರು. ಅವರ ಅನುಭವದ ಪುತಿನರನ್ನು ಮತ್ತಷ್ಟು ಬರೆಯಬೇಕೆಂದಿದ್ದರು. ಮೊಮ್ಮಗನ ಇಂಗ್ಲಿಷ್ ಕವಿತೆಗಳಿಗೆ ಸಮಾನಾಂತರವಾಗಿ ಕನ್ನಡ ಕವಿತೆಗಳನ್ನು ಬರೆದು ಒಂದೇ ಪುಸ್ತಕದಲ್ಲಿ ಅಕ್ಕಪಕ್ಕ ಪುಟಗಳಲ್ಲಿ ಪ್ರಕಟಿಸುವ ಇಚ್ಛೆಯನ್ನು ವ್ಯಕ್ತಪಡಿಸಿದ್ದರು. ಗಂಧವ್ರತ ಬಾಳು ಅವರದ್ದು. ಲೇಖನಿಯನ್ನು ಕೈಯಲ್ಲಿ ಹಿಡಿಯಲಾಗದ ಸ್ಥಿತಿಯಲ್ಲೂ ಕಾವ್ಯ ಧ್ಯಾನವು ಅವರನ್ನು ಆವರಿಸಿಕೊಂಡಿತ್ತು. ಒಬ್ಬ ಕವಿಯು ತನ್ನ ಜೀವನದ ಪ್ರತಿಕ್ಷಣವೂ ಕವಿಯಾಗೇ ಇರುವುದು ಹೇಗೆ ಎನ್ನುವುದನ್ನು ಬಾಳಿ ತೋರಿಸಿಕೊಟ್ಟು ನಡೆದವರು ಅವರು.

ಎಚ್ಚೆಸ್ವಿಯವರ ಕಾವ್ಯವನ್ನು ಒಟ್ಟಾಗಿ ಗಮನಿಸಿದರೆ ನಮಗೆ ಎದ್ದು ಕಾಣುವ ಗುಣಾಂಶವೆಂದರೆ ಅವರ ನಿರಂತರ ಶೋಧನೆ. ಕವಿತೆಯ ವಸ್ತು, ವಿನ್ಯಾಸ, ಛಂದಸ್ಸು, ಭಾಷೆ, ದೃಶ್ಯ, ಧ್ವನಿಗಳಲ್ಲಿ ಅವರು ಸದಾ ಪ್ರಯೋಗಶೀಲರಾಗಿದ್ದರು. ಸಾಹಿತ್ಯ ಪ್ರಯೋಗಕ್ಕಾಗಿ ಹೊಸ ಮಾಧ್ಯಮಗಳನ್ನು ಹುಡುಕಿಕೊಳ್ಳಲು ಅವರಿಗೆ ಯಾವ ಸಂಕೋಚವೂ ಇರಲಿಲ್ಲ. ಭಾವಗೀತೆಗಳೆಡೆಗೆ ಮೂಗುಮುರಿಯುವ ಕಾಲದಲ್ಲಿಯೂ ಅವರು ಧೃತಿಗೆಡದೆ ಭಾವಪೂರ್ಣ ಗೀತೆಗಳನ್ನು ರಚಿಸಿ, ಹಾಡಿಸಿ ಸುಗಮಸಂಗೀತದ ಮೂಲಕ ಕನ್ನಡಿಗರ ಮನಗೆದ್ದರು. ಅವರ ಯಾವ ಕಾರ್ಯಕ್ರಮವೆಂದರೂ ಅದು ಸಾಹಿತ್ಯ ಮತ್ತು ಸಂಗೀತದ ಮೇಳವಾಗಿರುತ್ತಿತ್ತು. ಎಷ್ಟು ಸಾಹಿತಿಗಳ ಒಡನಾಟವು ಅವರಿಗಿತ್ತೋ ಅಷ್ಟೇ ಸಂಗೀತಗಾರರ ಒಡನಾಟವೂ ಅವರಿಗಿತ್ತು. ಬರಹಗಾರರು ಮತ್ತು ಹಾಡುಗಾರರನ್ನು ಅವರಂತೆ ಒಂದೇ ವೇದಿಕೆಗೆ ತಂದ ಮತ್ತೊಬ್ಬರ ಕುರಿತು ನನಗೆ ತಿಳಿಯದು. ಅದಕ್ಕೆ ಕೊನೆಯ ಸಾಕ್ಷಿ ಎನ್ನುವಂತೆ ಅವರ ಪಾರ್ಥಿವ ಶರೀರವನ್ನು ದರ್ಶನಕ್ಕಾಗಿ ರವೀಂದ್ರ ಕಲಾಕ್ಷೇತ್ರದಲ್ಲಿಟ್ಟಾಗ ಕನ್ನಡದ ಅತ್ಯುತ್ತಮ ಸುಗಮಸಂಗೀತ ಗಾಯಕರು ಹಾಡುಗಳ ಮೂಲಕ ಅವರಿಗೆ ತಮ್ಮ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಿದ್ದರು. ಕಾದಂಬರಿಕಾರನಾದ ನನಗೆ ನಾಡಿನ ಅನೇಕ ಪ್ರಸಿದ್ಧ ಸಂಗೀತಗಾರರ ಪರಿಚಯವಾದದ್ದು ಅವರ ಮನೆಯಲ್ಲೇ.

ಎಚ್ಚೆಸ್ವಿಯವರು ತಮ್ಮ ನಿತ್ಯ ಲೋಕಗ್ರಹಿಕೆಯನ್ನು ನಿರಂತರವಾಗಿ ಕಾವ್ಯವಾಗಿ ಪರಿವರ್ತಿಸಿಕೊಂಡವರು. ಇದಕ್ಕೆ ಉದಾಹರಣೆಗಳು ಸಾಕಷ್ಟಿವೆ. ಬೇಂದ್ರೆಯವರ ಕಾವ್ಯದಂತೆ ತಮ್ಮ ಸುಖ ದುಃಖಗಳನ್ನು ವ್ಯಕ್ತಪಡಿಸುವ ಅವರ ಮಾರ್ಗ ಕಾವ್ಯವೇ ಆಗಿದ್ದಿತು. ಹದಿನೆಂಟು ವರ್ಷಗಳ ಹಿಂದೆ ಅವರ ಪತ್ನಿ ಮೃತರಾದಾಗ ಅವರ ಆಳದ ನೋವು 'ಉತ್ತರಾಯಣ' ಕವಿತೆಯಾಗಿ ಹೊಮ್ಮಿತ್ತು. 'ಎಳಿ ಬಂತು ಊರು ಎಂದು ಹೇಳಲೇ ಇಲ್ಲ ನೀನು. ನನಗೂ ಮೈಮರೆವೆ / ಅರ್ಧ ಪಂಚೆ ಸುತ್ತಿಕೊಂಡು ಹೆಂಡತಿ ಹೊರಟಾಗ ಹೊರಕ್ಕೆ / ಗಂಡನಿಗಿನ್ನೂ ಮರಣಾಂತಿಕ ನಿದ್ದೆ'– ಅವರ ಒಂಟಿತನ, ಅಸಹಾಯಕತೆ ಮತ್ತು ಸಂಕಟಗಳು ಕಾವ್ಯದಲ್ಲಿ ವ್ಯಕ್ತವಾಗಿದ್ದು ಹಾಗೆ. ಆದರೆ, ಅದೇ ಕವಿತೆಯ ಮುಂದುವರೆದ ಭಾಗವಾಗಿ ಮುಂದೆ 'ವೈದೇಹಿ' ಕವಿತೆಯನ್ನು ಬರೆಯುವಾಗ ಮತ್ತದೇ ವಸ್ತುವನ್ನೇ ಅವರು ಉದ್ದೇಶಿಸಿದ್ದರೂ ಬರೆದ ರೀತಿ, ಮನಃಸ್ಥಿತಿ, ಕಂಡ ತತ್ತ್ವ ಎಲ್ಲವೂ ಹೊಸದಾಗಿದ್ದವು. ವಿಷಾದವನ್ನು ಮೀರಿ ಕವಿತೆಯು ನಿಂತಿತು. ಕಾಣೆಯಾದ ಸಂಗಾತಿಯನ್ನು ಕಾಲಾತೀತ ಪ್ರತಿಮೆಯಾಗಿಸಿ ಮಾನಸ ಜಲದಲ್ಲಿ ಮುಳುಗಿಸಿಕೊಳ್ಳುವ ಹಾಗೂ ಆ ಮೂಲಕ ಕೃತಿಯಾಗಿ ಉಳಿಸಿಕೊಳ್ಳುವ ಕಾವ್ಯ ಸಂವೇದಿತ ಉದ್ದೇಶ ಅವರಿಗೆ ಹೊಳೆದಿತ್ತು. ಇದು ನಿರಂತರ ಕಾವ್ಯ ಚಿಂತನೆಯ ಫಲ. ತಮ್ಮದೇ ಆತ್ಮಸಾಕ್ಷಿಯ ಕುದಿಯಲ್ಲಿ ಕಾವ್ಯವನ್ನು ಹದವಾಗಿಸುವ ಕಲೆ ಕೂಡ. ದೇಹ ಅಳಿದ ಮೇಲೂ ನಮ್ಮೊಂದಿಗೆ ಈ ಕವಿಯು ಉಳಿದುಹೋಗುವ ಬಗೆಯು ಹಾಗೆ.

ದಿಗ್ಗಜರ ಸಮಾಗಮ... ಕವಿ ಚನ್ನವೀರ ಕಣವಿ ಜತೆ...

ಎಚ್ಚೆಸ್ವಿಯವರ ಬದುಕಿನ ದೊಡ್ಡ ವಿಶೇಷವೆಂದರೆ ಅವರು ತಮ್ಮ ಹಿರಿಯರು, ಸಮಕಾಲೀನರು, ಮತ್ತು ಕಿರಿಯರೊಂದಿಗೆ ಬೆರೆತ ಬಗೆ. ಪುತಿನ, ಯು.ಆರ್. ಅನಂತಮೂರ್ತಿ, ಗೋಪಾಲಕೃಷ್ಣ ಅಡಿಗ, ಜಿ.ಎಸ್. ಶಿವರುದ್ರಪ್ಪ ಮುಂತಾದ ಹಿರಿಯರೊಂದಿಗೆ ಅವರಿಗೆ ಆತ್ಮೀಯ ಅನುಸಂಧಾನವಿದ್ದಂತೆ ತಮ್ಮ ತಲೆಮಾರಿನ ಕಿರಿಯರೊಂದಿಗೂ ಅವರಿಗೆ ಸಾಹಿತ್ಯ ಸಂಹವನ ಸಾಧ್ಯವಿತ್ತು. ಆ ಕಾರಣಕ್ಕೇನೇ ಅವರಿಗೆ 'ಅಮೆರಿಕದಲ್ಲಿ ಬಿಲ್ಲುಹಬ್ಬ' ಬಗೆಯ ವಿಶೇಷ ಕವಿತೆಯನ್ನು ಬರೆಯಲು ಆಯಿತು. ಆ ಕವಿತೆಯಲ್ಲಿ ಮಧುರೆಗೆ ಹೊರಟುನಿಂತ ಗೋಪಾಲನ ಸಂಭ್ರಮವನ್ನು ಕಂಡು ಗೋಪ ಚಿಂತಾಕ್ರಾಂತನಾಗುತ್ತಾನೆ. ಆದರೆ ಗೋಪಾಲನಿಗೆ ಮಧುರೆಯ ಆಕರ್ಷಣೆಯನ್ನು ತಪ್ಪಿಸಿಕೊಳ್ಳಲಾಗುವುದಿಲ್ಲ. ಎಚ್ಚೆಸ್ವಿ ಈ ಕವಿತೆಯನ್ನು ಕನಸನ್ನು ಬೆನ್ನತ್ತಿ ಅಮೆರಿಕಕ್ಕೆ ತೆರಳುವ ಯುವಜನತೆಯ ಅಂತರಂಗವನ್ನು ಶೋಧಿಸಲು ಬರೆದಿದ್ದಾರೆ. ಒಬ್ಬರ ಹಿಂದೆ ಒಬ್ಬರು ಅಮೆರಿಕಕ್ಕೆ ತೆರಳುವಾಗ ಬೃಂದಾವನದಲ್ಲಿ ಕೈಕಾಲು ಬಿದ್ದವರಷ್ಟೆ ಉಳಿಯುವರೇನೋ ಎನ್ನುವ ಭಯವು ಕಾಡುತ್ತದೆ. ಈ ಕವಿತೆಯ ವಿಶೇಷವೆಂದರೆ ಇಲ್ಲೆಲ್ಲೂ ಅವರು ಯಾರನ್ನೂ ಅಪರಾಧಿಯಾಗಿಸಲು ಹೋಗಿಲ್ಲ. ವಲಸೆ ಕುರಿತಾದ ಅವರ ಈ ಅಂತಃಕರಣ ನಿಲುವೇ ನನ್ನನ್ನು ಅವರೆಡೆಗೆ ಸೆಳೆಯಿತು. ಒಂದು ಕವಿತೆಯಿಂದ ಪ್ರಾರಂಭವಾದ ನಮ್ಮ ಸ್ನೇಹವು ಕೊನೆಯತನಕ ಉಳಿಯಿತು.

ಪುರಾಣದ ವಸ್ತುವನ್ನು ಸಮಕಾಲೀನವಾಗಿಸುವುದು ಎಚ್ಚೆಸ್ವಿಯವರ ವಿಶೇಷವಾಗಿತ್ತು. ಅದಕ್ಕೆ ಮತ್ತೊಂದು ಉದಾಹರಣೆಯಾಗಿ ಅವರ 'ಶಿಶಿರಪಾಡು' ಕವಿತೆಯನ್ನು ನೋಡಿ. ಆ ಕವಿತೆಯಲ್ಲಿ ಕವಿ ವಾಲ್ಮೀಕಿಯು ಸೀತೆಯ ದುಃಖಕ್ಕೆ ತತ್ತರಿಸಿಹೋಗುತ್ತಾನೆ. ಶ್ರೀರಾಮಪಟ್ಟಾಭಿಷೇಕದ ನಂತರ ಕೃತಿ ಮುಗಿಸಿದ ತೃಪ್ತಿಯಲ್ಲಿರುವ ವಾಲ್ಮೀಕಿಗೆ ಬಿಕ್ಕಳಿಸುವ ಸೀತೆಯು ಎದುರಾಗುತ್ತಾಳೆ. 'ರಾಮನಿರುವನಕ ರಾಮಾಯಣವು ಮುಗಿಯುವುದೆ? ಅಂತೆ ಸೀತೆಯ ಚಿಂತೆ ಸಾಯುವನಕ' ಸೀತೆಯ ದುಃಖಕ್ಕೆ ವಾಲ್ಮೀಕಿ ತತ್ತರಿಸುತ್ತಾನೆ, ಹಾಗೆಯೇ ಕವಿ ಎಚ್ಚೆಸ್ವಿ. ಅದೇ ಬಗೆಯಲ್ಲಿ, ಬುದ್ಧನು ತನ್ನ ಜ್ಞಾನೋದಯದ ತರುವಾಯ ಕಪಿಲವಸ್ತುವಿಗೆ ಮೊದಲಬಾರಿಗೆ ಬಂದಾಗ ಮತ್ತು ಪತ್ನಿ ಯಶೋಧರೆಯು ಮುಖಾಮುಖಿಯಾದಾಗ ಬುದ್ಧನಿಗಿಂತಲೂ ಆಳದಲ್ಲಿ ಪರಿತಪಿಸುವವರು ಕವಿ ಎಚ್ಚೆಸ್ವಿ. ಪಾತ್ರ ಒಂದನ್ನ ಆಳದ ಅಂತಃಕರಣದಲ್ಲಿ ನೋಡಬಲ್ಲ ಕವಿಗೆ ಮಾತ್ರ ಈ ಬಗೆಯ ದುಃಖದ ಅಭಿವ್ಯಕ್ತಿ ಸಾಧ್ಯ. ಎಚ್ಚೆಸ್ವಿಗೆ ಆ ಬಗೆಯ ಅಂತಃಕರಣವಿತ್ತು.



ಕಾವ್ಯದ ಓದಿನ ಸುಖದಲ್ಲಿ ಎಚ್ಚೆಸ್ವಿ

ಬೆಂಗಳೂರಿನಲ್ಲಿ 'ಅಭ್ಯಾಸ' ಎನ್ನುವ ಸಾಹಿತ್ಯಾಸಕ್ತರ ಗುಂಪಿನೊಂದಿಗೆ ಅವರು ಬೆರೆತದ್ದು ಮತ್ತು ಗುರುವಾಗಿ ಹೊಸತಲೆಮಾರಿನ ಆಸಕ್ತ ಓದುಗರಿಗೆ ಮತ್ತು ಹವ್ಯಾಸಿ ಬರಹಗಾರರಿಗೆ ಕನ್ನಡ ಪರಂಪರೆಯನ್ನು ಕಲಿಸಿದ್ದು ಅವರ ದೊಡ್ಡತನ. ಗುಂಪಿನಲ್ಲಿದ್ದವರಲ್ಲಿ ಬಹುಪಾಲು ಐಟಿ ವೃತ್ತಿಯನ್ನು ಮಾಡುವವರು. ಆದರೆ ಕನ್ನಡ ಸಾಹಿತ್ಯದಲ್ಲಿ ಆಸಕ್ತಿಯನ್ನು ಹೊಂದಿದ್ದವರು. ಎಚ್ಚೆಸ್ವಿಯವರ ಕೃಪೆಯಿಂದಾಗಿ ಪಂಪ, ರನ್ನ, ಲಕ್ಷ್ಮೀಶ, ಕುಮಾರವ್ಯಾಸ ಮುಂತಾದ ಪೂರ್ವಸೂರಿಗಳ ಪರಿಚಯವು ಕ್ರಮಬದ್ಧವಾಗಿ ನಡೆಯಿತು. ಒಬ್ಬ ಸಾಹಿತ್ಯ ಶಿಕ್ಷಕನಾಗಿ ಅವರಿಗಿದ್ದ ನಿಷ್ಠೆಯ ಫಲವದು.

ನಮ್ಮ ಅರಿವು ಮತ್ತು ಕಾವ್ಯಾನುಭವಗಳನ್ನು ಹಿಗ್ಗಿಸಿ ಎಚ್.ಎಸ್. ವೆಂಕಟೇಶಮೂರ್ತಿ ನಮ್ಮನ್ನಗಲಿದ್ದಾರೆ. ನಮಗೆ ಕಾವ್ಯ ಚಿಂತನೆಯನ್ನು ಕಲಿಸಿದ್ದಾರೆ. ಗಂಧವ್ರತರಾಗುವುದು ಹೇಗೆಂಬುದನ್ನು ಖುದ್ದು ಬದುಕಿ ತೋರಿಸಿಕೊಟ್ಟಿದ್ದಾರೆ. ನಮ್ಮೆದೆಗಳಲ್ಲಿ ಕಾವ್ಯ ದೀಪವನ್ನು ಬೆಳಗಿ ತಾವು ತಮ್ಮ ಬುದ್ಧಚರಣದ ಸಾಲುಗಳಂತೆ ದೀಪದಲ್ಲಿ ದೀಪವಾಗಿ ಹೊಸ ಆಯಾಮಕ್ಕೆ ಜಾರಿದ್ದಾರೆ. ಕನ್ನಡ ಸಾಹಿತ್ಯಲೋಕವು ಸದಾಕಾಲ ನೆನಪಿಡುವ ಕವಿ ಇವರು. ❖



ಚಿತ್ರಗಳು: ಬಿ.ಎಂ.ಕೇದಾರನಾಥ್

ಬಿ.ಆರ್ ಲಕ್ಷ್ಮಣ್ ರಾವ್ ಜತೆ ಎಚ್ಚೆಸ್ವಿ ಸಂಗ್ರಹ ಚಿತ್ರ: ರಂಜು ಪಿ

'ಮೊದಲ ಓದುಗ, ಏಕವಚನದ ಗೆಳೆಯ'

● ಬಿ.ಆರ್. ಲಕ್ಷ್ಮಣರಾವ್

ನಾನು ರಚಿಸಿದ ಕೃತಿಗಳಿಗೆ ಮೊದಲ ಓದುಗ ಎಚ್.ಎಸ್. ವೆಂಕಟೇಶಮೂರ್ತಿಯಾದರೆ, ಆತ ರಚಿಸಿದ ಕೃತಿಗಳಿಗೆ ಮೊದಲ ಓದುಗ ನಾನು. ನಾವಿಬ್ಬರೂ ಏಕವಚನದ ಗೆಳೆಯರು. ಈಗ ಮೊದಲ ಓದುಗ ಹಾಗೂ ಗೆಳೆಯನನ್ನು ಕಳೆದುಕೊಂಡಿದ್ದೇನೆ. ಆತನ ಅಗಲುವಿಕೆ ನನಗೆ ಮಾತ್ರ ಅಲ್ಲ, ಇಡೀ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟ.

ನಮ್ಮಿಬ್ಬರದ್ದು 50 ವರ್ಷಗಳ ಗೆಳೆತನ. 1976ರಲ್ಲಿ ಮೊದಲ ಬಾರಿ ಭೇಟಿ ಆಗಿದ್ದೆವು. ಅದಕ್ಕೂ ಮೊದಲು ನಾವು ಕವಿತೆಗಳನ್ನು ಪರಸ್ಪರ ಮೆಚ್ಚಿಕೊಂಡಿದ್ದೆವು. ಆ ವೇಳೆ ಆತ 'ಸುಧಾ' ವಾರಪತ್ರಿಕೆಯಲ್ಲಿ ಮಕ್ಕಳ ಸಾಹಸದ ಬಗ್ಗೆ ಧಾರಾವಾಹಿ ಬರೆಯುತ್ತಿದ್ದ. ಅದನ್ನು ನಾನು ತಪ್ಪದೆ ಓದುತ್ತಿದ್ದೆ. ಬೆಂಗಳೂರಿನ ತ್ಯಾಗರಾಜನಗರದ ಗಣೇಶನ ಗುಡಿ ರಸ್ತೆಯಲ್ಲಿದ್ದ ತಂಗಿ ಮನೆಗೆ ನಾನು ಆಗಾಗ ಹೋಗಿ, ಉಳಿದುಕೊಳ್ಳುತ್ತಿದ್ದೆ. 'ವೆಂಕಟೇಶಮೂರ್ತಿ ಅವರು ನಮ್ಮ ಮನೆಯ ಎದುರಿನ ಮನೆಯಲ್ಲಿಯೇ ಇದ್ದಾರೆ' ಎಂದು ಬಾವ ಹೇಳಿದರು. ಆಗ ಆತನನ್ನು ಭೇಟಿ ಮಾಡಿದ್ದೆ. ಬಳಿಕ ನಮ್ಮ ಭೇಟಿ ನಿರಂತರ ನಡೆಯಿತು.

ಆತನ 'ಸಿಂದಬಾದನ ಆತ್ಮಕಥೆ' ಕವನ ಸಂಕಲನ ಮೆಚ್ಚಿ ಬರೆದ ಮೊದಲ ಪತ್ರದಲ್ಲಿ ಮಾತ್ರ ಆತನಿಗೆ ಬಹುವಚನವನ್ನು ಬಳಸಿದ್ದೆ. ಅದನ್ನು ಆತ ಸದಾ ಸ್ಮರಿಸುತ್ತಿದ್ದ.

ಕಾವ್ಯ ಕ್ಷೇತ್ರದಲ್ಲಿ ಇಬ್ಬರೂ ಒಟ್ಟೊಟ್ಟಿಗೆ ಹೆಜ್ಜೆ ಹಾಕಿದೆವು. ಒಬ್ಬರಿಗೊಬ್ಬರು ನೆರವಾಗುತ್ತಿದ್ದೆವು. ಸುಗಮ ಸಂಗೀತ ಕ್ಷೇತ್ರಕ್ಕೂ ಒಟ್ಟಿಗೆ ಪ್ರವೇಶಿಸಿದೆವು. ಆಕಾಶವಾಣಿಯ ಕವಿಗೋಷ್ಠಿಗೆ ಹೋಗಿದ್ದಾಗ ಸಂಗೀತ ವಿಭಾಗದವರ ಮನವಿ ಆಧರಿಸಿ, ಗೀತೆಗಳನ್ನು ರಚಿಸಿದೆವು. ಆಗ ವೆಂಕಟೇಶಮೂರ್ತಿ 'ಮರೆತ ಸಾಲುಗಳು' ಹಾಗೂ ನಾನು 'ಪ್ರೇಮ ಸುಳಿವ ಜಾಡು' ಕವನ ಸಂಕಲನ ರಚಿಸಿ, ಆಕಾಶವಾಣಿಗೆ ನೀಡಿದೆವು. ಭಾವಗೀತೆ ಕ್ಷೇತ್ರದಲ್ಲಿಯೂ ಒಟ್ಟಿಗೆ ಸಾಗಿದೆವು.

ಬಡತನದಲ್ಲಿ ಬೆಳೆದು ಬಂದ ಆತ, ಸಂಕಲ್ಪ ಬಲದಿಂದ ಸಾಹಿತ್ಯ ಕ್ಷೇತ್ರದಲ್ಲಿ ಉತ್ತುಂಗಕ್ಕೆ ಏರಿದ. ಆತ ನನಗೆ ಅಣ್ಣನ ಸ್ಥಾನದಲ್ಲಿಯೂ ಇದ್ದ. ಏನೇ ಬರೆದರೂ ಆತನಿಗೆ ತೋರಿಸುತ್ತಿದ್ದೆ. ಸೂಕ್ತ ಸಲಹೆ, ಮಾರ್ಗದರ್ಶನ ನೀಡುತ್ತಿದ್ದ. ಈಗ ಬರೆದ ಸಾಲುಗಳನ್ನು ಯಾರಿಗೆ ತೋರಿಸಲಿ?

ಸಂಕ್ಷಿಪ್ತ ಸುದ್ದಿ

ಒಳಮೀಸಲಾತಿ ಆಯೋಗದ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸುವ ಉದ್ದೇಶದಿಂದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಅಧ್ಯಕ್ಷತೆಯ ಏಕಸದಸ್ಯ ವಿಚಾರಣಾ ಆಯೋಗದ ಅವಧಿಯನ್ನು ರಾಜ್ಯ ಸರ್ಕಾರವು ಇದೇ ಜುಲೈ 31ರವರೆಗೆ ವಿಸ್ತರಿಸಿದೆ.

ಆಯೋಗದ ಅವಧಿಯು ಮೇ 31ರ ಶನಿವಾರದಂದು ಕೊನೆಯಾಗಬೇಕಿತ್ತು. ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸಲು ಆಯೋಗವು ಕೈಗೊಂಡಿರುವ ಸಮಗ್ರ ಸಮೀಕ್ಷೆಯು ಜೂನ್ 1ರವರೆಗೂ ನಡೆಯಲಿದೆ. ಸಮೀಕ್ಷೆಯ ದತ್ತಾಂಶಗಳನ್ನು ಪರಿಶೀಲಿಸಿ, ಕೊರತೆಗಳನ್ನು ಸರಿಪಡಿಸಿ ಅಂತಿಮ ಶಿಫಾರಸು ನೀಡಲು ಇನ್ನೂ ಎರಡು ತಿಂಗಳ ಕಾಲಾವಕಾಶ ಬೇಕು ಎಂದು ಆಯೋಗದ ಅಧ್ಯಕ್ಷರು ಕೋರಿದ್ದರು ಎಂದು ಸಮಾಜ ಕಲ್ಯಾಣ ಇಲಾಖೆ ತಿಳಿಸಿದೆ.

ಹೀಗಾಗಿ ಆಯೋಗದ ಅವಧಿಯನ್ನು ಜುಲೈ 31ರವರೆಗೆ ಎರಡು ತಿಂಗಳು ವಿಸ್ತರಿಸಲಾಗಿದೆ ಎಂದು ಇಲಾಖೆ ಹೇಳಿದೆ.

ನಕ್ಸಲ್ ನಿಗ್ರಹ ಪಡೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ನಕ್ಸಲ್ ನಿಗ್ರಹ ಪಡೆಯನ್ನು ಇನ್ನೂ ಮೂರು ವರ್ಷ ಮುಂದುವರೆಸುವುದಾಗಿ ರಾಜ್ಯ ಸರ್ಕಾರ ತಿಳಿಸಿದೆ.

ರಾಜ್ಯದಲ್ಲಿನ ಬಹುತೇಕ ನಕ್ಸಲರು ಸರ್ಕಾರಕ್ಕೆ ಶರಣಾದ ಕಾರಣ ನಕ್ಸಲ್ ನಿಗ್ರಹ ಪಡೆಯನ್ನು ರದ್ದುಪಡಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಸಾಲಿನ ಬಜೆಟ್ ಭಾಷಣದಲ್ಲಿ ಘೋಷಿಸಿದ್ದರು.

'ಛತ್ತೀಸಗಢ, ಮಹಾರಾಷ್ಟ್ರ ದ ಕಡೆಯಿಂದ ಕೆಲ ನಕ್ಸಲರು ಕರ್ನಾಟಕ ಮತ್ತು ಕೇರಳದ ಕಡೆಗೆ ಬರುತ್ತಿದ್ದಾರೆ ಎಂದು ಗುಪ್ತಚರ ಮೂಲಗಳು ಹೇಳಿವೆ. ಹೀಗಾಗಿ ನಕ್ಸಲ್ ನಿಗ್ರಹ ಪಡೆಯ ಅವಧಿಯನ್ನು ವಿಸ್ತರಿಸಬೇಕು ಎಂದು ಮನವಿ ಸಲ್ಲಿಕೆಯಾಗಿತ್ತು. ವಿವರಗಳನ್ನು ಪರಿಶೀಲಿಸಿ ಪಡೆಯನ್ನು ಮುಂದುವರೆಸಲು ತೀರ್ಮಾನಿಸಲಾಗಿದೆ' ಎಂದು ಗೃಹ ಇಲಾಖೆ ತನ್ನ ಆದೇಶದಲ್ಲಿ ವಿವರಿಸಿದೆ.

'ನಕ್ಸಲ್ ನಿಗ್ರಹ ಪಡೆಗೆ ಅಧಿಕಾರಿಗಳು ಮತ್ತು ಸಿಬ್ಬಂದಿ ಸೇರಿ ಒಟ್ಟು 667 ಹುದ್ದೆಗಳು ಮಂಜೂರಾಗಿದ್ದು, ಅವುಗಳಲ್ಲಿ 248 ಹುದ್ದೆಗಳನ್ನು ಕೋಮುಸಂಘರ್ಷ ತಡೆ ವಿಶೇಷ ಕಾರ್ಯಾಚರಣೆಗೆ ವರ್ಗಾಯಿಸಲಾಗಿದೆ. 34 ಹುದ್ದೆಗಳನ್ನು ರಾಜ್ಯದ ವಿವಿಧ ಠಾಣೆಗಳಿಗೆ ನಿಯೋಜನೆ ಮಾಡ ಲಾಗಿದೆ. ಉಳಿದ 376 ಸಿಬ್ಬಂದಿ ನಕ್ಸಲ್ ನಿಗ್ರಹ ಪಡೆಯಲ್ಲೇ ಕಾರ್ಯನಿರ್ವಹಿಸಲಿದ್ದಾರೆ' ಎಂದು ತಿಳಿಸಿದೆ.

ಈ ವರ್ಷ 700 ಬಾಲ್ಯವಿವಾಹ: ತಡೆಯಲು ಕ್ರಮ ಕೈಗೊಳ್ಳದ ಅಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ತರಾಟೆ

'ದುಷ್ಟ ಶಕ್ತಿಗಳಿಗೆ ಬಾಲಬಿಚ್ಚಲು ಬಿಡಬಾರದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಜನ ವಿರೋಧಿ ದುಷ್ಟ ಶಕ್ತಿಗಳು ಬಾಲಬಿಚ್ಚಲು ಅವಕಾಶ ನೀಡಬಾರದು. ಎಷ್ಟೇ ಪ್ರಭಾವಿಯಾಗಿದ್ದರೂ ಮೊಳಕೆಯಲ್ಲೇ ಚಿವುಟಿ ಹಾಕಬೇಕು. ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲರಾಗುವ ಅಧಿಕಾರಿಗಳ ವಿರುದ್ಧ ಸರ್ಕಾರವೇ ಕ್ರಮ ಕೈಗೊಳ್ಳಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಸಿಇಒಗಳು, ಪೊಲೀಸ್ ಅಧಿಕಾರಿಗಳ ಜತೆ ನಡೆದ ರಾಜ್ಯದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಎಲ್ಲ ಜಿಲ್ಲೆಗಳಲ್ಲೂ ಅಧಿಕಾರಿಗಳು ತಮ್ಮ ಸ್ಥಾನದ ಮಹತ್ವ, ಪ್ರಭಾವ ಅರಿತು ಪರಸ್ಪರ ಸಮನ್ವಯದಿಂದ ಕೆಲಸ ಮಾಡಬೇಕು. ಜನರ ಆಶಯಗಳಿಗೆ ಸ್ಪಂದಿಸಬೇಕು ಎಂದು ತಾಕೀತು ಮಾಡಿದರು.

ಜನರ ತೆರಿಗೆ ಹಣದಲ್ಲಿ ಅಧಿಕಾರಿಗಳಿಗೆ ವೇತನ, ಕಾರು, ಬಂಗಲೆ ಮತ್ತಿತರ ಸವಲತ್ತು ನೀಡುತ್ತಿದ್ದೇವೆ. ಜನರ ಹಿತಾಸಕ್ತಿಗೆ ಪೂರಕವಾಗಿ ಕೆಲಸ ಮಾಡಬೇಕು. ಪ್ರಜಾಪ್ರಭುತ್ವದ ಮೂಲ ಆಶಯ ಸಾಕಾರಗೊಳಿಸಬೇಕು. ಶಾಂತಿ ಸುವ್ಯವಸ್ಥೆಗೆ ಭಂಗವಾಗದಂತೆ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಿದರು.

'ಪ್ರಸಕ್ತ ವರ್ಷ 700 ಬಾಲ್ಯ ವಿವಾಹ ನಡೆದಿವೆ. ಹಲವರು ಬಾಲ್ಯದಲ್ಲೇ ತಾಯಂದಿರಾಗಿದ್ದಾರೆ. ಘಟನೆಗಳು ಜಿಲ್ಲಾಧಿಕಾರಿಗಳ ಗಮನಕ್ಕೆ ಬಂದಿಲ್ಲವೇ? ಕಾನೂನನ್ನು ಪರಿಣಾಮಕಾರಿಯಾಗಿ ಏಕೆ ಬಳಸಿಲ್ಲ? ನೀವೇ ದಕ್ಷತೆಯಿಂದ ಕೆಲಸ ಮಾಡದಿದ್ದರೆ ಅಧೀನ ಅಧಿಕಾರಿಗಳಿಂದ ಹೇಗೆ ನಿರೀಕ್ಷೆ ಮಾಡುತ್ತೀರಿ' ಎಂದು ಪ್ರಶ್ನಿಸಿದರು.

ವಿಧಾನಸೌಧದಲ್ಲಿ ಶುಕ್ರವಾರ ನಡೆದ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಸಿಇಒಗಳ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮಾಹಿತಿ ನೀಡಿದರು. ಸಚಿವ ಕೆ.ಎಚ್ ಮುನಿಯಪ್ಪ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇದ್ದಾರೆ

> **ನಿವೃತ್ತ ಸೈನಿಕರ ಕಲ್ಯಾಣ ನಿಗಮದ ರೂಪುರೇಷೆಗಳನ್ನು ಸಿದ್ಧಪಡಿಸಿ, ಮುಂದಿನ ಸಚಿವ ಸಂಪುಟ ಸಭೆಯ ಮುಂದೆ ಇರಿಸಿ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಂಗಳಲ್ಲಿ ಕನಿಷ್ಠ ಎರಡು ಬಾರಿ ಆಯಾ ಜಿಲ್ಲೆಗಳಿಗೆ ಭೇಟಿ ನೀಡಬೇಕು. ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲನೆ ಮಾಡಬೇಕು. ವರದಿಯನ್ನು ಮುಖ್ಯ ಕಾರ್ಯದರ್ಶಿಯವರಿಗೆ ಸಲ್ಲಿಸಬೇಕು. ಶಾಲೆ, ಆಸ್ಪತ್ರೆ, ಅಂಗನವಾಡಿ, ಸ್ಮಶಾನ, ಖಬರ್‌ಸ್ಥಾನಗಳಿಗೆ ಕೂಡಲೇ ನಿವೇಶನ ಒದಗಿಸಬೇಕು. 1,858 ಗ್ರಾಮೀಣ ಅಂಗನವಾಡಿಗಳಿಗೆ 5,187 ನಗರ ಪ್ರದೇಶದ ಅಂಗನವಾಡಿಗಳಿಗೆ ಹಾಗೂ14 ಸರ್ಕಾರಿ ಕಾಲೇಜುಗಳಿಗೆ ನಿವೇಶನ ಹಂಚಿಕೆ ಮಾಡಬೇಕು ಎಂದು ಸೂಚಿಸಿದರು.

ಅನರ್ಹ ಪಡಿತರ ಚೀಟಿ, ಕ್ರಮಕ್ಕೆ ಸೂಚನೆ: ರಾಜ್ಯದಲ್ಲಿ ಸುಮಾರು ಶೇ 74ರಷ್ಟು ಕುಟುಂಬಗಳು ಬಿಪಿಎಲ್ ಪಡಿತರ ಚೀಟಿ ಹೊಂದಿವೆ. ಅನರ್ಹರನ್ನು ಗುರುತಿಸಿ, ಬಿಪಿಎಲ್ ಪಟ್ಟಿಯಿಂದ ತೆಗೆದು ಹಾಕುವ ಮೂಲಕ ಅರ್ಹರಿಗೆ ಸವಲತ್ತು ಒದಗಿಸಬೇಕು ಎಂದರು.

ಇಂದಿರಾ ಕ್ಯಾಂಟೀನ್ ಆರಂಭಕ್ಕೆ ಕ್ರಮ: ಹೊಸದಾಗಿ ಘೋಷಣೆ ಮಾಡಿರುವ ಎಲ್ಲಾ ಇಂದಿರಾ ಕ್ಯಾಂಟೀನ್‌ಗಳನ್ನು ತಕ್ಷಣ ಆರಂಭಿಸಬೇಕು. 186 ಇಂದಿರಾ ಕ್ಯಾಂಟೀನ್‌ಗಳಲ್ಲಿ 103 ನಿರ್ಮಾಣ ಕಾರ್ಯ ಪೂರ್ಣಗೊಂಡಿವೆ. 43 ಇಂದಿರಾ ಕ್ಯಾಂಟೀನ್‌ಗಳಲ್ಲಿ ಆಹಾರ ವಿತರಣೆ ಆರಂಭವಾಗಿದೆ. ಎಲ್ಲಾ ಕಡೆ ಆಹಾರ ವಿತರಣೆ ಪ್ರಾರಂಭಿಸಲು ಜಿಲ್ಲಾಧಿಕಾರಿಗಳು ಕ್ರಮಕೈಗೊಳ್ಳಬೇಕು ಎಂದು ಹೇಳಿದರು.

4,866 ಕೆರೆಗಳ ಒತ್ತುವರಿ ತೆರವಿಗೆ ಸೂಚನೆ

ರಾಜ್ಯದಲ್ಲಿ 10,931 ಕೆರೆಗಳು ಒತ್ತುವರಿಯಾಗಿದ್ದು, ಇದುವರೆಗೆ 6,065 ಕೆರೆಗಳ ಒತ್ತುವರಿ ತೆರವು ಮಾಡಲಾಗಿದೆ. ಉಳಿದ 4,866 ಕೆರೆಗಳ ಒತ್ತುವರಿ ತೆರವಿಗೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಸಿದ್ದರಾಮಯ್ಯ ಸೂಚಿಸಿದರು.

ರಾಜ್ಯದಲ್ಲಿನ ಎಲ್ಲಾ ಕೆರೆಗಳ ಸಮೀಕ್ಷೆ ನಡೆಸಬೇಕು. ಮಳೆ ನೀರು ಸರಾಗವಾಗಿ ಕೆರೆಗೆ ಹರಿದು ಬರುವಂತೆ ವ್ಯವಸ್ಥೆ ಮಾಡಬೇಕು. ಕೆರೆಗಳ ಒತ್ತುವರಿ ತೆರವು ವಿಷಯದಲ್ಲಿ ಸರಿಯಾಗಿ ಕಾರ್ಯನಿರ್ವಹಿಸದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಹೇಳಿದರು.

ಫಲಿತಾಂಶ ವೃದ್ಧಿಗೆ ಕ್ರಮ: ಸರ್ಕಾರಿ ಶಾಲೆಗಳಿಗೆ ಎಲ್ಲಾ ಸವಲತ್ತುಗಳನ್ನು ನೀಡಿದರೂ ಎಸ್‌ಎಸ್‌ಎಲ್‌ಸಿ, ಪಿಯು ಫಲಿತಾಂಶ ಕಳಪೆಯಾಗಿಲು ಕಾರಣವೇನು ಎನ್ನುವ ಕುರಿತು ಆತ್ಮಾವಲೋಕನ ನಡೆಸಬೇಕು. ಫಲಿತಾಂಶ ಸುಧಾರಣೆಗೆ ಆಯಾ ಜಿಲ್ಲಾಧಿಕಾರಿ ಹಾಗೂ ಸಿಇಒಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ರೈತರ ಆತ್ಮಹತ್ಯೆ, ಪರಿಹಾರ ವಿಳಂಬ ಸಲ್ಲದು:
ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಪರಿಹಾರ ನೀಡಲು ವಿಳಂಬ ಮಾಡಬಾರದು. ಮೃತ ರೈತರ 13 ಕುಟುಂಬಗಳಿಗೆ ತ್ವರಿತವಾಗಿ ಪರಿಹಾರ ಬಿಡುಗಡೆ ಮಾಡಬೇಕು ಎಂದು ಹೇಳಿದರು.

ಸ್ಮಶಾನ, ಖಬರಸ್ಥಾನಗಳಿಗೆ ತಕ್ಷಣ ನಿವೇಶನ ನೀಡಿ: ಸಿಎಂ

ಬೆಂಗಳೂರು: 'ಸ್ಮಶಾನ, ರುದ್ರಭೂಮಿ ಮತ್ತು ಖಬರಸ್ಥಾನಗಳಿಗೆ ನಿವೇಶನ ಮಂಜೂರು ಮಾಡಿ ಎಂದು ಬಂದ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಬೇಕು. ನಿವೇಶನಗಳನ್ನು ತಕ್ಷಣವೇ ಒದಗಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶುಕ್ರವಾರ ನಡೆದ ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯ ವೇಳೆ, 'ನಿವೇಶನಗಳು ಲಭ್ಯವಿಲ್ಲ. ಹೀಗಾಗಿ ಅರ್ಜಿಗಳು ವಿಲೇವಾರಿ ಆಗಿಲ್ಲ' ಎಂದು ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಸಿದ್ದರಾಮಯ್ಯ ಅವರು, 'ಸ್ಮಶಾನ ಮತ್ತು ಖಬರಸ್ಥಾನ ಒದಗಿಸದೇ ಹೋದರೆ ಜನರು ಎಲ್ಲಿ ಅಂತ್ಯಕ್ರಿಯೆ ನಡೆಸಬೇಕು. ಇವುಗಳಿಗೆ ನಿವೇಶನ ಮಂಜೂರು ಮಾಡುವಲ್ಲಿ ವಿಳಂಬ ಸರಿಯಲ್ಲ. ಲಭ್ಯವಿರುವ ನಿವೇಶನವನ್ನು ತಕ್ಷಣವೇ ಒದಗಿಸಬೇಕು. ಸರ್ಕಾರಿ ನಿವೇಶನ ಇಲ್ಲದೇ ಇದ್ದರೆ, ಖಾಸಗಿ ನಿವೇಶನವನ್ನು ಖರೀದಿಸಿ ಹಂಚಿಕೆ ಮಾಡಬೇಕು' ಎಂದು ಸೂಚಿಸಿದರು.

'ವಿದ್ಯಾರ್ಥಿನಿಲಯಗಳಿಗೆ ಜನವಸತಿ ಪ್ರದೇಶದಿಂದ ಬಹಳ ದೂರದಲ್ಲಿ ನಿವೇಶನ ಒದಗಿಸುತ್ತಿರುವ ಬಗ್ಗೆ ದೂರುಗಳು ಬಂದಿವೆ. ನಿರ್ಜನ ಪ್ರದೇಶದಲ್ಲಿ ನಿವೇಶನ ನೀಡಿದರೆ, ಭದ್ರತೆಯ ಅಪಾಯ ತಲೆದೋರುವುದಿಲ್ಲವೇ? ಇದನ್ನೆಲ್ಲಾ ಪರಿಗಣಿಸಿ ಜನವಸತಿ ಪ್ರದೇಶದಲ್ಲಿಯೇ ನಿವೇಶನ ಒದಗಿಸಬೇಕು. ನಿವೃತ್ತ ಸೈನಿಕರು ನಿವೇಶನಕ್ಕೆ ಸಲ್ಲಿಸುವ ಅರ್ಜಿಗಳ ವಿಲೇವಾರಿಯಲ್ಲಿ ವಿಳಂಬ ಸರಿಯಲ್ಲ. ದೇಶಕ್ಕಾಗಿ ಹೋರಾಡಿದವರಿಗೆ ನಿವೇಶನ ನೀಡದೇ ಇದ್ದರೆ ಹೇಗೆ. ಅವರಿಗೆ ನಿವೇಶನಗಳನ್ನು ತಕ್ಷಣವೇ ನೀಡಬೇಕು' ಎಂದು ಸೂಚಿಸಿದರು.

'ಈ ಹಿಂದೆ ನಡೆಸಿದ ಸಭೆಯಲ್ಲೂ ನಿವೇಶನ ಲಭ್ಯವಿಲ್ಲ ಎಂದು ಹೇಳಿದ್ದಿರಿ. ಈಗಲೂ ಅದನ್ನೇ ಹೇಳುತ್ತಿದ್ದೀರಿ. ಹಾಗಿದ್ದರೆ ಈ ಮಧ್ಯೆ ನೀವು ಮಾಡಿದ ಕೆಲಸವೇನು? ಮುಂದಿನ ಸಭೆಯಲ್ಲಿ ಇಂತಹ ನೆಪ ಹೇಳಬಾರದು' ಎಂದು ತಾಕೀತು ಮಾಡಿದರು.

ಕಮಲ್ ಚಿತ್ರಕ್ಕೆ ಬೆಂಕಿ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಕಮಲ್ ಹಾಸನ್ ಅವರ ಭಾವಚಿತ್ರಕ್ಕೆ ಬೆಂಕಿಹಾಕಿ ಸುಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ, 'ನಮ್ಮ ಕರುನಾಡ ಯುವಸೇನೆ' ಕಾರ್ಯಕರ್ತ ವಿ.ರವಿಕುಮಾರ್ ವಿರುದ್ಧ ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಪೊಲೀಸ್ ಸಿಬ್ಬಂದಿಯೊಬ್ಬರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಬಸವೇಶ್ವರನಗರದ ಕೆಎಚ್‌ಬಿ ರಸ್ತೆಯ ಹಾವನೂರು ವೃತ್ತದ ಪವಿತ್ರಾ ಪ್ಯಾರಡೈಸ್ ಬಳಿ ಕಮಲ್ ಹಾಸನ್ ಅವರ ಭಾವಚಿತ್ರಕ್ಕೆ ಆರೋಪಿ ಬೆಂಕಿ ಹಾಕಿ ಸುಟ್ಟು ಹಾಕಿದ್ದ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಣೆಗುರುವನಹಳ್ಳಿಯ ರವಿಕುಮಾರ್‌ನನ್ನು ವಶಕ್ಕೆ ಪಡೆದುಕೊಳ್ಳಲಾಯಿತು' ಎಂದು ಪೊಲೀಸರು ಹೇಳಿದರು.

'ಕನ್ನಡ ತಮಿಳಿನಿಂದ ಹುಟ್ಟಿರುವುದು' ಎಂಬುದಾಗಿ ಕಮಲ್ ಹಾಸನ್ ಹೇಳಿಕೆ ನೀಡಿದ್ದರು. ಹೇಳಿಕೆ ವಾಪಸ್ ಪಡೆದು ಕ್ಷಮೆ ಕೋರಬೇಕು ಎಂದು ವಿವಿಧ ಸಂಘಟನೆಗಳು ಆಗ್ರಹಿಸಿದ್ದವು. ಆದರೂ ಕಮಲ್ ಹಾಸನ್ ಕ್ಷಮೆ ಕೇಳಿಲ್ಲ. ಹೀಗಾಗಿ ಸಿಟ್ಟಿಗೆದ್ದು ನಟನ ಭಾವಚಿತ್ರಕ್ಕೆ ಬೆಂಕಿ ಹಾಕಿದ್ದಾಗಿ ಆರೋಪಿ ವಿಚಾರಣೆ ವೇಳೆ ಹೇಳಿಕೆ ನೀಡಿದ್ದಾನೆ' ಎಂದು ಮೂಲಗಳು ತಿಳಿಸಿವೆ.

ಬೆದರಿಕೆಗಳು ಹೊಸದಲ್ಲ: ನಟ ● ಕಮಲ್‌ಗೆ ತಮಿಳುನಾಡಿನ ರಾಜಕೀಯ ಪಕ್ಷಗಳ ಬೆಂಬಲ

ತಪ್ಪಿಲ್ಲದಿದ್ದರೆ ಕ್ಷಮೆ ಕೇಳಲ್ಲ: ಕಮಲ್ ಹಾಸನ್

ಪ್ರಜಾವಾಣಿ ವಾರ್ತೆ/ ಪಿಟಿಐ

ಕಮಲ್ ಹಾಸನ್

ಚೆನ್ನೈ: ಕನ್ನಡ ಭಾಷೆ ಕುರಿತ ತಮ್ಮ ಹೇಳಿಕೆಗೆ ಕ್ಷಮೆ ಕೋರಲು ನಿರಾಕರಿಸಿರುವ ಹಿರಿಯ ನಟ ಕಮಲ್ ಹಾಸನ್ 'ತಮಗೆ ಕಾನೂನು ಮತ್ತು ನ್ಯಾಯದ ಮೇಲೆ ನಂಬಿಕೆಯಿದೆ ಹಾಗೂ ಕರ್ನಾಟಕದ ಮೇಲಿರುವ ತಮ್ಮ ಪ್ರೀತಿ ನೈಜವಾದದ್ದು' ಎಂದು ಹೇಳಿದ್ದಾರೆ.

'ಕನ್ನಡ ಭಾಷೆಯು ತಮಿಳಿನಿಂದ ಹುಟ್ಟಿದೆ' ಎನ್ನುವ ಕಮಲ್ ಹಾಸನ್ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ. ಅವರ ಹೇಳಿಕೆಯನ್ನು ಖಂಡಿಸಿರುವ ಹಲವು ಕನ್ನಡ ಸಂಘಟನೆಗಳು ಕ್ಷಮೆ ಕೋರುವಂತೆ ಆಗ್ರಹಿಸಿವೆ.

ಕ್ಷಮೆಯಾಚಿಸದೇ ಇದ್ದಲ್ಲಿ 'ಥಗ್‌ಲೈಫ್' ಸಿನಿಮಾ ಬಿಡುಗಡೆಗೆ ಅವಕಾಶ ನೀಡುವುದಿಲ್ಲ ಎನ್ನುವ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಹಾಗೂ ಕನ್ನಡಪರ ಹೋರಾಟಗಾರರ ಬೆದರಿಕೆಯ ಕುರಿತು ಪ್ರತಿಕ್ರಿಯೆ ನೀಡಿರುವ ಅವರು, 'ಬೆದರಿಕೆಗಳು ನನಗೆ ಹೊಸದೇನಲ್ಲ, ಹಿಂದೆಯೂ ಇಂತಹ ಬೆದರಿಕೆಗಳು ಬಂದಿವೆ' ಎಂದಿದ್ದಾರೆ.

ಡಿಎಂಕೆಯ ಕೇಂದ್ರ ಕಚೇರಿ ಮುಂದೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಇದು ಪ್ರಜಾಪ್ರಭುತ್ವ ರಾಷ್ಟ್ರ. ನನಗೆ ಕಾನೂನು ಹಾಗೂ ನ್ಯಾಯದ ಮೇಲೆ ನಂಬಿಕೆ ಇದೆ. ಪ್ರೀತಿ ಯಾವತ್ತಿದ್ದರೂ ಗೆಲ್ಲುತ್ತದೆ. ಕರ್ನಾಟಕ, ಆಂಧ್ರಪ್ರದೇಶ ಮತ್ತು ಕೇರಳದ ಮೇಲೆ ನನಗಿರುವ ಪ್ರೀತಿ ನೈಜವಾದದ್ದು. ಒಂದು ಸಿದ್ಧಾಂತ ಇಟ್ಟುಕೊಂಡವರಷ್ಟೇ ನನ್ನ ಈ ಪ್ರೀತಿಯನ್ನು ಸಂಶಯಿಸಲು ಸಾಧ್ಯ. ಹಿಂದೆಯೂ ನನಗೆ ಬೆದರಿಕೆ ಹಾಕಿದ್ದರು. ನನ್ನ ತಪ್ಪು ಇದ್ದರೆ ಕ್ಷಮೆ ಕೇಳುತ್ತೇನೆ, ತಪ್ಪು ಇಲ್ಲದಿದ್ದರೆ ಕ್ಷಮೆ ಕೇಳುವುದಿಲ್ಲ' ಎಂದು ಹೇಳಿದ್ದಾರೆ.

ಕಮಲ್‌ಗೆ ಬೆಂಬಲ: ಕಮಲ್ ಹಾಸನ್ ಅವರ ಹೇಳಿಕೆಗೆ ತಮಿಳುನಾಡಿನ ವಿವಿಧ ರಾಜಕೀಯ ಪಕ್ಷಗಳು ಬೆಂಬಲ ವ್ಯಕ್ತಪಡಿಸಿವೆ. 'ಕನ್ನಡ, ಮಲಯಾಳ ಹಾಗೂ ತೆಲುಗು ಸೇರಿದಂತೆ ಎಲ್ಲ ದ್ರಾವಿಡ ಭಾಷೆಗಳ ತಾಯಿ ತಮಿಳು ಎಂಬ ಸಂಗತಿಯನ್ನು ಹಲವು ವಿದ್ವಾಂಸರು ಒಪ್ಪಿದ್ದಾರೆ' ಎಂದು ವಿಸಿಕೆ ಮತ್ತು ಎನ್‌ಟಿಕೆ ಪಕ್ಷಗಳ ನಾಯಕರು ಹೇಳಿದ್ದಾರೆ.

'ಕಮಲ್ ಹಾಸನ್ ಅವರು ಹೇಳಿರುವುದರಲ್ಲಿ ಯಾವುದೇ ತಪ್ಪಿಲ್ಲ. ಹಲವು ತಜ್ಞರು ದೃಢಪಡಿಸಿರುವ ವಾಸ್ತವಾಂಶವನ್ನೇ ಅವರು ಹೇಳಿದ್ದಾರೆ. ಕನ್ನಡ, ಮಲಯಾಳ ಮತ್ತು ತೆಲುಗು ಮಾತನಾಡುವ ಜನರಿಗೆ ತಮಿಳು ತಮ್ಮ ಭಾಷೆಯ ತಾಯಿ ಎಂಬುದನ್ನು ಒಪ್ಪಿಕೊಳ್ಳಲು ಕಷ್ಟವಾಗುತ್ತಿರಬಹುದು. ಸತ್ಯವನ್ನು ಸ್ವೀಕರಿಸುವುದು ಯಾವಾಗಲೂ ಕಷ್ಟವಾಗುತ್ತದೆ' ಎಂದು ವಿಸಿಕೆ ಮುಖ್ಯಸ್ಥ ಟಿ. ತಿರುಮಾವಲವನ್ ಪ್ರತಿಪಾದಿಸಿದ್ದಾರೆ.

ಸ್ಟಾಲಿನ್‌ಗೆ ಧನ್ಯವಾದ ಹೇಳಿದ ಕಮಲ್: ಡಿಎಂಕೆ ಕೇಂದ್ರ ಕಚೇರಿಗೆ ಶುಕ್ರವಾರ ಭೇಟಿ ನೀಡಿದ್ದ ಎಂಎನ್‌ಎಂ ಅಧ್ಯಕ್ಷ ಕಮಲ್ ಹಾಸನ್ ಅವರು, ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರ ಜತೆ ಮಾತುಕತೆ ನಡೆಸಿದರು. ರಾಜ್ಯಸಭೆಯ ಒಂದು ಸದಸ್ಯ ಸ್ಥಾನವನ್ನು ತಮ್ಮ ಪಕ್ಷಕ್ಕೆ ಬಿಟ್ಟುಕೊಟ್ಟಿದ್ದಕ್ಕಾಗಿ ಅವರು ಮುಖ್ಯಮಂತ್ರಿಗೆ ಧನ್ಯವಾದ ಹೇಳಿದರು.

'ದೇಶದ ಒಳಿತಿಗಾಗಿ ಡಿಎಂಕೆ ಮೈತ್ರಿಕೂಟ ಸೇರಿದ್ದೇನೆ' ಎಂದು ಅವರು ಪ್ರತಿಕ್ರಿಯಿಸಿದರು. ಡಿಎಂಕೆ ಶಾಸಕರ ಬೆಂಬಲದಿಂದ ಕಮಲ್ ಹಾಸನ್ ಅವರು ಜುಲೈನಲ್ಲಿ ರಾಜ್ಯಸಭೆ ಪ್ರವೇಶಿಸಲಿದ್ದಾರೆ.

ಕ್ಷಮೆ ಕೇಳಲೇಬೇಕು: ಸಾಧುಕೋಕಿಲ

ಬೆಂಗಳೂರು: 'ಕಮಲ್ ಹಾಸನ್‌ಗೆ ಕನ್ನಡಿಗರ ಋಣ ಇದೆ. ಕನ್ನಡದ ಬಗ್ಗೆ ಅವರು ಆಡಿರುವ ಮಾತುಗಳು ಸರಿಯಲ್ಲ. ಅವರು ಕ್ಷಮೆ ಕೇಳಲೇಬೇಕು, ಬೇರೆ ದಾರಿಯಿಲ್ಲ' ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧುಕೋಕಿಲ ಹೇಳಿದರು.

ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 'ಕಮಲ್ ಸಿನಿಮಾಗಳು ತಮಿಳುನಾಡಿನಲ್ಲಿ ಓಡಲಿಲ್ಲವೆಂದರೂ ಕರ್ನಾಟಕದಲ್ಲಿ ಹಿಟ್ ಆಗುತ್ತಿದ್ದವು. ಅವರ 'ಗುಣ' ಚಿತ್ರ ತಮಿಳುನಾಡಿನಲ್ಲಿ ಫ್ಲಾಪ್ ಆಗಿತ್ತು. ಆದರೆ ಇಲ್ಲಿ ಸೂಪರ್ ಹಿಟ್. ಇಲ್ಲಿನ ಪ್ರೇಕ್ಷಕರು ಎಂದಿಗೂ ಅವರನ್ನು ಕೈಬಿಟ್ಟಿಲ್ಲ. ಕನ್ನಡದ ಜನ ಅವರನ್ನು ಪ್ರೀತಿಸಿದ್ದಾರೆ. ಈಗ ಅವರ ಮಾತಿನಿಂದ ಕನ್ನಡಿಗರಿಗೆ ಬೇಸರ ಆಗಿದೆ. ಅವರು ಕ್ಷಮೆ ಕೇಳಲೇ ಬೇಕು' ಎಂದು ಒತ್ತಾಯಿಸಿದ್ದಾರೆ.

ಕೆಐಎಎಲ್‌ನಲ್ಲಿ ಇಂಡಿಗೊ ₹1,100 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನ ನಿರ್ವಹಣೆ, ದುರಸ್ತಿ ಮತ್ತು ನವೀಕರಣ (ಎಂಆರ್‌ಒ) ಕೇಂದ್ರ ಆರಂಭಿಸಲು ಇಂಡಿಗೊ ವಿಮಾನಯಾನ ಸಂಸ್ಥೆಯು ₹1,100 ಕೋಟಿ ಹೂಡಿಕೆ ಮಾಡಲಿದೆ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

'ಎಂಆರ್‌ಒ ಕೇಂದ್ರವಾಗಿ ಬೆಂಗಳೂರನ್ನು ಆಯ್ಕೆ ಮಾಡಿಕೊಂಡ ಇಂಡಿಗೊದ ನಿರ್ಧಾರ ಸ್ವಾಗತಾರ್ಹ. ಕರ್ನಾಟಕವನ್ನು ಎಂಆರ್‌ಒ ರಾಜಧಾನಿಯನ್ನಾಗಿ ಅಭಿವೃದ್ಧಿಪಡಿಸುವಲ್ಲಿ ಈ ಹೂಡಿಕೆ ಮಹತ್ವದ ಹೆಜ್ಜೆಯಾಗಲಿದೆ' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'31 ಎಕರೆ ಪ್ರದೇಶದಲ್ಲಿ ಈ ಕೇಂದ್ರ ಅಸ್ತಿತ್ವಕ್ಕೆ ಬರಲಿದೆ. ನೇರವಾಗಿ 750 ಉದ್ಯೋಗಗಳು ಸೃಷ್ಟಿಯಾಗಲಿವೆ. ಈ ಕೇಂದ್ರವು 4 ದೊಡ್ಡ ವಿಮಾನ ಮತ್ತು ಎಂಟು ಚಿಕ್ಕ ವಿಮಾನಗಳ ಸರ್ವಿಸ್‌ಗೆ ಸ್ಥಳಾವಕಾಶ ಇರುವ ಹ್ಯಾಂಗರ್ ಹೊಂದಿರಲಿದೆ' ಎಂದು ಅವರು ವಿವರಿಸಿದ್ದಾರೆ. 'ಒಂದು ದೊಡ್ಡ ಮತ್ತು 2 ಚಿಕ್ಕ ವಿಮಾನಗಳಿಗೆ ಏಕಕಾಲದಲ್ಲಿ ಪೇಂಟಿಂಗ್ ಮಾಡಬಹುದಾದ ಪೇಂಟಿಂಗ್ ಹ್ಯಾಂಗರ್ ಸಹ ಇಲ್ಲಿ ಇರಲಿದೆ' ಎಂದು ತಿಳಿಸಿದ್ದಾರೆ.

ಶನಿವಾರ, ಮೇ 31, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 150 | ಪುಟ 20

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚಿನ್ನ ಮೀಸಲು ಏರಿಕೆ

879.58 ಟನ್
ಪ್ರಸಕ್ತ ವರ್ಷದ ಮಾರ್ಚ್ ಅಂತ್ಯಕ್ಕೆ ಆರ್‌ಬಿಐ ಬಳಿ ಇರುವ ಚಿನ್ನದ ಮೀಸಲು ಸಂಗ್ರಹ

54.13 ಟನ್
2024–25ನೇ ಆರ್ಥಿಕ ವರ್ಷದಲ್ಲಿ ಖರೀದಿಸಿದ ಚಿನ್ನದ ಪ್ರಮಾಣ

₹4.31 ಲಕ್ಷ ಕೋಟಿ
ಆರ್‌ಬಿಐ ಬಳಿ ಇರುವ ಚಿನ್ನದ ಒಟ್ಟು ಮೌಲ್ಯ

(ಆಧಾರ: ಆರ್‌ಬಿಐನ 2024–25ನೇ ಸಾಲಿನ ವಾರ್ಷಿಕ ವರದಿ)

ವಾರದ ವಿಶೇಷ
ಕನ್ನಡ–ತಮಿಳು: ಒಂದೇ ಬೇರು, ಭಿನ್ನ ಕವಲು

ಕೋವಿಡ್: ಮರಣ ಪ್ರಕರಣ 3ಕ್ಕೆ ಏರಿಕೆ 7

ಜಲಾಶಯಗಳಿಗೆ ಹೆಚ್ಚಿದ ಒಳಹರಿವು 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,451	24,750	₹1,00,300 (ಬೆಂಗಳೂರು)	₹1,02,300 (ಬೆಂಗಳೂರು)	₹85.55

‘ನೀಟ್–ಪಿಜಿ’ ಒಂದೇ ಪಾಳಿಯಲ್ಲಿ ನಡೆಸಿ: ‘ಸುಪ್ರೀಂ’

ನವದೆಹಲಿ: ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆಯುವ ಪ್ರಸಕ್ತ ಸಾಲಿನ ಪರೀಕ್ಷೆ ‘ನೀಟ್–ಪಿಜಿ’ಯನ್ನು ಜೂನ್ 15ರಂದು ಒಂದೇ ಪಾಳಿಯಲ್ಲಿ ನಡೆಸುವಂತೆ ಸುಪ್ರೀಂ ಕೋರ್ಟ್ ಶುಕ್ರವಾರ ಮಹತ್ವದ ಆದೇಶ ನೀಡಿದೆ.

11ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಭಾರಿ ಮಳೆ: ಮಕ್ಕಳು ಸೇರಿ 5 ಸಾವು

ನದಿಯಲ್ಲಿ ಮೀನು ಹಿಡಿಯಲು ಹೋದ ಇಬ್ಬರು ನಾಪತ್ತೆ • ಕಿಂಡಿ ಅಣೆಕಟ್ಟೆಗೆ ಬಿದ್ದ ವ್ಯಕ್ತಿಗೆ ಶೋಧ

ಪ್ರಜಾವಾಣಿ ವಾರ್ತೆ

ಮಂಗಳೂರು/ಉಳ್ಳಾಲ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ವಾರದಿಂದ ಸುರಿಯುತ್ತಿರುವ ಧಾರಾಕಾರ ಮಳೆ ಗುರುವಾರ ರಾತ್ರಿಯಿಂದ ತೀವ್ರಗೊಂಡಿದ್ದು ಒಂದೇ ಕುಟುಂಬದ ಮೂವರು ಸೇರಿದಂತೆ ಒಟ್ಟು ಐವರು ಮೃತಪಟ್ಟಿದ್ದಾರೆ.

ಉಳ್ಳಾಲ ತಾಲ್ಲೂಕು ಮಂಜನಾಡಿ ಗ್ರಾಮದ ಮೊಂಟೆಪದವು ಪಂಬದಹಿತ್ತಿಲುಕೋಡಿ ಎಂಬಲ್ಲಿ ಮನೆ ಮೇಲೆ ಗುಡ್ಡ ಕುಸಿದು ಬಿದ್ದು ಪ್ರೇಮಾ ಕಾಂತಪ್ಪ ಪೂಜಾರಿ (65), ಅವರ ಪುತ್ರ ಸೀತಾರಾಂ ಅವರ ಮಕ್ಕಳಾದ ಆರ್ಯನ್ (3) ಹಾಗೂ ಆರುಷ್ (2) ಸಾವಿಗೀಡಾಗಿದ್ದು ಬೆಳ್ಮ ಗ್ರಾಮದ ಕಾಣೆಕೆರೆಯಲ್ಲಿ ಗುಡ್ಡ ಕುಸಿದು ನೌಷಾದ್ ಅವರ ಪುತ್ರಿ ಫಾತಿಮಾ ನಯೀಮ (11) ಪ್ರಾಣ ಕಳೆದುಕೊಂಡಿದ್ದಾರೆ.

ಬಂಟ್ವಾಳ ತಾಲ್ಲೂಕಿನಲ್ಲಿ ನಿಯಂತ್ರಣ ಕಳೆದುಕೊಂಡ ಲಾರಿ ವಿದ್ಯುತ್ ಪರಿವರ್ತಕಕ್ಕೆ ಡಿಕ್ಕಿ ಹೊಡೆದು ಕಂದಕಕ್ಕೆ ಉರುಳಿ ಜಾರ್ಖಂಡ್‌ನ ಕಾರ್ಮಿಕರೊಬ್ಬರು ಸಾವಿಗೀಡಾಗಿದ್ದಾರೆ. ನೇತ್ರಾವತಿ ನದಿಯಲ್ಲಿ ಮೀನು ಹಿಡಿಯಲು ಹೋಗಿದ್ದ ಇಬ್ಬರು ನಾಪತ್ತೆಯಾಗಿದ್ದಾರೆ.

ಮೂಡುಬಿದಿರೆ ತಾಲ್ಲೂಕಿನ ವಾಲ್ಪಾಡಿ ಗ್ರಾಮದ ಕಟ್ಟಡದಡಿಯ ಕಿಂಡಿ ಅಣೆಕಟ್ಟೆಯ ಹಲಗೆ ತೆಗೆಯಲು ಹೋಗಿದ್ದ ಗ್ರಾಮದ ಗುರುಪ್ರಸಾದ್ ಭಟ್ (38) ಎಂಬವರು ನೀರಿಗೆ ಬಿದ್ದು ಕೊಚ್ಚಿಕೊಂಡು ಹೋಗಿದ್ದಾರೆ.

6ನೇ ಪುಟ ನೋಡಿ

ಮಂಗಳೂರಿನಲ್ಲಿ ಶುಕ್ರವಾರ ಸುರಿದ ಮಳೆಗೆ ಕೊಟ್ಟಾರ ಚೌಕಿಯಲ್ಲಿರುವ ರಾಜಕಾಲುವೆ ಉಕ್ಕಿ ಹರಿಯಿತು

ತ್ವರಿತ ಪರಿಹಾರ ಕ್ರಮಕ್ಕೆ ಸಿ.ಎಂ ಸೂಚನೆ

ಬೆಂಗಳೂರು: ‘ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದ್ದು, ಪರಿಸ್ಥಿತಿ ನಿರ್ವಹಣೆ ಮಾಡಲು ಸಿದ್ಧರಾಗಿ. ಮಳೆಹಾನಿ ಪ್ರದೇಶಗಳಿಗೆ ತಕ್ಷಣವೇ ಭೇಟಿ ನೀಡಿ ಪರಿಹಾರ ಒದಗಿಸಿ. ಭೂಕುಸಿತದ ಅಪಾಯ ಇರುವ ಪ್ರದೇಶದಿಂದ ಜನರನ್ನು ತೆರವು ಮಾಡಿ. ರಾಜ್ಯ ವಿಪತ್ತು ನಿರ್ವಹಣಾ ನಿಧಿಯಲ್ಲಿ ₹1,000 ಕೋಟಿಗೂ ಅಧಿಕ ಮೊತ್ತವಿದ್ದು, ಪರಿಹಾರ ನೀಡಲು ಹಿಂದೇಟು ಹಾಕಬೇಡಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಸೂಚಿಸಿದ್ದಾರೆ.

ಮನೆಹಾನಿಗೆ ಪರಿಹಾರ

ಈ ಮುಂಗಾರಿನ ಅವಧಿಯಲ್ಲಿ ಅತಿವೃಷ್ಟಿಯಿಂದ ಮನೆಗಳಿಗೆ ಹಾನಿಯಾದರೆ, ಕೇಂದ್ರ ಸರ್ಕಾರವು ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ (ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್‌ಡಿಆರ್‌ಎಫ್) ಅಡಿ ನಿಗದಿ ಮಾಡಿರುವ ಪರಿಹಾರದ ಮೊತ್ತದ ಜತೆಗೆ ರಾಜ್ಯಸರ್ಕಾರದಿಂದಲೂ ಹೆಚ್ಚುವರಿ ಪರಿಹಾರ ನೀಡಲು ಕ್ರಮತೆಗೆದುಕೊಂಡಿದೆ. ಈ ಸಂಬಂಧ ಕಂದಾಯ ಇಲಾಖೆಯು ಶುಕ್ರವಾರ ಆದೇಶ ಹೊರಡಿಸಿದೆ.

‘ಮನೆಹಾನಿ ಪ್ರಕರಣಗಳಲ್ಲಿ ಜಿಲ್ಲಾಧಿಕಾರಿಗಳು ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು. ತಮ್ಮ ಪಿ.ಡಿ ಖಾತೆಯಲ್ಲಿ ಇರುವ ಹಣದಲ್ಲಿ ತಕ್ಷಣವೇ ಪರಿಹಾರ ಒದಗಿಸಬೇಕು’ ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಹಾನಿಯ ಸ್ವರೂಪ; ಪರಿಹಾರದ ಮೊತ್ತ

₹6,500 ಹಂಚು, ಶೀಟು, ಕಿಟಕಿ, ಬಾಗಿಲುಗಳಿಗೆ ಹಾನಿ

₹30,000 ಮನೆಯ ಗೋಡೆಗಳಲ್ಲಿ ಬಿರುಕು, ಕುಸಿತ ಮತ್ತು ಇತರೆ ಹಾನಿ (ಎಸ್‌ಡಿಆರ್‌ಎಫ್‌ನಿಂದ ₹6,500 ಮತ್ತು ರಾಜ್ಯ ಸರ್ಕಾರದಿಂದ ₹23,500)

₹50,000 ಗೋಡೆ ಕುಸಿತ ಮತ್ತು ಚಾವಣಿಗೆ ಹಾನಿ (ಎಸ್‌ಡಿಆರ್‌ಎಫ್‌ನಿಂದ ₹6,500 ಮತ್ತು ರಾಜ್ಯ ಸರ್ಕಾರದಿಂದ ₹43,500)

₹1.20 ಲಕ್ಷ ಗೋಡೆ ಮತ್ತು ಚಾವಣಿ ಕುಸಿತ (ಪೂರ್ಣ ಹಾನಿ) (ಸಾಮಾನ್ಯ ವರ್ಗಕ್ಕೆ), ₹1.50 ಲಕ್ಷ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ) ಹಾಗೂ ದೇವರಾಜ್ ಅರಸು ವಸತಿ ಯೋಜನೆಯಡಿ ಮನೆ

₹1 ಲಕ್ಷ ಪರಿಹಾರ ಅನಧಿಕೃತ ಜಮೀನಿನಲ್ಲಿ ಇದ್ದು, ಪೂರ್ಣ ಹಾನಿ

₹5,000 ಬಟ್ಟೆ ಮತ್ತು ಗೃಹೋಪಯೋಗಿ ವಸ್ತುಗಳಿಗೆ ಹಾನಿ

ಕವಿ ಎಚ್ಚೆಸ್ವಿ ಇನ್ನಿಲ್ಲ

ಪ್ರಜಾವಾಣಿ ವಾರ್ತೆ



23.6.1944 – 30.5.2025

ಬೆಂಗಳೂರು: ಸಾಹಿತಿ ಎಚ್.ಎಸ್. ವೆಂಕಟೇಶಮೂರ್ತಿ (80) ಅವರು ಶುಕ್ರವಾರ ಮುಂಜಾನೆ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಕೆಲ ತಿಂಗಳಿಂದ ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಆರೋಗ್ಯ ಮತ್ತಷ್ಟು ಬಿಗಡಾಯಿಸಿದ ಕಾರಣ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿ, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿತ್ತು. ಶುಕ್ರವಾರ ಬೆಳಿಗ್ಗೆ 7 ಗಂಟೆಗೆ ಅವರು ಮೃತಪಟ್ಟಿದ್ದಾರೆ. ಮೃತರಿಗೆ ನಾಲ್ವರು ಪುತ್ರರಿದ್ದಾರೆ. ವೆಂಕಟೇಶಮೂರ್ತಿ ಅವರ ಪಾರ್ಥಿವಶರೀರದ ದರ್ಶನಕ್ಕೆ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಬೆಳಿಗ್ಗೆ 11ರಿಂದ ಮಧ್ಯಾಹ್ನ 2 ಗಂಟೆವರೆಗೆ ವ್ಯವಸ್ಥೆ ಮಾಡಲಾಗಿತ್ತು. ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಕ್ಷೇತ್ರಗಳ ಪ್ರಮುಖರು ಅಗಲಿದ ಕವಿಗೆ ಅಂತಿಮ ನಮನ ಸಲ್ಲಿಸಿದರು. ಅವರು ರಚಿಸಿದ ಭಾವಗೀತೆಗಳನ್ನು ಹಾಡುವ ಮೂಲಕ ಗೀತ ಗೌರವವನ್ನೂ ಸಲ್ಲಿಸಲಾಯಿತು.

10ನೇ ಪುಟ ನೋಡಿ

ಅತಿಥಿ ಉಪನ್ಯಾಸಕರಿಗೆ ₹5 ಲಕ್ಷ ಇಡುಗಂಟು: ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡಿ 60 ವರ್ಷ ತುಂಬಿದವರಿಗೆ ಮತ್ತು ಮರಣ ಹೊಂದಿದ ಅತಿಥಿ ಉಪನ್ಯಾಸಕರ ಕುಟುಂಬಗಳಿಗೆ ₹5 ಲಕ್ಷ ಇಡುಗಂಟು ನೀಡಲು ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಸೇವಾ ಭದ್ರತೆ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ 2024ರಲ್ಲಿ ಅತಿಥಿ ಉಪನ್ಯಾಸಕರು ನಡೆಸಿದ್ದ ಧರಣಿ, ಪಾದಯಾತ್ರೆಯ ನಂತರ ಸರ್ಕಾರ ನಡೆಸಿದ ಮಾತುಕತೆಯಲ್ಲಿ ಇಡುಗಂಟು ನೀಡುವ ಭರವಸೆಯೂ ಸೇರಿತ್ತು.

10ನೇ ಪುಟ ನೋಡಿ

ಅಶೋಕ ಚಂದರಗಿಗೆ ಚಂಪಾ ಸಿರಿಗನ್ನಡ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಅಶೋಕ ಚಂದರಗಿ

ಬೆಂಗಳೂರು: ಕರ್ನಾಟಕ ಸ್ವಾಭಿಮಾನಿ ವೇದಿಕೆ ನೀಡುವ 'ಚಂಪಾ ಸಿರಿಗನ್ನಡ' ಪ್ರಶಸ್ತಿಗೆ ಬರಹಗಾರ, ಕನ್ನಡ ಹೋರಾಟಗಾರ ಬೆಳಗಾವಿಯ ಅಶೋಕ ಚಂದರಗಿ ಅವರನ್ನು ಆಯ್ಕೆ ಮಾಡಲಾಗಿದೆ.

ಕರ್ನಾಟಕ ಸ್ವಾಭಿಮಾನಿ ವೇದಿಕೆಯನ್ನು ಚಂದ್ರಶೇಖರ ಪಾಟೀಲ ಅವರು ಸ್ಥಾಪಿಸಿದ್ದರು. ಈ ವೇದಿಕೆ 15 ವರ್ಷಗಳಿಂದ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದು, 2023ರಿಂದ ಚಂಪಾ ಸಿರಿಗನ್ನಡ ಪ್ರಶಸ್ತಿ ನೀಡಲಾಗುತ್ತಿದೆ ಎಂದು ವೇದಿಕೆಯ ಶಂಕರ ಹೂಗಾರ್ ತಿಳಿಸಿದ್ದಾರೆ.

ಪ್ರಶಸ್ತಿಯು ₹ 10 ಸಾವಿರ ನಗದು, ಕಂಚಿನ ಫಲಕ ಪ್ರಶಸ್ತಿ ಪತ್ರ ಹೊಂದಿದೆ. ದಿ. ಚಂದ್ರಶೇಖರ ಪಾಟೀಲರ ಜನ್ಮ ದಿನವಾದ ಜೂನ್ 18ರಂದು ಸಂಜೆ 4.30ಕ್ಕೆ ಕನ್ನಡ ಭವನದ ನಯನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ. ಬರಹಗಾರ ಬರಗೂರು ರಾಮಚಂದ್ರಪ್ಪ ಪ್ರಶಸ್ತಿ ಪ್ರದಾನ ಮಾಡುವರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಧ್ಯಕ್ಷತೆ ವಹಿಸುವರು. ಕನ್ನಡ ಹೋರಾಟಗಾರರಾದ ಸಿ.ಕೆ. ರಾಮೇಗೌಡ, ಮೀನಾ ಪಾಟೀಲ ಅತಿಥಿಗಳಾಗಿರುವರು ಎಂದು ಮಾಹಿತಿ ನೀಡಿದ್ದಾರೆ.

ಮಣಿವಣ್ಣನ್‌ಗೆ ಬಿಡಿಎ ಹೆಚ್ಚುವರಿ ಹೊಣೆಗಾರಿಕೆ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್ ಅವರಿಗೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಆಯುಕ್ತರ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ವಹಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ. ಬಿಡಿಎ ಆಯುಕ್ತ ಎನ್. ಜಯರಾಮ್ ಅವರು ಶನಿವಾರ (ಮೇ 31) ವಯೋನಿವೃತ್ತಿಯಾಗಲಿದ್ದಾರೆ.

ಲಾಲ್‌ಬಾಗ್: ಜೂನ್ 24ರವರೆಗೆ ಮೇಳ • ರೈತರಿಂದ ನೇರವಾಗಿ ಗ್ರಾಹಕರಿಗೆ ಮಾರಾಟ

ಮಾವು, ಹಲಸು ಮೇಳಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ(ಕೆಎಸ್‌ಎಂಡಿಎಂಸಿಎಲ್) ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ 'ಮಾವು ಮತ್ತು ಹಲಸು ಮೇಳ'ಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಶುಕ್ರವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು 'ರಾಜ್ಯದ ವಿವಿಧ ಭಾಗಗಳಿಂದ ರೈತರು ತಾವು ಬೆಳೆದ ಹಣ್ಣುಗಳನ್ನು ಮೇಳಕ್ಕೆ ತಂದಿದ್ದಾರೆ. ರೈತರೇ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವ ವ್ಯವಸ್ಥೆ ಇಲ್ಲಿದೆ' ಎಂದರು.

'ನೈಸರ್ಗಿಕವಾಗಿ ಮಾಗಿಸಿದ ಮಾವಿನ ಹಣ್ಣುಗಳನ್ನು ಮಾರಾಟ ಮಾಡಲಾಗುತ್ತಿದೆ. ವಿವಿಧ ತಳಿಗಳ ಹಲಸಿನ ಹಣ್ಣುಗಳೂ ಮೇಳದಲ್ಲಿವೆ. ಹೆಚ್ಚಿನ ಸಂಖ್ಯೆಯಲ್ಲಿ ಜನರು ಮೇಳಕ್ಕೆ ಬಂದು ಹಣ್ಣುಗಳನ್ನು ಖರೀದಿಸಿದರೆ ರೈತರಿಗೂ ಅನುಕೂಲವಾಗುತ್ತದೆ' ಎಂದು ತಿಳಿಸಿದರು.

ಮೇಳ ಜೂನ್ 24ರವರೆಗೆ ನಡೆಯಲಿದೆ. ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಧಾರವಾಡ, ಕಾರವಾರ, ಹಾವೇರಿ, ತುಮಕೂರು ಜಿಲ್ಲೆಗಳಿಂದ 104 ಮಾವು ಬೆಳೆಗಾರರು ಮೇಳಕ್ಕೆ ಸುಮಾರು 13 ತಳಿಗಳ ಮಾವಿನ ಹಣ್ಣನ್ನು ತಂದಿದ್ದಾರೆ. 16 ರೈತರು ವಿವಿಧ ತಳಿಗಳ ಹಲಸಿನ ಹಣ್ಣುಗಳನ್ನು ತಂದಿದ್ದಾರೆ.

ತಳಿ ವೈವಿಧ್ಯ: ಭೌಗೋಳಿಕ ಮಾನ್ಯತೆ (ಜಿಐ) ಪಡೆದ 'ಕರಿಇಶಾಡ್', 'ಇಮಾಮ್ ಪಸಂದ್', ಸವಿ ರುಚಿಯ 'ರಸಪುರಿ', ಮಲ್ಲಿಕಾ, ಬಾದಾಮಿ, ಸಕ್ಕರಗುತ್ತಿ, ಕೇಸರ, ಬಂಗನ್ ಪಲ್ಲಿ, ಮಲಗೋವಾ, ಲಾಲ್‌ಬಾಗ್ ಮಧುರ, ಬೈರಸಂದ್ರದಂತಹ ತಳಿಗಳ ಮಾವಿನ ಹಣ್ಣುಗಳು ಪ್ರಮುಖವಾಗಿ ಮೇಳದಲ್ಲಿವೆ.

'ಮಾವು ಮಾರಾಟಕ್ಕೆ 104 ಮಳಿಗೆಗಳು, ಹಲಸು ಮಾರಾಟಕ್ಕೆ 13 ಮಳಿಗೆಗಳನ್ನು ಮೀಸಲಿಡಲಾಗಿದೆ. ಹುಣಸೆ ಮಾರಾಟ ಮಳಿಗೆಗಳು ಮತ್ತು ಮಾವು ಮತ್ತು ಹಲಸು ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳ ಮಾರಾಟಕ್ಕಾಗಿ 18 ಮಳಿಗೆಗಳನ್ನು ನೀಡಲಾಗಿದೆ' ಎಂದು ಕೆಎಸ್‌ಎಂಡಿಎಂಸಿಎಲ್ ಅಧ್ಯಕ್ಷ ಸಿ.ಜಿ. ನಾಗರಾಜ್ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ ಮತ್ತಿತರರು ಹಾಜರಿದ್ದರು.

ಮಾವು, ಹಲಸಿನ ಮೇಳಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿ ಮಲ್ಲಿಕಾ ಮಾವಿನಹಣ್ಣನ್ನು ಸವಿದರು — ಪ್ರಜಾವಾಣಿ ಚಿತ್ರ

ಮೇಳದಲ್ಲಿ ಅಪ್ಪೆಮಿಡಿ

'ಈ ಬಾರಿ ಅಪ್ಪೆಮಿಡಿಯ ವಿವಿಧ ತಳಿಗಳು ಪ್ರದರ್ಶನದಲ್ಲಿವೆ. ಎರಡು ಮಳಿಗೆಗಳನ್ನು ಹುಣಸೆ ಹಣ್ಣು ಮಾರಾಟಕ್ಕೆ ನೀಡಲಾಗಿದೆ. ವಿದೇಶಿ ಮಾವಿನ ತಳಿಗಳಾದ ಜಪಾನ್‌ನ ಮಿಯಾಜಾಕಿ, ಫಿಲಿಪ್ಪೀನ್ಸ್‌ನ ಬ್ರೂನಿ ಕಿಂಗ್, ಥಾಯ್ಲೆಂಡ್‌ನ ರೆಡ್ ಐವರಿ, ಕ್ರೇವಿಯರ್, ಮಾಯಾ ಟಾಮಿಅಟ್ಕಿನ್ಸ್, ಕೆಂಟ್, ಕೆನ್ಸಿಂಗ್ಟನ್ ತಳಿಗಳನ್ನು ಪ್ರದರ್ಶನಕ್ಕಿಡಲಾಗಿದೆ. ಮಾವು ಮತ್ತು ಹಲಸಿನ ಮೌಲ್ಯವರ್ಧಿತ ಉತ್ಪನ್ನಗಳ ಮಾರಾಟಕ್ಕೂ ಅವಕಾಶ ಕಲ್ಪಿಸಲಾಗಿದೆ. ಮಾವು ಬೆಳೆಗಾರರ ಸಮಿತಿಯವರು ನಿಗದಿಪಡಿಸಿದ ದರದಂತೆ ಮಾರಾಟ ಮಾಡಲಾಗುತ್ತದೆ' ಎಂದು ನಾಗರಾಜ್ ತಿಳಿಸಿದರು.

ಸೇಂದೂರ, ಬಾದಾಮಿ ರಸಪುರಿ, ರುಮಾನಿ, ಮಲಗೋವಾ, ಕೇಸರ್ ತಳಿಗಳಿವೆ. ಒಟ್ಟು 800 ಕೆ.ಜಿ ಹಣ್ಣನ್ನು ತಂದಿದ್ದೇನೆ. ಈ ಬಾರಿ ಫಸಲು ಕಡಿಮೆ ಇದೆ. ಮೇಳದಲ್ಲಿ ಗ್ರಾಹಕರಿಗೆ ಗುಣಮಟ್ಟದ ಮಾವಿನ ಹಣ್ಣು ಸಿಗುತ್ತದೆ. ನೇರವಾಗಿ ರೈತರಿಂದಲೇ ಖರೀದಿ ಮಾಡಬಹುದು.

ಸುನೀಲ್, ರಾಮನಗರ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Couriers

ONTIME DELIVERY
Worried about ontime delivery to customers give to us and sit back we deliver safely, we offer Courier, Cargo be it a air, surface modes. with door step pick up and door step delivery with best price. Packing facility will also provided.
What's up 81519 58772
Call +91 78990 39851

Finance

WANTED FINANCE for a proposed 5 Star Hotel on Tumkur Road, Bangalore. Dr.Swamy, Vamshadhara Property Services- 9342247637.

PROPOSED ELECTRIC Bus Company at Vizag, Wanted Finance. Contact: Dr.Swamy, Vamshadhara Project Services- 9342247637.

Business Offers

Finance

MSME LOANS Available for any startup company, any existing Companies avail this opportunity contact-7204995189

General

COLLATERALS AVAILABLE, 10 Acres Residentially converted Land, Rate 6000 sft (Govt value), Mysore City next C.F.T.R.I. Dr.Swamy, Vamshadhara Property Services- 9342247637.

33 ACRES Trust Land available for School/ College Development near Makali, Tumkur Road, Bangalore. Dr.Swamy, Vamshadhara Property Services- 9342247637.

MORE Classifieds IN SUPPLEMENT

PROPERTY CORNER ಕ್ಲಾಸಿಫೈಡ್ಸ್

SITES FOR SALE
ROYAL CITY
Site Dimensions Varies from 30X40 40x60 30X50 30X30 & Odd Sites
High Appreciation & High PG Demand due to fast Housing constructions existing costumers
CONSTRUCT PG BUILDING GET Rs 1.5 LAKH RENTAL INCOME PER MONTH
DC CONVERSION DTCP APPROVED INDIVIDUAL E-KATHA RERA RGED
Rs 2850 PerSft
NARASAPURA HOSKOTE- KOLAR ROAD
RERA NO:PRM/KA/RERA/1265/339/PR/130525/007738
Close to Narasapura / Vemgal KIADB Industrial hub with major companies such as Honda Two wheeler, Wistron (I-Phone Plant) / Mahendra Aero Space / Scania & Mitsubishi many more ancillary units such as Badve Exedy /Aisin/ Bando etc. are fully Operational.
7829000837 / 9008005029

Best Commercial **PROPERTY**
Invest Smart, Grow Strong with Prime Commercial Plots
60x40, 80x50 **Commercial** Plot for Sale
KHB Surya City
Near Electronic City & Bannerghatta Road
80 ft and 100 ft Roads
MARKET PRICE ₹6000/- PER SQFT
OFFER PRICE ₹4200/- PER SQFT
Ready for Registration
Loans Approved by SBI Bank
Call: 8904980189

LAND FOR SALE
Suitable for Residential / Godown / School / Apartments at Sir M Visweshwaraiah Layout - Ullalu Bengaluru-560110
18,513 Sqft. South Facing at Ullalu Village, Yeshwantapura Hobli, Bengaluru North Taluk, with clear title deeds for sale.
Interested parties for more details please contact :
99019 85699

FOR SALE FULLY FURNISHED OFFICE
ON OLD AIRPORT ROAD
VDB TOUCHDOWN
Next to HAL Museum
7447 Sqft
96 Workstations
3 Meeting Rooms
1 MD Cabin || 5 Cabins
1 Board || 1 Cafeteria
6 Car Parks
NO PHONE CALLS WHATSAPP MESSAGE ONLY TO 98450 31550

ತಾರಕನ್ಸ್
ಕಾರ್ಮೆಲ್ ಮಂತ್ರ
ಅಭಿವೃದ್ಧಿ ಮಾಡಿದ ಪ್ರೀಮಿಯಂ ಪ್ಲಾಟ್ಸ್
16.8 ಲಕ್ಷಗಳಿಂದ ಪ್ರಾರಂಭ
1200 ಚದರ ಅಡಿಗಳು
ಎಂಪಿಎ ಅನುಮೋದಿಸಿದ ಬ್ಯಾಂಕಿನಿಂದ ಸಾಲಗಳು ದೊರೆಯುತ್ತವೆ.
ಮಾಲೂರು, ಮಾಸ್ತಿ ರಸ್ತೆ ಸರ್ಜಾಪುರ & ವೈಟ್‌ಫೀಲ್ಡ್ ಹತ್ತಿರ
ಎಸ್.ಟಿ.ಆರ್.ಆರ್. ಸಮೀಪ, ಬೆಂಗಳೂರು ಮತ್ತು ಚೆನ್ನೈ ರಾಷ್ಟ್ರೀಯ ಹೆದ್ದಾರಿ ಹತ್ತಿರ
Call Us Now 9035 589 596

SALE
CHAMRAJPET
COMMERCIAL BUILDING
18,000 SFT,
RENTAL INCOME 7 LACS
SALE PRICE 12 CRORES
Call: 96322-37557 / 96069-07557

OTHERS

For Sale

35 YEAR OLD TEAK WOOD TREE (400 nos approx) Ready for harvest is for Sale Near KAGGALIPURA. Interested contractors Call 9008030008/ 9844133389 for more information.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PERSONAL

Change of Name

I, YASWANTH S/o.Narendra Kumar Gandhi R/a#1000/3 12th`A Main Road MK_Indira Road Hanumanthanagar BSK 3rd Stage,Bengaluru 560019 have`changed my_Name_to YASHWANTH GANDHI N JAIN vide`affidavit dated:29.5.2025 before`Notary M.Prabhakar Bangalore.

CHANGE OF NAME
I, **Nagamani S L,** residing at # 58, Machohalli , Bapa Village and Post, Bengaluru North, Bengaluru Rural-560091. have changed my name to **NAGAMANI** vide affidavit dated 30.05.2025 before notary Onkarappa N.R. Bengaluru. Henceforth I shall be called **NAGAMANI** only.

CHANGE OF NAME
I, **PUSHPADEVI SAJJANRAJ,** Residing at No. 11, Pillappa Lane, Nagrathpet Cross, Bangalore- 560002, have changed my name to **PUSHPA DEVI** vide affidavit dated 30-05-2025 before notary L. Shankaranarayana, Bangalore. Henceforth I shall be called as **PUSHPA DEVI** only

CHANGE OF NAME
I, LAXMIDEVI S.MAYACHARI W/o. Late Shivarudrappa R/a H.No. 971, Eshwar Nagar, Ranebennur, Haveri-581115 I, have changed my name from **LAXMI DEVI** to **LAXMIDEVI S. MAYACHARI** vide affidavit dated 28-05-2025 Sworn before Notary K.V. Mani, Bengaluru.

I, GOBINDA Borah S/O Bhuban Borah Residing At B-305, Gr Sunshine, Gunjur Road, Near Carmel School, Chikkabellandur, Carmelaram, Bellandur, Bengaluru, Karnataka-560103, Have Changed My Name To Gobinda B Borah For All Future Purposes

ಸುಧಾ, ಮಯೂರ ಓದಿರಿ

COFFEE DAY ENTERPRISES LTD.
Brewing new possibilities.
Registered Office: 165, R.V. Road, Near Minerva Circle, Bengaluru - 560 004, Karnataka, India.
Tel: + 91 80 4001 2345; **Fax:** + 91 80 4001 2650;
Website: www.coffeeday.com
Corporate Identification Number: L55101KA2008PLC046866

Financial Results for the Quarter/Year ended 31st March, 2025

(₹ in Crores except per share data)

Particulars	Quarter ended 31st March, 2025 (Audited)	Year ended 31st March, 2025 (Audited)	Quarter ended 31st March, 2024 (Audited)	Year ended 31st March, 2024 (Audited)
Total income from operations (net)	279.23	1,125.64	257.69	1,117.91
Net Profit from ordinary activities after tax	(114.16)	(143.20)	(296.40)	(307.43)
Net Profit for the period after tax (after Extraordinary items)	(114.16)	(143.20)	(296.40)	(307.43)
Equity Share Capital	211.25	211.25	211.25	211.25
Reserves (excluding Revaluation Reserve as shown in the Balance Sheet of previous year)		2,379.21		2,645.28
Earnings Per Share (before extraordinary items) (of ₹ 10/- each)				
Basic :	(1.56)	(2.75)	(14.33)	(15.27)
Diluted :	(1.56)	(2.75)	(14.33)	(15.27)
Earnings Per Share (after extraordinary items) (of ₹ 10/- each)				
Basic :	(1.56)	(2.75)	(14.33)	(15.27)
Diluted :	(1.56)	(2.75)	(14.33)	(15.27)

Notes:
1. The above is an extract of the detailed format of Financial Results filed with the Stock Exchanges under Regulation 33 of the SEBI (Listing and other Disclosure Requirements) Regulations, 2015. The full format of the Financial Results are available on the website of BSE (www.bseindia.com) and NSE (www.nseindia.com) and on the Company's website www.coffeeday.com
2. The above results were reviewed by the Audit Committee and thereafter approved by the Board of Directors in their meeting held on 29th May, 2025 and have been subjected to Audit by the Statutory Auditors of the Company.
3. **Audited financial results of Coffee Day Enterprises Limited (Standalone Information)**

(₹ in Crores)

Particulars	Quarter ended 31st March, 2025 (Audited)	Year ended 31st March, 2025 (Audited)	Quarter ended 31st March, 2024 (Audited)	Year ended 31st March, 2024 (Audited)
Total income from operations (net)	5.07	25.76	4.82	19.67
Loss before tax and exceptional items	(246.52)	(241.59)	(1,181.34)	(1,204.85)
Loss profit after tax and exceptional items	(246.52)	(241.59)	(1,181.34)	(1,204.85)

Place : Bengaluru
Date : 29th May, 2025

For and Behalf of Board of Directors
Malavika Hegde
CEO and Whole Time Director

AstraZeneca
ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್
CIN: L24231KA1979PLC003563
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬೆಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ ಔಟರ್ ರಿಂಗ್ ರೋಡ್, ಬೆಂಗಳೂರು – 560045
ದೂ.: +91 80 6774 8000. ವೆಬ್: www.astrazeneca.com/india

31ನೇ ಮಾರ್ಚ್, 2025ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷದ ಆರ್ಥಿಕ ಫಲಿತಾಂಶಗಳ ಹೇಳಿಕೆ

ರೂ. ಮಿಲಿಯನ್‌ಗಳಲ್ಲಿ (ಪ್ರತಿ ಷೇರಿನ ಗಳಿಕೆಯ ಡೇಟಾ ಹೊರತುಪಡಿಸಿ)

ಕ್ರ ಸಂ.	ವಿವರಗಳು	31/03/2025ಕ್ಕೆ ಕೊನೆಗೊಂಡ ತ್ರೈಮಾಸಿಕ	31/03/2024ಕ್ಕೆ ಕೊನೆಗೊಂಡ ತ್ರೈಮಾಸಿಕ	31/03/2025ಕ್ಕೆ ಕೊನೆಗೊಂಡ ವರ್ಷಕ್ಕೆ	31/03/2024ಕ್ಕೆ ಕೊನೆಗೊಂಡ ವರ್ಷಕ್ಕೆ
		ಸೂಚನೆ 5 ಅನ್ನು ನೋಡಿ	ಸೂಚನೆ 5 ಅನ್ನು ನೋಡಿ	ಪರಿಶೋಧಿತ	ಪರಿಶೋಧಿತ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	4,966.3	3,918.6	17,569.2	13,303.3
2	ತೆರಿಗೆಗೆ ಮುನ್ನ ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	784.7	543.6	1,563.6	2,195.4
3	ತೆರಿಗೆ ಕಳೆದು, ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	582.5	394.8	1,157.4	1,615.1
4	ತೆರಿಗೆ ಕಳೆದು, ಅವಧಿಗೆ ಸಮಗ್ರ ಆದಾಯ	597.1	396.8	1,145.7	1,625.1
5	ಈಕ್ವಿಟಿ ಷೇರು ಬಂಡವಾಳ	50.0	50.0	50.0	50.0
6	ಇತರೆ ಈಕ್ವಿಟಿ	–	–	7,653.5	7,069.2
7	ಪ್ರತಿ ಷೇರಿಗೆ ಮೂಲ ಮತ್ತು ಡೈಲ್ಯೂಟೆಡ್ ಗಳಿಕೆ (ತಲಾ 2 ರೂ.ನಂತೆ)	23.30	15.79	46.30	64.60

ಟಿಪ್ಪಣಿಗಳು:
1. ಮೇಲಿನದು, 2015 ರ ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಾವಳಿ 33 ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜುಗಳಿಗೆ ಸಲ್ಲಿಸಲಾದ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ವಿವರವಾದ ಹೇಳಿಕೆಗಳ ಸಾರವಾಗಿದೆ. ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಪೂರ್ಣ ಹೇಳಿಕೆ, ಸ್ಟಾಕ್ ಎಕ್ಸ್‌ಚೇಂಜುಗಳ www.nseindia.com ಮತ್ತು www.bseindia.com ಮತ್ತು ಕಂಪನಿಯ www.astrazeneca.com/india ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ. ಇದನ್ನು ಕೆಳಗೆ ನೀಡಿರುವ ಕ್ಯೂಆರ್ (QR) ಕೋಡನ್ನು ಸ್ಕ್ಯಾನ್ ಮಾಡಿಯೂ ಪಡೆಯಬಹುದು.
2. ಕಂಪನಿಗಳ ಕಾಯಿದೆ, 2013 [ಕಂಪನಿಗಳ (ಭಾರತೀಯ ಲೆಕ್ಕಪರಿಶೋಧನೆ ಮಾನದಂಡಗಳು) ನಿಯಮಗಳು, 2015 (ತಿದ್ದುಪಡಿಮಾಡಿದಂತೆ)] ರ ಸೆಕ್ಷನ್ 133 ಅಡಿಯಲ್ಲಿ ಸೂಚಿಸಿರುವಂತಹ ಮತ್ತು ಅನ್ವಯವಾಗುವಂತಹ ಭಾರತೀಯ ಲೆಕ್ಕಪರಿಶೋಧಕ ಮಾನದಂಡಗಳು ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವ ಇತರ ಲೆಕ್ಕಪತ್ರ ತತ್ವಗಳ ಅನುಸಾರ ಅಪರಿಶೋಧಿತ ಹಣಕಾಸು ಫಲಿತಾಂಶಗಳ ಹೇಳಿಕೆಗಳನ್ನು ಸಿದ್ಧಪಡಿಸಲಾಗಿದೆ.
3. ಹಿಂದಿನ ವರ್ಷ ಕಂಪನಿಯು ಬೆಂಗಳೂರಿನಲ್ಲಿರುವ ತನ್ನ ಉತ್ಪಾದನಾ ತಾಣದಿಂದ ಸೂಕ್ತ ಸಮಯದಲ್ಲಿ ನಿರ್ಗಮಿಸುವ ತನ್ನ ಉದ್ದೇಶದ ಬಗ್ಗೆ ಷೇರು ವಿನಿಮಯ ಕೇಂದ್ರಗಳಿಗೆ ಒಂದು ಪ್ರಕಟಣೆ ನೀಡಿತ್ತು. ನಂತರ ಕಂಪನಿಯು ಒಂದು ಕಾಂಟ್ರ್ಯಾಕ್ಟ್ ಮ್ಯಾನುಫ್ಯಾಕ್ಚರಿಂಗ್ ಸಂಸ್ಥೆಗೆ (ಸಿಎಂಒ) ತನ್ನ ಉತ್ಪಾದನಾ ತಾಣವನ್ನು ಸಂಪೂರ್ಣವಾಗಿ ಕಾರ್ಯಾಚರಣೆ ನಡೆಸುವ ಸ್ಥಿತಿಯಲ್ಲೇ ಮಾರಾಟ ಮಾಡಬೇಕೆಂದು ಆಯ್ಕೆಗಳ ಅನ್ವೇಷಣೆಯನ್ನು ಪ್ರಾರಂಭಿಸಿತು. ಆದರೆ, ಜೂನ್ 21, 2024 ರಂದು ಮಂಡಳಿ, ಕಂಪನಿ ತನ್ನ ಉತ್ಪಾದನಾ ತಾಣಕ್ಕೆ ಸೂಕ್ತ ಖರೀದಿದಾರರನ್ನು ಹುಡುಕಲಿ ಮತ್ತು ಸೂಕ್ತ ಸಮಯದಲ್ಲಿ ನಿರ್ಗಮಿಸಲಿ ಎಂದು ನಿರ್ಧರಿಸಿತು. ಮಾರ್ಚ್ 31, 2025 ರಂದೂ ಉತ್ಪಾದನಾ ಸ್ಥಳದಲ್ಲಿನ ಕಾರ್ಯಾಚರಣೆಗಳು ಎಂದಿನಂತೆ ಮುಂದುವರೆದಿದೆ ಮತ್ತು 2025–26 ರ ಹಣಕಾಸು ವರ್ಷದಲ್ಲಿ ಸ್ಥಗಿತಗೊಳ್ಳುವ ನಿರೀಕ್ಷೆಯಿದೆ. ಕಂಪನಿಯು ಮಾರ್ಚ್ 31, 2025 ಕ್ಕೆ ಕೊನೆಗೊಂಡ ತ್ರೈಮಾಸಿಕಕ್ಕೆ ರೂ.56.8 ಮಿಲಿಯನ್ ವೆಚ್ಚಗಳನ್ನು, ಮತ್ತು ಸಂಬಂಧಿತ ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಅನುಗುಣವಾಗಿ ಉತ್ಪಾದನಾ ತಾಣವನ್ನು ಮುಚ್ಚಲು ರೂ.636.4 ಮಿಲಿಯನ್ ಬೇಕಾಗಬಹುದೆಂದು ಅಂದಾಜು ಮಾಡಿದೆ ಮತ್ತು ಲೆಕ್ಕದಲ್ಲಿ ತೋರಿಸಿದೆ.
4. ಇದುವರೆಗೆ ಹಣಕಾಸು ಫಲಿತಾಂಶಗಳ ಹೇಳಿಕೆಯಲ್ಲಿ ಪೂರ್ಣಾಂಕ ತತ್ವವನ್ನು ಅನುಸರಿಸುತ್ತ ಲಕ್ಷ ರೂಪಾಯಿಗಳ ಲೆಕ್ಕದಲ್ಲಿ ತೋರಿಸಲಾಗುತ್ತಿತ್ತು. ಜೂನ್ 30, 2024 ಕ್ಕೆ ಕೊನೆಗೊಂಡ ತ್ರೈಮಾಸಿಕದಿಂದ ಅದನ್ನು ಮಿಲಿಯನ್ ರೂಪಾಯಿಗಳಿಗೆ ಬದಲಾಯಿಸಲು ಕಂಪನಿಯು ನಿರ್ಧರಿಸಿದೆ.
5. ಮಾರ್ಚ್ 31, 2025 ಮತ್ತು ಮಾರ್ಚ್ 31, 2024 ಕ್ಕೆ ಕೊನೆಗೊಂಡ ತ್ರೈಮಾಸಿಕದ ಅಂಕಿಅಂಶಗಳು: ಪೂರ್ಣ ಹಣಕಾಸು ವರ್ಷಗಳ ಲೆಕ್ಕಪರಿಶೋಧಿತ ಅಂಕಿಅಂಶಗಳು ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರಿಂದ ಸೀಮಿತ ಪರಿಶೀಲನೆಗೆ ಒಳಪಟ್ಟ ಆಯಾ ಹಣಕಾಸು ವರ್ಷಗಳ ಮೂರನೇ ತ್ರೈಮಾಸಿಕದವರೆಗಿನ ವರ್ಷದ ಪ್ರಕಟಿತ ಅಪರಿಶೋಧಿತ ಅಂಕಿಅಂಶಗಳ ನಡುವೆ ಸರಿಹೊಂದಿಸಿದ ಅಂಕಿಅಂಶಗಳಾಗಿವೆ.

ಸ್ಥಳ: ಬೆಂಗಳೂರು
ದಿನಾಂಕ: 30 ಮೇ 2025

ನಿರ್ದೇಶಕರ ಮಂಡಳಿಯ ಆದೇಶದಂತೆ,
ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್‌ಗಾಗಿ
ಸಂಜೀವ ಕುಮಾರ್ ಪಾಂಚಾಲ್
ಮ್ಯಾನೇಜಿಂಗ್ ಡೈರೆಕ್ಟರ್
DIN - 09823879

ಸಂಕ್ಷಿಪ್ತ ಸುದ್ದಿ

ಜಿ. ನಾರಾಯಣ ಕುಮಾರ್‌ಗೆ 'ಒಡೆಯರ್ ಪ್ರಶಸ್ತಿ'

ಬೆಂಗಳೂರು: ಸಮತಾ ಸೈನಿಕ ದಳ ನೀಡುವ 'ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ'ಗೆ ಕನ್ನಡ ಪರ ಹೋರಾಟಗಾರರಾಗಿದ್ದ ಜಿ.ನಾರಾಯಣ ಕುಮಾರ್ ಅವರು ಆಯ್ಕೆಯಾಗಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮತಾ ಸೈನಿಕ ದಳದ ರಾಜ್ಯ ಘಟಕದ ಅಧ್ಯಕ್ಷ ಆರ್.ಪಿ.ಐ. ಸತೀಶ್, 'ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ನಾರಾಯಣ ಕುಮಾರ್ ಅವರನ್ನು ಮರಣೋತ್ತರವಾಗಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 141ನೇ ಜಯಂತಿ ಹಾಗೂ ಎಂ. ವೆಂಕಟಸ್ವಾಮಿ ಅವರ 71ನೇ ಜನ್ಮದಿನದ ಅಂಗವಾಗಿ ಜೂನ್ 4ರಂದು ಬೆಳಿಗ್ಗೆ 11 ಗಂಟೆಗೆ ಪುರಭವನದಲ್ಲಿ ಪರಿವರ್ತನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಇದೇ ಸಮಾವೇಶದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಹಾಗೂ ಲೇಖಕಿ ಬಾನು ಮುಷ್ತಾಕ್ ಅವರನ್ನು ಗೌರವಿಸಲಾಗುತ್ತದೆ' ಎಂದು ಹೇಳಿದರು.

ನಕಲಿ ವಕೀಲರಿಗೆ ಪರಿಷತ್ ಎಚ್ಚರಿಕೆ

ಬೆಂಗಳೂರು: 'ಕಾನೂನು ಪದವಿ ಪೂರೈಸದೇ ವಕೀಲರ ಸಮವಸ್ತ್ರ ಧರಿಸಿ ಕೋರ್ಟ್‌ಗೆ ಹಾಜರಾಗುವ ನಕಲಿ ವಕೀಲರ ಬಗ್ಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ರಾಜ್ಯ ವಕೀಲರ ಪರಿಷತ್ ಎಚ್ಚರಿಸಿದೆ.

ಈ ಸಂಬಂಧ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ಪತ್ರ ಬರೆದಿರುವ ರಾಜ್ಯ ವಕೀಲರ ಪರಿಷತ್ ಅಧ್ಯಕ್ಷ ಎಸ್.ಎಸ್.ಮಿಟ್ಟಲಕೋಡ್, ನಕಲಿ ವಕೀಲರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ವಿಚಾರಣಾ ನ್ಯಾಯಾಲಯಗಳ ನ್ಯಾಯಾಧೀಶರಿಗೆ ಸೂಕ್ತ ಮಾಹಿತಿ ನೀಡುವಂತೆ ರಿಜಿಸ್ಟ್ರಾರ್ ಅವರಿಗೆ ಮನವಿ ಮಾಡಿದ್ದಾರೆ.

'ಸನ್ನದು ಇಲ್ಲದ ಅನುಮಾನಸ್ಪದ ವ್ಯಕ್ತಿಗಳು ಕಂಡುಬಂದಲ್ಲಿ ಅಂತಹವರ ಹೆಸರು, ಭಾವಚಿತ್ರ, ನೋಂದಣಿ ಸಂಖ್ಯೆ ಮತ್ತು ಸ್ಥಳದ ಮಾಹಿತಿಯನ್ನು kar_barcouncil@yahoo.comಗೆ ಇ-ಮೇಲ್ ಮಾಡಬಹುದು' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂದಿರಾನಗರ: ಕ್ರೀಡಾಂಗಣ ಕಾಮಗಾರಿಗೆ ತಡೆ

ಬೆಂಗಳೂರು: ಇಂದಿರಾನಗರ ಮೊದಲನೇ ಹಂತದ ಆಟದ ಮೈದಾನದ ಅಭಿವೃದ್ಧಿ ಮತ್ತು ಉದ್ದೇಶಿತ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಕಾಮಗಾರಿಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಇಂದಿರಾನಗರ ಮೊದಲ ಹಂತದ ನಿವಾಸಿಗಳ ಸಂಘದ ಕಾರ್ಯದರ್ಶಿ ಸ್ವರ್ಣ ವೆಂಕಟರಾಮನ್ ಮತ್ತು ಜಂಟಿ ಕಾರ್ಯದರ್ಶಿ ಶಾನಿ ಸುನ್ನಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಮೊಹಮದ್ ನವಾಜ್ ನೇತೃತ್ವದ ರಜಾಕಾಲದ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಆಯುಕ್ತ ಹಾಗೂ ಸಂಬಂಧಿಸಿದ ಎಂಜಿನಿಯರ್ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿರುವ ನ್ಯಾಯಪೀಠ, ವಿಚಾರಣೆಯನ್ನು ಜೂನ್ 6ಕ್ಕೆ ಮುಂದೂಡಿದೆ.

'ಆಟದ ಮೈದಾನವನ್ನು ಒತ್ತುವರಿ ಮಾಡುವಂತಹ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕು ಎಂದು ಆಕ್ಷೇಪಿಸಿರುವ ಅರ್ಜಿದಾರರು ಪ್ರಸ್ತಾವನೆಯ ಮರುಪರಿಶೀಲನೆಗೆ ಕೋರಿರುವ ಕಾರಣ, ಈ ಕೂಡಲೇ ಕಾಮಗಾರಿ ಸ್ಥಗಿತಗೊಳಿಸಬೇಕು' ಎಂದು ನ್ಯಾಯಪೀಠ ಮಧ್ಯಂತರ ಆದೇಶದಲ್ಲಿ ವಿವರಿಸಿದೆ.

ಬಿಬಿಎಂಪಿ: 33 ಪ್ಯಾಕೇಜ್‌ನಲ್ಲಿ ಹೊಸ ಟೆಂಡರ್ ಆಹ್ವಾನ • ಏಳು ವರ್ಷಗಳ ಅವಧಿಗೆ ಗುತ್ತಿಗೆ

ತ್ಯಾಜ್ಯ ವಿಲೇವಾರಿ: ವರ್ಷಕ್ಕೆ ₹544 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ತ್ಯಾಜ್ಯ ವಿಲೇವಾರಿಗೆ ಹೊಸದಾಗಿ 33 ಪ್ಯಾಕೇಜ್‌ನಲ್ಲಿ ಟೆಂಡರ್ ಕರೆಯಲಾಗಿದ್ದು, ವಾರ್ಷಿಕ ₹544.91 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ಪ್ರಾಥಮಿಕ ತ್ಯಾಜ್ಯ ಸಂಗ್ರಹ, ಎರಡನೇ ಹಂತದ ತ್ಯಾಜ್ಯ ವರ್ಗಾವಣೆ, ರಸ್ತೆ ಗುಡಿಸಿದ ಕಸ ಸಂಗ್ರಹಿಸಲು 33 ವಿಭಾಗವಾರು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ವಿಭಾಗ ಎಂದು ನಮೂದಿಸಿದ್ದರೂ, ಅದು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯನ್ನು ಒಳಗೊಂಡಿದೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಕಂಪನಿ (ಬಿಎಸ್‌ಡಬ್ಲ್ಯುಎಂಎಲ್) ವತಿಯಿಂದ ಟೆಂಡರ್ ಆಹ್ವಾನಿಸಿದ್ದು, ತ್ಯಾಜ್ಯವನ್ನು ವಿಂಗಡಿಸಿದ ಮಾದರಿಯಲ್ಲಿ ಸಂಗ್ರಹಿಸಬೇಕು ಎಂದು ಹೇಳಿದೆ. ಎನ್‌ಜಿಒ, ಟ್ರಸ್ಟ್, ಪಾಲುದಾರಿಕೆ ಕಂಪನಿಗಳು ಟೆಂಡರ್‌ನಲ್ಲಿ ಭಾಗವಹಿಸ ಬಹುದು. ಆದರೆ, ಒಬ್ಬರಿಗೆ ಒಂದು ಪ್ಯಾಕೇಜ್ ಮಾತ್ರ ನೀಡಲಾಗುತ್ತದೆ ಎಂದು ಷರತ್ತು ವಿಧಿಸಲಾಗಿದೆ.

ಯಾವ ಪ್ಯಾಕೇಜ್ ಎಷ್ಟು ಮೊತ್ತ?

ಪ್ರದೇಶ	ಮೊತ್ತ (ವರ್ಷಕ್ಕೆ ₹ಕೋಟಿಗಳಲ್ಲಿ)
ಸಿ.ವಿ. ರಾಮನ್‌ನಗರ	14.77
ಶಾಂತಿನಗರ	14.11
ಸರ್ವಜ್ಞನಗರ	17.51
ಶಿವಾಜಿನಗರ	17.23
ಹೆಬ್ಬಾಳ	15.16
ಪುಲಕೇಶಿನಗರ	16.70
ಗಾಂಧಿನಗರ	15.96
ಗೋವಿಂದರಾಜ ನಗರ	13.38
ರಾಜಾಜಿನಗರ	13.44
ಮಲ್ಲೇಶ್ವರ	17.96
ಮಹಾಲಕ್ಷ್ಮಿ ಲೇಔಟ್	12.84
ಚಾಮರಾಜಪೇಟೆ	14.85
ಚಿಕ್ಕಪೇಟೆ	20.16
ಬಸವನಗುಡಿ	17.24
ವಿಜಯನಗರ	21.41
ಪದ್ಮನಾಭನಗರ	22.94
ಜಯನಗರ	12.84
ಬಿಟಿಎಂ ಲೇಔಟ್	17.69
ಬೊಮ್ಮನಹಳ್ಳಿ	25.97
ಬೆಂಗಳೂರು ದಕ್ಷಿಣ–1	14.38
ಬೆಂಗಳೂರು ದಕ್ಷಿಣ–2	9.55
ದಾಸರಹಳ್ಳಿ–1	15.05
ದಾಸರಹಳ್ಳಿ–2	14.94
ಮಹದೇವಪುರ–1	18.98
ಮಹದೇವಪುರ–2	18.65
ಕೆ.ಆರ್. ಪುರ–1	14.16
ಕೆ.ಆರ್. ಪುರ–2	16.90
ಯಶವಂತಪುರ–1	14.57
ಯಶವಂತಪುರ–2	15.69
ರಾಜರಾಜೇಶ್ವರಿ ನಗರ–1	16.33
ರಾಜರಾಜೇಶ್ವರಿ ನಗರ–2	18.59
ಯಲಹಂಕ	12.14
ಬ್ಯಾಟರಾಯನಪುರ	22.65

ಮೇ 28ರಂದು ಟೆಂಡರ್ ಆಹ್ವಾನಿಸಲಾಗಿದ್ದು, ಜೂನ್ 27ರೊಳಗೆ ಬಿಡ್ ಸಲ್ಲಿಸಬೇಕು. ಜೂನ್ 30ರಂದು ಟೆಂಡರ್ ತೆರೆಯಲಾಗುತ್ತದೆ. ಗುತ್ತಿಗೆ ಅವಧಿ ಏಳು ವರ್ಷ ಇರಲಿದೆ ಎಂದು ಮಾಹಿತಿ ನೀಡಲಾಗಿದೆ.

ಸಂಗ್ರಹ ಚಿತ್ರ

ಬಿಬಿಎಂಪಿ ವ್ಯಾಪ್ತಿಯಲ್ಲಿರುವ 27 ವಿಧಾನಸಭೆ ಕ್ಷೇತ್ರಗಳ ಪೈಕಿ (ಆನೇಕಲ್ ಹೊರತುಪಡಿಸಿ) 21 ವಿಧಾನಸಭಾ ಕ್ಷೇತ್ರಗಳಿಗೆ ಒಂದು ಪ್ಯಾಕೇಜ್ ನಿಗದಿ ಪಡಿಸಲಾಗಿದೆ. ಬೆಂಗಳೂರು ದಕ್ಷಿಣ, ದಾಸರಹಳ್ಳಿ, ಮಹದೇವಪುರ, ಕೆ.ಆರ್. ಪುರ, ಯಶವಂತಪುರ, ರಾಜರಾಜೇಶ್ವರಿ ನಗರ ವಿಧಾನಸಭೆ ಕ್ಷೇತ್ರಗಳಿಗೆ ತಲಾ ಎರಡು ಪ್ಯಾಕೇಜ್ ನಿಗದಿಪಡಿಸಲಾಗಿದೆ. ಒಟ್ಟಾರೆ ₹544.91 ಕೋಟಿ ಎಂದು ಅಂದಾಜಿಸಿದ್ದರೂ, ಇದು ಬಿಡ್‌ನಲ್ಲಿ ಹೆಚ್ಚಾಗುವ ಸಾಧ್ಯತೆ ಇತ್ತು. ಕಳೆದ ಬಾರಿ 89 ಪ್ಯಾಕೇಜ್ ಕರೆದಿದ್ದಾಗ ಶೇಕಡ 18ರಿಂದ ಶೇ 60ರಷ್ಟು ಹೆಚ್ಚು ಮೊತ್ತಕ್ಕೆ ಬಿಡ್ ಆಗಿತ್ತು.

89 ಪ್ಯಾಕೇಜ್ ಈಗ 33 ಪ್ಯಾಕೇಜ್!: ಪ್ರಾಥಮಿಕವಾಗಿ ತ್ಯಾಜ್ಯ ಸಂಗ್ರಹ, ಸಾಗಣೆ, ನಿರ್ದಿಷ್ಟ ಸ್ಥಳದಲ್ಲಿ ಎರಡನೇ ಹಂತದ ತ್ಯಾಜ್ಯ ವಿಂಗಡಣೆ ಸೇರಿದಂತೆ ಎಲ್ಲ ರೀತಿಯ ತ್ಯಾಜ್ಯ ನಿರ್ವಹಣೆಗಾಗಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಕಂಪನಿ (ಬಿಎಸ್‌ಡಬ್ಲ್ಯುಎಂಎಲ್) 2022ರ ಸೆಪ್ಟೆಂಬರ್‌ನಲ್ಲಿ 89 ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆದಿತ್ತು. ಆಗ ತಾಂತ್ರಿಕ ಬಿಡ್ ತೆರೆದ ಸಂದರ್ಭದಲ್ಲಿ ಹಲವು ಬಿಡ್‌ದಾರರು ಅರ್ಹತೆ ಹೊಂದಿರಲಿಲ್ಲ ಎಂದು ಟೆಂಡರ್ ರದ್ದುಪಡಿಸಲಾಗಿತ್ತು.

2023ರ ಜನವರಿಯಲ್ಲಿ ಎರಡನೇ ಬಾರಿಗೆ ಟೆಂಡರ್ ಆಹ್ವಾನಿಸಿತ್ತು. ಅರ್ಹತಾ ಸುತ್ತಿನಲ್ಲಿ ಕೆಲವರನ್ನು ಸಣ್ಣ ಕಾರಣಕ್ಕಾಗಿ ಅನರ್ಹಗೊಳಿಸಿದ್ದರಿಂದ ವಿಷಯ ಕೋರ್ಟ್ ಹಂತಕ್ಕೆ ತಲುಪಿತು. ಹೊಸ ಟೆಂಡರ್ ಪ್ರಕ್ರಿಯೆ ನಡೆಸುವುದಾಗಿ, ನ್ಯಾಯಾಲಯಕ್ಕೆ ಸರ್ಕಾರ ಹೇಳಿತ್ತು. ಅದರಂತೆ, ಸಚಿವ ಸಂಪುಟದಲ್ಲಿ ಅನುಮೋದನೆ ಪಡೆದು, 33 ಪ್ಯಾಕೇಜ್‌ಗೆ ಟೆಂಡರ್ ಆಹ್ವಾನಿಸಲಾಗಿದೆ.

ರಾಮನಗರವೂ ಸೇರಿದೆ?

ತ್ಯಾಜ್ಯ ವಿಲೇವಾರಿಗೆ ಬಿಎಸ್‌ಡಬ್ಲ್ಯುಎಂಎಲ್ ಕರೆದಿರುವ ಟೆಂಡರ್ ದಾಖಲೆಗಳಲ್ಲಿ (ಆರ್‌ಎಫ್‌ಪಿ) 'ರಾಮನಗರ'ವೂ ಸೇರಿದೆ. ಬೆಂಗಳೂರು ದಕ್ಷಿಣ ಜಿಲ್ಲೆಯಾಗಿರುವ 'ರಾಮನಗರ' ಇಲ್ಲಿ ಹೇಗೆ ಸೇರಿಕೊಂಡಿತು ಎಂದು ಗುತ್ತಿಗೆದಾರರು ಅಚ್ಚರಿಗೊಂಡಿದ್ದಾರೆ. ಆದರೆ, ಅದು ಮುದ್ರಣ ದೋಷವಾಗಿದ್ದು, 'ಸಿವಿ ರಾಮನ್‌ನಗರ' ಎಂಬುದು 'ಸಿವಿ ರಾಮನಗರ' ಎಂದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ರಮ ಆಸ್ತಿ ಸಂಪಾದನೆ ಆರೋಪ ಶಾಸಕ ಅಭಯ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ಶಾಸಕ ಅಭಯ ಪಾಟೀಲ ಅಕ್ರಮ ಆಸ್ತಿ ಸಂಪಾದಿಸಿದ ಆರೋಪಕ್ಕೆ ಸಂಬಂಧಿಸಿ, ಬೆಳಗಾವಿ ಲೋಕಾಯುಕ್ತ ಅಧಿಕಾರಿಗಳು ಎಫ್‌ಐಆರ್ ದಾಖಲಿಸಿದ್ದಾರೆ. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಈ ದೂರು ದಾಖಲಿಸಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಈ ವಿಷಯ ತಿಳಿಸಿದ ಸಾಮಾಜಿಕ ಕಾರ್ಯಕರ್ತ ಸುಜಿತ್ ಮುಳಗುಂದ, 'ಅಭಯ ಪಾಟೀಲ ಅವರ ಭ್ರಷ್ಟಾಚಾರ ಹಾಗೂ ಅಕ್ರಮ ಆಸ್ತಿ ಸಂಪಾದನೆ ಸಂಬಂಧ ನಾನು 2012ರಿಂದಲೂ ಹೋರಾಟ ಮಾಡುತ್ತಿದ್ದೇನೆ. ಲೋಕಾಯುಕ್ತ ಅಧಿಕಾರಿಗಳಿಗೆ ದಾಖಲೆ ಸಮೇತ ದೂರು ಕೂಡ ನೀಡಿದ್ದೆ. ಈ ಹಿಂದೆ ಹೈಕೋರ್ಟ್ ಮೊರೆಹೋಗಿದ್ದ ಅಭಯ ಪಾಟೀಲ, ತಮ್ಮ ವಿರುದ್ಧ ಎಫ್‌ಐಆರ್ ದಾಖಲಿಸದಂತೆ ಆದೇಶ ಪಡೆದಿದ್ದರು. ಆಗ ನಮಗೆ ಹಿನ್ನಡೆ ಆಗಿತ್ತು. ಆದರೂ ನಾನು ಸುಪ್ರೀಂಕೋರ್ಟ್‌ಗೆ ಹೋಗಿ ಪ್ರಕರಣ ದಾಖಲಿಸುವಂತೆ ಹೋರಾಟ ಮಾಡಿದ್ದೇನೆ' ಎಂದರು.

ಅಭಯ ಪಾಟೀಲ

'ಅಭಯ ಪಾಟೀಲ ತಮ್ಮ ಹಾಗೂ ತಮ್ಮ ಕುಟುಂಬದವರ ಹೆಸರಿನಲ್ಲಿ ಮಿತಿಗಿಂತ ಹೆಚ್ಚು ಆಸ್ತಿ ಸಂಪಾದಿಸಿದ್ದಾರೆ. ನಾನು ದೂರು ನೀಡಿದ ನಂತರ ಮೂರು ಬಾರಿ ತನಿಖಾ ವರದಿಗಳು ಸಲ್ಲಿಕೆಯಾಗಿವೆ. ಆದರೂ ಆಗಿನ ಅಧಿಕಾರಿಗಳು ಎಫ್‌ಐಆರ್ ದಾಖಲಿಸಲಿಲ್ಲ. ಶಾಸಕ ಇದನ್ನು ತಡೆದರು. ಆದರೆ, ಈಚೆಗೆ ಸುಪ್ರೀಂಕೋರ್ಟ್ ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳನ್ನೇ ಪ್ರಶ್ನೆ ಮಾಡಿದೆ. ಹೀಗಾಗಿ, ಮೇ 21ರಂದು ಸ್ವಯಂ ಪ್ರೇರಿತ ಎಫ್‌ಐಆರ್ ದಾಖಲಿಸಿರುವ ಬೆಳಗಾವಿ ಲೋಕಾಯುಕ್ತರು, ಅದನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ' ಎಂದರು.

ರಕ್ಷಣೆಗೆ ಎಪಿಸಿಸಿಎಫ್ ಗೋಕುಲ್ ಸಿಬಿಐಗೆ ಮೊರೆ

ಬೇಲೆಕೇರಿ ಬಂದರು ಅದಿರು ಕಳವು, ಎಚ್‌ಎಂಟಿ ಭೂವಿವಾದ • ಅರಣ್ಯ ಇಲಾಖೆ ಪ್ರಸ್ತಾವನೆಯ ಕಡತ ಸಿ.ಎಂ ಬಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೇಲೆಕೇರಿ ಬಂದರಿನಲ್ಲಿ ಕಬ್ಬಿಣದ ಅದಿರು ಕಳ್ಳತನ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಸಾಕ್ಷ್ಯ ನುಡಿದ ಕಾರಣಕ್ಕೆ ಎಚ್‌ಎಂಟಿ ಭೂವಿವಾದ ಪ್ರಕರಣದಲ್ಲಿ ತಮ್ಮನ್ನು ಬಲಿಪಶು ಮಾಡಿ ಮಾನಹಾನಿ ಮಾಡಲಾಗುತ್ತಿದೆ ಎಂದು ಆರೋಪಿಸಿ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಎಪಿಸಿಸಿಎಫ್) ಆರ್. ಗೋಕುಲ್ ಸಿಬಿಐಗೆ ಪತ್ರ ಬರೆದಿದ್ದಾರೆ.

ಕಬ್ಬಿಣದ ಅದಿರು ಕದ್ದು, ರಫ್ತು ಮಾಡಿದ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ಸತೀಶ್ ಸೈಲ್‌ಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಏಳು ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಿ 2024ರ ಅಕ್ಟೋಬರ್ 24ರಂದು ತೀರ್ಪು ನೀಡಿತ್ತು. ಉತ್ತರ ಕನ್ನಡ ಜಿಲ್ಲೆಯ ಬೇಲೆಕೇರಿ ಬಂದರಿನಲ್ಲಿ ಸಂಗ್ರಹಿಸಿಡಲಾಗಿದ್ದ ಸಾವಿರಾರು ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ಕಳ್ಳತನ ಮಾಡಿ, ವಿದೇಶಗಳಿಗೆ ಅಕ್ರಮವಾಗಿ ಸಾಗಿಸಿ ರಾಜ್ಯದ ಖಜಾನೆಗೆ ₹200 ಕೋಟಿಗೂ ಹೆಚ್ಚಿನ ನಷ್ಟ ಮಾಡಿದ ಆರು ಕ್ರಿಮಿನಲ್ ಪ್ರಕರಣಗಳಲ್ಲಿ ಈ ತೀರ್ಪು ಪ್ರಕಟಿಸಲಾಗಿತ್ತು.

ಬಳ್ಳಾರಿ ಅಕ್ರಮ ಗಣಿಗಾರಿಕೆ ಹಾಗೂ ಬೇಲೆಕೇರಿ ಬಂದರಿನಲ್ಲಿ ಕಬ್ಬಿಣದ ಅದಿರು ಕಳವು ಪ್ರಕರಣದ ತನಿಖೆಗೆ ಆಗ್ರಹಿಸಿ ಆಗಿನ ವಿಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವು ಬೆಂಗಳೂರಿನಿಂದ ಬಳ್ಳಾರಿಯವರೆಗೆ ಪಾದಯಾತ್ರೆ ನಡೆಸಿತ್ತು. ಆದರೆ, ಈಗ ಎಚ್‌ಎಂಟಿ ಭೂವಿವಾದ ಪ್ರಕರಣದಲ್ಲಿ ಗೋಕುಲ್ ಅವರನ್ನು ಸೇವೆಯಿಂದ ಅಮಾನತು ಮಾಡಬೇಕೆಂಬ ಅರಣ್ಯ ಇಲಾಖೆಯ ಪ್ರಸ್ತಾವನೆಯ ಕಡತವು ಸಿದ್ದರಾಮಯ್ಯ ಅವರ ಮುಂದಿದೆ.

ಪತ್ರದಲ್ಲೇನಿದೆ: 'ಬೇಲೆಕೇರಿ ಕಬ್ಬಿಣದ ಅದಿರು ಕಳ್ಳಸಾಗಣೆಗೆ ಸಂಬಂಧಿಸಿ ಬೆಂಗಳೂರಿನ ಸಿಬಿಐ ನ್ಯಾಯಾಲಯದಲ್ಲಿ ದಾಖಲಾಗಿರುವ ಆರು ಪ್ರಕರಣಗಳಲ್ಲಿ ನಾನು ಸಾಕ್ಷಿಯಾಗಿದ್ದೇನೆ. ಕೆಲವು ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಹಾಜರಾಗುವಂತೆ ಸಮನ್ಸ್ ಬಂದಿದೆ. ಹಲವು ಪ್ರಕರಣಗಳಲ್ಲಿ ವಿಚಾರಣೆ ಪೂರ್ಣಗೊಂಡಿದೆ. ಸೈಲ್ ಅವರನ್ನು ದೋಷಿ ಎಂದು ನ್ಯಾಯಾಲಯವು ಅ.24ರಂದು ತೀರ್ಪು ನೀಡಿತ್ತು. ಬೆಂಗಳೂರಿನ ಎಚ್‌ಎಂಟಿ ಜಾಗವನ್ನು ಡಿನೋಟಿಫಿಕೇಷನ್ ಮಾಡಬೇಕೆಂದು ಸುಪ್ರೀಂ ಕೋರ್ಟ್‌ಗೆ 2020ರಲ್ಲಿ ಮಧ್ಯಂತರ ಅರ್ಜಿ ಸಲ್ಲಿಸಲಾಗಿದ್ದು, ಇದರಲ್ಲಿ ನಾನು ಭಾಗಿಯಾಗಿದ್ದೇನೆ ಎಂದು ಆರೋಪಿಸಿ ಅರಣ್ಯ ಇಲಾಖೆಯು ನವೆಂಬರ್ 11ರಂದು ನೋಟಿಸ್ ನೀಡಿತ್ತು. ಅದು ನನಗೆ ಸಿಕ್ಕಿದ್ದು ನ.13ರಂದು. ನನಗೆ ನೋಟಿಸ್ ಪ್ರತಿ ಸಿಗುವ ಮೊದಲೇ ನ. 12ರಂದು ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿದೆ. ಇದರಿಂದ ನನಗೆ ಆಘಾತವಾಗಿದೆ' ಎಂದು ಅವರು 34 ಪುಟಗಳ ಪತ್ರದಲ್ಲಿ ಹೇಳಿಕೊಂಡಿದ್ದಾರೆ.

'ಇದರಿಂದಾಗಿ, ಇಷ್ಟು ವರ್ಷಗಳಿಂದ ಕಾಯ್ದುಕೊಂಡಿದ್ದ ಘನತೆ ಹಾಗೂ ಗೌರವಕ್ಕೆ ಭಾರಿ ಹಾನಿಯಾಗಿದೆ. ಈ ಹಗರಣದಲ್ಲಿ ನನ್ನನ್ನು ಸಿಲುಕಿಸಲು ಪ್ರಯತ್ನಿಸಲಾಗಿದೆ. ಈ ಬಗ್ಗೆ ಅರಣ್ಯ ಇಲಾಖೆಯ ಮುಖ್ಯಸ್ಥರಿಗೆ ನವೆಂಬರ್ 12ರಂದೇ ಪತ್ರ ಬರೆದು ಆಕ್ಷೇಪ ವ್ಯಕ್ತಪಡಿಸಿದ್ದೇನೆ' ಎಂದಿದ್ದಾರೆ.

'2010ರಲ್ಲಿ ಕಾರವಾರ ವೃತ್ತದಲ್ಲಿ ನಾನು ಡಿಸಿಎಫ್ ಆಗಿದ್ದೆ. ಬಳ್ಳಾರಿಯಿಂದ ಅಕ್ರಮವಾಗಿ ಸಾಗಿಸಿದ ಅದಿರನ್ನು ಬೇಲೆಕೇರಿ ಬಂದರಿನಲ್ಲಿ ಇಡಲಾಗಿತ್ತು. ನಾನು ದಾಳಿ ನಡೆಸಿ ಅವುಗಳನ್ನು ವಶಕ್ಕೆ ಪಡೆದಿದ್ದೆ. ಈ ಪ್ರಕರಣದ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಶಿಫಾರಸು ಮಾಡಿದ್ದೆ. ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಈ ಪ್ರಕರಣವನ್ನು ಸಿಬಿಐಗೆ ಒಪ್ಪಿಸಲಾಗಿತ್ತು. ಈ ಕಾರಣಕ್ಕೆ ನನ್ನನ್ನು ಬಲಿಪಶು ಮಾಡಲಾಗುತ್ತಿದೆ. ನೋಟಿಸ್ ನೀಡಿರುವ ಕಾರಣಗಳ ಬಗ್ಗೆ ತನಿಖೆ ನಡೆಸಬೇಕು. ನನಗೆ ಸೂಕ್ತ ರಕ್ಷಣೆ ನೀಡಬೇಕು' ಎಂದು ಕೋರಿದ್ದಾರೆ.

ನೋಟಿಸ್‌ನಲ್ಲಿ ಏನಿದೆ?

ಅರಣ್ಯ ಸಂರಕ್ಷಣಾ ಕಾಯ್ದೆಯಡಿ ಎಚ್‌ಎಂಟಿಗೆ ಭೂಮಿ ಗುತ್ತಿಗೆ ನೀಡಲಾಗಿತ್ತು. ಅದರ ಮಾಲೀಕತ್ವ ಅರಣ್ಯ ಇಲಾಖೆಗೆ ಸೇರಿದ್ದು. ಹೀಗಿದ್ದರೂ ಎಚ್‌ಎಂಟಿ ವಶದಲ್ಲಿರುವ ಅರಣ್ಯ ಭೂಮಿಯನ್ನು ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಿಗೆ ಭಾಗಶಃ ಮಾರಾಟ ಮಾಡಲಾಗಿತ್ತು. ಈ ಅರಣ್ಯ ಭೂಮಿ ಪರಭಾರೆ ಮಾಡದಂತೆ 2015ರಲ್ಲಿ ನಿರ್ಬಂಧ ಹೇರಲಾಗಿತ್ತು. ಎಚ್‌ಎಂಟಿ ಅನಧಿಕೃತ ಅರಣ್ಯ ಭೂಮಿ ಪರಭಾರೆ ಮಾಡಲಾಗುತ್ತಿದೆ ಎಂದು ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಗಿತ್ತು. 1980ರ ಪೂರ್ವದಲ್ಲಿ ಸರ್ಕಾರಿ ಹಾಗೂ ಅರೆ ಸರ್ಕಾರಿ ಸಂಸ್ಥೆಗಳಿಗೆ ನೀಡಿರುವ ಅರಣ್ಯ ಭೂಮಿಗಳ ಡಿನೋಟಿಫಿಕೇಷನ್ ಪ್ರಸ್ತಾವವನ್ನು ಸಂಪುಟದ ಮುಂದೆ ಮಂಡಿಸಲು 2020ರ ಜುಲೈ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಆದರೂ, ಬೆಂಗಳೂರು ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ನೀವು ನಿಯಮ ಉಲ್ಲಂಘಿಸಿ ಈ ಅರಣ್ಯ ಜಮೀನನ್ನು ಡಿನೋಟಿಫೈ ಮಾಡಲು ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದ್ದೀರಿ. ಅರಣ್ಯ ಪರಿಸರಕ್ಕೆ ಘೋರ ಅನ್ಯಾಯ ಎಸಗಿರುವ ನೀವು ನೋಟಿಸ್‌ಗೆ ಏಳು ದಿನಗಳಲ್ಲಿ ಉತ್ತರ ನೀಡಬೇಕು' ಎಂದು ಅರಣ್ಯ ಇಲಾಖೆ ಸೂಚಿಸಿತ್ತು. ಇವರ ಜತೆಗೆ, ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಆಗಿದ್ದ ಸಂದೀಪ್ ದವೆ, ನಿವೃತ್ತ ಪಿಸಿಸಿಎಫ್ ವಿಜಯಕುಮಾರ್ ಗೋಗಿ, ಎಪಿಸಿಸಿಎಫ್ ಸ್ಮಿತಾ ಬಿಜ್ಜೂರ್ ಅವರಿಗೂ ನೋಟಿಸ್ ನೀಡಲಾಗಿತ್ತು.

ಬೆಂಗಳೂರು ಉತ್ತರ ತಾಲ್ಲೂಕಿನ ಪೀಣ್ಯ ಪ್ಲಾಂಟೇಷನ್‌ನಲ್ಲಿರುವ 443 ಎಕರೆ ಜಾಗದ ಮಾರುಕಟ್ಟೆ ಮೌಲ್ಯ ₹14 ಸಾವಿರ ಕೋಟಿ ಎಂಬುದು ಅರಣ್ಯ ಇಲಾಖೆಯ ವಾದ.

ನಾಲ್ವರು ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಶಿಫಾರಸು: ಸಚಿವ ಖಂಡ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಂಟಿ ಕಂಪನಿಗೆ ನೀಡಿದ ₹14 ಸಾವಿರ ಕೋಟಿ ಮೌಲ್ಯದ ಅರಣ್ಯ ಭೂಮಿಯ ಡಿನೋಟಿಫಿಕೇಷನ್‌ಗೆ ಅನುಮತಿ ಕೋರಿ ಸುಪ್ರೀಂಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದ ಪ್ರಕರಣದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಸೇರಿ ನಾಲ್ವರು ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಎಚ್‌ಎಂಟಿಗೆ ನೀಡಿದ ಭೂಮಿ ಅರಣ್ಯೇತರ ಉದ್ದೇಶಕ್ಕೆ ಪರಿವರ್ತನೆಯಾಗಿಲ್ಲ. ಸುಪ್ರೀಂಕೋರ್ಟ್ ನೀಡಿದ ಹಲವು ತೀರ್ಪು ಮತ್ತು ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಪ್ರಕಾರ ಇಂದಿಗೂ ಅದು ಅರಣ್ಯವೇ ಆಗಿದೆ. ಆದರೂ, ರಿಯಲ್ ಎಸ್ಟೇಟ್ ಸಂಸ್ಥೆಗಳು ಅಪಾರ್ಟ್‌ಮೆಂಟ್ ಕಟ್ಟಿದ್ದಾರೆ. ಧಾರಾವಾಹಿ, ಚಲನಚಿತ್ರಗಳ ಚಿತ್ರೀಕರಣ ನಡೆಯುತ್ತಿದೆ.

ವಾಣಿಜ್ಯ ಉದ್ದೇಶಕ್ಕೆ ಭೂಮಿ ಬಳಕೆ ಆಗುತ್ತಿದೆ. ಅಂದಿನ ಅರಣ್ಯ ಸಚಿವರ ಗಮನಕ್ಕೂ ತಾರದೆ, ಸಚಿವ ಸಂಪುಟದ ಪೂರ್ವಾನುಮತಿ ಪಡೆಯದೆ ಡಿನೋಟಿಫಿಕೇಷನ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಲಾಗಿದೆ ಎಂದು ದೂರಿದರು.

ಹೆಚ್ಚುವರಿ ಮುಖ್ಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಆರ್. ಗೋಕುಲ್ ತಾವು ಬೇಲಿಕೇರಿ ಪ್ರಕರಣದಲ್ಲಿ ಆಡಳಿತ ಪಕ್ಷದ ಶಾಸಕರಿಗೆ ಶಿಕ್ಷೆ ಆಗುವಂತೆ ಮಾಡಿದ ಕಾರಣ ತಮ್ಮನ್ನು ಬಲಿ ಪಶು ಮಾಡಲಾಗುತ್ತಿದೆ ಎಂದು ತಿಳಿಸಿ, ರಕ್ಷಣೆ ಕೋರಿ ಸಿಬಿಐಗೆ ಪತ್ರ ಬರೆದಿದ್ದಾರೆ. ಇದು ಸರ್ಕಾರದ ವಿರುದ್ಧ ಮಾಡಿರುವ ಸಂಪೂರ್ಣ ಸುಳ್ಳು ಆರೋಪ. ತಮ್ಮ ತಪ್ಪು ಮುಚ್ಚಿಕೊಳ್ಳಲು ಸರ್ಕಾರದ ವಿರುದ್ಧ ಸಿಬಿಐಗೆ ಸುಳ್ಳು ಆರೋಪದ ಪತ್ರ ಬರೆದಿದ್ದಾರೆ. ಇದು ದುರ್ವರ್ತನೆ ಬೆದರಿಕೆಯ ತಂತ್ರ ಎಂದರು.

ರಿಲಯನ್ಸ್ ಡಿಜಿಟಲ್‌ನಿಂದ ಲ್ಯಾಪ್‌ಟಾಪ್ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಡಿಜಿಟಲ್ ಮೇ 31ರಿಂದ ಆಗಸ್ಟ್ 31ರವರೆಗೆ ಲ್ಯಾಪ್‌ಟಾಪ್ ಮಾರಾಟ ಮೇಳ ಹಮ್ಮಿಕೊಂಡಿದೆ.



'ಬೂಟ್ ಅಪ್ ಇಂಡಿಯಾ' ಹೆಸರಿನ ಈ ಅಭಿಯಾನವನ್ನು ಬಹುಮುಖ್ಯವಾಗಿ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಲಾಗಿದೆ.

ಈ ಮಾರಾಟ ಸೌಲಭ್ಯವು ಎಲ್ಲಾ ರಿಲಯನ್ಸ್ ಡಿಜಿಟಲ್ ಮಳಿಗೆ, ಮೈ ಜಿಯೊ ಸ್ಟೋರ್ಸ್ ಮತ್ತು ರಿಲಯನ್ಸ್ ಡಿಜಿಟಲ್ ಡಾಟ್ ಇನ್‌ನಲ್ಲಿ ದೊರೆಯಲಿದೆ. ದೇಶದ ಭವಿಷ್ಯದ ನಾಯಕರು ಮತ್ತು ಅನ್ವೇಷಕರನ್ನು ರೂಪಿಸುವುದು ಇದರ ಗುರಿಯಾಗಿದೆ ಎಂದು ರಿಲಯನ್ಸ್ ಡಿಜಿಟಲ್ ತಿಳಿಸಿದೆ.

ಹಾಲಿ ಇರುವ ದರದಲ್ಲಿ ಲ್ಯಾಪ್‌ಟಾಪ್, ಬಿಡಿಭಾಗಗಳು ಹಾಗೂ ಇತರೆ ಐ.ಟಿ ಪರಿಕರಗಳನ್ನು ಖರೀದಿಸಬಹುದಾಗಿದೆ. ಈ ಖರೀದಿಯೊಂದಿಗೆ ರಿವಾರ್ಡ್ ಪಾಯಿಂಟ್‌ಗಳು ಕೂಡ ದೊರೆಯಲಿವೆ ಎಂದು ಹೇಳಿದೆ.

ಈ ಅಭಿಯಾನದಲ್ಲಿ ವಿದ್ಯಾರ್ಥಿ ವೇತನಕ್ಕೆ ₹1 ಕೋಟಿ ಮೊತ್ತವನ್ನು ಮೀಸಲಿಡಲಾಗಿದೆ. ವಿಜೇತರಾದವರಿಗೆ 25 ಕಾರು, 40 ಬೈಕ್‌ಗಳು ಮತ್ತು 450 ಎಲೆಕ್ಟ್ರಾನಿಕ್ ಉತ್ಪನ್ನಗಳನ್ನು ಬಹುಮಾನವಾಗಿ ನೀಡಲಾಗುವುದು ಎಂದು ತಿಳಿಸಿದೆ.



ಕಾಳಸಂತೆಯಲ್ಲಿ ಐಪಿಎಲ್ ಟಿಕೆಟ್ ಮಾರಾಟ • ಮೂಲ ಪತ್ತೆಗೆ ತನಿಖೆ

ಇಬ್ಬರು ಕಾನ್‌ಸ್ಟೆಬಲ್‌ಗಳ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್) ಕ್ರಿಕೆಟ್ ಟೂರ್ನಿಯ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಪ್ರಕರಣದಲ್ಲಿ ಪೊಲೀಸರ ಪಾತ್ರವಿರುವುದು ಪ್ರಾಥಮಿಕ ತನಿಖೆಯಲ್ಲಿ ಪತ್ತೆಯಾಗಿದ್ದು, ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಅಮಾನತು ಮಾಡಲಾಗಿದೆ.

ನಗರ ಸಂಚಾರ ನಿರ್ವಹಣಾ ಕೇಂದ್ರದಲ್ಲಿ (ಟಿಎಂಸಿ) ಕರ್ತವ್ಯ ನಿರ್ವಹಿಸುತ್ತಿದ್ದ ಕಾನ್‌ಸ್ಟೆಬಲ್ ವೆಂಕಟಗಿರಿಗೌಡ ಮತ್ತು ಹಲಸೂರು ಸಂಚಾರ ಪೊಲೀಸ್ ಠಾಣೆ ಕಾನ್‌ಸ್ಟೆಬಲ್ ರವಿಚಂದ್ರ ಅವರನ್ನು ಅಮಾನತು ಮಾಡಿ, ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್.ಅನುಚೇತ್ ಆದೇಶ ಹೊರಡಿಸಿದ್ದಾರೆ.

ಮೇ 17ರಂದು ವಿಜಯನಗರದ ಬಳಿ ಆರೋಪಿಗಳಾದ ಶಂಕರ್ ಹಾಗೂ ಸುರೇಶ್ ಅವರು ಐಪಿಎಲ್ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದರು. ₹1,200 ಮೌಲ್ಯದ ಟಿಕೆಟ್ ಅನ್ನು ₹5,000ಕ್ಕೆ ಮಾರಾಟ ಮಾಡಲಾಗುತ್ತಿತ್ತು. ಟಿಕೆಟ್ ಖರೀದಿಸುವ ನೆಪದಲ್ಲಿ ಕಾರ್ಯಾಚರಣೆ ನಡೆಸಿದ್ದ ಗೋವಿಂದರಾಜ ನಗರ ಠಾಣೆಯ ಪೊಲೀಸರು ಇಬ್ಬರನ್ನೂ ಬಂಧಿಸಿದ್ದರು. ಆರೋಪಿಗಳ ವಿಚಾರಣೆ ನಡೆಸಿದಾಗ ಪೊಲೀಸ್ ಸಿಬ್ಬಂದಿಯ ಕೈವಾಡ ಇರುವುದು ಪತ್ತೆಯಾಗಿತ್ತು.

ಆರೋಪಿಗಳಿಗೆ ಕಾಳಸಂತೆಯಲ್ಲಿ ಮಾರಾಟ ಮಾಡಲು ಟಿಕೆಟ್ ನೀಡಿದ್ದ ಆರೋಪದ ಮೇರೆಗೆ ವೆಂಕಟಗಿರಿಗೌಡ ಮತ್ತು ರವಿಚಂದ್ರ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗಿತ್ತು. ತನಿಖೆಯ ವೇಳೆ ಲಭಿಸಿದ ಮಾಹಿತಿ ಆಧರಿಸಿ ಇಲಾಖಾ ವಿಚಾರಣೆ ಕಾಯ್ದಿರಿಸಿ ಇಬ್ಬರನ್ನೂ ಅಮಾನತು ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ವೆಂಕಟಗಿರಿಗೌಡ

ರವಿಚಂದ್ರ

ಆರೋಪಿಗಳಾದ ಸುರೇಶ್ ಹಾಗೂ ಶಂಕರ್ ಅವರು ₹ 1,200 ಮುಖಬೆಲೆಯ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ₹5 ಸಾವಿರಕ್ಕೆ ಹಾಗೂ ₹4,290 ಮುಖಬೆಲೆಯ ಟಿಕೆಟ್‌ಗಳನ್ನು ₹6,500 ಮಾರಾಟ ಮಾಡಿದ್ದರು. ಇದರಿಂದ ಬರುತ್ತಿದ್ದ ಲಾಭದಲ್ಲಿ ವೆಂಕಟಗಿರಿಗೌಡ ಮತ್ತು ರವಿಚಂದ್ರ ಅವರಿಗೂ ಪಾಲು ನೀಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದರು.

ಮೂಲ ಪತ್ತೆಗೆ ತನಿಖೆ: 'ಅಮಾನತುಗೊಂಡಿರುವ ಕಾನ್‌ಸ್ಟೆಬಲ್‌ಗಳು ಎಲ್ಲಿಂದ ಟಿಕೆಟ್ ತಂದು ಆರೋಪಿಗಳಿಗೆ ನೀಡುತ್ತಿದ್ದರು ಎಂಬುದನ್ನು ಪತ್ತೆ ಮಾಡಲು ತನಿಖೆ ಮುಂದುವರೆಸಲಾಗಿದೆ. ಕಾನ್‌ಸ್ಟೆಬಲ್‌ಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವ್ಯಕ್ತಿ ಅಪಹರಿಸಿ ಹಲ್ಲೆ: ಮೂವರ ಬಂಧನ

ಬೆಂಗಳೂರು: ಹೊಸದಾಗಿ ಸಲೂನ್ ಆ್ಯಂಡ್ ಸ್ಪಾ ಆರಂಭಿಸಿದ್ದ ವ್ಯಕ್ತಿಯನ್ನು ಕಾರಿನಲ್ಲಿ ಅಪಹರಿಸಿ ಹಲ್ಲೆ ನಡೆಸಿದ್ದ ಆರೋಪದ ಅಡಿ ಮೂವರನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಿಶಾ ಅಲಿಯಾಸ್ ಸ್ಮಿತಾ (32), ಅವರ ಸ್ನೇಹಿತೆ ಕಾವ್ಯಾ (25) ಹಾಗೂ ಮೊಹಮ್ಮದ್ (40) ಬಂಧಿತರು.'ಹಲ್ಲೆಗೆ ಒಳಗಾದ ಸಂಜು ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಕೊಡಿಗೆಹಳ್ಳಿ ಸಮೀಪದಲ್ಲಿ ನಿಶಾ ಅವರು ಸ್ಪಾ ನಡೆಸುತ್ತಿದ್ದರು. ಅದೇ ಸ್ಪಾದಲ್ಲಿ ಸಂಜು ಅವರು ಕೆಲವು ವರ್ಷದಿಂದ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಕೆಲಸ ಬಿಟ್ಟು ಸ್ವಂತ ಸ್ಪಾ ತೆರೆದಿದ್ದರು. ಇದರಿಂದ ಆಕ್ರೋಶಗೊಂಡಿದ್ದ ನಿಶಾ ಅವರು ತನ್ನ ಸಹಚರರಾದ ಕಾವ್ಯಾ, ಮೊಹಮ್ಮದ್ ಅವರ ಜೊತೆಗೆ ಸೇರಿಕೊಂಡು ಗುರುವಾರ ರಾತ್ರಿ 8 ಗಂಟೆ ಸುಮಾರಿಗೆ ಭುವನೇಶ್ವರಿ ನಗರ ಮುಖ್ಯ ರಸ್ತೆಯಲ್ಲಿರುವ ಸ್ಪಾಕ್ಕೆ ನುಗ್ಗಿ ಸಂಜು ಅವರನ್ನು ಬೆದರಿಸಿದ್ದರು. ಅದಾದ ಮೇಲೆ ಅಪಹರಿಸಿ ದಾಸರಹಳ್ಳಿ ಮುಖ್ಯ ರಸ್ತೆಯ ಮೂಲಕ ಜಕ್ಕೂರು ಕಡೆಗೆ ಕರೆದೊಯ್ದು, ಹಲ್ಲೆ ನಡೆಸಿದ್ದರು.

ಕಾವ್ಯಾ

ನಿಶಾ

ಮೊಹಮ್ಮದ್

ಅಲ್ಲದೇ, ಪೆಟ್ರೋಲ್ ಹಾಕಿ ಸುಟ್ಟು ಹಾಕುವುದಾಗಿ ಬೆದರಿಕೆ ಹಾಕಿದ್ದರು. ನಂತರ, ಅಮೃತ ನಗರದ ಶಾರದಾ ಸ್ಕೂಲ್ ಬಳಿ ಬಿಟ್ಟು ತೆರಳಿದ್ದರು. ಸಂಜು ನೀಡಿದ ದೂರು ಆಧರಿಸಿ ಅಮೃತಹಳ್ಳಿ ಠಾಣೆಯ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ.

ಕಾವ್ಯಾ ಸಿಗರೇಟ್ ಸೇದುತ್ತಾ ಸಂಜು ಮೇಲೆ ಹಲ್ಲೆ ನಡೆಸಿರುವ ದೃಶ್ಯಗಳು ಸಲೂನಲ್ಲಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಕಾವ್ಯಾ ಜತೆ ಸ್ಮಿತಾ ಸಹಚರರು ಸಹ ಹಲ್ಲೆ ನಡೆಸಿದ್ದಾರೆ. ಇದನ್ನು ತಡೆಯಲು ಬಂದ ಯುವತಿಯ ಮೇಲೆಯೂ ಹಲ್ಲೆ ನಡೆಸಲಾಗಿದೆ. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಶೀಘ್ರದಲ್ಲೇ ಹೆಲಿಕಾಪ್ಟರ್ ತಯಾರಿಕಾ ಘಟಕ

ಪ್ರಜಾವಾಣಿ ವಾರ್ತೆ

ಕೋಲಾರ: ತಾಲ್ಲೂಕಿನ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಸದ್ಯದಲ್ಲೇ ಟಾಟಾ–ಏರ್ ಬಸ್ ಹೆಲಿಕಾಪ್ಟರ್ ಅಸೆಂಬ್ಲಿ ಲೈನ್ ಘಟಕ ತಲೆ ಎತ್ತಲಿದೆ. ಆರಂಭಿಕವಾಗಿ 500 ಹೆಲಿಕಾಪ್ಟರ್ ತಯಾರಿಸಲು ಬೇಡಿಕೆ ಬಂದಿದೆ.

ಈ ವಿಚಾರವನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

'ಕರ್ನಾಟಕವು ಆಂಧ್ರಪ್ರದೇಶ, ಗುಜರಾತ್, ಉತ್ತರ ಪ್ರದೇಶ ಹಿಂದಿಕ್ಕಿ ಈ ಅವಕಾಶ ಗಿಟ್ಟಿಸಿಕೊಂಡಿದೆ. ಏರೋಸ್ಪೇಸ್ ತಯಾರಿಕಾ ಕ್ಷೇತ್ರದಲ್ಲಿ ಈ ಮೂಲಕ ರಾಜ್ಯದ ಪಾರಮ್ಯ ಮುಂದುವರಿದಿದೆ. ಏರೋಸ್ಪೇಸ್ ಹಾಗೂ ರಕ್ಷಣಾ ಕ್ಷೇತ್ರದಲ್ಲಿ ಶೇ 65ರಷ್ಟು ಕೊಡುಗೆಯೊಂದಿಗೆ ದೇಶದಲ್ಲಿ ಮೊದಲ ಸ್ಥಾನದಲ್ಲಿದೆ. ವಿಶ್ವದಲ್ಲಿ ಇಂತಹ ನಾಲ್ಕು ಘಟಕಗಳು ಮಾತ್ರ ಇವೆ. ಅದರಲ್ಲಿ ಕರ್ನಾಟಕವೂ ಸ್ಥಾನ ಪಡೆದಿದೆ' ಎಂದು ಹೇಳಿದ್ದಾರೆ. 'ಇದರೊಂದಿಗೆ ಮತ್ತಷ್ಟು ಉದ್ಯೋಗಾವಕಾಶ ಸೃಷ್ಟಿಯಾಗಲಿದೆ. ತಯಾರಿಕಾ ಕ್ಷೇತ್ರದಲ್ಲಿ ಮತ್ತಷ್ಟು ಸಾಮರ್ಥ್ಯ ಹೆಚ್ಚಿಸಲಿದೆ' ಎಂದಿದ್ದಾರೆ.

ಸುದ್ದಿ 2 ನಿಮಿಷ

ಎನ್‌ಪಿಎಸ್ ಶಾಲೆಯ ನಾಲ್ವರ ವಿರುದ್ಧ ಎಫ್‌ಐಆರ್

ಬೆಂಗಳೂರು: ವಿದ್ಯಾರಣ್ಯಪುರ ಮುಖ್ಯರಸ್ತೆಯ ಶಾರದಾ ವಿದ್ಯಾನಿಕೇತನ ಪಬ್ಲಿಕ್ ಶಾಲೆಗೆ 70 ರೌಡಿಗಳನ್ನು ಕಳುಹಿಸಿ ಸಿಸಿಟಿವಿ ಕ್ಯಾಮೆರಾಗಳನ್ನು ಧ್ವಂಸಗೊಳಿಸಿ ಡಿವಿಆರ್‌ಗೆ ಬೆಂಕಿ ಹಾಕಿ ಸುಟ್ಟು ಹಾಕಿದ್ದ ಆರೋಪದ ಅಡಿ ವಿದ್ಯಾರಣ್ಯಪುರದ ನ್ಯಾಷನಲ್ ಪಬ್ಲಿಕ್ ಶಾಲೆಯ ನಾಲ್ವರ ವಿರುದ್ಧ ವಿದ್ಯಾರಣ್ಯಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಎನ್‌ಪಿಎಸ್ ಮಾಲೀಕರಾದ ಜಿ.ಧನಂಜಯ್, ನಿರ್ದೇಶಕರಾದ ಗಂಗಾಧರಯ್ಯ ಹಾಗೂ ರಾಧ ಧನಂಜಯ್, ನಂದೀಶ್ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಮೇ 29ರಂದು ಶಾರದಾ ವಿದ್ಯಾನಿಕೇತನ ಪಬ್ಲಿಕ್ ಶಾಲಾ ಆವರಣಕ್ಕೆ ಸುಮಾರು 70 ರೌಡಿಗಳು ನುಗ್ಗಿ, ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾರೆ. ಮೊಬೈಲ್ ಫೋನ್ ಕಸಿದುಕೊಂಡು ಚಿನ್ನಾಭರಣ ಕಸಿದುಕೊಂಡಿದ್ದಾರೆ. ನಂತರ, ಮತ್ತೊಂದು ಗುಂಪು ಬಂದು ಡ್ರಗ್ಸ್ ಪ್ರಕರಣ ದಾಖಲಿಸುವುದಾಗಿ ಬೆದರಿಕೆ ಹಾಕಿದೆ. ತರಗತಿ ಕೊಠಡಿಗೂ ನುಗ್ಗಿ ಕಂಪ್ಯೂಟರ್‌ಗಳನ್ನು ಧ್ವಂಸ ಮಾಡಲಾಗಿದೆ. ಬೆಂಚು ಮುರಿದು ಹಾಕಲಾಗಿದೆ. ಮೂಲ ದಾಖಲಾತಿ-ಗಳನ್ನು ಹಾಳು ಮಾಡಿ ₹1.75 ಲಕ್ಷ ನಗದು ದೋಚಲಾಗಿದೆ. ವೆಲ್ಡಿಂಗ್ ಮಷಿನ್ ತಂದು ಶಾಲಾ ಗೇಟ್‌ಗೆ ಕಬ್ಬಿಣದ ರಾಡ್‌ನಿಂದ ವೆಲ್ಡ್ ಮಾಡಲಾಗಿದೆ ಎಂದು ಆರೋಪಿಸಿ ವಿದ್ಯಾನಿಕೇತನ ಪಬ್ಲಿಕ್ ಶಾಲೆಯ ಚಿಕ್ಕಲಿಂಗೇಶ್ ಅವರು ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಿದ್ದಾರೆ.

ಬೇಕರಿಗೆ ನುಗ್ಗಿ ಗಲಾಟೆ: ರೌಡಿ ಸೆರೆ

ಬೆಂಗಳೂರು: ಪುಕ್ಕಟ್ಟೆಯಾಗಿ ಟೀ ಮತ್ತು ಸಿಗರೇಟ್ ಕೊಡಲಿಲ್ಲ ಎನ್ನುವ ಕಾರಣಕ್ಕೆ ತಾವರೆಕೆರೆ ಮುಖ್ಯ ರಸ್ತೆಯ ಕೃಷ್ಣಮೂರ್ತಿ ಲೇಔಟ್‌ನ ಬೇಕರಿಗೆ ನುಗ್ಗಿ ಗಲಾಟೆ ಮಾಡಿದ್ದ ರೌಡಿಯನ್ನು ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಶ್ವತ್ಥ್ ಅಲಿಯಾಸ್ ಅಪ್ಪಿ (23)ಬಂಧಿತ ಆರೋಪಿ.

ಮೇ 26ರಂದು ಎಸ್.ಜಿ.ಬೇಕರ್ಸ್ ಆ್ಯಂಡ್ ಜ್ಯೂಸ್ ಸೆಂಟರ್‌ಗೆ ಬಂದಿದ್ದ ಆರೋಪಿ ಅಶ್ವತ್ಥ್, ಪುಕ್ಕಟೆಯಾಗಿ ಟೀ ಮತ್ತು ಸಿಗರೇಟ್ ಕೊಡುವಂತೆ ಕೇಳಿದ್ದ. ಆಗ ಬೇಕರಿ ಮಾಲೀಕ ರಮ್ಜಿದ್ ಸೈಫುಲ್ಲಾ ಅವರು ಆರೋಪಿಗೆ ಟೀ ಮತ್ತು ಸಿಗರೇಟ್ ಕೊಟ್ಟಿರಲಿಲ್ಲ. ಇದರಿಂದ ಕೆರಳಿದ ಆರೋಪಿಯು ಬೇಕರಿಯೊಳಗೆ ನುಗ್ಗಿ ಕೈಗೆ ಸಿಕ್ಕ ವಸ್ತುಗಳನ್ನು ಹೊರಕ್ಕೆ ಎಸೆದು ಗಲಾಟೆ ಮಾಡಿದ್ದ ಪೊಲೀಸರು ಹೇಳಿದರು.

ಅಧಿಕಾರಿಯಿಂದ ಲೋಕಾಯುಕ್ತಕ್ಕೆ ಲಂಚ

ಮಂಗಳೂರು: ಲೋಕಾಯುಕ್ತ ಇನ್‌ಸ್ಪೆಕ್ಟರ್‌ಗೇ ಲಂಚ ನೀಡಲು ಮುಂದಾದ ಕಾನೂನು ಮಾಪನ ವಿಜ್ಞಾನ ಇಲಾಖೆಯ ಸಹಾಯಕ ನಿಯಂತ್ರಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಶುಕ್ರವಾರ ಬೆಳಿಗ್ಗೆ ಲೋಕಾಯುಕ್ತ ಕಚೇರಿಗೆ ಕೋಟೆಕಣಿಯ ಉದ್ಯಮಿಯೊಬ್ಬರ ಜೊತೆ ಬಂದ ಸಹಾಯಕ ನಿಯಂತ್ರಕ ಗಜೇಂದ್ರ, ತನ್ನ ವಿರುದ್ಧ ಹಾಗೂ ತನ್ನ ಇಲಾಖೆಯ ವಿರುದ್ಧ ಪ್ರಕರಣ ದಾಖಲಿಸಬಾರದು ಮತ್ತು ದಾಳಿಯನ್ನೂ ಮಾಡಬಾರದು. ಅದಕ್ಕಾಗಿ 3 ತಿಂಗಳಿಗೊಮ್ಮೆ ₹25 ಸಾವಿರ ನೀಡುವುದಾಗಿ ಆಮಿಷ ಒಡ್ಡಿದ್ದಾರೆ ಎಂದು ಲೋಕಾಯುಕ್ತ ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ಇನ್‌ಸ್ಪೆಕ್ಟರ್ ತಿಳಿಸಿದ್ದಾರೆ. ದೂರಿನ ಆಧಾರದಲ್ಲಿ ಅಧಿಕಾರಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಲಾಗಿದೆ.

ಬೇಗೂರು ಠಾಣೆ ಪೊಲೀಸರ ಕಾರ್ಯಾಚರಣೆ, ಬಂಧಿತರಿಂದ 24 ಬ್ಯಾಟರಿ ವಶ

ಬ್ಯಾಟರಿ ಕಳವು: ಅಂತರರಾಜ್ಯ ಕಳ್ಳರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯ ಬದಿ ಹಾಗೂ ಮನೆಗಳ ಎದುರು ನಿಲುಗಡೆ ಮಾಡುತ್ತಿದ್ದ ವಿವಿಧ ಮಾದರಿಯ ವಾಹನಗಳ ಬ್ಯಾಟರಿಗಳನ್ನು ಕಳ್ಳತನ ಮಾಡುತ್ತಿದ್ದ ಅಂತರರಾಜ್ಯ ಕಳ್ಳರನ್ನು ಬೇಗೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ರಾಜಸ್ಥಾನದ ಅಜ್ಮೇರ್ ಜಿಲ್ಲೆಯ ಬ್ಯಾವರ ತಾಲ್ಲೂಕಿನ ಕೋಟಾಡ ಗ್ರಾಮದ ಸುರೇಂದ್ರ ಕುಮಾರ್ (33), ರಾಮನಗರದ ಶೆಟ್ಟಿಹಳ್ಳಿಯ ತೌಸೀಫ್ (30) ಹಾಗೂ ರಾಮನಗರದ ಶೆಟ್ಟಿಹಳ್ಳಿ ಬೀದಿ ಎರಡನೇ ಅಡ್ಡರಸ್ತೆಯ ಆರೀಫ್ ಉಲ್ಲಾ ಖಾನ್ (50) ಬಂಧಿತರು. ಬಂಧಿತರಿಂದ ವಿವಿಧ ಮಾದರಿಯ 24 ವಾಹನಗಳ ಬ್ಯಾಟರಿಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಬೆಂಗಳೂರಿನ ಶಾನುಬೋಗನಹಳ್ಳಿ ಕೋಳಿ ಫಾರಂ ಗೇಟ್ ಬಳಿ ಬಾಡಿಗೆ ಮನೆಯಲ್ಲಿ ಮೂವರು ನೆಲಸಿದ್ದರು. ಮೂವರು ಸೇರಿಕೊಂಡು ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿದ್ದ ವಾಹನಗಳ ಬ್ಯಾಟರಿಗಳನ್ನು ಬಿಚ್ಚಿ ಕಳ್ಳತನ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

'ಬೇಗೂರು ಮುಖ್ಯ ರಸ್ತೆಯ ಝುಡಿಯೊ ಸ್ಟೋರ್‌ನ ನೆಲ ಮಹಡಿ-ಯಲ್ಲಿದ್ದ ಎರಡು ಬ್ಯಾಟರಿಗಳ ಕಳ್ಳತನ ನಡೆದಿತ್ತು. ಸ್ಟೋರ್‌ನ ವ್ಯವಸ್ಥಾಪಕ ನೀಡಿದ ದೂರು ಆಧರಿಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಯಿತು. ಬೇಗೂರು ಕೊಪ್ಪ ರಸ್ತೆಯಲ್ಲಿ ಅನುಮಾನಸ್ಪದವಾಗಿ ವ್ಯಕ್ತಿಯೊಬ್ಬ ಓಡಾಟ ನಡೆಸುತ್ತಿದ್ದ. ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಇತರೆ ಆರೋಪಿಗಳ ಜತೆಗೂಡಿ ಬ್ಯಾಟರಿ ಕಳ್ಳತನ ಮಾಡಿದ್ದಾಗಿ ಒಪ್ಪಿಕೊಂಡಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿ ಸುರೇಂದ್ರಕುಮಾರ್ ವಿರುದ್ಧ ಬೆಂಗಳೂರು ನಗರದ ಬ್ಯಾಟರಾಯನಪುರ, ಮಂಗಳೂರಿನ ಉರ್ವ, ತುಮಕೂರು ಜಿಲ್ಲೆಯ ತುರುವೇಕೆರೆ ಹಾಗೂ ತೌಸೀಫ್ ವಿರುದ್ಧ ಬೆಂಗಳೂರಿನ ಕಮರ್ಷಿಯಲ್ ಸ್ಟ್ರೀಟ್, ಕಾಟನ್‌ಪೇಟೆ, ಜಯನಗರ, ಕಲಾಸಿಪಾಳ್ಯ, ಕೆ.ಪಿ.ಅಗ್ರಹಾರ, ಉಪ್ಪಾರಪೇಟೆ, ಮೈಸೂರು ಜಿಲ್ಲೆಯ ನರಸಿಂಹರಾಜ ಸೇರಿ ರಾಜ್ಯದ ವಿವಿಧೆಡೆ 18 ಪ್ರಕರಣಗಳು ದಾಖಲಾಗಿದ್ದವು. ಆರೀಫ್ ಉಲ್ಲಾ ಖಾನ್ ವಿರುದ್ಧ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ, ಮಂಗಳೂರು ನಗರದ ಉರ್ವ, ಬೆಂಗಳೂರಿನ ಕಬ್ಬನ್‌ಪಾರ್ಕ್, ಕೊಡಗು ಜಿಲ್ಲೆಯ ಕುಶಾಲನಗರ, ಕೊಪ್ಪಳ ಜಿಲ್ಲೆಯ ಮುನಿರಾಬಾದ್ ಪೊಲೀಸ್ ಠಾಣೆಗಳಲ್ಲಿ ಮನೆ ಕಳ್ಳತನ, ಬ್ಯಾಟರಿ ಕಳ್ಳತನ, ಡಕಾಯಿತಿ ಪ್ರಕರಣಗಳು ದಾಖಲಾಗಿದ್ದವು' ಎಂದು ಪೊಲೀಸರು ಹೇಳಿದರು.

'ಕೊಪ್ಪಳ, ಹರಪನಹಳ್ಳಿಯಲ್ಲಿ ನಡೆದಿದ್ದ ಮನೆ ಕಳ್ಳತನ ಪ್ರಕರಣದಲ್ಲಿ ಬಂಧಿತನಾಗಿದ್ದ ಆರೀಫ್ ಉಲ್ಲಾ ಖಾನ್ ಜೈಲಿಗೆ ಹೋಗಿದ್ದ. ಜಾಮೀನಿನ ಮೇಲೆ ಬಿಡುಗಡೆಯಾದ ಬಳಿಕ ಮತ್ತೆ ಅದೇ ಕೃತ್ಯ ಎಸಗುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

ನಕಲಿ ದಾಖಲೆ ಸೃಷ್ಟಿ: ಮೂವರ ಬಂಧನ

ಬೆಂಗಳೂರು: ಪೊಲೀಸ್ ಪರಿಶೀಲನೆಗೆ ಅಗತ್ಯವಿರುವ ದಾಖಲೆಗಳನ್ನು ನಕಲಿಯಾಗಿ ಸೃಷ್ಟಿಸಿಕೊಡುತ್ತಿದ್ದ ಮೂವರು ಆರೋಪಿಗಳನ್ನು ಸಿಸಿಬಿಯ ವಿಶೇಷ ವಿಚಾರಣಾ ದಳದ ಪೊಲೀಸರು ಬಂಧಿಸಿದ್ದಾರೆ.

ದೀಪಕ್, ಉದಯ್ ಕುಮಾರ್ ಹಾಗೂ ರಾಮಕೃಷ್ಣ ಬಂಧಿತರು. ಆರೋಪಿಗಳಿಂದ ಕಂಪ್ಯೂಟರ್ ಹಾಗೂ ನಕಲಿ ದಾಖಲಾತಿ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಮೂವರು ಆರೋಪಿಗಳು ಬೆಂಗಳೂರಿನವರೇ ಆಗಿದ್ದು, ಭದ್ರತಾ ಏಜೆನ್ಸಿ ನಡೆಸುತ್ತಿದ್ದರು. ನಗರದ ವಿವಿಧ ಠಾಣಾ ವ್ಯಾಪ್ತಿಗಳಲ್ಲಿ ಹಲವರಿಗೆ ನಕಲಿ ದಾಖಲೆಗಳನ್ನು ತಯಾರಿಸಿ ಕೊಟ್ಟಿರುವುದು ಪತ್ತೆಯಾಗಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೆಲವರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಪೊಲೀಸ್ ಠಾಣೆಗೆ ಸಲ್ಲಿಸಿದ್ದು, ಗಮನಕ್ಕೆ ಬಂದಿತ್ತು. ಅದನ್ನು ಆಧರಿಸಿ, ಸಿಸಿಬಿ ಪೊಲೀಸರು ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ.

'ವಿವಿಧ ಕಾರಣಗಳಿಗಾಗಿ ಅಗತ್ಯವಿರುವ ಪೊಲೀಸ್ ಪರಿಶೀಲನಾ ಪ್ರಮಾಣಪತ್ರ ಪಡೆಯಲು ಸೇವಾಸಿಂಧು ಪೋರ್ಟಲ್‌ನ ಮೂಲಕ ಅರ್ಜಿ ಸಲ್ಲಿಸಲಾಗುತ್ತದೆ. ಇತ್ತೀಚೆಗೆ ಕರ್ನಾಟಕ ಮಾತ್ರವಲ್ಲದೆ ಅನ್ಯ ರಾಜ್ಯದ ಕೆಲವರು ಬೆಂಗಳೂರಿನಲ್ಲಿ ವಾಸವಾಗಿರುವುದಾಗಿ ನಕಲಿ ಬಾಡಿಗೆ ಒಪ್ಪಂದ ಪತ್ರ ಸಲ್ಲಿಸಿರುವುದು ಪತ್ತೆಯಾಗಿತ್ತು. ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಸಿಸಿಬಿಯ ಹೆಚ್ಚುವರಿ ಪೊಲೀಸ್ ಕಮಿಷನರ್ ಚಂದ್ರಗುಪ್ತ ತಿಳಿಸಿದರು.

'ಬೇರೆ ಬೇರೆ ಕಾರಣಕ್ಕೆ ಪೊಲೀಸ್ ಪರಿಶೀಲನೆ ನಡೆಸಲಾಗುತ್ತದೆ. ಪೊಲೀಸ್ ದಾಖಲೆಗಳಲ್ಲಿ ವ್ಯಕ್ತಿಯ ಹಿನ್ನೆಲೆ ಪರಿಶೀಲನೆ ನಡೆಸಲಾಗುತ್ತದೆ. ಕೆಲವೊಮ್ಮೆ ಅವರು ವಾಸವಾಗಿರುವ ಸ್ಥಳಕ್ಕೆ ಹೋಗಿ ಅವರ ಇರುವಿಕೆಯ ಬಗ್ಗೆ, ಇತರೆ ರೀತಿಯ ಚಟುವಟಿಕೆ ಪರಿಶೀಲನೆ ನಡೆಸಲಾಗುತ್ತದೆ. ಈ ಪರಿಶೀಲನಾ ಕಾರ್ಯಕ್ಕೆ ಬೇಕಾಗುವ ದಾಖಲೆಗಳನ್ನು ಆರೋಪಿಗಳು ನಕಲಿಯಾಗಿ ತಯಾರಿಸಿಕೊಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

65 ಪ್ರಕರಣ ದಾಖಲಾಗಿದ್ದ ಆರೋಪಿ ಬಂಧನ

ಶಾರೂಖಾನ್

ಬೆಂಗಳೂರು: ಹಲವು ವರ್ಷಗಳಿಂದ 65 ಮನೆ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪಿ ಶಾರೂಖಾನ್‌ನನ್ನು (54) ಜ್ಞಾನಭಾರತಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ ₹15 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಯ ವಿರುದ್ಧ ರಾಜ್ಯದ 28 ಪೊಲೀಸ್ ಠಾಣೆಗಳಲ್ಲಿ 65 ಪ್ರಕರಣ ದಾಖಲಾಗಿದ್ದವು. ಕಳ್ಳತನ ಮಾಡಿದ ನಂತರ ಆರೋಪಿ ಬೈಕ್‌ನಲ್ಲಿ ಪರಾರಿ ಆಗುತ್ತಿದ್ದ. ಸಿಸಿಟಿವಿ ಕ್ಯಾಮೆರಾಗಳು ಇಲ್ಲದ ಸ್ಥಳಗಳಲ್ಲೇ ಹೆಚ್ಚಾಗಿ ಕಳ್ಳತನ ಮಾಡುತ್ತಿದ್ದ. ಇದರಿಂದ ಈತನ ನ್ನು ಬಂಧಿಸುವುದು ಕಷ್ಟವಾಗಿತ್ತು ಎಂದು ಪೊಲೀಸರು ಹೇಳಿದರು.

'ಬೀಗ ಹಾಕಿಕೊಂಡ ಮನೆಗಳನ್ನೇ ಗುರುತಿಸಿ ಬೀಗ ಒಡೆದು ಕಳ್ಳತನ ಮಾಡುತ್ತಿದ್ದ. ಶನಿವಾರ ರಾತ್ರಿ ಮಾತ್ರ ಕೃತ್ಯ ಎಸಗುತ್ತಿದ್ದ. ಕದ್ದ ಚಿನ್ನ ಮಾರಾಟ ಮಾಡುತ್ತಿದ್ದ. ಅದರಿಂದ ಬಂದ ಹಣದಲ್ಲಿ ಮೋಜು–ಮಸ್ತಿ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು. 'ಜ್ಞಾನ ಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 5 ಮನೆಗಳಲ್ಲಿ ಕಳ್ಳತನ ಮಾಡಿದ್ದ. ಕುದುರೆ ರೇಸ್ ಬೆಟ್ಟಿಂಗ್‌ನಲ್ಲಿ ಬೃಹತ್ ಮೊತ್ತ ಕಳೆದುಕೊಂಡಿದ್ದ. ಈ ಹಿಂದೆ ಪ್ರಕರಣವೊಂದರಲ್ಲಿ ಬಂಧನಕ್ಕೆ ಒಳಗಾಗಿ ಜೈಲಿಗೆ ಹೋಗಿದ್ದ ಆರೋಪಿ ಜಾಮೀನಿನ ಮೇಲೆ ಬಿಡುಗಡೆಯಾಗಿ ಮತ್ತೆ ಕಳ್ಳತನ ಮಾಡುತ್ತಿದ್ದ' ಎಂದರು.

ಟೋಲ್ ಸ್ಥಗಿತಗೊಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ದಿಂಡಿಗಲ್ ವರೆಗಿರುವ ಹೆದ್ದಾರಿಯಲ್ಲಿ ಸೋಮನಹಳ್ಳಿ ಬಳಿ ನಿರ್ಮಿಸಿರುವ ಟೋಲ್‌ನಲ್ಲಿ ಸುತ್ತಮುತ್ತಲಿನ ಗ್ರಾಮಸ್ಥರಿಂದ ಶುಲ್ಕ ಸಂಗ್ರಹಿಸುತ್ತಿರುವುದನ್ನು ಸ್ಥಗಿತಗೊಳಿಸುವಂತೆ ಆಗ್ರಹಿಸಿ ಹಾರೋಹಳ್ಳಿ ತಾಲ್ಲೂಕು ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು.

'ರಾಷ್ಟ್ರೀಯ ಹೆದ್ದಾರಿ ಕಾಯ್ದೆ 2024ರ ಪ್ರಕಾರ ಟೋಲ್‌ನಿಂದ 20 ಕಿ.ಮೀ ಸುತ್ತಮುತ್ತಲಿನ ಸ್ಥಳೀಯರಿಂದ ಶುಲ್ಕ ಸಂಗ್ರಹಿಸದಂತೆ ಆದೇಶವಿದ್ದರೂ ಟೋಲ್ ಗುತ್ತಿಗೆ ದಾರರು ಹಾರೋಹಳ್ಳಿ ಸುತ್ತಮುತ್ತಲಿನ ಗ್ರಾಮಸ್ಥರಿಂದ ಶುಲ್ಕ ಸಂಗ್ರಹಿಸುತ್ತಿದ್ದಾರೆ' ಎಂದು ಪ್ರತಿಭಟನಾಕಾರರು ದೂರಿದರು.

ಹಾರೋಹಳ್ಳಿ, ಮರಳವಾಡಿ ಸೇರಿದಂತೆ ಟೋಲ್ ಸುತ್ತಮುತ್ತಲಿರುವ ಗ್ರಾಮಸ್ಥರಿಗೆ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಬೇಕು. ಮುಚ್ಚಿರುವ ಟೋಲ್ ಸಮೀಪದ ಬಿಡಬ್ಲ್ಯುಎಸ್‌ಎಸ್‌ಬಿ ರಸ್ತೆಯನ್ನು ತೆರವು ಗೊಳಿಸಬೇಕು. ಟೋಲ್‌ನಲ್ಲಿ ಸಿಬ್ಬಂದಿ ನಿಯೋಜಿಸುವ ಮೊದಲು ಪೊಲೀಸ್ ಠಾಣೆಯಲ್ಲಿ ಆ ವ್ಯಕ್ತಿಯ ವಿವರವನ್ನು ಪಡೆದುಕೊಳ್ಳಬೇಕು. ಹಾರೋಹಳ್ಳಿ ಮಾರ್ಗದಲ್ಲಿ ಸರ್ವೀಸ್ ರಸ್ತೆ ಕಲ್ಪಿಸಿಕೊಡಬೇಕೆಂದು ಒತ್ತಾಯಿಸಿದರು.

'ಬೇಡಿಕೆಗಳು ಈಡೇರದಿದ್ದರೆ ಜೂನ್ 18ರಂದು ಹಾರೋಹಳ್ಳಿಯಿಂದ ಸೋಮನಹಳ್ಳಿ ಟೋಲ್ ಮೂಲಕ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿವರೆಗೆ ಬೃಹತ್ ಬೈಕ್ ರ‍್ಯಾಲಿ ನಡೆಸಲಾಗುತ್ತದೆ' ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಸಮತಾ ಸೈನಿಕದಳ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಜಿ.ಗೋವಿಂದ ನಾಯ್ಕ್, ಕೆಬ್ಬೆದೊಡ್ಡಿ ಗೋವಿಂದ, ಸುರೇಶ್, ಹಾರೋಹಳ್ಳಿ ಚಂದ್ರು, ರುದ್ರೇಶ್ ಬೆಣದಕಲ್ಲುದೊಡ್ಡಿ, ಮರಳವಾಡಿ ಮಂಜು, ಬನಶಂಕರಿ ನಾಗು ಮತ್ತಿತರರು ಪಾಲ್ಗೊಂಡಿದ್ದರು.

ಟೋಲ್‌ನಲ್ಲಿ ಸ್ಥಳೀಯರಿಂದ ಶುಲ್ಕ ಸಂಗ್ರಹಿಸುತ್ತಿರುವುದನ್ನು ಸ್ಥಗಿತಗೊಳಿಸುವಂತೆ ಆಗ್ರಹಿಸಿ ಹಾರೋಹಳ್ಳಿ ತಾಲ್ಲೂಕು ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ನಿಯಮ ಪಾಲಿಸದೆ ಟೋಲ್: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಯಲಹಂಕ-ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಕಡತನಮಲೆ ಗೇಟ್ ಸಮೀಪದಲ್ಲಿರುವ ಟೋಲ್ ನಿರ್ವಾಹಕರು, ರಸ್ತೆ ನಿಯಮಗಳನ್ನು ಪಾಲಿಸದೆ ವಾಹನಸವಾರರು ಮತ್ತು ಪಾದಚಾರಿಗಳ ಸಾವು-ನೋವಿಗೆ ಕಾರಣರಾಗಿದ್ದಾರೆ ಎಂದು ಆರೋಪಿಸಿ, ಶಾಸಕ ಎಸ್.ಆರ್.ವಿಶ್ವನಾಥ್ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಹಾಗೂ ಸ್ಥಳೀಯ ನಿವಾಸಿಗಳು ಟೋಲ್ ಬಳಿ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಶಾಸಕ ಎಸ್.ಆರ್.ವಿಶ್ವನಾಥ್, ಟೋಲ್ ನಿರ್ವಾಹಕರು ರಸ್ತೆ ಮತ್ತು ಸುರಕ್ಷತಾ ನಿಯಮಗಳನ್ನು ಪಾಲಿಸದ ಪರಿಣಾಮ, ಈ ರಸ್ತೆಯಲ್ಲಿ ಸಂಚರಿಸುವ ಹಲವು ಮಂದಿ ವಾಹನಸವಾರರು ಹಾಗೂ ಪಾದಚಾರಿಗಳು ಸಾವು-ನೋವುಗಳನ್ನು ಅನುಭವಿಸುತ್ತಿದ್ದಾರೆ. ಅವೈಜ್ಞಾನಿಕವಾಗಿ ಡಿವೈಡರ್ ಮತ್ತು ಯು-ಟರ್ನ್‌ಗಳನ್ನು ಅಳವಡಿಸಿದ್ದು, ಪಾದಚಾರಿ ಮಾರ್ಗದ ಮೇಲೆ ಅಂಗಡಿ-ಮುಂಗಟ್ಟುಗಳನ್ನು ತೆರೆಯಲು ಅವಕಾಶನೀಡಿ ಹಣ ವಸೂಲಿ ಮಾಡುತ್ತಿದ್ದಾರೆ ಎಂದು ದೂರಿದರು.

ಟೋಲ್ ನಿರ್ವಾಹಕರು ರಸ್ತೆ ನಿಯಮಗಳನ್ನು ಪಾಲಿಸದೆ ವಾಹನ ಸವಾರರು ಮತ್ತು ಪಾದಚಾರಿಗಳ ಸಾವುನೋವಿಗೆ ಕಾರಣರಾಗಿದ್ದಾರೆ ಎಂದು ಆರೋಪಿಸಿ, ಶಾಸಕ ಎಸ್‌.ಆರ್‌. ವಿಶ್ವನಾಥ್ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಹಾಗೂ ಸ್ಥಳೀಯ ನಿವಾಸಿಗಳು ಟೋಲ್ ಬಳಿ ಪ್ರತಿಭಟನೆ ನಡೆಸಿದರು

ರಸ್ತೆಗಾಗಿ ಭೂಮಿ ನೀಡಿದ ರೈತರಿಗೆ ಐದು ವರ್ಷಕಳೆದರೂ ಸೂಕ್ತಪರಿಹಾರ ನೀಡಿಲ್ಲ. ಟೋಲ್ ಸಮೀಪದಲ್ಲಿ ಶೌಚಾಲಯ, ವಿದ್ಯುತ್‌ದೀಪ, ಸ್ವಚ್ಛತೆ ಸೇರಿ ಮೂಲಸೌಕರ್ಯಗಳನ್ನು ಕಲ್ಪಿಸಿಲ್ಲ. ಅಪಘಾತಗಳಾದಾಗ ಗಾಯಾಳುಗಳನ್ನು ಸಾಗಿಸಲು ಆಂಬುಲೆನ್ಸ್ ಮತ್ತು ಟೋಯಿಂಗ್ ವಾಹನದ ಸೌಲಭ್ಯಗಳಿಲ್ಲ. ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿದ ನಂತರವಷ್ಟೇ ಟೋಲ್ ಸಂಗ್ರಹ ಮಡಬೇಕೆಂದು ಹಲವು ಬಾರಿ ಸೂಚಿಸಿದ್ದರೂ ನಿರ್ಲಕ್ಷ್ಯ ವಹಿಸಿದ್ದಾರೆ. ಸಮಸ್ಯೆಗಳನ್ನು ಬಗೆಹರಿಸದೆ ಟೋಲ್ ಸಂಗ್ರಹ ಮಾಡಬಾರದು ಎಂದರು.

ಅರಕೆರೆ ಗ್ರಾಮಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಆರ್.ತಿಮ್ಮೇಗೌಡ ಮಾತನಾಡಿ, ಟೋಲ್ ಸುತ್ತಮುತ್ತಲ ರೈತರು ಮತ್ತು ನಾಗರಿಕರ ವಾಹನಗಳನ್ನು ಉಚಿತವಾಗಿ ಬಿಡಲಾಗುವುದೆಂದು ಆರಂಭದಲ್ಲಿ ಭರವಸೆ ನೀಡಿದ್ದರು. ಆದರೆ ಕೆಲವೇ ದಿನಗಳಲ್ಲಿ ಅದನ್ನು ಸ್ಥಗಿತಗೊಳಿಸಿ, ಟೋಲ್ ಸಂಗ್ರಹಿಸ-ಲಾಗುತ್ತಿದೆ. ಇದರಿಂದ ಕೃಷಿ ಮತ್ತಿತರ ಕೆಲಸಗಳಿಗಾಗಿ ಈ ಭಾಗದಲ್ಲಿ ಸಂಚ-ರಿಸಬೇಕಾಗಿರುವ ರೈತರಿಗೆ ತೊಂದರೆ ಆಗುತ್ತಿದೆ. ಸಮಸ್ಯೆ ನಿವಾರಿಸಬೇಕೆಂದು ಕೆಆರ್‌ಡಿಎಲ್‌ಗೆ ಮನವಿಪತ್ರ ನೀಡಿದರೂ ಪ್ರಯೋಜನವಾಗಿಲ್ಲ ಎಂದು ದೂರಿದರು. ಹದಿನೈದು ದಿನದೊಳಗೆ ಸಮಸ್ಯೆ ಬಗೆಹರಿಸದಿದ್ದರೆ ಇಲ್ಲಿ ಸಂಭವಿಸುವ ಅಪಘಾತಗಳಿಗೆ ಟೋಲ್ ನಿರ್ವಹಣೆ ಮಾಡುತ್ತಿರುವ ಸಂಸ್ಥೆಯವರೇ ಹೊಣೆಯಾಗ ಬೇಕಾಗುತ್ತದೆ ಎಂದು ಎಚ್ಚರಿಸಿದರು.

ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಎಸ್.ಎನ್. ರಾಜಣ್ಣ, ಚೊಕ್ಕನಹಳ್ಳಿ ವೆಂಕಟೇಶ್, ಡಿ.ಜಿ.ಅಪ್ಪಯಣ್ಣ, ಅದ್ದೆ ವಿಶ್ವನಾಥಪುರ ಮಂಜುನಾಥ್, ಎಸ್.ಜಿ.ನರಸಿಂಹ ಮೂರ್ತಿ, ಮುನಿದಾಸಪ್ಪ, ಎಸ್.ಜಿ.ಪ್ರಶಾಂತ್‌ರೆಡ್ಡಿ, ಪವನ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ನಿಂತಿದ್ದ ಲಾರಿಗೆ ಕಾರು ಡಿಕ್ಕಿ: ಮೂವರ ಸಾವು

ಪ್ರಜಾವಾಣಿ ವಾರ್ತೆ

ಧಾರವಾಡ: ಜಿಲ್ಲೆಯ ಅಣ್ಣಿಗೇರಿ ತಾಲ್ಲೂಕಿನ ಭದ್ರಾಪುರ ಬಸ್ ನಿಲ್ದಾಣ ಬಳಿ ಶುಕ್ರವಾರ ನಿಂತಿದ್ದ ಲಾರಿಗೆ ಕಾರು ಡಿಕ್ಕಿ ಹೊಡೆದು, ಕಾರಿನಲ್ಲಿದ್ದ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ಕಾರು ಚಾಲಕ ಮೈಸೂರಿನ ಜೆ.ಪಿ.ನಗರದ ಜಯನ್ ಸುರೇಶನ್ (64), ಕುವೆಂಪುನಗರದ ನಿವೃತ್ತ ಎಂಜಿನಿಯರ್ ಜೆ.ಮದನ್ ಮೋಹನ್ (64) ಮತ್ತು ಬೆಂಗಳೂರಿನ ಕಲ್ಯಾಣನಗರದ ಸಾಫ್ಟ್‌ವೇರ್ ಎಂಜಿನಿಯರ್ ಲಕ್ಷ್ಮಿನಾರಾಯಣ ನಾಗೇಂದ್ರ (62) ಮೃತರು. ಹುಬ್ಬಳ್ಳಿ ಕಡೆ ಸಾಗುತ್ತಿದ್ದ ಕಾರು ರಸ್ತೆ ಬದಿ ನಿಂತಿದ್ದ ಲಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ' ಎಂದು ಅಣ್ಣಿಗೇರಿ ಠಾಣೆ ಪೊಲೀಸರು ತಿಳಿಸಿದ್ದಾರೆ.

'ಜನೌಷಧಿ: ಮುಚ್ಚುವ ನಿರ್ಧಾರ ಹಿಂಪಡೆಯಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನೌಷಧಿ ಕೇಂದ್ರಗಳನ್ನು ಮುಚ್ಚುವ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ನಿರ್ಧಾರವನ್ನು ವಿರೋಧಿಸಿ, ಇಲ್ಲಿನ ಕೆ.ಸಿ. ಜನರಲ್ ಆಸ್ಪತ್ರೆಯ ಆವರಣದಲ್ಲಿ ಇರುವ ಜನೌಷಧಿ ಕೇಂದ್ರದ ಎದುರು ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಜನೌಷಧಿ ಕೇಂದ್ರಗಳನ್ನು ಮುಚ್ಚುವ ನಿರ್ಧಾರವನ್ನು ತಕ್ಷಣವೇ ಕೈಬಿಡಬೇಕು. ನಿರ್ಧಾರ ವಾಪಸ್ ಪಡೆಯದಿದ್ದರೆ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದು ಪ್ರತಿಭಟನಕಾರರು ಎಚ್ಚರಿಸಿದರು.

ಶಾಸಕ ಡಾ.ಸಿ.ಎನ್.ಅಶ್ವತ್ಥ ನಾರಾಯಣ್ ಮಾತನಾಡಿ, 'ಆರೋಗ್ಯ ಕೊಡಿ ಎಂದು ಆಸ್ಪತ್ರೆಗೆ ಬಂದರೆ ಇವರು ಜೀವ ತೆಗೆಯುವ ಆಸ್ಪತ್ರೆ ನಿರ್ಮಾಣ ಮಾಡಿದ್ದಾರೆ. ರಾಜಕೀಯ ಪ್ರೇರಿತವಾಗಿ, ನೈತಿಕತೆ ಇಲ್ಲದೇ ಜನೌಷಧಿ ಕೇಂದ್ರಗಳನ್ನು ಮುಚ್ಚುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ರೂಪಿಸಿದ ಯೋಜನೆಯಡಿ ಜನೌಷಧಿ ಕೇಂದ್ರಗಳಲ್ಲಿ ಶೇಕಡ 80ರಷ್ಟು ಕಡಿಮೆ ದರದಲ್ಲಿ ಔಷಧಿ ಲಭಿಸುತ್ತಿತ್ತು. ಆದರೆ, ಜನೌಷಧಿ ಕೇಂದ್ರಗಳನ್ನು ಮುಚ್ಚುವುದರಿಂದ ರೋಗಿಗಳಿಗೆ ತೊಂದರೆ ಆಗಲಿದೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷರೂ ಆಗಿರುವ ಶಾಸಕ ಸಿ.ಕೆ.ರಾಮಮೂರ್ತಿ, ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಸಪ್ತಗಿರಿಗೌಡ, ಬಿಜೆಪಿ ರಾಜ್ಯ ಘಟಕದ ಮಾಧ್ಯಮ ವಿಭಾಗದ ಸಹ ಸಂಚಾಲಕ ಪ್ರಶಾಂತ್ ಕೆಡೆಂಜಿ ಪಾಲ್ಗೊಂಡಿದ್ದರು.

ಜನೌಷಧಿ ಕೇಂದ್ರಗಳನ್ನು ಮುಚ್ಚುವ ನಿರ್ಧಾರವನ್ನು ವಿರೋಧಿಸಿ, ನಗರದ ಕೆ.ಸಿ.ಜನರಲ್ ಆಸ್ಪತ್ರೆಯ ಆವರಣದಲ್ಲಿ ಇರುವ ಜನೌಷಧಿ ಕೇಂದ್ರದ ಎದುರು ಬಿಜೆಪಿ ಮುಖಂಡರು, ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ

ಪೌರ ಕಾರ್ಮಿಕರ ಕಾಯಂಗೆ ಆಗ್ರಹ

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಪಟ್ಟಣವನ್ನೆಲ್ಲ ಸ್ವಚ್ಛಗೊಳಿಸಿ, ರೋಗ ರುಜಿನ ಹರಡದಂತೆ ನೋಡಿಕೊಳ್ಳುವ ಪೌರಕಾರ್ಮಿಕರ ಬೇಡಿಗಳನ್ನು ಈಡೇರಿಸದೆ ಸರ್ಕಾರ ದ್ರೋಹ ಬಗೆಯುತ್ತಿದೆ' ಎಂದು ಪೌರಸೇವಾ ನೌಕರರ ಸೇವಾ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅಂಕಯ್ಯ ಆಕ್ರೋಶ ವ್ಯಕ್ತಪಡಿಸಿದರು.

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಪೌರಕಾರ್ಮಿಕರು ನಗರಸಭೆ ಎದುರು ಹಮ್ಮಿಕೊಂಡಿರುವ ಅನಿರ್ದಿಷ್ಟಾವಧಿ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, 'ಕೆಲಸದ ಹೊರೆ ಹೆಚ್ಚಾಗಿ ಅನೇಕ ಪೌರಕಾರ್ಮಿಕರು ನಿವೃತ್ತಿ ಪಡೆಯುತ್ತಿದ್ದಾರೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ, ಇರುವ ನೌಕರರನ್ನು ಕಾಯಂ ಮಾಡುವಂತೆ ಹಲವು ಬಾರಿ ಬೇಡಿಕೆ ಇಟ್ಟಿದ್ದೇವೆ. ಆದರೂ ಸರ್ಕಾರ ಸ್ಪಂದಿಸುತ್ತಿಲ್ಲ, ಕನಿಷ್ಠ ನಮ್ಮನ್ನು ಮಾತುಕತೆಗೂ ಕರೆದಿಲ್ಲ' ಎಂದು ದೂರಿದರು.

'ಸರ್ಕಾರ ಈ ಹಿಂದೆ ಪರಿಶಿಷ್ಟರಿಗೆ ಶೇ 50, ಉಳಿದವರಿಗೆ ಶೇ 50 ಮೀಸಲಾತಿ ನಿಗದಿ ಮಾಡಿ ಕಾಯಂ ಮಾಡಿದ್ದಾರೆ. ಪರಿಶಿಷ್ಟರನ್ನು ಬಿಟ್ಟು ಬೇರೆ ಯಾರೂ ಈ ವೃತ್ತಿಗೆ ಬರುವುದಿಲ್ಲ. ಉಳಿದ ಶೇ 50ರಲ್ಲಿ ಉಳಿದಿರುವ ಖಾಲಿ ಹುದ್ದೆಗಳ ಮೀಸಲಾತಿಗೆ ತಿದ್ದುಪಡಿ ಮಾಡಿ ಶೀಘ್ರವೇ ಭರ್ತಿ ಮಾಡಬೇಕು' ಎಂದು ಆಗ್ರಹಿಸಿದರು.

'ಬಹುತೇಕ ಕಾರ್ಮಿಕರಿಗೆ ಕನಿಷ್ಠ ವೇತನ ₹12,000 ನೀಡಲಾಗುತ್ತಿದೆ. ಇದರಲ್ಲಿ ಜೀವನ ನಿರ್ವಹಣೆ ಕಷ್ಟ. ₹ 25,000 ವೇತನ ನೀಡಿ ರಾಜ್ಯ ಸರ್ಕಾರಿ ನೌಕರರಿಗೆ ನೀಡುತ್ತಿರುವಂತೆ ಪಿಎಫ್, ಆರೋಗ್ಯ ವಿಮೆ ಸೇರಿದಂತೆ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿ, ಭದ್ರತೆ ಒದಗಿಸಬೇಕು' ಎಂದು ಒತ್ತಾಯಿಸಿದರು.

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪೌರಕಾರ್ಮಿಕರು ಶುಕ್ರವಾರ ನಗರಸಭೆ ಎದುರು ಪ್ರತಿಭಟನೆ ನಡೆಸಿದರು

ನೀರು ಪೂರೈಕೆ ಸ್ಥಗಿತ: ಎಚ್ಚರಿಕೆ

ಇಂದಿನಿಂದ(ಶನಿವಾರ) ನಾವು ಕರ್ತವ್ಯ ನಿರ್ವಹಿಸುವುದಿಲ್ಲ. ಬೇಡಿಕೆ ಈಡೇರುವವವರೆಗೆ ಪ್ರತಿಭಟನೆ ಮುಂದುವರಿಸುತ್ತೇವೆ. ನೀರು ಪೂರೈಕೆ ಮಾತ್ರ ಮಾಡುತ್ತಿದ್ದೇವೆ. ಬೇಡಿಕೆ ಈಡೇರದಿದ್ದರೆ, ಜೂ.2ರಿಂದ ನೀರು ಪೂರೈಕೆ ಸ್ಥಗಿತಗೊಳಿಸುತ್ತೇವೆ' ಎಂದು ಪ್ರತಿಭಟನಕಾರರು ಎಚ್ಚರಿಸಿದರು.

ಬನಶಂಕರಿ ಆರನೇ ಹಂತದ ಬಡಾವಣೆ • ಭೂಸ್ವಾಧೀನ ಪ್ರಕ್ರಿಯೆ ರದ್ದುಗೊಳಿಸಿದ್ದ ಹೈಕೋರ್ಟ್

ಸಮಸ್ಯೆ ಸುಳಿಯಲ್ಲಿ 350 ಕುಟುಂಬ

• ಕೆ.ಎಸ್.ಸುನಿಲ್

ಬೆಂಗಳೂರು: ಬನಶಂಕರಿ 6ನೇ ಹಂತದ ಬಡಾವಣೆ ನಿರ್ಮಾಣಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಆರಂಭಿಸಿದ್ದ ಭೂ ಸ್ವಾಧೀನ ಪ್ರಕ್ರಿಯೆಯನ್ನು ಹೈಕೋರ್ಟ್ ರದ್ದುಗೊಳಿಸಿದ ಪರಿಣಾಮ ಅಲ್ಲಿ ನಿವೇಶನ ಖರೀದಿಸಿರುವ 350 ಕುಟುಂಬಗಳು ಸಮಸ್ಯೆಗೆ ಸಿಲುಕಿವೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಹೆಮ್ಮಿಗೆಪುರ, ಗಾಣಕಲ್ ಸೇರಿದಂತೆ ಹಲವು ಗ್ರಾಮಗಳಲ್ಲಿ ಹಲವರಿಗೆ ನಿವೇಶನ ಹಂಚಿಕೆ ಮಾಡಲಾಗಿದೆ. ಕೆಲವರು ಹರಾಜಿನಲ್ಲಿ ನಿವೇಶನ ಖರೀದಿಸಿದ್ದಾರೆ. ಮತ್ತೆ ಕೆಲವರು ನಿವೇಶನದಲ್ಲಿ ಮನೆ ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ಇದೀಗ ನ್ಯಾಯಾಲಯದ ಆದೇಶದಿಂದ ಆತಂಕಕ್ಕೆ ಒಳಗಾಗಿದ್ದಾರೆ.

ಬನಶಂಕರಿ ಆರನೇ ಹಂತದ ಬಡಾವಣೆಯ 2, 3, 4 ಮತ್ತು 5ನೇ ಬ್ಲಾಕ್‌ಗಳಲ್ಲಿ 2002ರಿಂದ 2024ರ ಅವಧಿಯಲ್ಲಿ ಹಲವರಿಗೆ ನಿವೇಶನ ಹಂಚಿಕೆಯಾಗಿದೆ. ಅಂದಾಜು 300ಕ್ಕೂ ಹೆಚ್ಚು ನಿವೇಶನ ಹಂಚಿಕೆ ಮಾಡಲಾಗಿದೆ.

‘ಬಿಡಿಎ ಎಂಬ ಕಾರಣಕ್ಕೆ ನಂಬಿಕೆಯಿಂದ ಇ ಹರಾಜಿನಲ್ಲಿ ಕೋಟ್ಯಂತರ ರೂಪಾಯಿಗೆ ಮೂಲೆ ನಿವೇಶನ ಖರೀದಿಸಿದ್ದೇನೆ. ನಿವೇಶನ ಖರೀದಿಗೂ ಮುನ್ನ ವಕೀಲರ ಮೂಲಕ ಪರಿಶೀಲಿಸಿದಾಗ ಭೂಸ್ವಾಧೀನಕ್ಕೆ ಸಂಬಂಧಿಸಿದ ವಿಷಯ ನ್ಯಾಯಾಲಯದಲ್ಲಿ ಇರುವುದು ಗೊತ್ತಾಗಲಿಲ್ಲ. ಮೂಲ ಭೂ ಮಾಲೀಕರು ಪ್ರಭಾವಿಗಳಾಗಿದ್ದು, ನಿವೇಶನದಲ್ಲಿ ಮನೆ ನಿರ್ಮಿಸಲು ಬಿಡುತ್ತಿಲ್ಲ, ಬೆದರಿಕೆ ಹಾಕುತ್ತಿದ್ದಾರೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ನಿವೇಶನ ಮಾಲೀಕರೊಬ್ಬರು ಅಳಲು ತೋಡಿಕೊಂಡರು.

> ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಏಕಸದಸ್ಯ ಪೀಠದ ಆದೇಶ ಪ್ರಶ್ನಿಸಿ ಈಗಾಗಲೇ ಮೇಲ್ಮನವಿ ಸಲ್ಲಿಸಲಾಗಿದೆ.
> **ಎನ್.ಜಯರಾಮ್** ಬಿಡಿಎ ಆಯುಕ್ತ

‘ಮೇಲ್ಮನವಿ ಸಲ್ಲಿಸಿರುವುದರಿಂದ ಬಿಡಿಎ ನಿವೇಶನ ಖರೀದಿಸಿದವರೇ ಮಾಲೀಕರು. ನ್ಯಾಯಾಲಯದಿಂದ ಅಂತಿಮ ಆದೇಶ ಬರುವವರೆಗೂ ಬದಲಿ ನಿವೇಶನ ನೀಡಲು ಸಾಧ್ಯವಿಲ್ಲ’ ಎಂದು ಬಿಡಿಎ ಆಯುಕ್ತರು ಹೇಳಿದ್ದಾರೆ. ನಮ್ಮ ನಿವೇಶನದಲ್ಲಿ ಮನೆ ನಿರ್ಮಿಸಲು ಅವಕಾಶ ಕೊಡಬೇಕು’ ಎಂದು ಅವರು ಮನವಿ ಮಾಡಿದರು.

ಬಡಾವಣೆಯ ಕೆಲವೆಡೆ ರಸ್ತೆಗಳ ಡಾಂಬರೀಕರಣವಾಗಿದ್ದು, ವಿದ್ಯುತ್, ಕಾವೇರಿ ನೀರಿನ ಸಂಪರ್ಕ ಕಲ್ಪಿಸಲಾಗಿದೆ. ಬೀದಿ ದೀಪ, ಕಸ ಸಂಗ್ರಹ ವ್ಯವಸ್ಥೆ ಮಾಡಲಾಗಿದೆ. ಬಡಾವಣೆ ಕ್ಷೇಮಾಭಿವೃದ್ಧಿ ಸಂಘ ಸಹ ರಚಿಸಿಕೊಂಡಿದ್ದಾರೆ.

‘ನಾನು ಜೀವನದಲ್ಲಿ ದುಡಿದ ಹಣವನ್ನು ಉಳಿಸಿ, 2010ರಲ್ಲಿ 60X40 ಅಡಿ ಅಳತೆಯ ನಿವೇಶನ ಖರೀದಿಸಿದೆ. ಬಿಡಿಎ ನಕ್ಷೆ ಅನುಮೋದನೆಯೊಂದಿಗೆ ಮನೆ ನಿರ್ಮಿಸಿದ್ದೇನೆ. ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿದ್ದರೆ, ಮನೆ ನಿರ್ಮಿಸುವುದನ್ನು ಏಕೆ ತಡೆಯಲಿಲ್ಲ? ಬಿಡಿಎ ಮೇಲೆ ನಂಬಿಕೆಯೇ ಇಲ್ಲದಂತಾಗಿದೆ. ನಮ್ಮ ಬ್ಲಾಕ್‌ನಲ್ಲಿ ನೂರಕ್ಕೂ ಹೆಚ್ಚು ಮಂದಿಗೆ ನಿವೇಶನ ಹಂಚಿಕೆಯಾಗಿದೆ. ಏನು ಮಾಡಬೇಕು ತಿಳಿಯುತ್ತಿಲ್ಲ’ ಎಂದು ಹಿರಿಯ ನಾಗರಿಕರೊಬ್ಬರು ಆತಂಕ ವ್ಯಕ್ತಪಡಿಸಿದರು.

‘ರಸ್ತೆ, ನೀರಿನ ಸಂಪರ್ಕ ಸೇರಿದಂತೆ ಬಡಾವಣೆಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಪೂರಕ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಈ ತನಕ ಎಷ್ಟು ಎಕರೆ ಜಮೀನು ಸ್ವಾಧೀನಪಡಿಸಿಕೊಂಡು ಅಭಿವೃದ್ಧಿ ಪಡಿಸಲಾಗಿದೆ ಎಂಬ ಮಾಹಿತಿಯನ್ನೂ ನೀಡಿಲ್ಲ. ಹಾಗಾಗಿ ಬಿಡಿಎ ವಿರುದ್ಧ ಆದೇಶ ಬಂದಿದೆ’ ಎಂದು ನಿವೇಶನಗಳ ಮಾಲೀಕರು ಅಸಮಾಧಾನ ವ್ಯಕ್ತಪಡಿಸಿದರು.

‘ಪ್ರಾಧಿಕಾರವು ನಿವೇಶನ ಮಾಲೀಕರ ಪರ ನಿಲ್ಲಬೇಕು. ದಶಕದ ಹಿಂದೆ ನಿರ್ಮಿಸಿದ ಮನೆಯಲ್ಲಿ ನನ್ನ ನಿವೃತ್ತಿ ಜೀವನ ಕಳೆಯಲು ನಿರ್ಧರಿಸಿದ್ದೆ. ಆದರೆ, ಕೋರ್ಟ್ ಆದೇಶದಿಂದ ಪ್ರಾಧಿಕಾರದ ಮೇಲೆ ನಂಬಿಕೆ ಹೋಗಿದೆ. ನ್ಯಾಯ ಸಿಗುವವರೆಗೂ ಹೋರಾಟ ಮಾಡುತ್ತೇನೆ’ ಎಂದು ಹಿರಿಯ ನಾಗರಿಕರೊಬ್ಬರು ಹೇಳಿದರು.

24 ವರ್ಷದ ಹಿಂದೆ ಅಧಿಸೂಚನೆ

ಬನಶಂಕರಿ 6ನೇ ಹಂತದ ಬಡಾವಣೆ ಅಭಿವೃದ್ಧಿಗಾಗಿ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿ 24 ವರ್ಷ ಕಳೆದರೂ ಜಮೀನು ಸ್ವಾಧೀನಪಡಿಸಿಕೊಂಡಿಲ್ಲ.

ಬಹುತೇಕ ಜಮೀನುಗಳನ್ನು ಸ್ವಾಧೀನದಿಂದ ಕೈಬಿಟ್ಟು ಹಲವು ಜಮೀನುಗಳಿಗೆ ಸಂಬಂಧಿಸಿದಂತೆ ಮಾತ್ರವೇ ಪ್ರಕ್ರಿಯೆ ಮುಂದುವರಿಸಿರುವುದು ಕಾನೂನುಬಾಹಿರ ಮತ್ತು ತಾರತಮ್ಯದ ಕ್ರಮವಾಗಿದೆ. ಹಾಗಾಗಿ ಸ್ವಾಧೀನ ಪ್ರಕ್ರಿಯೆ ರದ್ದುಗೊಳಿಸಬೇಕು ಎಂದು ಕೋರಿ ಎಚ್. ನಾಗರಾಜಯ್ಯ ಹಾಗೂ ಮತ್ತಿತರರು ಅರ್ಜಿ ಸಲ್ಲಿಸಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್. ಇಂದಿರೇಶ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ಬಡಾವಣೆ ಅಭಿವೃದ್ಧಿ ಯೋಜನೆಯನ್ನು ಬಹುತೇಕ ಅನುಷ್ಠಾನಗೊಳಿಸಿರುವ ಕಾರಣ ಭೂಸ್ವಾಧೀನ ಪ್ರಕ್ರಿಯೆ ಮುಂದುವರಿಸಲು ಅವಕಾಶ ನೀಡಬೇಕೆಂಬ ಬಿಡಿಎ ಮನವಿಯನ್ನು ಕೋರ್ಟ್ ತಿರಸ್ಕರಿಸಿದೆ.

ಶುದ್ಧ ನೀರು: ಎಸ್‌ಒಪಿಗೆ ಸರ್ಕಾರಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಎಲ್ಲ ಜಿಲ್ಲೆ ಹಾಗೂ ಗ್ರಾಮಗಳಲ್ಲಿ ನಾಗರಿಕರಿಗೆ ಕುಡಿಯುವ ನೀರು ಒದಗಿಸುವ ನಿಟ್ಟಿನಲ್ಲಿ ಸಮಗ್ರ ಪ್ರಮಾಣೀಕೃತ ಕಾರ್ಯವಿಧಾನವೊಂದನ್ನು (ಎಸ್‌ಒಪಿ) ಸಿದ್ಧಪಡಿಸಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಈ ಕುರಿತಂತೆ ಹೈಕೋರ್ಟ್ ವಕೀಲ ಎಲ್.ರಮೇಶ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಪ್ರಕಟಿಸಿದ್ದು ಸರ್ಕಾರಕ್ಕೆ ಹಲವು ನಿರ್ದೇಶನಗಳನ್ನು ನೀಡಿದೆ.

‘ನೀರಿನ ಮೂಲಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದೆ ಹೋದರೆ ನೀರು ಕಲುಷಿತವಾಗುತ್ತದೆ ಎಂಬ ಅರ್ಜಿದಾರರ ವಾದ ಸಮಂಜಸವಾಗಿದೆ’ ಎಂದು ಸಹಮತ ವ್ಯಕ್ತಪಡಿಸಿರುವ ನ್ಯಾಯಪೀಠ, ‘ಮಾನವರ ಬಳಕೆಗೆ ಯೋಗ್ಯವಾದ ಕುಡಿಯುವ ನೀರನ್ನು ಪೂರೈಸುವುದು ರಾಜ್ಯ ಸರ್ಕಾರದ ಮೂಲಭೂತ ಕರ್ತವ್ಯ’ ಎಂಬುದನ್ನು ಸ್ಪಷ್ಟಪಡಿಸಿದೆ.

‘ನೀರು ಸರಬರಾಜಿನ ಮೂಲಸೌಕರ್ಯ ವ್ಯವಸ್ಥೆಯಲ್ಲಿ; ಶುದ್ಧೀಕರಣ ಘಟಕಗಳು, ಭೂಗತ ಮತ್ತು ಓವರ್ ಹೆಡ್ ಟ್ಯಾಂಕ್‌ಗಳು, ಪೈಪ್‌ಲೈನ್‌ಗಳು, ಬೋರ್‌ವೆಲ್‌ಗಳು ಮತ್ತು ರಿವರ್ಸ್ ಆಸ್ಮೋಸಿಸ್ (ಆರ್‌ಒ) ಸ್ಥಾವರಗಳು ಒಳಗೊಂಡಿವೆ. ಈ ಎಲ್ಲಾ ಸೌಲಭ್ಯಗಳಿಗೆ ಸಕಾಲಿಕ ಮತ್ತು ವೈಜ್ಞಾನಿಕ ನಿರ್ವಹಣೆಯ ಅಗತ್ಯವಿದೆ’ ಎಂದು ನ್ಯಾಯಪೀಠವು ಅಭಿಪ್ರಾಯಪಟ್ಟಿದೆ.

‘ಸೌಲಭ್ಯಗಳ ನಿರ್ವಹಣೆಗಾಗಿ ಎಸ್‌ಒಪಿ ಸಿದ್ಧಪಡಿಸಬೇಕು ಮತ್ತು ಈ ಆದೇಶ ಪ್ರಕಟಿಸಿದ ದಿನದಿಂದ ಎರಡು ತಿಂಗಳ ಒಳಗೆ ಎಸ್‌ಒಪಿಯನ್ನು, ಪರಿಶೀಲನೆಗಾಗಿ ಮತ್ತು ಆದೇಶ ಪಾಲನೆಯ ಮುಂದಿನ ಹೆಜ್ಜೆಯಾಗಿ ನ್ಯಾಯಾಲಯಕ್ಕೆ ಸಲ್ಲಿಸಬೇಕು’ ಎಂದು ತಾಕೀತು ಮಾಡಿದೆ.

‘ತುಮಕೂರು ಸೇರಿದಂತೆ ಮಧ್ಯ ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಪದೇ ಪದೇ ಎದುರಾಗುವ ಶುದ್ಧ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಸೂಕ್ತ ಮತ್ತು ಅಗತ್ಯ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

ಆಸ್ತಿ ತೆರಿಗೆ ₹2 ಸಾವಿರ ಕೋಟಿ ಸಂಗ್ರಹ

ಬೆಂಗಳೂರು: ಪ್ರಸಕ್ತ ಆರ್ಥಿಕ ವರ್ಷದ ಮೊದಲ ಎರಡು ತಿಂಗಳಲ್ಲಿ ಬಿಬಿಎಂಪಿ ₹2,424.93 ಕೋಟಿ ಆಸ್ತಿ ತೆರಿಗೆಯನ್ನು ಸಂಗ್ರಹಿಸಿದೆ.

ಶೇಕಡ 5ರಷ್ಟು ರಿಯಾಯಿತಿ ಮೇ 31ರಂದು ಅಂತ್ಯಗೊಳ್ಳಲಿದೆ.

ಈ ವರ್ಷ ಆಸ್ತಿ ತೆರಿಗೆ ಜೊತೆಗೆ ತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕ ಜಾರಿ ಮಾಡಲಾಗಿದ್ದು, ಅದರಿಂದ ತೆರಿಗೆ ಸಂಗ್ರಹದ ಪ್ರಮಾಣ ಹೆಚ್ಚಾಗಿದೆ. 2025ರ ಏಪ್ರಿಲ್ ಅಂತ್ಯಕ್ಕೆ ₹1,200 ಕೋಟಿಯಷ್ಟು ಆಸ್ತಿ ತೆರಿಗೆ ಸಂಗ್ರಹವಾಗಿತ್ತು. ಅದೇ ಪ್ರಮಾಣ ಮೇ ತಿಂಗಳಲ್ಲೂ ಮುಂದುವರಿದಿದ್ದು, ಅದಕ್ಕಿಂತ ಕೊಂಚ ಹೆಚ್ಚು ಸಂಗ್ರಹವಾಗಿದೆ. ಮೇ 31ರಂದು ಇನ್ನಷ್ಟು ಕೋಟಿ ಸಂಗ್ರಹವಾಗುವ ನಿರೀಕ್ಷೆಯನ್ನು ಬಿಬಿಎಂಪಿ ಕಂದಾಯ ವಿಭಾಗದ ಅಧಿಕಾರಿಗಳು ಹೊಂದಿದ್ದಾರೆ.

21.73 ಲಕ್ಷ ಆಸ್ತಿಗಳಿಂದ ₹4,094.82 ಕೋಟಿ ತೆರಿಗೆ, 3.75 ಲಕ್ಷ ಸುಸ್ತಿದಾರರಿಂದ ₹836.34 ಕೋಟಿ ಬಾಕಿ ಹಾಗೂ 9,904 ಆಸ್ತಿಗಳಿಂದ ಪರಿಷ್ಕೃತ ತೆರಿಗೆ ₹152.80 ಕೋಟಿ ಸೇರಿದಂತೆ ಸುಮಾರು ₹5,100 ಕೋಟಿ ಸಂಗ್ರಹಿಸುವ ಗುರಿಯನ್ನು ಬಿಬಿಎಂಪಿ ಹೊಂದಿದೆ. ಇದರ ಜೊತೆಗೆ ಸುಮಾರು ₹700 ಕೋಟಿಯಷ್ಟು ತ್ಯಾಜ್ಯ ನಿರ್ವಹಣೆ ಬಳಕೆದಾರರ ಶುಲ್ಕ ಸಂಗ್ರಹವಾಗುವ ಅಂದಾಜಿದೆ.

ಜೆಸಿಸಿ ಬೆಂಬಲ: ಒಪ್ಪಂದಕ್ಕೆ ಸಹಿ

ಪ್ರಜಾವಾಣಿ ವಾರ್ತೆ

ಕರ್ನಾಟಕದಲ್ಲಿ ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು ಬೆಂಬಲಿಸಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಅಧಿಕಾರಿಗಳು ತಿಳಿವಳಿಕೆ ಒಪ್ಪಂದಕ್ಕೆ ಅಂಕಿತ ಹಾಕಿದರು

ಬೆಂಗಳೂರು: ನಗರದಲ್ಲಿ ಇತ್ತೀಚೆಗೆ ನಡೆದ ‘ಜೆಸಿಸಿ ಲೀಡರ್ಸ್ ಕನೆಕ್ಟ್’ ಕಾರ್ಯಕ್ರಮದಲ್ಲಿ ರಾಜ್ಯದಲ್ಲಿ ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು (ಜೆಸಿಸಿ) ಬೆಂಬಲಿಸಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು (ಎಸ್‌ಬಿಐ), ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ಜೊತೆಗೆ ತಿಳಿವಳಿಕೆ ಒಪ್ಪಂದ ಪತ್ರಕ್ಕೆ ಅಂಕಿತ ಹಾಕಿದೆ.

ಕೆಡಿಇಎಂ ಅಧ್ಯಕ್ಷ ಬಿ.ವಿ. ನಾಯ್ಡು ಅವರ ಸಮ್ಮುಖದಲ್ಲಿ ಬ್ಯಾಂಕ್‌ನ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕಿ ಜೂಹಿ ಸ್ಮಿತಾ ಸಿನ್ಹಾ ಮತ್ತು ಕೆಡಿಇಎಂ ಸಿಇಒ ಸಂಜೀವ್ ಗುಪ್ತಾ ಸಹಿ ಹಾಕಿದರು.

ರಾಜ್ಯದಲ್ಲಿ ಜಿಸಿಸಿಗಳನ್ನು ಸಕ್ರಿಯಗೊಳಿಸುವ ಮತ್ತು ಸಬಲೀಕರಣಗೊಳಿಸುವ ಗುರಿಗೆ ಈ ಒಪ್ಪಂದವು ನೆರವಾಗಲಿದೆ. ಬೆಂಗಳೂರಿನಲ್ಲಿ ದೇಶದ ಮೊದಲ ವಿಶಿಷ್ಟ ಜಿಸಿಸಿ ಕೇಂದ್ರ ತೆರೆಯಲಾಗುವುದು ಎಂದು ಬ್ಯಾಂಕ್ ತಿಳಿಸಿದೆ.

ಜೆಸಿಸಿ, ನವೋದ್ಯಮ ಮತ್ತು ಐ.ಟಿ-ಬಿ.ಟಿ ವಲಯದ ಪ್ರಮುಖ ನೇಮಕಾತಿಗೆ ಪರಿಹಾರ ಒದಗಿಸುವ ಜ್ಯೋಯಿನ್ ಗ್ರೂಪ್ ಸಹಯೋಗದೊಂದಿಗೆ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ವೆಸ್ಟರ್ನ್ ಡಿಜಿಟಲ್ ನಿರ್ದೇಶಕ ವೀರ ಲೋಕೇಶ್, ಬಾಯರ್ ಇಂಡಿಯಾದ ರಾಷ್ಟ್ರೀಯ ಮುಖ್ಯಸ್ಥೆ ಶಾರದಾ, ಡೆಲಾಯ್ಟ್ ಸಂಸ್ಥೆಯ ಪಾಲುದಾರ ಆದಿತ್ಯ ಮೀನಾ ಹಾಜರಿದ್ದರು.

ನಂದಿ ಬೆಟ್ಟಕ್ಕೆ ರೋಪ್‌ವೇ: ಸಮ್ಮತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಬೆಟ್ಟಕ್ಕೆ ದೇಶವಿದೇಶದ ಪ್ರವಾಸಿಗರನ್ನು ಸೆಳೆಯುವ ಉದ್ದೇಶದಿಂದ ‘ಕೇಬಲ್ ಕಾರ್’ (ರೋಪ್‌ವೇ) ಸೇವೆ ಆರಂಭಿಸುವ ಪ್ರವಾಸೋದ್ಯಮ ಇಲಾಖೆಯ ಯೋಜನೆಗೆ ಕರ್ನಾಟಕ ಅರಣ್ಯ ಇಲಾಖೆ ಒಪ್ಪಿಗೆ ನೀಡಿದೆ.

ರೋಪ್‌ವೇ ನಿರ್ಮಾಣಕ್ಕೆ ನಂದಿ ಗ್ರಾಮದ ಸರ್ವೆ ಸಂಖ್ಯೆ 1ರ 0.86 ಹೆಕ್ಟೇರ್ ಅರಣ್ಯ ಬಳಕೆಗೆ ಪ್ರವಾಸೋದ್ಯಮ ಇಲಾಖೆಯು ಅರಣ್ಯ ಇಲಾಖೆಗೆ ಪ್ರಸ್ತಾವ ಸಲ್ಲಿಸಿತ್ತು. ‘ಈ ಅರಣ್ಯವು ರಾಷ್ಟ್ರೀಯ ಉದ್ಯಾನ ಹಾಗೂ ವನ್ಯಜೀವಿಧಾಮಕ್ಕೆ ಸೇರಿದ್ದಲ್ಲ. ಯೋಜನೆಗೆ ಒಪ್ಪಿಗೆ ನೀಡಬಹುದು’ ಎಂದು ಚಿಕ್ಕಬಳ್ಳಾಪುರ ಡಿಸಿಎಫ್ ವರದಿ ಸಲ್ಲಿಸಿದ್ದರು. ಯೋಜನೆಗೆ ಅನುಮೋದನೆ ನೀಡುವಂತೆ ಕೋರಿ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯಕ್ಕೆ ಮೇ 19ರಂದು ಶಿಫಾರಸು ಮಾಡಿದ್ದಾರೆ.

ನಂದಿ ಬೆಟ್ಟಕ್ಕೆ ರೋಪ್‌ವೇ ನಿರ್ಮಿಸುವ ಸಂಬಂಧ ಚಿತ್ರನಟ ಶಂಕರ್‌ನಾಗ್ ಅವರು 80ರ ದಶಕದಲ್ಲಿ ರಾಜ್ಯ ಸರ್ಕಾರದೊಂದಿಗೆ ಸಮಾಲೋಚನೆ ನಡೆಸಿದ್ದರು. ಅವರ ನಿಧನದ ನಂತರ ಯೋಜನೆ ನನೆಗುದಿಗೆ ಬಿದ್ದಿತ್ತು. 2015-16ರ ಬಜೆಟ್‌ನಲ್ಲಿ ಈ ಯೋಜನೆ ಪ್ರಕಟಿಸಲಾಗಿತ್ತು. ಬಳಿಕ, ಬೆಟ್ಟಕ್ಕೆ ‘ಕೇಬಲ್ ಕಾರ್’ ಸೇವೆ ಆರಂಭಿಸಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಪ್ರವಾಸೋದ್ಯಮ ಇಲಾಖೆ ಯೋಜನೆ ರೂಪಿಸಿತ್ತು.

ಈ ಯೋಜನೆಗೆ ಸಂಬಂಧಿಸಿದಂತೆ ತಾಂತ್ರಿಕ ಮೌಲ್ಯಮಾಪನ ನಡೆಸಲು ಇಲಾಖೆ ಟೆಂಡರ್ ಆಹ್ವಾನಿಸಿ, ಮರು ಚಾಲನೆ ನೀಡಿತ್ತು. 2017ರ ಮೇ ತಿಂಗಳಲ್ಲಿ ಟೆಂಡರ್ ಕರೆದಾಗ ಒಂದು ಸಂಸ್ಥೆ ಮಾತ್ರ ಭಾಗವಹಿಸಿತ್ತು. ತಾಂತ್ರಿಕ ಬಿಡ್‌ನಲ್ಲಿ ತೇರ್ಗಡೆ ಆಗದ ಕಾರಣ ಟೆಂಡರ್ ತಿರಸ್ಕರಿಸಲಾಗಿತ್ತು. ಎರಡನೇ ಬಾರಿ ಟೆಂಡರ್ ಕರೆದಾಗಲೂ ಅದೇ ಸಮಸ್ಯೆ ಮರುಕಳಿಸಿತ್ತು. ಮೂರನೇ ಟೆಂಡರ್ ಸಹ ಫಲಪ್ರದವಾಗಿರಲಿಲ್ಲ. ಅರಣ್ಯ ಭೂಮಿ ನೀಡಲು ಅರಣ್ಯ ಇಲಾಖೆ ಆಕ್ಷೇಪ ವ್ಯಕ್ತಪಡಿಸಿತ್ತು.

ಆ ಬಳಿಕ, ರೋಪ್ ವೇ ಅಳವಡಿಸಲು ಸರ್ಕಾರ ತೀರ್ಮಾನಿಸಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿತ್ತು. ಮೂರು ಕಿ.ಮೀ ಉದ್ದದ ರೋಪ್ ವೇಯನ್ನು ಖಾಸಗಿ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳಲು ಸರ್ಕಾರ ನಿರ್ಧರಿಸಿ ಹಲವು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದೆ. ಇದಕ್ಕಾಗಿ ಪ್ರವಾಸೋದ್ಯಮ ಇಲಾಖೆಯು ಡೈನಾಮಿಕ್ಸ್ ರೋಪ್‌ವೇ ಪ್ರೈವೇಟ್ ಲಿಮಿಟೆಡ್ ಜತೆಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಈ ಯೋಜನೆಗೆ ₹93.40 ಕೋಟಿ ವೆಚ್ಚ ಆಗಲಿದೆ ಎಂದು ಅಂದಾಜಿಸಲಾಗಿತ್ತು. ಪ್ರಸ್ತುತ ಈ ವೆಚ್ಚ ₹115 ಕೋಟಿ ಆಗಲಿದೆ.

18 ತಿಂಗಳ ಅವಧಿಯಲ್ಲಿ ರೋಪ್ ವೇ ನಿರ್ಮಾಣವಾಗಲಿದೆ. ಬಂಡವಾಳ ಹೂಡುವ ರೋಪ್ ವೇ ನಿರ್ಮಾಣ ಸಂಸ್ಥೆಗೆ 30 ವರ್ಷ ನಿರ್ವಹಣೆ ಮಾಡುವ ಜವಾಬ್ದಾರಿ ನೀಡಲಾಗಿದೆ. ಪ್ರತಿ ಕಾರ್‌ನಲ್ಲಿ ಆರು ಜನ ಕುಳಿತುಕೊಳ್ಳಲು ಅವಕಾಶವಿರುತ್ತದೆ ಎಂದು ರಾಜ್ಯ ಸರ್ಕಾರದ ಮೂಲಗಳು ತಿಳಿಸಿವೆ.

‘ಬಿಜೆಪಿ ಸರ್ಕಾರದ ಅವಧಿಯಲ್ಲಿ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿತ್ತು. ರೋಪ್‌ವೇ ನಿರ್ಮಾಣ ಸುಗಮ ಸಂಪರ್ಕದ ಜತೆಗೆ ನಂದಿ ಬೆಟ್ಟಕ್ಕೆ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲು ಸಹಕಾರಿಯಾಗಲಿದೆ. ಲ್ಯಾಂಡಿಂಗ್ ಸ್ಟೇಷನ್‌ಗಳಲ್ಲಿ ವಿವಿಧ ಸೌಲಭ್ಯ ಕಲ್ಪಿಸಲಾಗುತ್ತದೆ. ಬೆಟ್ಟದ ಕೆಳಗಿನ ಟರ್ಮಿನಲ್‌ನಲ್ಲಿ ಪಾರ್ಕಿಂಗ್ ವ್ಯವಸ್ಥೆ, ಫುಡ್ ಕೋರ್ಟ್, ಕುಡಿಯುವ ನೀರಿನ ಘಟಕ, ಶೌಚಾಲಯ, ಟಿಕೆಟ್ ಕೌಂಟರ್, ವಿಶ್ರಾಂತಿ ಕೊಠಡಿ, ಮಳಿಗೆಗಳಿರುತ್ತವೆ’ ಎಂದು ಸಂಸದ ಡಾ.ಕೆ. ಸುಧಾಕರ್ ತಿಳಿಸಿದರು.

ಅಂಕಿ ಅಂಶಗಳು

3 ಕಿ.ಮೀ ರೋಪ್‌ವೇ ಉದ್ದ

₹115 ಕೋಟಿ ಯೋಜನೆಯ ಅಂದಾಜು ವೆಚ್ಚ

1,848 ಅಡಿ ನಂದಿ ಬೆಟ್ಟದ ಎತ್ತರ (ಸಮುದ್ರ ಮಟ್ಟದಿಂದ)

> ರೋಪ್ ವೇ ನಿರ್ಮಿಸಲು ಸುಮಾರು 150 ಅಡಿ ಪ್ರದೇಶದಲ್ಲಿ ಬಂಡೆ ಕೊರೆಯುವುದರಿಂದ ನಂದಿ ಬೆಟ್ಟ ಬಿರುಕು ಬಿಡುವ ಅಪಾಯ ಇದೆ
> **ಎ.ಎನ್. ಯಲ್ಲಪ್ಪ ರೆಡ್ಡಿ,** ಪರಿಸರ ತಜ್ಞ

ಬೆಂಗಳೂರು ರೇಸ್

ಆಲ್ ಅಟ್ರ್ಯಾಕ್ಶನ್ ಗೆಲ್ಲುವ ನಿರೀಕ್ಷೆ

ಧರ್ಮಪ್ರಕಾಶ ಎಲ್.ಎಸ್.ವೆಂಕಾಜಿ ರಾವ್ ಮೆಮೋರಿಯಲ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಆಲ್ ಅಟ್ರ್ಯಾಕ್ಶನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭ ವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1. ಕ್ಲಾಸಿಕಲ್ ಆಕ್ಟ್ ಪ್ಲೇಟ್; 1400 ಮೀ.
ಸದರ್ನ್‌ಅರಿಸ್ಟೊಕ್ರಾಟ್ 2, ರಾಫೆಲ್ಸ್ 1, ಬರ್ನಿಂಗ್ ಆರೊ 6
2. ವರ್ಡ್ ನೋ ಟೊಬ್ಯಾಕೊ ಡೇ ಪ್ಲೇಟ್; 1400 ಮೀ.
ಜುರಕ್ಯಾನ್ 2, ಅಡೋರ್ನ್‌ಮೆಂಟ್ 7, ಸೆನೆಕ 6
3. ರೊಮಾಂಟಿಕ್ ಡ್ಯಾನ್ಸ್ ಪ್ಲೇಟ್-ಡಿ.2; 1400 ಮೀ.
ಡಿವೈನ್ ಪ್ರೊಟೆಕ್ಟರ್ 8, ಅಮೇಜಿಂಗ್ ಸ್ಟ್ರೈಡ್ 2, ವೈಬ್ರ್ಯಾಂಟ್ ಕ್ವೀನ್ 4
4. ಮರಿಲಿಂಗಯ್ಯ ಮೆಮೋರಿಯಲ್ ಟ್ರೋಫಿ; 1200 ಮೀ.
ಡಿವೈನ್ ಸ್ಟಾರ್ 3, ಫ್ಲಾಶ್ 5, ಕ್ರಿಮ್‌ಸನ್ ಫ್ಲೇಮ್ 2
5. ಧರ್ಮಪ್ರಕಾಶ ಎಲ್.ಎಸ್.ವೆಂಕಾಜಿ ರಾವ್ ಮೆಮೋರಿಯಲ್ ಟ್ರೋಫಿ; 1400 ಮೀ.
ಆಲ್ ಅಟ್ರ್ಯಾಕ್ಶನ್ 5, ಮೇಯ್ಸ್ ಮ್ಯಾಜಿಕ್ 3, ಆರ್ಕೇಡಿಯನ್ 6
6. ಚೆಟ್ಟಿನಾಡ್ ಸ್ಟಡ್ ಪ್ಲೇಟ್; 1600 ಮೀ.
ಚಾಂಪಿಯನ್ಸ್ ವೇ 2, ಸ್ಟಾರ್ ಆಫ್ ನೈಟ್ 6. ಮೆಸ್ಕಲಿಟೊ 5
7. ರೊಮಾಂಟಿಕ್ ಡ್ಯಾನ್ಸ್ ಪ್ಲೇಟ್-ಡಿ.1; 1400 ಮೀ.
ಮಾಂಟೆರಿಯೊ 3, ಹೈಲ್ಯಾಂಡ್ ಡ್ರೀಮ್ 10, ಕ್ಯಾರೆಟ್ ಲವ್ 1

ಉತ್ತಮ ಬೆಟ್: ಮಾಂಟೇರಿಯೊ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಸಣ್ಣ ಉದ್ಯಮಗಳ ತೊಡಕು ನಿವಾರಣೆ ಅಗತ್ಯ

ಇಂಡಿಯಾ ಎಂಎಸ್‌ಎಂಇ ಸಮಾವೇಶದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿಯೇ ಅತಿ ಹೆಚ್ಚು ಉದ್ಯೋಗ ನೀಡಿರುವ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿಗೆ ತಂತ್ರಜ್ಞಾನ, ಹಣಕಾಸು, ಕೌಶಲಪೂರ್ಣ ಕಾರ್ಮಿಕರ ಕೊರತೆ ಮತ್ತು ಮಾರುಕಟ್ಟೆಯ ಸಮಸ್ಯೆಯು ತೊಡಕಾಗಿದೆ ಎಂದು ಕೇಂದ್ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ (ಎಂಎಸ್‌ಎಂಇ) ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ), ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ), ಪೀಣ್ಯ ಕೈಗಾರಿಕಾ ಸಂಘ (ಪಿಐಎ) ಜಂಟಿಯಾಗಿ ಎರಡು ದಿನ ಹಮ್ಮಿಕೊಂಡಿರುವ ‘ಇಂಡಿಯಾ ಎಂಎಸ್‌ಎಂಇ ಸಮಾವೇಶ’ದಲ್ಲಿ ಶುಕ್ರವಾರ ಅವರು ಮಾತನಾಡಿದರು.

ಉತ್ಪಾದನೆಯಲ್ಲಿ ಶೇಕಡ 45ರಷ್ಟು ಎಂಎಸ್‌ಎಂಇ ಕ್ಷೇತ್ರದಿಂದ ಬರುತ್ತಿದೆ. 26 ಕೋಟಿ ಜನರಿಗೆ ಉದ್ಯೋಗ ನೀಡಿದೆ ಎಂದು ತಿಳಿಸಿದರು.

ಸಮಾವೇಶ ಉದ್ಘಾಟಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘ಸಣ್ಣ ಉದ್ಯಮಗಳಿಗೆ ಅಗತ್ಯವಾಗಿರುವ ವಿದ್ಯುತ್ ಹಾಗೂ ನೀರಿನ ಸೌಲಭ್ಯ ಒದಗಿಸಲು ಸರ್ಕಾರ ಬದ್ಧವಾಗಿದೆ. ಮುಂದಿನ ನಾಲ್ಕೈದು ವರ್ಷಗಳಲ್ಲಿ ಬೆಂಗಳೂರಿನ ಅಭಿವೃದ್ಧಿಗೆ ₹1 ಲಕ್ಷ ಕೋಟಿಗೂ ಹೆಚ್ಚು ಹೂಡಿಕೆ ಮಾಡುತ್ತಿದ್ದೇವೆ’ಎಂದು ತಿಳಿಸಿದರು.

ಸಮಾವೇಶದಲ್ಲಿ ಎಂ.ಜಿ. ರಾಜಗೋಪಾಲ್, ಎಂ.ಜಿ. ಬಾಲಕೃಷ್ಣ, ಡಿ.ಕೆ. ಶಿವಕುಮಾರ್, ಶೋಭಾ ಕರಂದ್ಲಾಜೆ, ಎಂ.ಬಿ. ಪಾಟೀಲ, ಶರಣಬಸಪ್ಪ ದರ್ಶನಾಪುರ ಮತ್ತು ಆರ್. ಶಿವಕುಮಾರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ನನ್ನ ಸಹೋದರ ಕನಕಪುರದಲ್ಲಿ ರೇಷ್ಮೆಗೆ ಸಂಬಂಧಿಸಿದಂತೆ ಸಣ್ಣ ಕೈಗಾರಿಕೆ ಆರಂಭಿಸಿದ್ದು, ಚೀನಾ ಕಂಪನಿ ಜತೆ ಒಡಂಬಡಿಕೆ ಮಾಡಿಕೊಂಡಿದ್ದ. ಅವರು ಬಂದು ತಂತ್ರಜ್ಞಾನ ಪೂರೈಕೆ ಮಾಡಬೇಕು. ಆದರೆ ವೀಸಾ ಸಮಸ್ಯೆ ಎದುರಾಗಿರುವುದರಿಂದ ಅವರು ಬಂದು ತರಬೇತಿ ನೀಡಲು ಸಾಧ್ಯವಾಗಿಲ್ಲ. ಹೀಗಾಗಿ ಯೋಜನೆ ಅರ್ಧಕ್ಕೆ ನಿಂತಿದೆ. ನಾವು ಬೇರೆ ದೇಶದವರ ಮೇಲೆ ಅವಲಂಬಿತರಾದರೆ ಇಂತಹ ಸಮಸ್ಯೆಗಳಾಗುತ್ತವೆ’ ಎಂದರು.

ರಾಜ್ಯದ ಸಣ್ಣ ಕೈಗಾರಿಕಾ ಸಚಿವ ಶರಣಬಸಪ್ಪ ದರ್ಶನಾಪುರ ಮಾತನಾಡಿ, ‘ಇ-ಖಾತಾ, ವಿದ್ಯುತ್ ಶುಲ್ಕ ಸೇರಿದಂತೆ ಸಣ್ಣ ಕೈಗಾರಿಕೆಗಳ ಸಮಸ್ಯೆಗಳನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರಲಾಗಿದೆ. ಸದ್ಯದಲ್ಲಿಯೇ ಮುಖ್ಯಮಂತ್ರಿ ಸಭೆ ಕರೆಯಲಿದ್ದಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ, ಕಾಸಿಯಾ ಅಧ್ಯಕ್ಷ ಎಂ. ಜಿ. ರಾಜಗೋಪಾಲ್, ಪಿಐಎ ಅಧ್ಯಕ್ಷ ಶಿವಕುಮಾರ್, ಕೆಎಸ್‌ಎಸ್‌ಐಡಿಸಿ ಅಧ್ಯಕ್ಷ ಟಿ.ರಘುಮೂರ್ತಿ, ಎಂಎಸ್‌ಎಂಇ ಇಲಾಖೆಯ ನಿರ್ದೇಶಕ ನಿತೇಶ್ ಪಾಟೀಲ ಭಾಗವಹಿಸಿದ್ದರು.

2029ಕ್ಕೆ 20 ಲಕ್ಷ ಉದ್ಯೋಗ ಸೃಷ್ಟಿ

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಉತ್ತೇಜಿಸಲು ರಾಜ್ಯ ಸರ್ಕಾರವು ‘ಎಸ್‌ಎಂಇ ಕನೆಕ್ಟ್’ ಮತ್ತು ‘ವೆಂಚುರೈಸ್’ ತರಹದ ರಚನಾತ್ಮಕ ಕ್ರಮಗಳನ್ನು ಕೈಗೊಂಡಿದೆ. ತಯಾರಿಕೆ ವಲಯದಲ್ಲಿ ಶೇ 12ರಷ್ಟು ಬೆಳವಣಿಗೆ ಸಾಧಿಸುವ ಮೂಲಕ 2029ರ ಹೊತ್ತಿಗೆ 20 ಲಕ್ಷ ಉದ್ಯೋಗ ಸೃಷ್ಟಿಸಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ರಾಜ್ಯದಲ್ಲಿ 38 ಲಕ್ಷ ಎಂಎಸ್‌ಎಂಇ ಉದ್ಯಮಗಳಿದ್ದು, 15 ಕೋಟಿ ಜನರಿಗೆ ಬದುಕು ನೀಡಿವೆ ಎಂದು ಹೇಳಿದರು.

ಈಜಿಪುರ ಮೇಲ್ಸೇತುವೆ: ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್

ಶೀಘ್ರದಲ್ಲೇ ಭೂಸ್ವಾಧೀನ: ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ರಾಮಲಿಂಗಾರೆಡ್ಡಿ ಅವರ ಕಾಳಜಿಯಿಂದ ವೇಗ ಪಡೆದುಕೊಂಡಿರುವ ಈಜಿಪುರ ಮೇಲ್ಸೇತುವೆ ಕಾಮಗಾರಿಗೆ ಭೂಸ್ವಾಧೀನ ತೊಡಕಾಗಿದೆ. ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಶುಕ್ರವಾರ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರ ಮುಗಿಸುವುದಾಗಿ ಭರವಸೆ ನೀಡಿದ್ದಾರೆ.

ಸೇಂಟ್ ಜಾನ್ಸ್ ಬಳಿ ರ್‍ಯಾಂಪ್‌ಗೆ ಅಗತ್ಯವಿರುವ ಜಾಗದ ಭೂಸ್ವಾಧೀನವಾಗಬೇಕಿದ್ದು, ಸಂಬಂಧಿಸಿದವರ ಜೊತೆ ಸಭೆ ನಡೆಸಿ ಕೂಡಲೇ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಬಳಿಕ ರ್‍ಯಾಂಪ್ ಕಾಮಗಾರಿಯನ್ನು ಕೈಗೆತ್ತಿಕೊಂಡು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ದಕ್ಷಿಣ ವಲಯದ ಡೇರಿ ವೃತ್ತದಿಂದ ಕಾಲ್ನಡಿಗೆ ಮೂಲಕ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿದ ಮಹೇಶ್ವರ್ ರಾವ್, ಈಜೀಪುರ ಮೇಲ್ಸೇತುವೆ ಮೇಲ್ಭಾಗಕ್ಕೆ ತೆರಳಿ ಕಾಮಗಾರಿಯ ಪ್ರಗತಿಯನ್ನು ವೀಕ್ಷಿಸಿದರು. ಮೇಲ್ಸೇತುವೆ ಕಾಮಗಾರಿಗೆ ವೇಗ ನೀಡಿ ತ್ವರಿತವಾಗಿ ಪೂರ್ಣಗೊಳಿಸಿ ಸಾರ್ವಜನಿಕರ ಸೇವೆಗೆ ಅನುವು ಮಾಡಿಕೊಡಲು ಗುತ್ತಿಗೆದಾರರಿಗೆ ಸೂಚನೆ ನೀಡಿದರು.

‘ಈಜಿಪುರ ಮೇಲ್ಸೇತುವೆಯ ಬಾಕಿ ಉಳಿದ ಕಾಮಗಾರಿಯನ್ನು ಬಿಎಸ್‌ಸಿಪಿಎಲ್ ಇನ್ಫ್ರಾಸ್ಟ್ರಕ್ಚರ್ ಗುತ್ತಿಗೆದಾರರು ನಡೆಸುತ್ತಿದ್ದಾರೆ. 762 ಸೆಗ್ಮೆಂಟ್‌ನಲ್ಲಿ 416 ಸೆಗ್ಮೆಂಟ್ ಕಾಸ್ಟಿಂಗ್ ಹಾಗೂ 291 ಸೆಗ್ಮೆಂಟ್ ಎರೆಕ್ಷನ್ ಮಾಡಲಾಗಿದೆ’ ಎಂದು ಗುಣನಿಯಂತ್ರಣ ವಿಭಾಗದ ಮುಖ್ಯ ಎಂಜಿನಿಯರ್ ಮಾಹಿತಿ ನೀಡಿದರು.

‘ಮೇಲ್ಸೇತುವೆಯ ಕೆಳಭಾಗದ ರಸ್ತೆಯನ್ನು ಸರಿಯಾಗಿ ನಿರ್ವಹಣೆ ಮಾಡಬೇಕು. ರಸ್ತೆಯ ಎರಡೂ ಬದಿಯ ಪಾದಚಾರಿ ಮಾರ್ಗಗಳ ನಿರ್ವಹಣೆ ಸರಿಯಾಗಿ ಇಲ್ಲ. ಕೂಡಲೇ ದುರಸ್ತಿ ಕಾರ್ಯವನ್ನು ಕೈಗೊಳ್ಳಬೇಕು. ಮಳೆ ನೀರು ಚರಂಡಿಗಳಿಗೆ ಸರಾಗವಾಗಿ ಹರಿದು ಹೋಗುವಂತೆ ವ್ಯವಸ್ಥೆ ಮಾಡಬೇಕು’ ಎಂದು ಮಹೇಶ್ವರ್ ರಾವ್ ಸೂಚಿಸಿದರು.

ಮಡಿವಾಳ ಬಸ್ ಪಿಕ್ ಅಪ್ ಪಾಯಿಂಟ್ ಬಳಿ, ರಸ್ತೆ ಬದಿ ತ್ಯಾಜ್ಯ ಬಿಸಾಡಿರುವುದನ್ನು ಕಂಡ ಮುಖ್ಯ ಆಯುಕ್ತರು, ‘ಈ ಪ್ರದೇಶದಲ್ಲಿ ಕಾರ್ಯನಿರ್ವಹಿಸುವ ಪೌರಕಾರ್ಮಿಕರು ಬೆಳಿಗ್ಗೆ 6 ಗಂಟೆಗೆ ಬಂದು ಸ್ವಚ್ಛತಾ ಕಾರ್ಯ ಮಾಡಬೇಕು. ಈ ಜಾಗದಲ್ಲಿ ಹೆಚ್ಚು ಬಸ್‌ಗಳು ನಿಲ್ಲಲಿದ್ದು, ಹೆಚ್ಚು ಮಂದಿ ಸಂಚರಿಸುತ್ತಾರೆ. ಆದ ಕಾರಣ ಸದಾ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು’ ಎಂದರು.

ಮಡಿವಾಳ ಕೆಳಸೇತುವೆಯ ಮೇಲ್ಭಾಗದಲ್ಲಿರುವ ಜಂಕ್ಷನ್ ಬಳಿ ಪಾದಚಾರಿ ಮಾರ್ಗಗಳು, ರಸ್ತೆ ಅಭಿವೃದ್ಧಿ ಸೇರಿದಂತೆ ಸಮಗ್ರ ಅಭಿವೃದ್ಧಿ ಮಾಡಬೇಕು. ಜಂಕ್ಷನ್‌ನಲ್ಲಿರುವ ಪೊಲೀಸ್ ಚೌಕಿಯಿಂದ ಪಾದಚಾರಿಗಳ ಓಡಾಟಕ್ಕೆ ಸಮಸ್ಯೆಯಾಗಲಿದ್ದು, ಅದನ್ನು ಸರಿಪಡಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

3.5 ಕಿ.ಮೀ ನಡಿಗೆ

ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಶುಕ್ರವಾರ ಬೆಳಿಗ್ಗೆ 3.5 ಕಿ.ಮೀ ನಡಿಗೆಯಲ್ಲಿ ಕ್ರಮಿಸಿ, ರಸ್ತೆ, ಪಾದಚಾರಿ ಮಾರ್ಗಗಳ ಸ್ವಚ್ಛತೆ ಕಾಪಾಡಲು ಅಧಿಕಾರಿಗಳಿಗೆ ಸೂಚಿಸಿದರು.

ಡಬಲ್ ರಸ್ತೆಯ ಡೇರಿ ಸರ್ಕಲ್ ಬಳಿಯಿರುವ ಕ್ರೈಸ್ಟ್ ಕಾಲೇಜು ಬಳಿಯಿಂದ ಸೇಂಟ್ ಜಾನ್ಸ್ ಕಾಲೇಜು ಜಂಕ್ಷನ್, ಮಡಿವಾಳ ಕೆಳಸೇತುವೆ, ಕೋರಮಂಗಲ 100 ಅಡಿ ರಸ್ತೆ, ಕೇಂದ್ರೀಯ ಸದನ, ಈಜಿಪುರ ಮೇಲ್ಸೇತುವೆ ರಸ್ತೆ, ಸೋನಿ ಜಂಕ್ಷನ್‌ವರೆಗೆ ಸಂಚರಿಸಿದರು.

‘ಸಿನಿಕತನ ಅತ್ಯಂತ ಅಪಾಯಕಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಂಸ್ಕೃತಿಕ ಲೋಕದ ಸಿನಿಕತನ ಅತ್ಯಂತ ಅಪಾಯಕಾರಿ. ಅದು ನಮ್ಮ ಅಂತರಂಗ ಹಾಳು ಮಾಡಿ, ಬಹಿರಂಗ ಭ್ರಷ್ಟಗೊಳಿಸುತ್ತದೆ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಸ್ವಾಭಿಮಾನಿ ಕರ್ನಾಟಕ ವೇದಿಕೆ ಶುಕ್ರವಾರ ಆಯೋಜಿಸಿದ್ದ ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ‘ಸಿನಿಕತನ ಎಂಬುದು ಗೊತ್ತಾಗುವುದಿಲ್ಲ. ಬರೆದಿರುವುದೆಲ್ಲಾ ಶ್ರೇಷ್ಠ ಎಂಬ ಭ್ರಮೆ ಇರಬಾರದು. ಅದರಿಂದ ಹೊರಗೆ ಬರಬೇಕಾಗಿದೆ’ ಎಂದರು.

ಪ್ರಶಸ್ತಿ ಮತ್ತು ಮನ್ನಣೆ ದೊರೆತ ವೇಳೆ ಯುವ ಜನರು ಏನಾಗಿದ್ದಾರೆ ಎಂಬುದನ್ನು ಹಿಂತಿರುಗಿ ನೋಡಬೇಕು. ಅದ್ಭುತವಾಗಿ ಬೆಳೆಯಬೇಕಾದವರು ಸಿನಿಕತನಕ್ಕೆ ಒಳಗಾಗಿ ಏನಾದರು ಎಂಬುದಕ್ಕೆ ಅನೇಕ ನಿದರ್ಶನಗಳು ಕಣ್ಮುಂದೆ ಇವೆ. ಸಿನಿಕತನ ಅತ್ಯಂತ ಅಪಾಯಕಾರಿ ಎಂದು ಹೊಸ ಹಾಗೂ ಹಳೆ ತಲೆಮಾರಿನವರು ಭಾವಿಸಿಕೊಂಡಾಗ ಮಾತ್ರ ಸಾಂಸ್ಕೃತಿಕ ಸಂವಾದ ಸಾಧ್ಯ ಎಂದು ಹೇಳಿದರು.

ಸಂವಾದದಿಂದ ಎಷ್ಟೋ ಬದಲಾವಣೆ ಹಾಗೂ ತಪ್ಪು ಕಲ್ಪನೆ ತೊಲಗಲು ಸಾಧ್ಯ ಇದೆ. ಅಂತಹ ಸಂವಾದ ಸಾಧ್ಯವಾಗಬೇಕಾದರೆ ಸಿನಿಕರಾಗಬಾರದು. ಈ ಮೂಲಕ ಸಾಂಸ್ಕತಿಕ ಕ್ಷೇತ್ರದ ಆರೋಗ್ಯ ಕಾಪಾಡಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕಥಾ ವಿಭಾಗದಲ್ಲಿ ರವಿಕುಮಾರ್ ನೀಹ, ಕವನ ವಿಭಾಗದಲ್ಲಿ ಗೀತಾ ಮಂಜು ಬೆಣ್ಣೆಹಳ್ಳಿ, ಶಶಿ ತರೀಕೆರೆ, ಪ್ರಬಂಧ ವಿಭಾಗದಲ್ಲಿ ಶಿವರಾಜ ಬ್ಯಾಡರಹಳ್ಳಿ, ಕರವೀರಪ್ರಭು ಕ್ಯಾಲಕೊಂಡ ಅವರಿಗೆ ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಿ.ಸೋಮಶೇಖರ್ ಮತ್ತು ಸರ್ವಮಂಗಲ ದತ್ತಿ ಪ್ರಶಸ್ತಿಯನ್ನು ಪ್ರೊ. ಧರಣೇಂದ್ರ ಕುರಕುರಿ, ಮಹಾಂತೇಶ ಪಾಟೀಲ ಅವರಿಗೆ ಪ್ರದಾನ ಮಾಡಲಾಯಿತು.

ಸ್ವಾಭಿಮಾನಿ ಕರ್ನಾಟಕ ವೇದಿಕೆ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಚನ್ನಪ್ಪ ಕಟ್ಟಿ, ಕಾದಂಬರಿಕಾರ ಶಶಿಧರ ಹಾಲಾಡಿ, ಕವಯತ್ರಿ ಇಂದಿರಾ ಪ್ರಸನ್ನ ಹಾಜರಿದ್ದರು.

ಸಮಾರಂಭದಲ್ಲಿ (ಕುಳಿತವರು ಎಡದಿಂದ) ಶಿವರಾಜ ಬ್ಯಾಡರಹಳ್ಳಿ, ಶಶಿ ತರೀಕೆರೆ, ಮಹಾಂತೇಶ ನವಲಕಲ್, ರವಿಕುಮಾರ್ ನೀಹ ಮತ್ತು ಕರವೀರ ಪ್ರಭು ಕ್ಯಾಲಕೊಂಡ ಅವರಿಗೆ ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ ನೀಡಲಾಯಿತು. ವಿ. ರೇಣುಕಾ ಪ್ರಸನ್ನ, ಬರಗೂರು ರಾಮಚಂದ್ರಪ್ಪ, ದ್ವಾರನಕುಂಟೆ ಪಾತಣ್ಣ, ಮಾನಸ, ಚನ್ನಪ್ಪ ಕಟ್ಟಿ ಮತ್ತು ಲೇಖಕ ಶಶಿಧರ್ ಹಾಲಾಡಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕಲಿತ ಶಾಲೆಗೆ ಹೊಸ ಕಟ್ಟಡ ನಿರ್ಮಾಣ

ಆನೇಕಲ್: ಶಾಲೆ ಆರಂಭೋತ್ಸವ ದಿನದಂದು ತಾವು ಕಲಿತ ಶಾಲೆಗೆ ಸಚಿವ ರಾಮಲಿಂಗಾ ರೆಡ್ಡಿ ಹೊಸ ಕಟ್ಟಡವನ್ನು ಕೊಡುಗೆಯಾಗಿ ನೀಡಿದ್ದಾರೆ.

ಹೈಟೆಕ್ ಸೌಲಭ್ಯ ಹೊಂದಿರುವ ಮೂರು ಅಂತಸ್ತಿನ ಕಟ್ಟಡವನ್ನು ಶುಕ್ರವಾರ ಸಚಿವರು ತಮ್ಮ ಶಾಲಾ ಸಹಪಾಠಿಗಳು, ಕುಟುಂಬಸ್ಥರು, ಗ್ರಾಮಸ್ಥರು ಮತ್ತು ಮಕ್ಕಳ ಸಮ್ಮುಖದಲ್ಲಿ ಉದ್ಘಾಟಿಸಿದರು.

ತಾಲ್ಲೂಕಿನ ಮರಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶೆಟ್ಟಿಹಳ್ಳಿ ರಾಮಲಿಂಗಾ ರೆಡ್ಡಿ ಅವರ ಸ್ವಗ್ರಾಮ.

ನಗರದಲ್ಲಿ ಇಂದು

ಸಂವಿಧಾನ ಜಾಗೃತಿ ಸಮಾವೇಶ: ಸಾನ್ನಿಧ್ಯ: ಸಿದ್ದರಾಜು ಸ್ವಾಮೀಜಿ, ಷಡಕ್ಷರಿಮುನಿ ದೇಶಿಕೇಂದ್ರ ಸ್ವಾಮೀಜಿ, ಮಾದಾರ ಚನ್ನಯ್ಯ ಸ್ವಾಮೀಜಿ, ಅತಿಥಿಗಳು: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಎಚ್.ಸಿ. ಮಹದೇವಪ್ಪ, ಕೆ.ಎಚ್. ಮುನಿಯಪ್ಪ, ಆರ್.ಬಿ. ತಿಮ್ಮಾಪುರ, ಗೋವಿಂದ ಕಾರಜೋಳ, ರಮೇಶ ಜಿಗಜಿಣಗಿ, ಚಲುವರಾಯಸ್ವಾಮಿ, ಆಯೋಜನೆ: ಕರ್ನಾಟಕ ರಾಜ್ಯ ಆದಿಜಾಂಬವ ಸಂಘ, ಸ್ಥಳ: ಡಾ.ಬಾಬು ಜಗಜೀವನರಾಮ್ ಭವನ, ಸುಮನಹಳ್ಳಿ ವೃತ್ತದ ಸಮೀಪ, ಬೆಳಿಗ್ಗೆ 10

‘ಶಿಕ್ಷಕ...ಆಟವನ್ನೇ ಬದಲಾಯಿಸುವವನು’ ಶಿಕ್ಷಕರಿಗೆ ಕಾರ್ಯಾಗಾರ: ಉದ್ಘಾಟನೆ: ಶ್ರೀನಿವಾಸಲು, ಉಪನ್ಯಾಸ: ಎಚ್.ಎಸ್. ಗಣೇಶ್ ಭಟ್ಟ, ಪ್ರಶಸ್ತಿ ಪ್ರಮಾಣಪತ್ರ ವಿತರಣೆ: ನಾ. ಶ್ರೀಧರ್, ಅಧ್ಯಕ್ಷತೆ: ಎಂ. ಶಿವಕುಮಾರ್, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಸೇಂಟ್ ಕ್ಯಾಥರೀನ್ ಸ್ಕೂಲ್, ಕಾಟನ್‌ಪೇಟೆ, ಬೆಳಿಗ್ಗೆ 11.30

‘ಸುವರ್ಣ ವೇಣು’ ಗುರುವಂದನೆ-ಅಭಿನಂದನೆ: ಎಚ್.ಎಸ್. ವೇಣುಗೋಪಾಲ್ ಅವರ 50 ವರ್ಷಗಳ ಕಲಾಯಾನದ ಸಂಭ್ರಮಾಚರಣೆ, ಅತಿಥಿಗಳು: ದಿನೇಶ್ ಗುರೂಜಿ, ಆರ್. ಗಣೇಶ್, ಎ.ವಿ. ಚಂದ್ರಶೇಖರ್, ತೇಜಸ್ವಿ ಸೂರ್ಯ, ಎಂ.ಆರ್.ವಿ. ಪ್ರಸಾದ್, ಆರ್.ವಿ. ರಾಘವೇಂದ್ರ, ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, ಸುವರ್ಣ ಕ್ಷಣಗಳ ಮೆಲುಕು: ಪ್ರವೀಣ್ ಡಿ. ರಾವ್, ನಿರುಪಮಾ ರಾಜೇಂದ್ರ, ಬಿ.ವಿ. ರಾಜಾರಾಂ, ವಿಜಯ ಹಾವನೂರ್, ಸುಗ್ಗನಹಳ್ಳಿ ಷಡಕ್ಷರಿ, ಸುಧೀಂದ್ರ, ರಾಘವೇಂದ್ರ ಹೆಗಡೆ, ಆಯೋಜನೆ: ಗೋಕುಲಂ ಶಿಷ್ಯ ಬಳಗ, ಸ್ಥಳ: ಪ್ರಭಾತ್ ಕಲಾ ಸಂಭ್ರಮ, ಕಿದ್ವಾಯಿ ಆಸ್ಪತ್ರೆ ಆವರಣ, ಹೊಂಬೇಗೌಡ ನಗರ, ಮಧ್ಯಾಹ್ನ 3

ಭರತನಾಟ್ಯ ರಂಗಪ್ರವೇಶ: ಕೆ. ಹರಿಣಿ, ಕೆ. ಪ್ರಗತಿ, ಮುಖ್ಯ ಅತಿಥಿಗಳು: ರೇಖಾ ಜಗದೀಶ್, ರಘುನಂದನ್, ಮಾನಸಿ ರಘುನಂದನ್, ಆಯೋಜನೆ: ನಾಟ್ಯೇಶ್ವರ ನೃತ್ಯ ಶಾಲೆ, ನೃತ್ಯ ಕುಟೀರ, ಸ್ಥಳ: ಶ್ರೀಕೃಷ್ಣದೇವರಾಯ ಕಲಾ ಭವನ, ಮಲ್ಲೇಶ್ವರ, ಸಂಜೆ 4.30

ಮಹಿಳಾ ಕವಿಗೋಷ್ಠಿ: ‘ನಾನು ಮತ್ತು ನನ್ನತನ’ ಶೀರ್ಷಿಕೆಯಡಿ ಕವನ ವಾಚನ, ಅತಿಥಿ: ಜನಾರ್ದನ ತುಂಗ, ಉಪಸ್ಥಿತಿ: ಎಂ.ಎಸ್. ನರಸಿಂಹಮೂರ್ತಿ, ಆಯೋಜನೆ: ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಸ್ಥಳ: ಭಾನು ನೆನಪಿನ ನಾಣಿ ಅಂಗಳ, ಸುಚಿತ್ರ ಸಿನಿಮಾ ಆ್ಯಂಡ್ ಕಲ್ಚರಲ್ ಫೌಂಡೇಷನ್, ಬನಶಂಕರಿ 2ನೇ ಹಂತ, ಸಂಜೆ 4.30

ಕರ್ನಾಟಕ ಸಂಗೀತ ಕಛೇರಿ: ಗಾಯನ: ಪ್ರಜ್ಞಾ ಅಡಿಗ, ಪಿಟೀಲು: ಎಸ್.ಪಿ. ಅನಂತಪದ್ಮನಾಭ, ಮೃದಂಗ: ಗುರುಮೂರ್ತಿ ಜಿ., ಆಯೋಜನೆ: ಶಾರದಾ ಸಾಂಸ್ಕೃತಿಕ ಸಂಘ, ಸ್ಥಳ: ಎಸ್‌ಬಿಐ ಆಫೀಸರ್ಸ್ ಕಾಲೊನಿ ರೆಸಿಡೆಂಟ್ಸ್ ವೆಲ್ಫೇರ್ ಅಸೋಸಿಯೇಷನ್ ಹಾಲ್, ಗಣಪತಿ ಸೇವಾ ಟ್ರಸ್ಟ್ ಎದುರು, ಬಸವೇಶ್ವರ ನಗರ, ಸಂಜೆ 6.30

ಐಎಸ್‌ಸಿಎಲ್ ಮತ್ತು ಕೆಎಸ್‌ಪಿಎಲ್ 2 ಉದ್ಘಾಟನಾ ಸಮಾರಂಭ: ಅತಿಥಿಗಳು: ಸುರೇಶ್ ರೈನಾ, ಶಿವರಾಜ್ ಕುಮಾರ್, ಆಯೋಜನೆ: ಇಂಡಿಯನ್ ಸಾಫ್ಟ್ ಬಾಲ್ ಕ್ರಿಕೆಟ್ ಫೌಂಡೇಷನ್, ಕರ್ನಾಟಕ ರಾಜ್ಯ ಸಾಫ್ಟ್ ಬಾಲ್ ಕ್ರಿಕೆಟ್ ಅಸೋಸಿಯೇಷನ್, ಸ್ಥಳ: ಗೇಟ್ ಸಂಖ್ಯೆ 4, ಗಾಯತ್ರಿ ವಿಹಾರ, ಅರಮನೆ ಮೈದಾನ, ಸಂಜೆ 6.30

ಚಂದ್ರಶೇಖರ ಕಂಬಾರ ಅವರು ರಚಿಸಿರುವ ‘ಜೋಕುಮಾರಸ್ವಾಮಿ’ ನಾಟಕ ಪ್ರದರ್ಶನ: ನಿರ್ದೇಶನ: ಬಿ.ವಿ. ಕಾರಂತ, ಆಯೋಜನೆ: ಬೆನಕ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 7

ನಿಹಾರಿಕಾ ಜಯಕುಮಾರ್

ಭರತನಾಟ್ಯ ರಂಗಪ್ರವೇಶ: ನಿಹಾರಿಕಾ ಜಯಕುಮಾರ್, ಮುಖ್ಯ ಅತಿಥಿ: ಕೆ.ಎಸ್. ಶ್ರೀಧರ್, ಕೆ.ಶಿವಲೋಗನಾಥನ್, ಆಯೋಜನೆ: ನಟನಂ ಇನ್‌ಸ್ಟಿಟ್ಯೂಟ್ ಆಫ್ ಡ್ಯಾನ್ಸ್, ಸ್ಥಳ: ಯುವಪಥ, ಜಯನಗರ 4ನೇ ಬ್ಲಾಕ್, ಸಂಜೆ 5

ಎಚ್. ಡುಂಡಿರಾಜ್ ರಚಿಸಿರುವ ‘ಪುಕ್ಕಟೆ ಸಲಹೆ’ ಹಾಸ್ಯ ನಾಟಕ ಪ್ರದರ್ಶನ: ನಿರ್ದೇಶನ: ಅಶೋಕ್ ಬಿ., ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಡಾ.ಸಿ. ಅಶ್ವಥ್ ಕಲಾಭವನ, ಎನ್. ಆರ್. ಕಾಲೊನಿ, ಸಂಜೆ 7

ಪುಕ್ಕಟೆ ಸಲಹೆ ನಾಟಕದ ದೃಶ್ಯ

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಎಂ. ಜಯಪ್ರಕಾಶ್‌ರವರು
(ದಿವಂಗತ ಪಟೇಲ್ ಮಾರಪ್ಪನವರ ಪುತ್ರ)
ಸುದ್ದಗುಂಟೆ ಪಾಳ್ಯ, ಸಿ.ವಿ. ರಾಮನ್ ನಗರ
ನಿಧನ : 30-5-2025
ಮಾಜಿ ಉಪಾಧ್ಯಕ್ಷರು, BEML ಕಾರ್ಮಿಕರ ಸಹಕಾರ ಸಂಘ
ಅಂತಿಮ ಕ್ರಿಯೆ : ದಿನಾಂಕ : 31-5-2025
ಸಂಜೆ 4 ಘಂಟೆಗೆ ಸ್ಥಳ : ಕಲ್ಲಹಳ್ಳಿ ವಿದ್ಯುತ್ ಚಿತಾಗಾರ, ಜೀವನಹಳ್ಳಿ, ಬೆಂಗಳೂರು
ದುಃಖತಪ್ತರು : ಕುಟುಂಬವರ್ಗ, ಬಂಧು-ಮಿತ್ರರು

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ನಗುತ, ನಲಿಯುತ ಇರುವ ಸಮಯದಿಂದಲೇ ಕೌಟುಂಬಿಕ ಜೀವನ ಸುಖಮಯವಾಗುತ್ತದೆ. ಸುಖ ಸಂಸಾರಕ್ಕೆ ದಶ ಸೂತ್ರಗಳನ್ನಿಲ್ಲಿ ಆಪ್ತ ಸಮಾಲೋಚಕರು ಓದುಗರೊಂದಿಗೆ ಹಂಚಿಕೊಂಡಿದ್ದಾರೆ.

ಸುಖಿ ಕುಟುಂಬದ ಸೂತ್ರಗಳು

ಆರ್. ಶ್ರೀನಾಗೇಶ್

ಕುಟುಂಬಗಳಲ್ಲಿ ಹೊಂದಾಣಿಕೆ, ಸಂತೃಪ್ತಿಯನ್ನು ಹೆಚ್ಚಿಸಿಕೊಂಡು ವಿರಸಗಳನ್ನು ಕಡಿಮೆ ಮಾಡಿಕೊಳ್ಳಲು ಈ ಕೆಲವು ಉಪಾಯಗಳನ್ನು ಪ್ರಯತ್ನಿಸಬಹುದು.

- **ಹೊಣೆಗಾರಿಕೆಯಲ್ಲಿ ಸ್ಪಷ್ಟತೆ:** ಕುಟುಂಬದ ಪ್ರತೀ ಸದಸ್ಯರು ವಹಿಸಬೇಕಾದ ಪಾತ್ರ ಮತ್ತು ಹೊರಬೇಕಾದ ಹೊಣೆಗಾರಿಕೆಯಲ್ಲಿ ಸ್ಪಷ್ಟತೆ ಇರಬೇಕು. ಸಂಪ್ರದಾಯಕ್ಕೆ ಆದ್ಯತೆ ಕೊಡುವ ಮೊದಲು ಯಾವುದು ಸೂಕ್ತ ಎನ್ನುವುದನ್ನು ಗಮನಿಸಬೇಕು. ಗಂಡ ಮತ್ತು ಹೆಂಡತಿ ಇಬ್ಬರೂ ಒಟ್ಟಿಗೆ ಹೋಗುತ್ತಿದ್ದಾಗ ಮಳೆ ಬಂದರೆ ಛತ್ರಿಯನ್ನು ಸಂಪ್ರದಾಯದ ಪ್ರಕಾರ ಯಾರು ಹಿಡಿಯಬೇಕು? ಸಂಪ್ರದಾಯವೇ ಮುಖ್ಯ ಎಂದಾದರೆ, ಗಂಡನೇ. ನೆನೆಯಬಾರದು ಎಂದಾದರೆ, ಎತ್ತರವಾಗಿದ್ದವರು. ಮನೆಯ ಕೆಲಸಕ್ಕೆ ಸಂಪ್ರದಾಯ ಮತ್ತು ಲಿಂಗ ತಾರತಮ್ಯವನ್ನು ತಳುಕು ಹಾಕದೆ, ಯಾರಿಗೆ ಯಾವುದು ಸಾಧ್ಯವಾಗುವುದೋ ಆ ಕೆಲಸವನ್ನು ಮಾಡಬೇಕು. ಮನೆಗೆಲಸವನ್ನು ಹಂಚಿಕೊಳ್ಳಬೇಕು. ಮಕ್ಕಳಿದ್ದರೆ, ವಯಸ್ಸಿಗೆ ತಕ್ಕಂತೆ ಹೊಣೆಗಾರಿಕೆಯನ್ನು ಅವರಿಗೆ ಕೊಡಬೇಕು.
- **ಸ್ಪೇಸ್ ಇರಲಿ:** ಮನೆಗಳಲ್ಲಿ ಒಂದು ಕೋಣೆ ಇರಬೇಕು. ಪ್ರತ್ಯೇಕ ಇರುವ ಜಾಗ. ತಮ್ಮ ಕೋಪ ಆರುವ ತನಕ ಕುಪಿತರು ಅಲ್ಲಿ ಕೆಲ ಕಾಲ ಇದ್ದು, ಕೋಪ ಕಡಿಮೆಯಾದ ನಂತರ ಹೊರ ಬರುವುದು ಕೋಪವನ್ನು ನಿಭಾಯಿಸುವ ಸುಲಭ ಉಪಾಯ. ಕೋಪ ಬಂದಾಗ ನಿಯಂತ್ರಿಸಲು ಸಾಧ್ಯವಿಲ್ಲದೆ ಬಾಯಿ ಸಡಿಲವಾಗಿ ಸಲ್ಲದ ಮಾತುಗಳು ಹೊರಬೀಳುತ್ತವೆ. ಮೂರನೆಯವರು ಎದುರಿಗಿದ್ದರಂತೂ ಅಹಮಿಕೆ ಕೋಪವನ್ನು ಉತ್ತೇಜಿಸುತ್ತದೆ. ಕೋಪ ಬಂದಾಗ ಅರ್ಧ ನಿಮಿಷ ಉಸಿರನ್ನು ಬಿಗಿ ಹಿಡಿಯುವುದು ಸುಲಭವಾದ ಉಪಾಯ.
- **ಕೇಳಿಸಿಕೊಳ್ಳಿ:** ಮತ್ತೊಬ್ಬರ ಮಾತು ಪೂರ್ತಿಯಾಗುವ ಮೊದಲೇ ನಮ್ಮ ಪ್ರತಿಕ್ರಿಯಿಸುವುದು, ಕೊಡಬಹುದಾದ ಪ್ರತಿಕ್ರಿಯೆಯನ್ನು ರೂಪಿಸಿಕೊಳ್ಳುತ್ತಿರುವುದು ಮುಕ್ತ ಸಂವಹನಕ್ಕೆ ದೊಡ್ಡ ಅಡಚಣೆ. ನಿನಗೇನು ಗೊತ್ತು ಎನ್ನುವುದು, ನಿನ್ನ ಜಾಗದಲ್ಲಿ ನೀನಿರು ಎನ್ನುವುದು, ಚೋಟುದ್ದ ಇದೀಯ, ಎಷ್ಟು ಮಾತಾಡ್ತೀಯ ಎನ್ನುವುದು, ಹೆಚ್ಚು ಮಾತಾಡಿದರೆ ಮದುವೆ ಮಾಡಿ ಕಳುಹಿಸಿ ಬಿಡುವೆ ಎಂದು ಹೆದರಿಸುವುದು, ನನ್ನ ಮಾತು ಕೇಳಕ್ಕಾಗಲ್ಲ ಅಂದರೆ ನಿನ್ನ ತವರು ಮನೆಗೆ ವಾಪಸು ಹೋಗು ಎಂದು ಬಾಯಿ ಮುಚ್ಚಿಸುವ ಪ್ರಯತ್ನ ಮಾಡುವುದು ಸಂವಹನ ಹೇಗಿರಬಾರದು ಎನ್ನುವುದಕ್ಕೆ ಕೆಲವು ಸ್ಯಾಂಪಲ್‌ಗಳು.
- **ಸ್ವ ಆರೈಕೆ:** ವಿಮಾನಯಾನದಲ್ಲಿ ಕೊಡುವ ಸೂಚನೆಗಳಲ್ಲಿ ಒಂದು, ಅನಾಹುತವಾದಲ್ಲಿ ಮೊದಲು ನೀವು ಆಮ್ಲಜನಕದ ಮಾಸ್ಕನ್ನು ಧರಿಸಿ ಅನಂತರ ಇತರರಿಗೆ ಸಹಾಯ ಮಾಡಿ ಎನ್ನುವುದು. ಗೃಹಿಣಿಯರು, ಇತರ ಸೇವೆ ಮಾಡುವುದರಲ್ಲಿ ತಮ್ಮ ಆರೈಕೆಯನ್ನೇ ಮರೆತು ಬಿಟ್ಟಿರುತ್ತಾರೆ. ಕೈ ಹಿಡಿದವರ ಅಥವ ತಮ್ಮ ಮಕ್ಕಳ ಅಗತ್ಯಗಳಿಗೆ ಕೊಡಬೇಕಾದ ಗಮನವನ್ನು ಕೊಡಲು ಸಮಯವೇ ಸಿಗದು. ಇವೆರಡೂ ಸಮಸ್ಯೆಗಳ ಎರಡು ಸ್ಯಾಂಪಲ್‌ಗಳು. ಇಲ್ಲಿ ಒತ್ತಿ ಹೇಳಬೇಕಾಗಿರುವ ಪ್ರಮುಖ ಅಂಶ ಎಂದರೆ ನಮ್ಮ ಮನಸ್ಸು ಮತ್ತು ದೇಹ ಆರೋಗ್ಯಕರವಾಗಿದ್ದರೆ ಮಾತ್ರ ನಾವು ಇತರರ ಆರೈಕೆ ಮಾಡುವುದಾಗಲೀ, ಇತರರ ಕ್ಷೇಮವನ್ನು ಗಮನಿಸುವುದಾಗಲೀ ಸಾಧ್ಯ. ಆದ್ದರಿಂದ ಸ್ವಂತ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಗಮನವನ್ನು ಕೊಡಲೇಬೇಕು.
- **ಸ್ವಸಮಯ:** ತಮ್ಮದೇ ಆದ ವೇಳೆ, ತಮ್ಮದೇ ಆದ ಕೆಲಸಗಳು, ತಮ್ಮದೇ ಆದ ಆದ್ಯತೆಗಳು, ತಮ್ಮದೇ ಆದ ಆಯ್ಕೆಗಳು ಇರಬೇಕು ಎಂದು ಪ್ರತಿಯೊಬ್ಬರೂ ಬಯಸುತ್ತಾರೆ. ಇದನ್ನು ಗುರುತಿಸಬೇಕು ಮತ್ತು ಗೌರವಿಸಬೇಕು.
- **ನಿರೀಕ್ಷೆಗಳು:** ನಾವು ಯಾರಿಂದ ಏನು ನಿರೀಕ್ಷಿಸುತ್ತೇವೆ ಎನ್ನುವುದು ನಮಗೆ ಸ್ಪಷ್ಟವಾಗಿ ಗೊತ್ತಿರುತ್ತದೆ. ಆದರೆ ಅವರು ನಮ್ಮಿಂದ ಏನು ನಿರೀಕ್ಷಿಸುವರು ಎನ್ನುವುದನ್ನು ಅರಿಯುವ ಗೋಜಿಗೆ ಹೋಗಿರುವುದಿಲ್ಲ. ಎಷ್ಟೋ ವೇಳೆ ನಮ್ಮ ನಿರೀಕ್ಷೆಗಳನ್ನು ಸ್ಪಷ್ಟ ಪಡಿಸಿರುವುದೂ ಇಲ್ಲ. ಅನೇಕ ಕುಟುಂಬಗಳಲ್ಲಿ ಚೌಕಟ್ಟನ್ನು ಮೀರುವುದು ಮತ್ತು ಮತ್ತೊಬ್ಬರ ನಿರೀಕ್ಷೆಗಳನ್ನು ಅರಿಯಲು ಪ್ರಯತ್ನ ಮಾಡದಿರುವುದೇ ದಿನನಿತ್ಯದ ಕಲಹಗಳಿಗೆ ಕಾರಣವಾಗಿರುತ್ತದೆ.
- **ನಿಂದನೆ ಮೀರುವುದು:** ಪ್ರಗತಿಗೆ, ನೆಮ್ಮದಿಗೆ ಭಂಗ ತರುವ ವ್ಯಕ್ತಿಗಳು ಎಲ್ಲ ಕುಟುಂಬಗಳಲ್ಲಿಯೂ ಇದ್ದೇ ಇರುತ್ತಾರೆ. ಅಂತಹವರ ನಿಂದನೆಯಲ್ಲಿಯೇ ನಮ್ಮ ಸಮಯ ಮತ್ತು ಶಕ್ತಿಯನ್ನು ಪೋಲು ಮಾಡುವ ಬದಲಿಗೆ ಅವರನ್ನು ಮೀರಿಯೂ ನಾವು ಏನು ಮಾಡಬಹುದು ಎನ್ನುವುದರ ಕಡೆ ಗಮನ ಕೊಡುವುದು ಕುಟುಂಬದಲ್ಲಿ ಸಕಾರಾತ್ಮಕತೆಯನ್ನು ಸೃಷ್ಟಿಸುತ್ತದೆ.
- **ಸಮಯ ಹಂಚಿಕೆ:** ಒಂಭತ್ತನೆಯದಾಗಿ ಪರಿವಾರಕ್ಕೆ ಮತ್ತು ಸ್ವಂತಿಕೆಗೆ ಸಮಯವನ್ನು ಕೊಟ್ಟುಕೊಳ್ಳಬೇಕು. ಇದಕ್ಕಾಗಿ ಪ್ರತಿದಿನವೂ ನಿಗದಿ ಪಡಿಸಲಾಗದೇ ಹೋಗಬಹುದು. ದಿನಗಟ್ಟಲೆ ಕನಿಷ್ಠ ಸಂವಹನವೂ ಇಲ್ಲದ ಅನೇಕ ಕುಟುಂಬಗಳಿವೆ. ಪ್ರತಿದಿನವೂ ಶುಭೋದಯ ಮತ್ತು ಶುಭರಾತ್ರಿಯನ್ನು ತಪ್ಪದೇ ಹೇಳುವುದು ಒಂದು ಮುಖ್ಯ ಸಂವಹನ. ಇದನ್ನು ಔಪಚಾರಿಕತೆ ಎಂದು ಭಾವಿಸದೆ, ಭಾವನಾತ್ಮಕ ಕರ್ತವ್ಯದ ರೀತಿ ಮಾಡಬೇಕು.
- **ಪ್ರವಾಸ:** ಪ್ರವಾಸದಲ್ಲಿ ದಿನದ 24 ತಾಸು ಜೊತೆಯಲ್ಲಿರಲು ಸಾಧ್ಯ. ಪ್ರವಾಸ ನಮ್ಮ ಆತ್ಮವಿಶ್ವಾಸವನ್ನೂ ಹೆಚ್ಚಿಸುತ್ತವೆ. ಒಟ್ಟಾಗಿ ಎಲ್ಲರೂ ಸೇರಿ ಊಟ ಮಾಡುವ, ಒಂದೆಡೆ ಸೇರಿ ಮೋಜು ಮಾಡುವ ಚಟುವಟಿಕೆಗಳನ್ನು ಎಲ್ಲೆಡೆ ನೋಡುತ್ತೇವೆ. ಇವೆರಡೂ ತೀವ್ರ ಒತ್ತಡದ ಬದುಕಿನಲ್ಲಿ ಕಾಣುತ್ತಿರುವ ನೆಮ್ಮದಿಯ ಓಯಸಿಸ್‌ಗಳು.

ಈ ದಶ ಸೂತ್ರಗಳು ಬದುಕಿನಲ್ಲಿ ನೆಮ್ಮದಿಯನ್ನು ಸಂತಸವನ್ನು ತೃಪ್ತಿಯನ್ನು ಪೂರೈಸುವಲ್ಲಿ ತುಂಬ ಸಹಕಾರಿ.

ಕೌಟುಂಬಿಕ ಜೀವನದಲ್ಲಿ ವಿವಿಧ ಆದ್ಯತೆಗಳ ನಡುವೆ ಸಮತೋಲನವನ್ನು ಕಾಪಾಡಿಕೊಂಡು ಒತ್ತಡವನ್ನು ನಿಭಾಯಿಸಿ ಖುಷಿಯಿಂದ ಬದುಕುವುದು ಕಲಿಯಬೇಕು. ಮದುವೆಗೆ ಮುಂಚೆ ಮತ್ತು ಮದುವೆಯಾಗಿ ಮೂರು ತಿಂಗಳ ನಂತರ ಆಪ್ತಸಲಹೆಯನ್ನು ಪಡೆಯುವುದು ಉತ್ತಮ ದಾಂಪತ್ಯಕ್ಕೆ ದಾರಿ ತೋರಿಸಬಲ್ಲದು. ಜಪಾನಿಯರು ಒಂದು ಮಾತು ಹೇಳುತ್ತಾರಂತೆ. ನೀವು ತಪ್ಪು ರೈಲು ಹತ್ತಿದ್ದೀರಿ ಎಂದು ಗೊತ್ತಾದರೆ, ತಕ್ಷಣವೇ ಮುಂದಿನ ನಿಲ್ದಾಣದಲ್ಲಿಯೇ ಇಳಿದು ಬಿಡಿ ಎಂದು. ನಿಮ್ಮ ಬದುಕು ನೀವು ಬಯಸಿದ ರೀತಿಯಲ್ಲಿ ಸಾಗುತ್ತಿಲ್ಲ ಎನಿಸಿದರೆ, ಅಗತ್ಯದ ಕ್ರಮಗಳನ್ನು ಹೆಚ್ಚು ವಿಳಂಬವಿಲ್ಲದೆ ತೆಗೆದುಕೊಂಡು ತೃಪ್ತ ಜೀವನದತ್ತ ಸಾಗುವುದು ವಿವೇಕದ ಹೆಜ್ಜೆ!

ಪರಸ್ಪರ ಗೌರವ

ಪ್ರತಿಯೊಬ್ಬರಿಗೂ ತಮ್ಮದೇ ಆದ ಅನಿಸಿಕೆಗಳಿರುತ್ತವೆ, ಭಾವನೆಗಳಿರುತ್ತವೆ, ಕನಸುಗಳಿರುತ್ತವೆ ಎಂಬುದನ್ನು ಗೌರವಿಸಬೇಕು. ಯಾವುದೇ ಒಂದು ಸಂಧರ್ಭದಲ್ಲಿ ಎಲ್ಲರೂ ಒಂದೇ ರೀತಿ ನಡೆದುಕೊಳ್ಳಬೇಕು ಎಂದು ನಿರೀಕ್ಷಿಸುವುದು ಸರಿಯಲ್ಲ. ನಮ್ಮ ಮನಸ್ಸು ಆಲ್ಜೀಬ್ರಾದ ಸೂತ್ರಗಳನ್ವಯ ನಡೆಯದು. ಕೆಲವರು ಪ್ರತಿಕ್ರಿಯೆಯಲ್ಲಿಯೇ ನಿರತರಾದರೆ ಕೆಲವರು ಸ್ಪಂದಿಸುವ ಗುಣ ಹೊಂದಿರುತ್ತಾರೆ. ಪ್ರತಿಕ್ರಿಯಿಸುವ ನಮ್ಮ ಅಭ್ಯಾಸವನ್ನು ಸ್ಪಂದಿಸುವ ಅಭ್ಯಾಸಕ್ಕೆ ಬದಲಿಸಿಕೊಂಡರೆ, ಪರಸ್ಪರ ಅರ್ಥ ಮಾಡಿಕೊಳ್ಳುವುದು ಸುಲಭವಾಗುತ್ತದೆ. ಪ್ರತಿಕ್ರಿಯೆಯಲ್ಲಿ ಕೇವಲ ಪದಗಳ ಎಸೆತ ನಡೆಯುತ್ತದೆ. ಸ್ಪಂದಿಸುವುದರಲ್ಲಿ ಸಮಸ್ಯೆಯನ್ನು ಅಥವ ವಿವಾದವನ್ನು ಬಗೆಹರಿಸುವ ಕ್ರಿಯೆ ಇರುತ್ತದೆ.

ಕೆ.ವಿ.ರಾಜಲಕ್ಷ್ಮಿ

ಹಪ್ಪಳ ವೈವಿಧ್ಯ

ಸಬ್ಬಕ್ಕಿ ಖಾರದ ಹಪ್ಪಳ

ಬೇಕಾಗುವ ಸಾಮಗ್ರಿ: ಸಬ್ಬಕ್ಕಿ 1 ಕಪ್, ಒಣ ಮೆಣಸಿನಕಾಯಿ 4-5, ಜೀರಿಗೆ 1 ಚಮಚ ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಸಬ್ಬಕ್ಕಿಯನ್ನು 5-6 ಗಂಟೆ ನೆನೆಸಿ. ಒಣಮೆಣಸಿನಕಾಯಿ, ಜೀರಿಗೆ ಪುಡಿ ಮಾಡಿಕೊಳ್ಳಿ. ನೆನೆದ ಸಬ್ಬಕ್ಕಿಗೆ, ಮಸಾಲೆ ಪುಡಿ, ಉಪ್ಪು, 6 ಲೋಟ ನೀರು ಸೇರಿಸಿ ಸಣ್ಣ ಉರಿಯಲ್ಲಿಟ್ಟು ಮಿಶ್ರಣ ತಳಹಿಡಿಯದಂತೆ ಕೈಯಾಡುತ್ತ ಗಂಜಿಯ ಹದಕ್ಕೆ ಬೇಯಿಸಿ. ಬಿಸಿಯಿರುವಾಗಲೇ ಪ್ಲಾಸ್ಟಿಕ್ ಹಾಳೆಯ ಮೇಲೆ ಹಪ್ಪಳ ಹರಡಿ ಬಿಸಿಲಲ್ಲಿ ನಾಲ್ಕೈದು ದಿನ ಒಣಗಿಸಿ.

ರಸಾಸ್ವಾದ

ಅವಲಕ್ಕಿ ಹಪ್ಪಳ

ಬೇಕಾಗುವ ಸಾಮಗ್ರಿ:
ಮೀಡಿಯಂ ಅವಲಕ್ಕಿ 1 ಕಪ್,
ಸಬ್ಬಕ್ಕಿ ಪುಡಿ 1/2 ಕಪ್, ಜೀರಿಗೆ 1 ಚಮಚ,
ಇಂಗು 1/2 ಚಮಚ, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಅವಲಕ್ಕಿಯನ್ನು ನೀರಿನಲ್ಲಿ ಚೆನ್ನಾಗಿ ತೊಳೆದು ಸಬ್ಬಕ್ಕಿ ಪುಡಿಯನ್ನು ಬೆರೆಸಿ ಸ್ವಲ್ಪ ನೀರು ಹಾಕಿ ಅರೆದುಕೊಳ್ಳಿ. ದಪ್ಪ ತಳದ ಪಾತ್ರೆಯಲ್ಲಿ ಅರೆದ ಮಿಶ್ರಣ ಜೀರಿಗೆ, ಇಂಗು, ಉಪ್ಪು ,6 ಕಪ್ ನೀರು ಬೆರೆಸಿ ಬೇಯಿಸಿ. ಬಿಸಿಯಿದ್ದಾಗಲೇ ಪ್ಲಾಸ್ಟಿಕ್ ಹಳೆಯ ಮೇಲೆ ಸೌಟಿನಿಂದ ತೆಳ್ಳಗೆ ಹರಡಿ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ.

ಹಬೆ ಹಪ್ಪಳ

ಬೇಕಾಗುವ ಸಾಮಗ್ರಿ: ಅಕ್ಕಿ 1 ಕಪ್, ಜೀರಿಗೆ 1 ಚಮಚ, ರುಚಿಗೆ ತಕ್ಕಸ್ಟು ಉಪ್ಪು.

ಮಾಡುವ ವಿಧಾನ: ಅಕ್ಕಿಯನ್ನು ಚೆನ್ನಾಗಿ ತೊಳೆದು ನೆನೆಸಿ ಗಟ್ಟಿಯಾಗಿ ರುಬ್ಬಿಕೊಂಡು 5-6 ಗಂಟೆ ಹುದುಗಲು ಬಿಡಿ. ಹುದುಗಿದ ಹಿಟ್ಟಿಗೆ ಜೀರಿಗೆ ಉಪ್ಪು, ನೀರು ಸೇರಿಸಿ ದೋಸೆ ಹಿಟ್ಟಿನ ಹದಕ್ಕೆ ಮಿಶ್ರಣ ಮಾಡಿಕೊಳ್ಳಿ. ನಂತರ ಸಣ್ಣ ಸಣ್ಣ ತಟ್ಟೆಗಳಲ್ಲಿ ತೆಳ್ಳಗೆ ಹುಯ್ದು ಒಂದು ನಿಮಿಷ ಹಬೆಯಲ್ಲಿ ಬೇಯಿಸಿ ತೆಗೆದು ಮನೆಯೊಳಗೇ ಫ್ಯಾನ್ ಗಾಳಿಯಲ್ಲಿ ಒಣಗಿಸಿ. ಇದಕ್ಕೆ ನೇರ ಬಿಸಿಲಿನ ಅವಶ್ಯಕತೆ ಇರುವುದಿಲ್ಲ.

ಕೆಂಪಕ್ಕಿ ಹಪ್ಪಳ

ಬೇಕಾಗುವ ಸಾಮಗ್ರಿ: ಕೆಂಪಕ್ಕಿ 2 ಕಪ್, ರಾಗಿ ಹಿಟ್ಟು 1/4 ಕಪ್, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಕೆಂಪಕ್ಕಿಯನ್ನು 4-5 ಗಂಟೆ ನೆನೆಸಿ ರುಬ್ಬಿ, 6 ಲೋಟ ನೀರು ರಾಗಿಹಿಟ್ಟು ಉಪ್ಪು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ ಸಣ್ಣ ಉರಿಯಲ್ಲಿ ಬೇಯಿಸಿ. ಬೆಂದ ದ್ರಾವಣವನ್ನು ಸೌಟಿನಲ್ಲಿ ಪ್ಲಾಸ್ಟಿಕ್ ಹಾಳೆಯ ಮೇಲೆ ಸಮವಾಗಿ ಹಪ್ಪಳ ಹರಡಿ ಬಿಸಿಲಿನಲ್ಲಿ ಒಣಗಿಸಿ.

ಸಾತ್ವಿಕ ಕೋಪ ತೋರುವುದು ಹೇಗೆ?

ಅಂತರಂಗ

ಅಕ್ಷರ ದಾಮ್ಲೆ

ಈಗ ಮತ್ತೆ ಏಳುವ ಪ್ರಶ್ನೆ ಏನೆಂದರೆ, 'ಕೋಪ ಬರುವುದು ತಪ್ಪೇ?'. ಕೋಪ ಬರುವುದು ತಪ್ಪಲ್ಲ. ಕೋಪ ಅನ್ನುವುದು ಸ್ವಾಭಾವಿಕವಾಗಿ ಇರುವಂತಹ ಒಂದು ಭಾವ. ನಾವು ನವರಸಗಳ ಆಧಾರವನ್ನಿಟ್ಟು ನೋಡಿದರೂ, ಅಲ್ಲಿ ಕೋಪವನ್ನು 'ರೌದ್ರ' ಎಂದು ಕರೆಯಲಾಗಿದೆ. ಈ ನವರಸಗಳು ನಮ್ಮ ಜೀವನದಲ್ಲಿರುವ ಮೂಲ ರಸಗಳು. ಮಾತ್ರವಲ್ಲ, ಕೋಪವನ್ನು ನೀವು ಮನುಷ್ಯರಲ್ಲಷ್ಟೇ ಅಲ್ಲ, ಪ್ರಾಣಿಗಳಲ್ಲೂ ಕಾಣಬಹುದು.

ಆದರೆ, ಸಮಸ್ಯೆ ಇರುವುದು ಎಲ್ಲಿ ಅಂದರೆ, ಕೋಪವನ್ನು ನಾವು ವ್ಯಕ್ತಪಡಿಸುವ ವಿಧಾನದಲ್ಲಿ. ನಾವು ನಮ್ಮ ಕೋಪವನ್ನು ಸರಿಯಾದ ವಿಧಾನದಲ್ಲಿ ವ್ಯಕ್ತಪಡಿಸಿದರೆ, ಅದು ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ಇತರರು ತಮ್ಮ ತಪ್ಪುಗಳನ್ನೂ ತಿದ್ದಿಕೊಳ್ಳುವುದಕ್ಕೆ ಅವಕಾಶವನ್ನು ಸೃಷ್ಟಿಮಾಡಲು ಸಾಧ್ಯವಿದೆ.

ಹೇಗೆ ನಾವು ಕೋಪವನ್ನು ಆರೋಗ್ಯಕರವಾಗಿ ವ್ಯಕ್ತಪಡಿಸಬಹುದು? ಒಂದು ಬಾರಿ ನಾನು ಒಂದು ಶಾಲೆಯ ಅಧ್ಯಾಪಕ - ಅಧ್ಯಾಪಿಕೆಯರಿಗೆ ಎರಡು ದಿನಗಳ ಕಾರ್ಯಾಗಾರವನ್ನು ಮಾಡುತ್ತಾ ಇದ್ದೆ. ಎರಡನೇ ದಿನ, ಊಟಕ್ಕೆ ಬಿಡುವಾಗ ಎಲ್ಲರಿಗೂ ಊಟದ ಸಂದರ್ಭದಲ್ಲಿ ಮೌನವಾಗಿದ್ದು ಆ ದಿನ ನಡೆದ ಚಟುವಟಿಕೆಗಳ ಕುರಿತು ಅವಲೋಕನ ಮಾಡಲು ಹೇಳಿದ್ದೆ. ಆದರೆ, ನನ್ನ ಸೂಚನೆಯನ್ನು ಎಲ್ಲಾ ಶಿಕ್ಷಕರೂ ಕಡೆಗಣಿಸಿದರು. ಎಲ್ಲರೂ ಹೊಟ್ಟೆ ತುಂಬ ಊಟ ಮಾಡುತ್ತಾ, ಬಾಯ್ತುಂಬ ಮಾತಾಡಿದರು. ಊಟ ಮುಗಿಸಿ ಆಮೇಲೆ ಮತ್ತೆ ಎಲ್ಲರೂ ಕಾರ್ಯಾಗಾರಕ್ಕೆ ಸೇರಿದಾಗ ಅವರಲ್ಲಿ ಎಷ್ಟು ಜನ ಮೌನವಾಗಿ ಊಟಮಾಡಿದರು ಅಂತ ಕೇಳಿದೆ. ಎಲ್ಲರೂ ನಿರುತ್ತರರಾದರು. ನನ್ನ ಸೂಚನೆಯನ್ನು ಕಡೆಗಣಿಸಿದ್ದು ನನಗೆ ತೀವ್ರವಾದಂತಹ ಕೋಪವನ್ನು ತರಿಸಿತ್ತು. ಆ ಸೂಚನೆಯ ಹಿಂದೆ ಒಂದು ಆಳವಾದ ಉದ್ದೇಶವಿತ್ತು. ಅವರೆಲ್ಲರನ್ನೂ ಕುರಿತು, 'ಒಂದು ನಿಮಿಷದ ಮೌನ ಪ್ರಾರ್ಥನೆ ಮಾಡೋಣ' ಅಂತ ಹೇಳಿ ಮೌನ ಪ್ರಾರ್ಥನೆಯನ್ನೂ ಮಾಡಿಸಿದೆ. ಎಲ್ಲರೂ ಕಸಿವಿಸಿಯಾದರು. ನಂತರ ಅವರೆಲ್ಲರಿಗೂ ನನ್ನ ಸೂಚನೆಯ ಹಿಂದೆ ಇದ್ದ ಉದ್ದೇಶ ಏನು, ಮತ್ತು ಅವರ ಅನನುಸರಿಸುವಿಕೆ ಹೇಗೆ ನನಗೆ ಕೋಪವನ್ನು ತರಿಸಿತ್ತು ಎಂಬುದನ್ನು ವಿವರಿಸಿದೆ. ಆವಾಗ, ಎಲ್ಲರಿಗೂ ಅದರ ಪ್ರಾಮುಖ್ಯ ಅರಿಯಿತು.

ಮಾತ್ರವಲ್ಲ, ಮುಂದಿನ ೧೦ ನಿಮಿಷಗಳಲ್ಲಿ ಆ ಕೆಲಸವನ್ನು ಮುಗಿಸಿಕೊಂಡು ಬಂದರು, ಮತ್ತು ಆಮೇಲೆ, ಅವರ ಭಾಗವಹಿಸುವಿಕೆಯ ಮಟ್ಟ ಬೇರೆಯೇ ಆಯಿತು. ಹೀಗೆ, ಕೋಪವನ್ನು ಸರಿಯಾದ ರೀತಿಯಲ್ಲಿ ವ್ಯಕ್ತಪಡಿಸಿದಾಗ, ಅಲ್ಲಿ ಪ್ರತಿರೋಧ ಇರುವುದಿಲ್ಲ, ಬದಲಾಗಿ, ಸ್ವೀಕೃತಿ ಇರುತ್ತದೆ. ಮಾತ್ರವಲ್ಲ, ನಿಮ್ಮ ಮಾತಿಗೆ ತೂಕ ಹೆಚ್ಚುತ್ತದೆ.

ಈಗ ಮೂಲ ಪ್ರಶ್ನೆಗೆ ಬರುವುದಾದರೆ, ನಿಮ್ಮ ಜೀವನದಲ್ಲಿ ಆಗಿರುವಂತಹ ಸೋಲು, ಹತಾಶೆ, ಅವಮಾನ ಮುಂತಾದುವುಗಳಿಗೆಲ್ಲ, ಈಗ ನಿಮ್ಮ ಜೊತೆಗಿರುವ ಅಥವಾ ನಿಮ್ಮ ಸುತ್ತಲೂ ಇರುವಂತಹ ವ್ಯಕ್ತಿಗಳು ಕಾರಣರಲ್ಲ. ಆದರೆ, ಆಗಿನಿಂದ ಒಳಗೇ ಅದುಮಿಟ್ಟುಕೊಂಡಿರುವಂತಹ ಕೆಂಡ ಎಲ್ಲೋ ಬೆಂಕಿಯ ರೂಪ ಪಡೆಯುತ್ತಿದೆ. ಅದು ನಿಮ್ಮನ್ನಷ್ಟೇ ಅಲ್ಲದೆ, ನಿಮ್ಮ ಸಂಗಡಿಗರನ್ನೂ ಅಥವಾ ಅವರ ಜೊತೆಗಿನ ಸಂಬಂಧಗಳನ್ನು ಸುಡುತ್ತಿದೆ. ನಮ್ಮ ಜೀವನದಲ್ಲಿ ಆಗಿರುವಂತಹ ಭಾವನಾತ್ಮಕ ಆಘಾತಗಳನ್ನು (trauma) ನಾವು ಅದುಮಿಟ್ಟುಕೊಂಡಾಗ ಅದು ಈ ರೀತಿಯಲ್ಲಿ ಕಾಣಿಸಿಕೊಳ್ಳುತ್ತದೆ. ಇದು ಕೋಪವಿರಬಹುದು, ಉದ್ವೇಗ ಇರಬಹುದು ಹೀಗೆ, ಯಾವುದೇ ರೀತಿಯ ನಿಷ್ಕ್ರಿಯ ವರ್ತನೆಗಳಿಗೆ ಕಾರಣವಾಗಬಹುದು. ಇದಕ್ಕೆ ನಿಮ್ಮೊಳಗಿರುವಂತಹ ಟ್ರಾಮಾವನ್ನು ವಾಸಿಮಾಡಿಸಿಕೊಳ್ಳುವುದು ಬಹಳ ಮುಖ್ಯ. ಇಲ್ಲದಿದ್ದರೆ, ಬೌದ್ಧಿಕವಾಗಿ ನಿಮಗೆ ಕೋಪ ಬರುವುದು ತಪ್ಪು ಎಂದು ಎಷ್ಟೇ ಗೊತ್ತಿದ್ದರೂ, ಆಯಾ ಸಂದರ್ಭಗಳಲ್ಲಿ ಅವು ಬಂದು ಹೋಗುತ್ತವೆ. ಮತ್ತು ಆಮೇಲೆ ನಾವು ಅದರ ಬಗ್ಗೆ ಪರಿತಪಿಸುತ್ತೇವೆ. ಹೀಗೆ ಮತ್ತೆ ಮತ್ತೆ ಆಗುವ ಬದಲು, ನಾವು ನಮ್ಮ ನೋವಿನ ಮೂಲಗಳಿಗೆ ಚಿಕಿತ್ಸೆ ನೀಡುವ ಮೂಲಕ, ನಮ್ಮಲ್ಲಿರುವಂತಹ ಸಮಸ್ಯೆಗಳನ್ನು ಸರಿಪಡಿಸಿಕೊಳ್ಳಬಹುದು.

ಸೊಗದ ಬೆಳಗಿಗೆ...

ಕಾವ್ಯಾ ಭಾರದ್ವಾಜ್

ಬೆಳಗಿನ ಧಾವಂತ ಬಹುತೇಕ ಗೃಹಿಣಿಯರು, ಉದ್ಯೋಗಸ್ಥ ಮಹಿಳೆಯರಿಗೆ ಸಾಮಾನ್ಯ. ಅದರಲ್ಲಿಯೂ ಮಕ್ಕಳಿಗೆ ರಜೆ ಮುಗಿಯುತ್ತಾ ಬಂತು. ಹೊರಗೆ ದುಡಿಯುವವರಿಗೆ ವಾರಾಂತ್ಯ ಬರುತ್ತಿದ್ದಂತೆ 'ಸೋ.. ಮವಾರ' ಎಂದು ಹುರುಪಿಲ್ಲದ ಮಂಡೇ ಬ್ಲೂಸ್‌ನ ಜಾಲದೊಳಗೆ ಸಿಲುಕಿಕೊಳ್ಳುವುದರ ಜತೆಗೆ ಧಾವಂತದ ಬೆಳಗುಗಳು ಎದುರು ನೋಡುತ್ತಿರುತ್ತವೆ.

ಗುರಿಯ ಹಿಂದೆ ಓಡುತ್ತಿರುವ ಜೀವನ, ಆಫೀಸ್, ಮನೆ, ಸ್ನೇಹಿತರು, ಮಕ್ಕಳು, ಸಂಬಂಧಿಕರು ಹೀಗೆ ಎಲ್ಲದರ ನಡುವೆ ಒಮ್ಮೊಮ್ಮೆ ಹದವರಿತ ಕೇಸರಿಭಾತ್‌ನಂತೆಯೂ, ಕೆಲವೊಮ್ಮೆ ಹದ ತಪ್ಪಿದ ಉಪ್ಪಿಟ್ಟಿನಂತೆಯೂ ಅನಿಸುವುದೆಲ್ಲ ಸಹಜ. ಕೈತುಂಬಾ ಕೆಲಸ, ಹೊಸ ಆಲೋಚನೆಗಳ ನಡುವೆ ಹುರುಪನ್ನು ದಕ್ಕಿಸಿಕೊಳ್ಳುವುದು ಹೇಗೆ? ಪ್ರೇರಣೆ ಪಡೆಯುವುದು ಹೇಗೆ?

ಹ್ಯಾಪಿ ಮಾರ್ನಿಂಗ್ಸ್ ಎಂದರೇನು?

ಧಾವಂತದ ಬೆಳಗುಗಳೆಲ್ಲ ಸಾವಧಾನದ ಬೆಳಗಿನಂತಾಗಲು ಏನು ಮಾಡಬಹುದು. ಕೆಲಸಕ್ಕೆ ಹೊರಗೆ ಹೋಗುವವರು, ಮುಖ್ಯವಾಗಿ ವರ್ಕ್ ಫ್ರಮ್ ಹೋಂ ಮಾಡುವವರು, ಮನೆಯನ್ನು ನಿಭಾಯಿಸುವ ಗೃಹಿಣಿಯರು ಎಲ್ಲರ ಪಾತ್ರವೂ ಇದ್ದೆ ಇರುತ್ತದೆ. ವಾರಾಂತ್ಯದಲ್ಲಿಯೇ ಮುಂದಿನ ವಾರದ ದಿನಚರಿಯನ್ನು ಮನೆಯವರಲ್ಲ ಕುಳಿತು ವಾರದ ಅಡುಗೆ ಸಾಮಗ್ರಿ, ಹಣ್ಣು- ತರಕಾರಿ, ಗಾಡಿಗಳಿಗೆ ಪೆಟ್ರೋಲ್/ ಏರ್ ತುಂಬಿಸುವುದು, ಹಣಕಾಸಿನ ಬಜೆಟ್ ಹಾಕಿಕೊಳ್ಳುವುದು ಒಂದೆಡೆಯಾದರೆ, ಬೆಳಗಾಗುತ್ತಲೇ ಅಣಿಯಾಗಬೇಕಾದ ಮರುದಿನದ ತಿಂಡಿ- ಊಟದ ಮೆನು ಮೊದಲೇ ಮನೆಮಂದಿಯೊಡನೆ ತೀರ್ಮಾನಿಸುವುದು ಒಳಿತು. ಅದಕ್ಕೆ ತಕ್ಕಂತೆ ಹಿಟ್ಟು ಕಲಸುವುದು/ರುಬ್ಬುವುದು, ತರಕಾರಿ ಹೆಚ್ಚಿಟ್ಟುಕೊಳ್ಳುವುದು ಗೃಹಿಣಿಯ ಅರ್ಧ ತಲೆನೋವು ಕಳೆದಂತೆ.

ಮಕ್ಕಳ ನಿರ್ವಹಣೆ ವಿಷಯ ಬಂದಾಗ ಅವರುಗಳ ಹೋಮ್ ವರ್ಕ್ ಮುಗಿಸಿ ಮರುದಿನದ ಪಾಠದ ಕಡೆ ಗಮನ ಹರಿಸಿ, ಸ್ಕೂಲ್ ಡೈರಿಗೆ ಸಹಿ, ಟೈಮ್ ಟೇಬಲ್ ಪ್ರಕಾರ ಪುಸ್ತಕಗಳ ಜೋಡಣೆ, ಸಮವಸ್ತ್ರ ಅಥವಾ ಅಂದು ಧರಿಸುವ ಬಟ್ಟೆಗಳ ಆಯ್ಕೆ, ಇಸ್ತ್ರಿ, ಟೈ, ಬೆಲ್ಟ್, ಐ ಡಿ ಕಾರ್ಡ್, ಪಾಲಿಷ್ ಮಾಡಿದ ಶೂಸ್, ಲಂಚ್ ಬಾಕ್ಸ್, ನೀರಿನ ಬಾಟಲಿ, ನಾಪ್ಕಿನ್, ಲಂಚ್ ಬ್ಯಾಗ್ ಇತ್ಯಾದಿ ಸಿದ್ಧಗೊಳಿಸುವುದರ ಜತೆಗೆ ರಾತ್ರಿಯೇ ತಲೆಗೆ ಎಣ್ಣೆ ಹಚ್ಚುವುದು, ಕೂದಲಿನ ಸಿಕ್ಕುಬಿಡಿಸಿ ಒಮ್ಮೆ ತಲೆ ಬಾಚಿಕೊಂಡಲ್ಲಿ ಮರುದಿನ ಹೇರ್ ಸ್ಟೈಲ್ ಬೇಗನೆ ರೆಡಿಯಾಗುತ್ತೆ.

ಬೆಳೆಯುವ ಮಕ್ಕಳಿಗೆ ಶುಚಿತ್ವದ ಮಹತ್ವ ತಿಳಿಸಬೇಕು. ಮನೆಯಲ್ಲಿ ವಸ್ತುಗಳನ್ನು ಎಲ್ಲೆಂದರಲ್ಲಿ ಬಿಸಾಡುವುದು, ತಿಂದ ಚಾಕೊಲೇಟ್ ಬಿಸ್ಕತ್ ಪೊಟ್ಟಣಗಳ ಪೇಪರ್ ಹಣ್ಣುಗಳ ಬೀಜ, ಸಿಪ್ಪೆ, ನಾರು ಕಂಡಕಂಡಲ್ಲಿ ಎಸೆಯುವುದನ್ನು ತಪ್ಪಿಸಿ.

ಬದಲಾಯಿಸಿದ ಬಟ್ಟೆ ಇಟ್ಟಲ್ಲೇ ಇರಿಸಿದ್ದರೆ, ನಯವಾಗಿ ತಿಳಿಹೇಳಿ. ನಮ್ಮ ಪರಿಸರ ಸ್ವಚ್ಛತೆಯ ಬಗ್ಗೆ ಜಾಗ್ರತೆ ಮೂಡಿಸಬೇಕು. ಪರಿಚಿತರು, ಸ್ನೇಹಿತರು ಮನೆಗೆ ಬಂದಾಗ ಅಥವಾ ಎದುರುಸಿಕ್ಕು ನಕ್ಕು ಮಾತನಾಡಿಸಿದಾಗ ಮುಖ ತಿರುಗಿಸುವುದರ ಬದಲು ನಗುತ್ತ 'ನಮಸ್ತೆ' ಎಂದು ಹೇಳುವ ಸಭ್ಯತೆಯನ್ನು ಕಲಿಸಿ. ಒಂದು ಪದದ ಉತ್ತರಗಳಾದ ಬೇಕು, ಬೇಡ, ಇಲ್ಲ, ಹೌದು, ಇತ್ಯಾದಿಗಳನ್ನು ಸೌಮ್ಯವಾಗಿ ಬೇಕು ಅಮ್ಮ/ಬೇಡ ಅಮ್ಮ/ಇಲ್ಲ ಅಮ್ಮ/ ಹೌದು ಅಮ್ಮ. ಹೀಗೆ ಯಾರಿಗೆ ಉತ್ತರಿಸುವರೋ ಅವರನ್ನು ಉದ್ದೇಶಿಸಿ ಹೇಳುವುದನ್ನು ಕಲಿಸಿ.

ಸಂಬಂಧಗಳನ್ನು ಬಾಯ್ತುಂಬ ಗುರುತಿಸಿ ಹೇಳಲು ತಿಳಿಸಿ ಉದಾಹರಣೆಗೆ ಅಜ್ಜ, ಅಜ್ಜಿ, ಚಿಕ್ಕಮ್ಮ, ದೊಡ್ಡಮ್ಮ, ಅತ್ತೆ, ಮಾವ ಇತ್ಯಾದಿ. ರಾತ್ರಿ ಬೇಗ ಮಲಗಿ ಬೆಳಿಗ್ಗೆ ಬೇಗ ಏಳುವ ಅಭ್ಯಾಸ ಚಿಕ್ಕಂದಿನಿಂದಲೇ ಶುರುವಾಗಲಿ.

ಮನೆಗೆಲಸವನ್ನು ಲಿಂಗಭೇಧವಿಲ್ಲದೆ ಎಲ್ಲರೂ ಹಂಚಿಕೊಂಡು, ಮಕ್ಕಳಿಗೆ ಅವರವರ ವಯಸ್ಸಿಗೆ ತಕ್ಕಂತೆ ಸ್ವಲ್ಪ ಸ್ವಲ್ಪವಾಗಿ ಕೆಲಸ ಹಚ್ಚಿ ಹುರಿದುಂಬಿಸಿ. ಮುಂದಾಲೋಚನೆ ಇಟ್ಟುಕೊಂಡು ಯೋಜನಾಬದ್ಧರಾಗಿದ್ದರೆ ಸಾವಧಾನದ ಬೆಳಗನ್ನು ನಿತ್ಯ ನೋಡಬಹುದು.

ಆರ್‌ಸಿಯು ವ್ಯಾಪ್ತಿಯ ಬಿ.ಕಾಂ 6ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳಿಗೆ ತೊಂದರೆ

ಫಲಿತಾಂಶ ಕಾಯುತ್ತಿದ್ದವರಿಗೆ ಮತ್ತೆಪರೀಕ್ಷೆ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಇಲ್ಲಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ (ಆರ್‌ಸಿಯು) ವ್ಯಾಪ್ತಿಯಲ್ಲಿ ನಡೆದ ಬಿ.ಕಾಂ 6ನೇ ಸೆಮಿಸ್ಟರ್‌ನ 'ಇನ್‌ಕಮ್ ಟ್ಯಾಕ್ಸ್ ಲಾ ಆ್ಯಂಡ್ ಪ್ರ್ಯಾಕ್ಟೀಸ್–2' ವಿಷಯದ ಪರೀಕ್ಷೆ ಬರೆದು ಫಲಿತಾಂಶದ ನಿರೀಕ್ಷೆಯಲ್ಲಿದ್ದ ವಿದ್ಯಾರ್ಥಿಗಳಿಗೆ ಈಗ ಮರುಪರೀಕ್ಷೆ ಎದುರಾಗಿದೆ.

ಪರೀಕ್ಷೆಯಲ್ಲಿ ಕೇಳಿದ್ದ 10 ಅಂಕಗಳ ಪ್ರಶ್ನೆಯೊಂದು ಅಪೂರ್ಣವಾಗಿದೆ. ಹೀಗಾಗಿ ಈ ವಿಷಯದ ಮರುಪರೀಕ್ಷೆ ನಡೆಸಲು ನಿರ್ಧರಿಸಿ ಮೌಲ್ಯಮಾಪನ ಕುಲಸಚಿವರು ಮೇ 29ರಂದು ಸುತ್ತೋಲೆ ಹೊರಡಿಸಿದ್ದು ವಿದ್ಯಾರ್ಥಿಗಳಿಗೆ ಸಂಕಷ್ಟ ತಂದಿದೆ.

ಮೇ 20ರಂದು 'ಇನ್‌ಕಮ್ ಟ್ಯಾಕ್ಸ್ ಲಾ ಆ್ಯಂಡ್ ಪ್ರ್ಯಾಕ್ಟೀಸ್–2' ವಿಷಯದ ಪರೀಕ್ಷೆ ನಡೆದಿತ್ತು. ಬೆಳಗಾವಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ 11,200 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಮೇ 29ರಂದು ಬಿ.ಕಾಂ 6ನೇ ಸೆಮಿಸ್ಟರ್‌ನ ಎಲ್ಲ ವಿಷಯಗಳ ಪರೀಕ್ಷೆ ಮುಗಿದಿದ್ದರಿಂದ ನಿರಾಳರಾಗಿದ್ದರು. ಕೆಲವರು ಮುಂದಿನ ಓದಿಗೆ ತಯಾರಿ ನಡೆಸಿದ್ದರು.

'ಮೊದಲೇ ಆರ್ಥಿಕ ಸಮಸ್ಯೆ ಮಧ್ಯೆಯೂ ಓದುತ್ತಿದ್ದೇವೆ. ಇನ್ನೇನು ಪದವಿ ಓದು ಮುಗಿಯಿತೆಂದು ನಿಶ್ಚಿಂತೆಯಿಂದ ಇದ್ದೆವು. ತಪ್ಪಾಗಿದ್ದ ಪ್ರಶ್ನೆಗೆ ಕೃಪಾಂಕ ಸಿಗಬಹುದು ಎಂಬ ನಿರೀಕ್ಷೆಯಲ್ಲಿದ್ದೆವು. ಆದರೆ, ಈಗ ಮರುಪರೀಕ್ಷೆ ನಿರ್ಧರಿಸಿದ್ದು ಸರಿಯಲ್ಲ. ಯಾರೋ ಮಾಡಿದ ತಪ್ಪಿಗೆ ನಾವು ಶಿಕ್ಷೆ ಎದುರಿಸುವಂತಾಗಿದೆ' ಎಂದು ಜಿಲ್ಲೆಯ ರಾಮದುರ್ಗದ ಕಾಲೇಜಿನ ವಿದ್ಯಾರ್ಥಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

'ನಾವು 60 ಅಂಕಗಳ ಪರೀಕ್ಷೆ ನಡೆಸಿದ್ದೆವು. ಈ ಪ್ರಶ್ನೆಪತ್ರಿಕೆಯಲ್ಲಿ ಬಹುಆಯ್ಕೆ 10 ಅಂಕಗಳ ಪ್ರಶ್ನೆಯೊಂದು ಅಪೂರ್ಣವಾಗಿತ್ತು. ನಮಗೆ 10 (ಒಟ್ಟಾರೆ ಅಂಕಗಳಲ್ಲಿ ಶೇ 16ಕ್ಕಿಂತ ಹೆಚ್ಚು) ಕೃಪಾಂಕ ಕೊಡಲು ಬರುವುದಿಲ್ಲ. ಹೀಗಾಗಿ ಕುಲಪತಿಗಳ ನಿರ್ದೇಶನದ ಅನ್ವಯ ಮರುಪರೀಕ್ಷೆಗೆ ತೀರ್ಮಾನಿಸಿದ್ದೇವೆ. ಈ ಸಂಬಂಧ ಎಲ್ಲ ಕಾಲೇಜುಗಳಿಗೆ ಮಾಹಿತಿ ರವಾನಿಸಿದ್ದೇವೆ' ಎಂದು ಮೌಲ್ಯಮಾಪನ ಕುಲಸಚಿವ ಪ್ರೊ.ರವೀಂದ್ರನಾಥ ಕದಂ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಶ್ನೆಪತ್ರಿಕೆ ಸಿದ್ಧಪಡಿಸುವಲ್ಲಿ ಲೋಪ ಎಸಗಿದವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು. ಈ ಸಂಬಂಧ ಎಲ್ಲವನ್ನೂ ಪರಿಶೀಲಿಸಲಾಗುವುದು

ಪ್ರೊ.ಸಿ.ಎಂ.ತ್ಯಾಗರಾಜ
ಕುಲಪತಿ, ಆರ್‌ಸಿಯು

ಈಗ ಹೊಸದಾಗಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಕೊಡುವಂತೆ ಪರೀಕ್ಷಾ ಮಂಡಳಿಯವರಿಗೆ ಸೂಚಿಸಿದ್ದೇವೆ. ಮರುಪರೀಕ್ಷೆ ದಿನಾಂಕ ಸದ್ಯದಲ್ಲೇ ತಿಳಿಸುತ್ತೇವೆ

ಪ್ರೊ.ರವೀಂದ್ರನಾಥ ಕದಂ
ಮೌಲ್ಯಮಾಪನ ಕುಲಸಚಿವ, ಆರ್‌ಸಿಯು

ಸಿಗರೇಟು ಸೇದಿದರೆ, ಗುಟ್ಕಾ ಉಗುಳಿದರೆ ₹1,000 ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು/ಗುಟ್ಕಾ ಉಗುಳುವುದನ್ನು ನಿಷೇಧಿಸಿ ರಾಜ್ಯ ಸರ್ಕಾರವು ಅಧಿಸೂಚನೆ ಹೊರಡಿಸಿದೆ. ಇನ್ನು ಮುಂದೆ ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟು ಸೇದಿದರೆ ಮತ್ತು ಗುಟ್ಕಾ ಉಗುಳಿದರೆ ₹1,000 ದಂಡ ವಿಧಿಸಬಹುದಾಗಿದೆ.

ಈ ಸಂಬಂಧ ರಾಜ್ಯ ಸರ್ಕಾರವು ರೂಪಿಸಿದ್ದ, 'ಸಿಗರೇಟು ಮತ್ತು ಇತರ ತಂಬಾಕು ಉತ್ಪನ್ನಗಳ (ಜಾಹೀರಾತು ನಿಷೇಧ ಮತ್ತು ವ್ಯಾಪಾರ ಮತ್ತು ವಾಣಿಜ್ಯ ಉತ್ಪಾದನೆ, ಸರಬರಾಜು ವಿತರಣೆಯ ವಿನಿಮಯ) (ಕರ್ನಾಟಕ ತಿದ್ದುಪಡಿ) ಮಸೂದೆ–2024'ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇದೇ 23 ರಂದು ಅಂಕಿತ ಹಾಕಿದ್ದರು.

ಶುಕ್ರವಾರ ಈ ಸಂಬಂಧ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಿ, ಕಾಯ್ದೆಯನ್ನು ಜಾರಿಗೆ ತರಲಾಗಿದೆ.

21 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಬೀಡಿ– ಸಿಗರೇಟು ಮತ್ತು ತಂಬಾಕಿನ ಉತ್ಪನ್ನಗಳ ಮಾರಾಟವನ್ನು ಈ ಕಾಯ್ದೆ ನಿಷೇಧಿಸುತ್ತದೆ. ಉಲ್ಲಂಘಿಸಿದವರಿಗೆ ₹1,000 ದಂಡ ವಿಧಿಸಬಹುದಾಗಿದೆ.

ಉಪಾಹಾರ ಗೃಹ, ಪಬ್, ಬಾರ್ ಅಥವಾ ರೆಸ್ಟೋರೆಂಟ್‌ಗಳಲ್ಲಿ ಹುಕ್ಕಾ ಸೇವನೆಗೆ ಅವಕಾಶ ನೀಡುವುದನ್ನೂ ಈ ಕಾಯ್ದೆ ನಿಷೇಧಿಸುತ್ತದೆ.

ಈ ನಿಷೇಧವನ್ನು ಉಲ್ಲಂಘಿಸಿದವರಿಗೆ ₹50,000 ದಿಂದ ₹1 ಲಕ್ಷದವರೆಗೆ ದಂಡ ಮತ್ತು ಒಂದು ವರ್ಷದಿಂದ ಮೂರು ವರ್ಷಗಳವರೆಗೆ ಜೈಲುಶಿಕ್ಷೆ ವಿಧಿಸಲು ಕಾಯ್ದೆಯಲ್ಲಿ ಅವಕಾಶವಿದೆ.

ಕರ್ನಾಟಕ ಸರಕಾರ ಆರೋಗ್ಯ ಇಲಾಖೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಛೇರಿ, ಉಡುಪಿ ಜಿಲ್ಲೆ, ಅಜ್ಜರಕಾಡು, ಉಡುಪಿ–576101.
ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳ ಕಚೇರಿ
Ph: 0820-2985429 e-mail: dhoudupi-hfws@karnataka.gov.in
NMHP/DLO/UDP/Manasadhara/19/2025-2026 Dated: 27-05-2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ 2025–26ನೇ ಸಾಲಿನಲ್ಲಿ ಸರ್ಕಾರೇತರ ಸಂಸ್ಥೆಗಳಿಂದ ಮಾನಸಿಕ ಸಮುದಾಯ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಮತ್ತು ಸೇವೆಗಳನ್ನು ನೀಡಲು, ಉಡುಪಿ ಜಿಲ್ಲೆಯ ಅರ್ಹ ಸರ್ಕಾರೇತರ ಸಂಸ್ಥೆಯಿಂದ ಇ-ಟೆಂಡರ್ ಕರೆಯಲಾಗಿದೆ. ಟೆಂಡರ್ ನಮೂನೆಗಳಿಗಾಗಿ, ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು https://kppp.karnataka.gov.in/ ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ. ಟೆಂಡರ್ ಮೊತ್ತ: ರೂ. 18,95,580/-

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿ, ಮಾನಸಿಕ ಸಮುದಾಯ ಆರೋಗ್ಯ ಕೇಂದ್ರ NGO ಆಯ್ಕೆ ಸಮಿತಿ ಉಡುಪಿ ಜಿಲ್ಲೆ.
ವಾಸಾಪ್ರ/ಸ/ಉಡುಪಿ/ಕೆಎಸ್‌ಎಂಸಿಎ/141/25-26 ದಿ: 30.05.2025

ಜಿಲ್ಲಾ ಪಂಚಾಯತ್, ತುಮಕೂರು.
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ
ಕೆ.ಪಿ.ಪಿ ಪೋರ್ಟಲ್ ಟೆಂಡರ್ ಪ್ರಕಟಣೆ ಸಂಖ್ಯೆ:02/2025–26 ದಿನಾಂಕ:19–05–2025

ಕರ್ನಾಟಕ ರಾಜ್ಯಪಾಲರ ಪರವಾಗಿ **ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ** ವ್ಯಾಪ್ತಿಯ ಕಾಮಗಾರಿಗಳಿಗೆ ಕೆ.ಪಿ.ಪಿ ಪೋರ್ಟಲ್ ಟೆಂಡರ್ ಅನ್ನು ಕರೆಯಲಾಗಿದ್ದು, ಕೆ.ಪಿ.ಪಿ ಪೋರ್ಟಲ್ ಟೆಂಡರ್‌ಗಾಗಿ ಕೆ.ಪಿ.ಪಿ ಪೋರ್ಟಲ್ ಟೆಂಡರ್‌ಗಾಗಿ ಅರ್ಹ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಕೆ.ಪಿ.ಪಿ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಅರ್ಜಿಗಳನ್ನು ಸಲ್ಲಿಸಲು ಹಾಗೂ ಭರ್ತಿಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು **ದಿನಾಂಕ: 19–05–2025 ರಿಂದ 05–06–2025** ರಂದು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: **080-25501216, 080-25501227** ರಲ್ಲಿ ಸಂಪರ್ಕಿಸಲು ಹಾಗೂ ವೆಬ್‌ಸೈಟ್ **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ,ಮಧುಗಿರಿ.
DIPR/TUM/RO-34/25-26/Oysters

ಕರ್ನಾಟಕ ಸರಕಾರ (ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2025–26/1050 ದಿನಾಂಕ: 29/05/2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (Call-1 & Call-2)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2024–25 ನೇ ಸಾಲಿನ ಲೆಕ್ಕ ಶಿರ್ಷಿಕೆ 5054–ಜಿಮುರ ಸುಧಾರಣೆ ಅಡಿ 8 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ. 56.00 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 400.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್/ಮರುಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:12–06–2025 ರಂದು (11.00 ಗಂಟೆಗೆ), 2)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:13–06–2025 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:16–06–2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):18–06–2025 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-365/KSMCA/2025-26

ಕರ್ನಾಟಕ ಸರ್ಕಾರ (ನಗರಾಭಿವೃದ್ಧಿ ಇಲಾಖೆ)
ವಿಜಯಪುರ ಮಹಾನಗರಪಾಲಿಕೆ, ವಿಜಯಪುರ
ಕೇಂದ್ರ ಕಚೇರಿ, ಬಾಗಲಕೋಟೆ ರಸ್ತೆ, ಜಲನಗರ–586109
ದೂರವಾಣಿ : 08352–278536 ಸಹಾಯವಾಣಿ : 08352–222474
ಫ್ಯಾಕ್ಸ್ : 08352–278532
E-mail: itstaff_ulb_bijapur@yahoo.co.in
ಸಂ.ಮನಪಾವಿ/ಕೇಂ.ಕ/ಟಿ.ವಿ/2025–26 ದಿನಾಂಕ:00.05.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಆಸಕ್ತ, ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ ಪ್ಲಾಟ್‌ಫಾರಂ ಮೂಲಕ ಟೆಂಡರ್ ದಸ್ತಾವೇಜಿನಲ್ಲಿ ನಿಗದಿಪಡಿಸಿದ ನಿಬಂಧನೆಗೊಳಪಟ್ಟು ಪ್ರಸ್ತಾವನೆಗಳನ್ನು ಆಹ್ವಾನಿಸುತ್ತದೆ. ಆಸಕ್ತರು ತಮ್ಮ ಪ್ರಸ್ತಾವನೆಗಳನ್ನು ನಿಗದಿತ ದಿನಾಂಕದೊಳಗೆ https://kppp.karnataka.gov.in ಪ್ಲಾಟ್‌ಫಾರಂ ಮುಲಕ ಸಲ್ಲಿಸಲು ಕೋರಿದೆ.

1) **ಅನುದಾನ ಶೀರ್ಷಿಕೆ:** ಎಸ್.ಬಿ.ಎಂ–2.0, **ಕಾಮಗಾರಿಯ ಹೆಸರು:** ವಿಜಯಪುರ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 73 ಟಿ.ಪಿ.ಡಿ ಸಾಮರ್ಥ್ಯದ MRF Centre (Material Recovery Facility) DMA/2024-25/OW/WORK_INDENT33078/CALL-2) **ಅಂದಾಜು ಮೊತ್ತ ರೂ. 237.00 ಲಕ್ಷಗಳು. ಕಾಮಗಾರಿ ಪೂರ್ಣಗೊಳಿಸುವ ಅವಧಿ: 06 ತಿಂಗಳು.**

1) ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.06.2025 ರಂದು ಸಾಯಂಕಾಲ 4.00 ಗಂಟೆವರೆಗೆ.
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 25.06.2025 ಸಾಯಂಕಾಲ 4.00 ಗಂಟೆಗೆ
3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 30.06.2025 ಬೆಳಿಗ್ಗೆ 11.00 ಗಂಟೆಗೆ.
4) ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in ಪ್ಲಾಟ್‌ಫಾರಂನಲ್ಲಿ ವೀಕ್ಷಿಸಬಹುದಾಗಿರುತ್ತದೆ/ ಕಛೇರಿ ಸಮಯದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ರವರಲ್ಲಿ ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ವಿಜಯಪುರ ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/97/ಕೆಎಸ್‌ಎಂಸಿಎ/2025–26

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ
3ನೇ ಮಹಡಿ, 'ಎ' ಬ್ಲಾಕ್, ಟಿಟಿಎಂಸಿ ಕಟ್ಟಡ, ಕೆ.ಹೆಚ್.ರೋಡ್, ಶಾಂತಿನಗರ, ಬೆಂಗಳೂರು–560027. ದೂರವಾಣಿ ಸಂಖ್ಯೆ:- 080–2214817
ಫ್ಯಾಕ್ಸ್ ಸಂಖ್ಯೆ:- 080–22216500 ಇ-ಮೇಲ್: 1. controllerstateaccounts@yahoo.com 2. controllerksaad@gmail.com
ಸಂಖ್ಯೆ: ರಾಲೆಪ 02ಪ್ರ ವಿ ವೆ/ವಾ.2024–25 ದಿನಾಂಕ: 30/05/2025

ಪ್ರಸ್ತಾವನೆಗಳಿಗೆ ಆಹ್ವಾನ

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು ನೋಂದಣಿಯಾಗಿರುವ ಸಂಸ್ಥೆಗಳಿಂದ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು (man power service) ಇಚ್ಛಿಸಿದೆ.

ಆಸಕ್ತಿಯುಳ್ಳ ಸಂಸ್ಥೆಗಳು RFP ಯ ಎಲೆಕ್ಟ್ರಾನಿಕ್ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಪ್ರಸ್ತಾವನೆಗಳನ್ನು (PDF ನಮೂನೆಯಲ್ಲಿ) ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪೋರ್ಟಲ್ https://kppp.karnataka.gov.in ನಲ್ಲಿ ಬಿಡ್ದುದಾರರ ಡಿಜಿಟಲ್ ಹಸ್ತಾಕ್ಷರ ಪ್ರಮಾಣ ಪತ್ರ (DSC) ದ ಮೂಲಕ ಅಪ್‌ಲೋಡ್ ಮಾಡುವುದು.

ಭವಿಷ್ಯದಲ್ಲಿ RFPಗೆ ಸಂಬಂಧಿಸಿದ ಯಾವುದೇ ಸೂಚನೆಗಳು/ಮಾಹಿತಿಗಳು https://kppp.karnataka.gov.in ನಲ್ಲಿ ಮಾತ್ರ ಲಭ್ಯವಿರುವುದು.

ಅರ್ಹತಾ ಮಾನದಂಡಗಳು ಹಾಗೂ ನಿಬಂಧನೆಗಳಿಗಾಗಿ RFP ದಾಖಲೆಗಳನ್ನು ಉಲ್ಲೇಖಿಸುವುದು. ತಮ್ಮ ಪ್ರಸ್ತಾವನೆಗಳನ್ನು ದಿನಾಂಕ: 30.06.2025 ಸಂಜೆ 3.00 ಗಂಟೆಯವರೆಗೆ ಸಲ್ಲಿಸಬಹುದು.

ಆರ್ ಎಫ್ ಪಿ ಪ್ರಕಟಣೆ ದಿನಾಂಕ	30.05.2025
ಬಿಡ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	30.06.2025 (3.00 PM)
ಪೂರ್ವ ಬಿಡ್ ಸಭೆ	23.06.2025 (11.00AM)
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	01.07.2025 (4.00 PM)
ವಾಣಿಜ್ಯ ಬಿಡ್	05.07.2025 (4.00 PM)

ಸಹಿ/–
ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/935/ಆಕಾರ್/2025–26

ಆಯುಷ್ ಇಲಾಖೆ
ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಧನ್ವಂತರಿ ರಸ್ತೆ, ಬೆಂಗಳೂರು-560009.
ಅಧಿಸೂಚನೆ ಸಂಖ್ಯೆ: ಆವೈಮ/01/ಹೊ.ಗು/ಮ.ಟೆ/ಸರಬ/2025-26(Call-2) ದಿನಾಂಕ: 29-05-2025

ಮರು ಇ–ಟೆಂಡರ್ ಅಧಿಸೂಚನೆ

ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ & ಆಸ್ಪತ್ರೆ, ಬೆಂಗಳೂರು ಇಲ್ಲಿನ ಕಟ್ಟಡಗಳು ಮತ್ತು ಆವರಣಗಳನ್ನು ಶುಚಿಗೊಳಿಸಲು ಹಾಗೂ ಕಾವಲು ಕಾಯಲು ಅವಶ್ಯಕವಿರುವ ಭದ್ರತಾ / ಸ್ವಚ್ಛತಾ ಮತ್ತು ಇತರೆ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆಯಲ್ಲಿ ಪಡೆಯುವ ಸಲುವಾಗಿ ದರಗುತ್ತಿಗೆ ನಿಗದಿಪಡಿಸುವ ಇ–ಟೆಂಡರ್

ಮರು ಇ–ಟೆಂಡರ್ ಅನುಸೂಚಿಗಳು

ಇ–ಟೆಂಡರ್ ಅಧಿಸೂಚನೆ ದಿನಾಂಕ	: 29–05–2025
ಟೆಂಡರ್ ದಾಖಲೆಗಳು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	: 30–05–2025 ರಿಂದ 13–06–2025 ರವರೆಗೆ ಸಂಜೆ 4.00 ಘಂಟೆಯವರೆಗೆ
ಪ್ರೀ–ಬಿಡ್ ಸಭೆ	: 03–06–2025 ಮಧ್ಯಾಹ್ನ 12.30 ಘಂಟೆಗೆ
ಅಪ್‌ಲೋಡ್ ಆದ ಇ–ಟೆಂಡರ್‌ಗಳನ್ನು ತೆರೆಯುವ ದಿನಾಂಕ	: 16–06–2025 ಸಂಜೆ 4.00 ಘಂಟೆಗೆ
ಟೆಂಡರ್ ದಾಖಲೆ ತೆರೆಯುವ ಸ್ಥಳ	: ಪ್ರಾಚಾರ್ಯರ ಕೊಠಡಿ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಬೆಂಗಳೂರು

ಇ–ಟೆಂಡರ್–ನಿಯಮಗಳು/ನಿಬಂಧನೆಗಳನ್ನು ವೆಬ್‌ಸೈಟ್ https://kppp.karnataka.gov.in ರಲ್ಲಿ ದಿನಾಂಕ: 30–05–2025 ರ ಸಂಜೆ 3.00 ಘಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಸದಸ್ಯ ಕಾರ್ಯದರ್ಶಿಗಳು/ಸಹಾಯಕ ಆಡಳಿತಾಧಿಕಾರಿಗಳು ಟೆಂಡರ್ ಸಮಿತಿ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/934/ಆಕಾರ್/2025–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–02/172/2025–26 ದಿನಾಂಕ : 30.05.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆ.ಐ.ಎ.ಡಿ.ಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ತಾಂತ್ರಿಕ ಕೌಶಲ್ಯತೆಗಳು, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವ ಸಂಪನ್ಮೂಲ ಹೊಂದಿರುವ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು : ಧಾರವಾಡ ಜಿಲ್ಲೆಯ ಧಾರವಾಡ ಕೈಗಾರಿಕಾ ನೋಡ್ ಹಂತ–1 ರಲ್ಲಿ ಹೆಚ್ ಟಿ/ಎಲ್ ಟಿ ಲೈನ್‌ಗಳು ಮತ್ತು ಪರಿವರ್ತಕಗಳ ಸ್ಥಳಾಂತರ ಮತ್ತು ಮರು ನಿರ್ಮಾಣ ಕಾಮಗಾರಿ
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 16.06.2025 ಸಂಜೆ 4.00 ಗಂಟೆಯವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–2, ಕೆಐಎಡಿಬಿ, ಬೆಂಗಳೂರು
DIPR/CP/949/Zen/2025-26

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಕಾರ್ಯದರ್ಶಿಗಳ ಕಾರ್ಯಾಲಯ, ಚಾಮುಂಡಿಬೆಟ್ಟ, ಮೈಸೂರು–570 010.
ದೂರವಾಣಿ ಸಂಖ್ಯೆ :0821–2590027 ಇ–ಮೇಲ್ : eochamunditemple@gmail.com
ಪತ್ರ ಸಂಖ್ಯೆ:ಶ್ರೀಚಾಕ್ಷೇಅಪ್ರಾ(5)ಸಿಆರ್:/2025–26 ದಿನಾಂಕ: 29.05.2025

ಇ–ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ)
ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಚಾಮುಂಡಿಬೆಟ್ಟ, ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಕಛೇರಿಯಿಂದ ಸೂಚಿತ ಅವಧಿಗೆ ಈ ಕೆಳಕಂಡ ವಿವಿಧ ಬಾಬ್ತುಗಳಿಗೆ ಟೆಂಡರ್ ಕರೆಯಲಾಗಿದೆ. ಆಸಕ್ತರು ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ (https://kppp.karnataka.gov.in) ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲೆಯಲ್ಲಿ ತಿಳಿಸಿರುವಂತೆ (Technical qualification criteria)ದ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಈ ಕೆಳಕಂಡಂತೆ ನಿಗದಿಪಡಿಸಿದ ಇ.ಎಂ.ಡಿ.ಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ.ಯು ಟೆಂಡರಿನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 45 ದಿನಗಳ ನಂತರದ ವರೆಗೆ ಮಾನ್ಯತೆ ಇರತಕ್ಕದ್ದು, ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಕ್ರ. ಸಂ.	ಟೆಂಡರ್ ಹೆಸರು	ಅಂದಾಜು ಮೊತ್ತ ರೂ.ಗಳಲ್ಲಿ	ಇ.ಎಂ.ಡಿ ಮೊತ್ತ ರೂ.ಗಳಲ್ಲಿ
1.	ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಾಲಯಗಳಿಗೆ, ದಾಸೋಹ ಪ್ರಸಾದ ತಯಾರಿಕೆಗೆ ಮತ್ತು ಲಾಡು ಪ್ರಸಾದ ತಯಾರಿಕೆಗೆ ಬೇಕಾದ ಅಡುಗೆ ಎಣ್ಣೆ (15 ಕೆ.ಜಿ ಟಿನ್) ಸರಬರಾಜು ಮಾಡುವ ಗುತ್ತಿಗೆ ಹಕ್ಕು (ಒಂದು ವರ್ಷದ ಅವಧಿಗೆ)	1,61,70,000	3,23,400–00
2.	ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಹಾಗೂ ಇತರೆ ಸ್ಥಳಗಳಲ್ಲಿ 69 ಭದ್ರತಾ ಸಿಬ್ಬಂದಿಗಳು ಮತ್ತು 1 ಸೂಪರ್ ವೈಸರ್‌ನ್ನು ಹೊರಗುತ್ತಿಗೆಯಲ್ಲಿ ಒದಗಿಸುವ ಗುತ್ತಿಗೆ ಹಕ್ಕು. (ಒಂದು ವರ್ಷದ ಅವಧಿಗೆ)	2,49,00,000	4,98,000–00
3.	ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಹೊರಾವರಣ, ಇತ್ಯಾದಿ ಸ್ಥಳಗಳ ಪ್ರತಿ ದಿನದ ಸ್ವಚ್ಛತೆ ಕೆಲಸಗಳನ್ನು ಹೊರಗುತ್ತಿಗೆಯಲ್ಲಿ ನಿರ್ವಹಣೆ ಮಾಡುವ ಮತ್ತು ವಿವಿಧ ಮಾನವ ಸಂಪನ್ಮೂಲ ಒದಗಿಸುವ ಗುತ್ತಿಗೆ(ಒಂದು ವರ್ಷದ ಅವಧಿಗೆ) (65 ಜನ)	2,03,00,000	4,06,000–00

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.

ಕ್ರ. ಸಂ.	ವಿವರ	ದಿನಾಂಕಗಳು	ಸಮಯ
1.	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವುದು	29.05.2025	ರ ಸಂಜೆ 5–00 ಗಂಟೆಯ ನಂತರ
2.	ಪ್ರಿ ಬಿಡ್ಡಿಂಗ್ ಮೀಟಿಂಗ್ ಕಾರ್ಯದರ್ಶಿಗಳ ಕಾರ್ಯಾಲಯ, ಚಾಮುಂಡಿಬೆಟ್ಟದಲ್ಲಿ	18.06.2025	ಮಧ್ಯಾಹ್ನ 12–00 ಗಂಟೆಗೆ
3.	ಟೆಂಡರ್ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	30.06.2025	ರ ಸಂಜೆ 5–00 ಗಂಟೆ ವರೆಗೆ
4.	ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ	01.07.2025	ರ ಬೆಳಿಗ್ಗೆ 11.00 ಗಂಟೆ ನಂತರ
5.	ಹಣಕಾಸಿನ ಟೆಂಡರ್‌ನ್ನು ತೆರೆಯುವ ದಿನಾಂಕ	07.07.2025	ರ ಬೆಳಿಗ್ಗೆ 11.00 ಗಂಟೆ ನಂತರ

ಸಹಿ/–
ಕಾರ್ಯದರ್ಶಿ
ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಚಾಮುಂಡಿಬೆಟ್ಟ.
DIPR/MYS/KAVITA/277/2025-26

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ವಿಶ್ವೇಶ್ವರಯ್ಯ ನಾಲಾ ವಿಭಾಗ, ಮಂಡ್ಯ
ದೂ : 08232–225046,
ಇ–ಮೇಲ್ : vcdnmndya@gmail.com

ಟೆಂಡರ್ ಪ್ರಕಟಣೆ ಸಂಖ್ಯೆ :02/2025–26 ದಿ:26.05.2025
ದ್ವಿ–ಲಕೋಟೆ ಪದ್ಧತಿ

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ ಬೆಂಗಳೂರು ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಕಾಮಗಾರಿಗೆ ಐಟಂವಾರು ದರದ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ–04, ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ. 40.05 ಲಕ್ಷಗಳಿಂದ ಗರಿಷ್ಠ ಮೊತ್ತ ರೂ. 79.78 ಲಕ್ಷಗಳು, ಕೆಲಸ ಪೂರ್ಣಗೊಳಿಸಲು ನಿಗಧಿ ಪಡಿಸಿರುವ ಅವಧಿ 180 ದಿನಗಳು (ಮಳೆಗಾಲ ಸೇರಿ) ಇ.ಎಂ.ಡಿ ಶುಲ್ಕವನ್ನು ಟೆಂಡರಿಗಿಟ್ಟ ಮೊತ್ತಕ್ಕೆ ಶೇ 2.0% ರಷ್ಟು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು, Date of access in e-portal : As per e-portal, ಆನ್ ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: As per e-portal, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: As per e-portal, ಆರ್ಥಿಕ ಬಿಡ್ ತೆರೆಯುವ ದಿನಾಂಕ : As per e-portal. ಹೆಚ್ಚಿನ ವಿವರಗಳಿಗೆ kppp.karnataka.gov.in ನಲ್ಲಿ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ 08232 225046 ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ(ನಿ), ವಿ.ಸಿ.ವಿಭಾಗ, ಮಂಡ್ಯ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/132/2025–26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಾಲಯ ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿ(ನಿ), ಶಶಾಕಾ,ಪಾ & ಪೋ, ವಿಭಾಗ, ಖಾನಾಪೂರ
ಇ–ಮೇಲ್: kbjnleesbc2@gmail.com
ಸಂ:ಕೃಭಾಜನಿನಿ/ಶಶಾಕಾ/ಪಾ&ಪೋ/ಖಾನಾಪೂರ/ಟೆಂಡರ/ಬಿ'ಪ್ಲ್ಯಾಂಕ್/ಪಿಬಿ/2025–26/47
ದಿನಾಂಕ:28.05.2025

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ ಶ.ಶಾ.ಕಾ ಪಾ&ಪೋ ವಿಭಾಗ, ಖಾನಾಪೂರ ರವರು ಇ–ಟೆಂಡರಿಂಗ್ ಮುಖಾಂತರ ಶೇಕಡಾವಾರು ಎರಡು ಕಾಮಗಾರಿಗಳಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅಹ್ವಾನಿಸಲಾಗಿದ್ದು, ಕಾಮಗಾರಿಗಳ ವಿವರಗಳು ಈ ಕೆಳಗಿನಂತಿರುತ್ತವೆ;

1) ಕಾಮಗಾರಿಗಳ ವಿವರ: ಕೃಭಾಜನಿನಿ, ಶಶಾಕಾ ಪಾ&ಪೋ ವಿಭಾಗ, ಖಾನಾಪೂರ ಅಡಿಯಲ್ಲಿ ಬರುವ 2025–26 ನೇ ಸಾಲಿನ ಅನುದಾನ ಕಾಮಗಾರಿಗಳು. 2) ಕಾಮಗಾರಿಗಳ ಇಂಡೆಂಟ್ ಸಂಖ್ಯೆ: ಕಾಮಗಾರಿ ಇಂಡೆಂಟ್ ಸಂ.1565 & 1567. 3) ಟೆಂಡರಗೆ ಇಟ್ಟ ಮೊತ್ತ: ಇಂಡೆಂಟ್ ಸಂ. 1565: ಮೊತ್ತ ರೂ. 8600.32 ಲಕ್ಷಗಳು. ಇಂಡೆಂಟ್ ಸಂ. 1567: ಮೊತ್ತ ರೂ. 8888.81 ಲಕ್ಷಗಳು. 4) ಟೆಂಡರಗೆ ಇಟ್ಟ ಇ.ಎಂ.ಡಿ ಮೊತ್ತ ಇಂಡೆಂಟ್ ಸಂ. 1565: ಮೊತ್ತ ರೂ. 86.00 ಲಕ್ಷಗಳು. ಇಂಡೆಂಟ್ ಸಂ. 1567: ಮೊತ್ತ ರೂ. 88.89 ಲಕ್ಷಗಳು. 5) ಇ–ಟೆಂಡರಿಂಗ ಲಭ್ಯವಾಗುವ ಅವಧಿ ದಿನಾಂಕ: 29.05.2025 ರಿಂದ ದಿನಾಂಕ: 30.06.2025 ಸಾಯಂಕಾಲ 04.30 ಘಂಟೆ ವರೆಗೆ. 6) ಇ–ಟೆಂಡರಿಂಗ ಕೊನೆಯ ದಿನಾಂಕ: 30.06.2025 ಸಾಯಂಕಾಲ 04.30 ಘಂಟೆ ವರೆಗೆ. 7) ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 02.07.2025 ಮುಂಜಾನೆ 11:30 ಗಂಟೆಗೆ, ಸದರಿ ವಿಭಾಗ ಕಛೇರಿಯಲ್ಲಿ 8) ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: 07.07.2025 ಮುಂಜಾನೆ 11:30 ಗಂಟೆಗೆ ಅಥವಾ ತಾಂತ್ರಿಕ ಟೆಂಡರ್ ಅನುಮೋದನೆಗೊಂಡ ನಂತರ 9) ಸಂಪರ್ಕಿಸಬೇಕಾದ ಕಛೇರಿ ವಿಳಾಸ: ಹೆಚ್ಚಿನ ಮಾಹಿತಿಗಾಗಿ ವೆಬಸೈಟ್ www.kppp.karnataka.gov.in ನಲ್ಲಿ ನೋಡಬಹುದು ಹಾಗೂ ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ವಾ.ಸಾ.ಸಂ.ಇ/ಯಾದಗಿರಿ/83/ಕೆ.ಎಸ್.ಎಂ.ಸಿ.ಎ/2025–26 ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿ(ನಿ), ಶಶಾಕಾ ಪಾ&ಪೋ ವಿಭಾಗ ಖಾನಾಪೂರ

THE FEDERAL BANK LIMITED
Regd. Office: Aluva, Kerala.
ZONAL OFFICE: 2nd Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/Online Auction/2025-26 **PUBLIC NOTICE GOLD AUCTION** 30/05/2025

Notice is hereby given to the public in general and the account holders in particular that e-auction of the pledged gold ornaments in the below mentioned account/s will be conducted by Federal Bank Ltd, on 17-06-2025 through online portal, https://gold.samil.in Interested buyers may log on to the auction portal or contact the Bank at contact@federalbank.co.in for further information. In case e-auction is not materialised for any reason on the date mentioned above, with respect any or all items of the pledged ornaments, Bank shall be conducting private sale of the items on any subsequent date/s without further notice.

Br. Bangalore/Banashankari: Sudhama, No.299, 100ft.Ring Road, 4th Phase, 7th Block, Banashankari 3rd Stage, Bangalore- 560 085 :- 17816800042582,17816800042731,17816800052698,17816800063554,17816800069148.
Br. Bangalore/Banaswadi : No 13, Banaswadi Main Road, Bangalore, Karnataka-560 044 :- 14716100301345,14716800077849,14716800080538,14716800080769,14716800081692,14716800082906,14716800083086,14716800083235.
Br. Bangalore/Raja Rajeshwari Nagar: Nitai Gaur Complex, No: 692, Jawaharlal Nehru Road, BEML 5th stage, Rajarajeswari Nagar, Bengaluru, Karnataka- 560 098 :- 23456800006956,23456800010404.
Br. Bangalore/Basavanagudi: 20/1, Ground Floor, Shri Mallikarjuna Nilaya, Prof.B S Madhava Rao Circle, Basavanagudi, Bangalore, Karnataka-560 004, Ph No.08026571530:- 13186800032825.
Br. Bangalore/HSR Layout : No.19, 15th Cross, 15th Main, Sector IV, H S R Layout, Bangalore- 560 102:- 17696800082337,17696800083210,17696800084234,17696800085629,17696800087104,17696800087229,17696800088888,17696800090272,17696800098010.
Br. Bangalore/Indiranagar: 315/1, 100 Feet Road, Opp Post Office, Indiranagar, Bangalore, Karnataka- 560 038 :- 15356800010281.
Br. Bangalore/Jalahalli: 17/1, Savithri, S M Road, Jalahalli West, Bangalore, Karnataka- 560 015 :- 15826100644179,15826800059256,15826800060551,15826800061369,15826800061534.
Br. Mysore/jayalakshmipuram: No.D3, Leo Madhurya, Adi Pampa Road, Vanivilas Mohalla Post, Mysore, Karnataka-570 002 :- 16896800027180,16896800031323,16896800031422,16896800032396,16896800032453,16896800032685,16896800033089,16896800033337,16896800035613.
Br. Bangalore/Jayanagar: K M Plaza, Kanakapura Main Road, 30th Cross, 7th Block, Jayanagar, Bangalore- 560 082 :- 13876800006338.
Br. Bangalore/J P Nagar : No.13, 15th Cross, 100ft Ring Road, 6th Phase, J P Nagar, Bangalore, Karnataka- 560078, Ph. 080 26549292 :- 18276200016984,18276800104214,18276800122695,18276800122810,18276800123495,18276800123578,18276800124535,18276800126415,18276800127074, 18276800127371,18276800127702,18276800127850,18276800129179,18276800133841,18276800145829.
Br. Bangalore/Kengeri: Building No 737, Kommaghatta Main Road, Kengeri Satellite Town, Bangalore, Karnataka- 560 060 :- 19646800004169.
Br. Bangalore/kodathi gate: St. Patrick Academy Campus, Sarjapur Road, Carmelaram P O, Bangalore- 560 035 :- 21716800002327.
Br. Bangalore/Krishnarajapuram: VSR Complex, Old Madras Road, Krishnarajapuram, Bangalore, Karnataka-560 036 Ph. 080-25619070 :- 15616800022549,15616800023133.
Br. Mysore: The Variety Mansion, Bangalore Nilgiri Road, Lashkar Mohalia, Lashkar Mohalla, Mysore- 570 001. Ph no. 08212520055 :- 12816800022811,12816800023710.
Br. Bangalore/Rajajinagar : No. 60/60, Raj Chambers, Dr. Rajkumar Road, 2nd Block, Rajaji Nagar, Bangalore Urban, Karnataka-560010:- 13346800065775,13346800075097,13346800075998,13346800076277,13346800076665,13346800081186.
Br. Bangalore/R T Nagar: No.20, 1st Main Road, 108 'B' Bus Station, Ganga Nagar, R T Nagar P O, Bangalore, Karnataka- 560 032:- 14726800056354,14726800056701,14726800056909,14726800058533,14726800059051,14726800065587,14726800065942,14726800066296,14726800066304, 14726800066635,14726800066643,14726800066767.
Br. Bangalore/Taverekere: No.104/1, Ground Floor, Chocolate Factory Road, 1st Main, Taverekere, Bangalore-560 029:- 16596800003682.
Br. Bangalore/Thirupalya: Near Electronic City, Hebgodi Post, Tirupalya, Bangalore Urban- 560 099 :- 21126800007815,21126800007849.
Br. Bangalore/Vidyaranyapura: Ground Floor, No. 1123, Khata No. 1066/2744/1123, 6th Block, HMT Layout, Vidyaranyapura, Bangalore, Karnataka- 560 097 Ph: 9544597221 :- 23966800002672.
Br. Bangalore/Vijayanagar: Ground Floor of TRS Arcade, #3, 1st main road, Income Tax Layout, opposite to AM Hospital, Chandra Layout, Bangalore Urban, Karnataka- 560 0400 :- 16436100360963,16436100361425,16436100361649,16436800088872,16436800101808,16436800101907, 16436800102111,16436800104679,16436800107367,16436800117580,16436800117952.
Br. Bangalore/Visweswaraya layout: Site No. 2, 4th Block, Visweswaraya layout, Manganahalli, Ullal Upanagara P.O., Bangalore- 560 110 :- 21676800010979,21676800011597,21676800012108,21676800013551,21676800013569.
Br. Bangalore/Wipro Park Koramangala: Annapoorna Complex, Opp. Wipro Park, No 6,7th Main, 80 Feet Road, 3rd Block ,Koramangala PO, Bangalore Urban, Karnataka- 560 034 :- 21996100038433,21996800027652,21996800027694.

Bangalore 30-05-2025 Senior Vice President & Zonal Head

ಜಲಾನಯನ ಪ್ರದೇಶಗಳಲ್ಲಿ ಹೆಚ್ಚಿದ ಮಳೆ ● ತುಂಗಭದ್ರಾ ಅಣೆಕಟ್ಟು– 20 ದಿನದಲ್ಲಿ 19ನೇ ಕ್ರಸ್ಟ್‌ಗೇಟ್ ಅಳವಡಿಕೆ ?

ಪ್ರಮುಖ ಜಲಾಶಯಗಳಿಗೆ ಹೆಚ್ಚಿದ ಒಳಹರಿವು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯಾದ್ಯಂತ ಗುರುವಾರ ರಾತ್ರಿ ಪೂರ್ತಿ ಮಳೆಯಾಗಿದ್ದು, ಶುಕ್ರವಾರ ಜಿಟಿಜಿಟಿ ಮಳೆಯಾಯಿತು.

ಈ ವರ್ಷ ಇದೇ ಮೊದಲ ಬಾರಿಗೆ ಹಾರಂಗಿ ಜಲಾಶಯದ ಒಳ ಹರಿವು 5 ಸಾವಿರ ಕ್ಯೂಸೆಕ್ ದಾಟಿದೆ. ಶುಕ್ರವಾರ 7,204 ಕ್ಯೂಸೆಕ್‌ನಷ್ಟು ನೀರು ಜಲಾಶಯಕ್ಕೆ ಹರಿದು ಬಂದಿದ್ದು, ಒಂದೇ ದಿನಕ್ಕೆ 3 ಅಡಿಗಳಷ್ಟು ನೀರು ಸಂಗ್ರಹವಾಯಿತು. 2,859 ಅಡಿ ಗರಿಷ್ಠ ಮಟ್ಟದ ಈ ಜಲಾಶಯದಲ್ಲಿ ಸದ್ಯ 2,846.37 ಅಡಿಗಳಷ್ಟು ನೀರಿದೆ.

6 ದಿನ ನಿರಂತರ ಮಳೆಯಿಂದ ಶಿಥಿಲ ಗೋಡೆಗಳು ಬೀಳುತ್ತಿವೆ. ಅಂಥ ಮನೆಗಳ ನಿವಾಸಿಗಳು ಆತಂಕ ಗೊಂಡಿದ್ದಾರೆ. ವಿದ್ಯುತ್ ವ್ಯತ್ಯಯ ನಿರಂತರವಾಗಿದೆ. ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿಯಲ್ಲಿ 10 ಸೆಂ.ಮೀ ಹಾಗೂ ಭಾಗಮಂಡಲದಲ್ಲಿ 8 ಸೆಂ.ಮೀನಷ್ಟು ಭಾರಿ ಮಳೆಯಾಗಿದೆ.

ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಗುರುವಾರ ತಡರಾತ್ರಿಯಿಂದ ಶುಕ್ರವಾರ ಮುಂಜಾನೆವರೆಗೆ ಜೋರು ಮಳೆಬಿದ್ದಿತು.

ಕಬಿನಿ ಭರ್ತಿಗೆ ನಾಲ್ಕಡಿ ಬಾಕಿ: ಜಲಾನಯನ ಪ್ರದೇಶದಲ್ಲಿ ಮಳೆಯಾಗುತ್ತಿರುವುದರಿಂದ ಎಚ್.ಡಿ.ಕೋಟೆ ತಾಲ್ಲೂಕಿನ ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯ ಭರ್ತಿಗೆ ಕೆಲವೇ ಅಡಿ ಬಾಕಿ ಇದೆ.

ಜಲಾಶಯ ಮಟ್ಟವು 2280 ಅಡಿ (ಗರಿಷ್ಠ ಮಟ್ಟ 2,284 ಅಡಿ) ಇದ್ದು, ಒಳಹರಿವು ಶುಕ್ರವಾರ ಸಂಜೆ 17ಸಾವಿರ ಕ್ಯೂಸೆಕ್ ಇತ್ತು. 19.52 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯದ ಒಡಲಿನಲ್ಲಿ 17 ಟಿಎಂಸಿ ಅಡಿ ಸಂಗ್ರಹವಾಗಿದೆ.



ಕೊಡಗಿನ ಇರ್ಪು ಜಲಪಾತವು ಶುಕ್ರವಾರ ಹಾಲ್ನೊರೆಯಂತೆ ಧುಮ್ಮಿಕ್ಕುತ್ತಿದೆ

ತುಂಗಭದ್ರಾ ಒಳಹರಿವು 15 ಸಾವಿರ ಕ್ಯೂಸೆಕ್‌ಗೆ ಏರಿಕೆ

ಹೊಸಪೇಟೆ (ವಿಜಯನಗರ): ಜಿಲ್ಲೆಯಲ್ಲಿ ಮಳೆ ಅಷ್ಟಾಗಿ ಇಲ್ಲದಿದ್ದರೂ, ತುಂಗಾ ಜಲಾಶಯದಿಂದ ಅಧಿಕ ಪ್ರಮಾಣದ ನೀರನ್ನು ನದಿಗೆ ಹರಿಸಲಾಗುತ್ತಿದೆ. ಇದರಿಂದ ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣ 15,778 ಕ್ಯೂಸೆಕ್‌ಗೆ ಏರಿಕೆಯಾಗಿದೆ.

‘ಸದ್ಯ ಜಲಾಶಯದಲ್ಲಿ 13.67 ಟಿಎಂಸಿ ಅಡಿ ನೀರಿದೆ. ತುಂಗಭದ್ರಾ ಅಣೆಕಟ್ಟೆಯ 19ನೇ ಕ್ರಸ್ಟ್‌ಗೇಟ್ ಸಿದ್ಧಪಡಿಸುವ ಕೆಲಸ ಬೇರೆ ಕಡೆ ಆರಂಭವಾಗಿದೆ. 20 ದಿನದೊಳಗೆ ಗೇಟ್ ಅಳವಡಿಸುವ ನಿರೀಕ್ಷೆ ಇದೆ’ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

‘105.78 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ 40 ಟಿಎಂಸಿ ಅಡಿ ನೀರು ಸಂಗ್ರಹವಾಗುವವರೆಗೆ ಗೇಟ್ ಕೆಲಸ ಮಾಡಬಹುದು. ಬಳಿಕ ಸಾಧ್ಯವಿಲ್ಲ. ಈ ಬಾರಿ ಬೇಗನೆ ಮುಂಗಾರು ಆರಂಭವಾಗಿರುವ ಕಾರಣ ಜೂನ್ ತಿಂಗಳ ಅಂತ್ಯದ ವೇಳೆಗೆ 40 ಟಿಎಂಸಿ ಅಡಿಗಿಂತ ಅಧಿಕ ನೀರು ಸಂಗ್ರಹವಾಗುವ ಸಾಧ್ಯತೆ ಇದೆ. ಅಣೆಕಟ್ಟೆಯ ಇತರ 32 ಗೇಟ್‌ಗಳನ್ನು ಬದಲಿಸುವ ಕಾರ್ಯ ಮುಂದಿನ ವರ್ಷ ನಡೆಯಬಹುದು ಎಂದು ಹೇಳಲಾಗುತ್ತಿದೆ.

100 ಅಡಿಗೆ ತಲುಪಿದ ಕೆಆರ್‌ಎಸ್

80 ವರ್ಷದಲ್ಲಿ ಮೇನಲ್ಲೇ 4ನೇ ಬಾರಿಗೆ ಅತ್ಯಧಿಕ ನೀರು

● ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಜಲಾಶಯವು ಕಳೆದ 80 ವರ್ಷಗಳಲ್ಲಿ (1946–2025) ಮೇ ತಿಂಗಳಲ್ಲೇ 4ನೇ ಬಾರಿಗೆ 100 ಅಡಿ ತಲುಪಿದೆ.

ಸಾಮಾನ್ಯವಾಗಿ ಜೂನ್ ಅಂತ್ಯದಿಂದ ಜುಲೈ ಅಂತ್ಯದ ನಡುವಿನ ಅವಧಿಯಲ್ಲಿ ಕೆಆರ್‌ಎಸ್ ಡ್ಯಾಂ ನೀರಿನ ಮಟ್ಟ 100 ಅಡಿಗೆ ಏರಿಕೆಯಾಗುತ್ತಿತ್ತು. ಈ ಬಾರಿ ಮೇ 30ರಂದೇ ದಾಖಲೆ ಮಟ್ಟದ ನೀರು ಸಂಗ್ರಹವಾಗಿದೆ. ಮೊದಲ ಬಾರಿಗೆ 1954ರಲ್ಲಿ ಮೇ 22ರಂದು, 1961ರಲ್ಲಿ ಮೇ 28 ರಂದು, 2022ರಲ್ಲಿ ಮೇ 11ರಂದು ನೀರಿನ ಮಟ್ಟ ನೂರು ಅಡಿ ಮುಟ್ಟಿತ್ತು.

ನಿರಂತರ ಮಳೆ: ಕೊಡಗು ಜಿಲ್ಲೆಯ ಭಾಗಮಂಡಲ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಒಂದು ವಾರದಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಕೆ.ಆರ್.ಎಸ್. ಜಲಾಶಯಕ್ಕೆ ಒಳ ಹರಿವು ಹೆಚ್ಚಾಗಿದೆ. ಗುರುವಾರ 22,788 ಕ್ಯೂಸೆಕ್ ಮತ್ತು ಶುಕ್ರವಾರ 19,448 ಕ್ಯೂಸೆಕ್ ಒಳಹರಿವು ಇದ್ದು, ಹೊರಹರಿವು 670 ಕ್ಯೂಸೆಕ್ ಇದೆ.

ಜಲಾಶಯದ ಗರಿಷ್ಠ ಮಟ್ಟ 124.80 ಅಡಿ ಇದ್ದು, 49.452 ಟಿಎಂಸಿ ಅಡಿ ನೀರಿನ ಸಾಮರ್ಥ್ಯ ಹೊಂದಿದೆ. ಶುಕ್ರವಾರ ಜಲಾಶಯದಲ್ಲಿ 22.888 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. ಜಲಾಶಯ ಭರ್ತಿಯಾಗಲು ಇನ್ನೂ 27 ಟಿಎಂಸಿ ಅಡಿ ನೀರು ಹರಿದು ಬರಬೇಕಿದೆ. 8 ಟಿ.ಎಂ.ಸಿ ಅಡಿ ನೀರನ್ನು ‘ಡೆಡ್ ಸ್ಟೋರೇಜ್’ ಎಂದು ಪರಿಗಣಿಸಲಾಗುತ್ತದೆ. ಉಳಿದ ನೀರನ್ನು ಮಾತ್ರ ಕುಡಿಯಲು ಮತ್ತು ಕೃಷಿ ಚಟುವಟಿಕೆಗೆ ಬಳಸಬಹುದು.

ಒಂದೇ ದಿನ 4 ಅಡಿ ನೀರು: ಕಾವೇರಿ ಕೊಳ್ಳದಲ್ಲಿ ಮಳೆ ಸುರಿದ ಪರಿಣಾಮ ಜಲಾಶಯಕ್ಕೆ ಮಂಗಳವಾರ ಒಂದೇ ದಿನದಲ್ಲಿ 4 ಅಡಿ ನೀರು ಹರಿದು ಬಂದಿತ್ತು. ಕಳೆದ 4 ದಿನಗಳಿಂದ ನಿತ್ಯ ಸರಾಸರಿ 20 ಸಾವಿರ ಕ್ಯೂಸೆಕ್ ನೀರು ಹರಿದು ಬರುತ್ತಿದೆ.



ಕೆಆರ್‌ಎಸ್ ಅಣೆಕಟ್ಟೆಯ ನೀರಿನ ಮಟ್ಟ ಶುಕ್ರವಾರ 100 ಅಡಿ ತಲುಪಿದೆ – ಚಿತ್ರ/ಅನೂಪ್ ರಾಘ ಟಿ.

ಕೆಆರ್‌ಎಸ್ ಅಣೆಕಟ್ಟೆ 90 ವರ್ಷಗಳಲ್ಲಿ 2024ರಲ್ಲಿ ಮೊದಲ ಬಾರಿಗೆ 154 ದಿನ ಅಣೆಕಟ್ಟೆ ಭರ್ತಿಯಾಗಿತ್ತು. ಈ ವರ್ಷ ಮೇ ತಿಂಗಳಲ್ಲೇ 100 ಅಡಿ ನೀರು ಬಂದಿದೆ

ಜಯಂತ್ ವಿ., ಕಾರ್ಯಪಾಲಕ ಎಂಜಿನಿಯರ್, ಕಾವೇರಿ ನೀರಾವರಿ ನಿಗಮ

10 ವರ್ಷಗಳಲ್ಲಿ ಕೆಆರ್‌ಎಸ್ ಡ್ಯಾಂ ನೀರಿನಮಟ್ಟ 100 ಅಡಿ ತಲುಪಿದ ವಿವರ

ದಿನಾಂಕ	ನೀರಿನ ಮಟ್ಟ
30 ಮೇ 2025	100.10
5 ಜುಲೈ 2024	100.00
25 ಜುಲೈ 2023	100.00
11 ಮೇ 2022	100.00
21 ಜುಲೈ 2021	100.76
8 ಜುಲೈ 2020	100.33
10 ಆಗಸ್ಟ್ 2019	108.50
17 ಜೂನ್ 2018	100.75
4 ಸೆಪ್ಟೆಂಬರ್ 2017	100.10
28 ಜುಲೈ 2016	99.65
28 ಜೂನ್ 2015	101.25

ಸುದ್ದಿ 2 ನಿಮಿಷ

ವಿದೇಶಕ್ಕೆ ತೆರಳಲು ನಟ ದರ್ಶನ್‌ಗೆ ನ್ಯಾಯಾಲಯ ಅವಕಾಶ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಷರತ್ತುಬದ್ಧ ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆ ಆಗಿರುವ ನಟ ದರ್ಶನ್ ಅವರಿಗೆ ವಿದೇಶಕ್ಕೆ ತೆರಳಲು ನ್ಯಾಯಾಲಯ ಅನುಮತಿ ನೀಡಿದೆ.

‘ಡೆವಿಲ್’ ಚಿತ್ರದ ಚಿತ್ರೀಕರಣಕ್ಕಾಗಿ ಜೂನ್ 1ರಿಂದ 25ರವರೆಗೆ ದುಬೈ ಹಾಗೂ ಯುರೋಪ್ ದೇಶಗಳಿಗೆ ತೆರಳಲು ಅನುಮತಿ ನೀಡುವಂತೆ ಕೋರಿ ದರ್ಶನ್ ಅವರು 57ನೇ ಸಿಸಿಎಚ್ ನ್ಯಾಯಾಲಯಕ್ಕೆ ಇತ್ತೀಚೆಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ಸಂಬಂಧ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿತ್ತು.

ಪ್ರಕರಣದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ಆಕ್ಷೇಪ ವ್ಯಕ್ತಪಡಿಸಿ, ಕೊಲೆ ಪ್ರಕರಣದಲ್ಲಿ ದರ್ಶನ್ ಅವರು ಎರಡನೇ ಆರೋಪಿ. ದರ್ಶನ್ ಅವರಿಗೆ ವಿದೇಶಕ್ಕೆ ತೆರಳಲು ಅನುಮತಿ ನೀಡಿದರೆ ವಾಪಸ್ ಬರುವ ಬಗ್ಗೆ ಸಂಶಯವಿದೆ ಎಂದು ವಾದಿಸಿದ್ದರು.

ವಾದ– ಪ್ರತಿವಾದ ಆಲಿಸಿದ ನ್ಯಾಯಾಲಯವು ಆದೇಶ ಕಾಯ್ದಿರಿಸಿ, ಮೇ 30ರಂದು ಪ್ರಕಟಿಸುವುದಾಗಿ ಆದೇಶಿಸಿತ್ತು.

‘ಜಾಮೀನು ಮಂಜೂರು ಮಾಡುವ ಸಂದರ್ಭದಲ್ಲಿ ಕೆಲವು ಷರತ್ತು ವಿಧಿಸಿತ್ತು. ಬೆಂಗಳೂರು ಬಿಟ್ಟು ಬಿಟ್ಟು ತೆರಳುವಂತಿಲ್ಲ ಎಂದು ನ್ಯಾಯಾಲಯವು ಹೇಳಿತ್ತು. ಅದಾದ ಮೇಲೆ ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಲ್ಲಿ ಸಿನಿಮಾ ಚಿತ್ರೀಕರಣಕ್ಕೆ ತೆರಳಲು ಅವಕಾಶ ನೀಡಿ ಷರತ್ತು ಸಡಿಲಿಸಿತ್ತು. ಇದೀಗ ವಿದೇಶಕ್ಕೆ ತೆರಳಲು ಷರತ್ತು ವಿಧಿಸಿ ಅವಕಾಶ ನೀಡಿದೆ’ ಎಂದು ದರ್ಶನ್ ಪರ ವಕೀಲರು ತಿಳಿಸಿದ್ದಾರೆ.

ಒಂದೇ ತಾಸಿನಲ್ಲಿ ಫಲಿತಾಂಶ ನೀಡಿದ ವಿಟಿಯು

ಬೆಳಗಾವಿ: ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು (ವಿಟಿಯು) ಅಂತಿಮ ಸೆಮಿಸ್ಟರ್ ಬಿಇ, ಬಿ.ಟೆಕ್, ಬಿ.ಪ್ಲಾನ್, ಬಿ.ಆರ್ಕ್, ಬಿ.ಎಸ್.ಸಿ (ಆನರ್ಸ್) ಪರೀಕ್ಷೆಯ ಫಲಿತಾಂಶಗಳನ್ನು ಪರೀಕ್ಷೆ ಮುಗಿದ ಒಂದೇ ಗಂಟೆಯೊಳಗೆ ಪ್ರಕಟಿಸಿದೆ.

‘ಮೇ 30ರಂದು ಸಂಜೆ 5.30ಕ್ಕೆ ಪರೀಕ್ಷೆ ಮುಗಿದಿದ್ದು, 6.30ಕ್ಕೆ ಫಲಿತಾಂಶ ಪ್ರಕಟಿಸಲಾಗಿದೆ. ಈ ಹಿಂದೆ ಮೂರು ತಾಸಿನ ಒಳಗೇ ಫಲಿತಾಂಶ ಪ್ರಕಟಿಸುವ ಮೂಲಕ ವಿಟಿಯು ಸಾಧನೆ ತೋರಿತ್ತು. ಈಗ ಅದನ್ನು ಒಂದು ತಾಸಿನೊಳಗೇ ಸಾಧ್ಯಗೊಳಿಸಿದೆ. ಶುಕ್ರವಾರ ಅಂತಿಮ ಸೆಮಿಸ್ಟರ್‌ನ 50,321 ವಿದ್ಯಾರ್ಥಿಗಳು ವಾಟ್ಸ್‌ಆ್ಯಪ್‌ನಲ್ಲಿ ಫಲಿತಾಂಶ ಪಡೆದಿದ್ದಾರೆ’ ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್. ವಿದ್ಯಾಶಂಕರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘2019ರಲ್ಲಿ 43,662 ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವನ್ನು ಎರಡು ದಿನಗಳ ಒಳಗಾಗಿ ನೀಡಲಾಗಿತ್ತು. 2020ರಿಂದ ಮೂರು ತಾಸಿನೊಳಗೆ ಫಲಿತಾಂಶ ನೀಡಲಾಗಿತ್ತು. ಈ ಸಮಯವನ್ನು ಮತ್ತೂ ಕಡಿಮೆ ಮಾಡಲಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಉದ್ಯೋಗ ಹುಡುಕಾಟ ಮತ್ತು ಮುಂದಿನ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಪ್ರಯೋಜನವಾಗುತ್ತದೆ. ಮೇ 31ರಿಂದಲೇ ವಿದ್ಯಾರ್ಥಿಗಳು ತಾತ್ಕಾಲಿಕ ಪದವಿ ಪ್ರಮಾಣ ಪತ್ರಗಳಿಗೆ (ಪಿಡಿಸಿ) ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು’ ಎಂದೂ ಅವರು ತಿಳಿಸಿದ್ದಾರೆ.

ಮಕ್ಕಳ ಸಾಹಿತ್ಯ ಭೂಷಣ ಪ್ರಶಸ್ತಿಗೆ ಪ.ಗು.ಸಿದ್ದಾಪುರ

ಸಿಂದಗಿ (ವಿಜಯಪುರ ಜಿಲ್ಲೆ): ಇಲ್ಲಿನ ವಿದ್ಯಾಚೇತನ ಪ್ರಕಾಶನ ನೀಡುವ 2025–26ನೇ ಸಾಲಿನ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಭೂಷಣ ಪ್ರಶಸ್ತಿಗೆ ಕೊಲ್ಹಾರ ತಾಲ್ಲೂಕಿನ ಮುಳವಾಡ ಗ್ರಾಮದ ಮಕ್ಕಳ ಸಾಹಿತಿ ಪ.ಗು. ಸಿದ್ದಾಪುರ ಆಯ್ಕೆಯಾಗಿದ್ದಾರೆ.

ಪ.ಗು. ಸಿದ್ದಾಪುರ

‘ಪ್ರಶಸ್ತಿ ₹15 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ಜೂನ್ 11ರಂದು ಸಿಂದಗಿಯ ಸಾರಂಗ ಮಠದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ’ ಎಂದು ಪ್ರಕಾಶನದ ಮುಖ್ಯಸ್ಥ, ಮಕ್ಕಳ ಸಾಹಿತಿ ಹ.ಮ. ಪೂಜಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿ ಸಾವು

ಬಂಟ್ವಾಳ (ದಕ್ಷಿಣ ಕನ್ನಡ): ಇಲ್ಲಿನ ಅಮ್ಟಾಡಿ ಗ್ರಾಮದ ಕೆಂಪುಗುಡ್ಡೆ ಸಮೀಪದ ಸಾರಿಗೆ ಎಂಬಲ್ಲಿ ಶಂಕಿತ ಡೆಂಗಿ ಜ್ವರದಿಂದ ವಿದ್ಯಾರ್ಥಿ ಶುಕ್ರವಾರ ಮೃತಪಟ್ಟಿದ್ದಾರೆ.

ಹಿತೇಶ್

ಸ್ಥಳೀಯ ನಿವಾಸಿ, ಟೈಲರ್ ವೃತ್ತಿಯ ಗೋಪಾಲ ಗೌಡ ಅವರ ಪುತ್ರ ಪಿಯು ವಿದ್ಯಾರ್ಥಿ ಹಿತೇಶ್ (17) ಮೃತಪಟ್ಟವರು.

ಕೆಲವು ದಿನಗಳಿಂದ ಜ್ವರದಿಂದ ಬಳಲುತ್ತಿದ್ದ ಹಿತೇಶ್‌ರನ್ನು ಗುರುವಾರ ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಂತ್ಯಕ್ರಿಯೆ ಶುಕ್ರವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೇರಳದಲ್ಲಿ ಭಾರಿ ಮಳೆ; ಐವರು ಸಾವು

ರಾಜ್ಯದಲ್ಲಿ ಜನಜೀವನ ಅಸ್ತವ್ಯಸ್ತ; 8 ಜಿಲ್ಲೆಗಳಲ್ಲಿ ‘ರೆಡ್ ಆಲರ್ಟ್’ ಘೋಷಿಸಿದ ಹವಾಮಾನ ಇಲಾಖೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ/ತ್ರಿಶ್ಶೂರ್ : ಕೇರಳದಲ್ಲಿ ಶುಕ್ರವಾರವೂ ಭಾರಿ ಮಳೆಯಾಗಿದ್ದು, ರಾಜ್ಯದ ವಿವಿಧೆಡೆ ಐವರು ಮೃತಪಟ್ಟಿದ್ದಾರೆ. ಹಲವು ತಗ್ಗುಪ್ರದೇಶಗಳು ಮುಳುಗಡೆಯಾಗಿದ್ದು, ಬಿರುಗಾಳಿ, ಸಮುದ್ರದಲ್ಲಿ ಹೆಚ್ಚಿದ ಉಬ್ಬರದಿಂದ ಹಲವು ಮನೆಗಳಿಗೆ ಹಾನಿಯಾಗಿವೆ.

ಕೊಟ್ಟಾಯಂನಲ್ಲಿ ಮೀನುಗಾರಿಕೆಯಲ್ಲಿ ತೊಡಗಿದ್ದ ಇಬ್ಬರು ಯುವಕರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ತಿರುವನಂತಪುರದಲ್ಲಿ ಭಾರೀ ಅಲೆಗೆ ಸಿಲುಕಿ ದೋಣಿ ಮಗುಚಿಬಿದ್ದು, ಮೀನುಗಾರರೊಬ್ಬರು ಸಾವಿಗೀಡಾಗಿದ್ದರೆ. ಕೊಚ್ಚಿಯಲ್ಲಿ 85 ವರ್ಷದ ನರೇಗಾ ಕಾರ್ಮಿಕ ಮಹಿಳೆ ಕುಸಿದು ಮೃತಪಟ್ಟರೆ, ಪಶ್ಚಿಮ ಬಂಗಾಳ ಮೂಲದ ವ್ಯಕ್ತಿಯೊಬ್ಬ ನೀರಿನಲ್ಲಿ ಮುಳುಗಿ ಕೊನೆಯುಸಿರೆಳೆದಿದ್ದಾರೆ.

ಪತ್ತನಂತಿಟ್ಟ, ಅಲಪ್ಪುಳ, ಕೊಟ್ಟಾಯಂ, ಇಡುಕ್ಕಿ, ಎರ್ನಾಕುಲಂ, ತ್ರಿಶ್ಶೂರ್ ಕಣ್ಣೂರು ಹಾಗೂ ಕಾಸರಗೋಡು ಜಿಲ್ಲೆಗಳಿಗೆ ಹವಾಮಾನ ಇಲಾಖೆಯು (ಐಎಂಡಿ) ‘ರೆಡ್ ಆಲರ್ಟ್’, ಉಳಿದಂತೆ ಆರು ಜಿಲ್ಲೆಗಳಿಗೆ ‘ಆರೆಂಜ್ ಆಲರ್ಟ್’ ಘೋಷಿಸಿದೆ.

‘ಭಾರಿ ಮಳೆಯಿಂದ ರಾಜ್ಯದಾದ್ಯಂತ ದೊಡ್ಡ ಪ್ರಮಾಣದಲ್ಲಿ ನಷ್ಟ ಉಂಟಾಗಿದ್ದು, ಜನರು ಎಚ್ಚರದಿಂದ ಇರಬೇಕು’ ಎಂದು ರಾಜ್ಯ ಕಂದಾಯ ಸಚಿವ ಕೆ.ರಾಜನ್ ಹೇಳಿಕೆ ನೀಡಿದ್ದಾರೆ.

‘ವೇಗವಾಗಿ ಗಾಳಿ ಬೀಸುತ್ತಿದ್ದು, ಮುಂದಿನ ಐದು ದಿನಗಳ ಕಾಲ ರಾಜ್ಯದಾದ್ಯಂತ ಭಾರಿ ಮಳೆ ಮುಂದುವರಿಯಲಿದೆ. ಗುಡ್ಡಗಾಡು ಪ್ರದೇಶಗಳಿಗೆ ಅನಗತ್ಯ ಪ್ರವಾಸ ಕೈಗೊಳ್ಳಬಾರದು’ ಎಂದು ಜನರಿಗೆ ಸಲಹೆ ನೀಡಿದ್ದಾರೆ.

ನಿರಾಶ್ರಿತ ಶಿಬಿರಗಳ ಸ್ಥಾಪನೆ: ‘ಮಳೆಯಿಂದ ಸಂಕಷ್ಟಕ್ಕೆ ಸಿಲುಕಿದ 1,894 ಮಂದಿಗೆ ನಿರಾಶ್ರಿತ ಶಿಬಿರಗಳಲ್ಲಿ ಆಶ್ರಯ ಕಲ್ಪಿಸಲಾಗಿದೆ. ರಾಜ್ಯದಾದ್ಯಂತ ನಾಲ್ಕು ಸಾವಿರ ಶಿಬಿರಗಳನ್ನು ತೆರೆಯಲು ವ್ಯವಸ್ಥೆ ಮಾಡಿದ್ದು, 6 ಲಕ್ಷ ಮಂದಿಗೆ ಆಶ್ರಯ ಕಲ್ಪಿಸಬಹುದು. ಮಳೆಯಿಂದ ರಾಜ್ಯದಾದ್ಯಂತ ನೂರಾರು ಮನೆಗಳಿಗೆ ಹಾನಿಯಾಗಿದೆ’ ಎಂದು ರಾಜನ್ ತಿಳಿಸಿದರು.

ಕೇರಳದಲ್ಲಿ ಶುಕ್ರವಾರ ಭಾರಿ ಮಳೆಯಾಗಿದ್ದು, ಕೊಚ್ಚಿ ಪಟ್ಟಣದಲ್ಲಿ ಜಲಾವೃತಗೊಂಡಿದ್ದ ರಸ್ತೆಯಲ್ಲೇ ವಾಹನ ಸವಾರರು ಸಾಗಿದರು–ಪಿಟಿಐ ಚಿತ್ರ

ಮಳೆ ಅನಾಹುತ; ಸರ್ಕಾರದಿಂದ ಕ್ರಮ

- ಭಾರಿ ಮಳೆಗೆ ಬುಡಸಮೇತ ಉರುಳಿಬಿದ್ದ ವಿದ್ಯುತ್ ಕಂಬ, ಮರಗಳು
- ತಗ್ಗು ಪ್ರದೇಶಗಳಿಗೆ ನುಗ್ಗಿದ ಮಳೆ ನೀರು– ವಿದ್ಯುತ್ ವ್ಯತ್ಯಯ
- ಕೊಟ್ಟಾಯಂ ಜಿಲ್ಲೆಯ ಶಾಲೆಗಳಿಗೆ ಶನಿವಾರ ರಜೆ
- ಮಂಗಳೂರು– ತಿರುವನಂತಪುರ ಸೇರಿದಂತೆ ಹಲವು ರೈಲುಗಳ ಮಾರ್ಗ ಬದಲಾವಣೆ
- ಮೀನುಗಾರಿಕೆಗೆ ತೆರಳದಂತೆ ಮೀನುಗಾರರಿಗೆ ಸೂಚನೆ
- ಮುಂಗಾರು ಸಿದ್ಧತೆ, ಪರಿಹಾರಕ್ಕೆ ತಲಾ ₹1 ಕೋಟಿ ಬಿಡುಗಡೆ
- ತಿರುವನಂತಪುರ, ಕೋಯಿಕ್ಕೋಡ್ ಜಿಲ್ಲೆಗೆ ಹೆಚ್ಚುವರಿಯಾಗಿ ತಲಾ ₹2 ಕೋಟಿ
- ಪತ್ತನಂತಿಟ್ಟ ಜಿಲ್ಲೆಯಲ್ಲಿ 200 ಮನೆಗಳಿಗೆ ಹಾನಿ
- ಶನಿವಾರದವರೆಗೂ ಸಮುದ್ರಗಳಲ್ಲಿ ಭಾರಿ ಅಲೆಯ ಸಾಧ್ಯತೆ

ಮೇ 30ರಿಂದ ಜೂನ್ 5 ರವರೆಗೆ ಮಾಮೂಲಿಗಿಂತಲೂ ಹೆಚ್ಚಿನ ಮಳೆಯಾಗಲಿದೆ ಎಂದು ಐಎಂಡಿ ತಿಳಿಸಿದ್ದು, ಜನರು ಎಚ್ಚರದಿಂದ ಇರಬೇಕು

ಕೆ.ರಾಜನ್, ಕಂದಾಯ ಸಚಿವ ಕೇರಳ

‘ನಾಳೆಯಿಂದ ನೀರು ಪೂರೈಕೆ ಬಂದ್’

ಪ್ರಜಾವಾಣಿ ವಾರ್ತೆ

ಹಾವೇರಿ: ‘ಸ್ಥಳೀಯ ಸಂಸ್ಥೆಗಳ ನೌಕರರ ಬೇಡಿಕೆಗಳ ಈಡೇರಿಕೆಗೆ ರಾಜ್ಯ ಸರ್ಕಾರ ಕಾನೂನು ಕಾರಣದ ಸಬೂಬು ಹೇಳಿ ಹಿಂಜರಿಯುತ್ತಿದ್ದು, ಇದರ ವಿರುದ್ಧ ರಾಜ್ಯದಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಾಗಿದೆ. ಇದರ ಭಾಗವಾಗಿ, ಎಲ್ಲ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಭಾನುವಾರದಿಂದ (ಜೂನ್ 1) ಕುಡಿಯುವ ನೀರು ಪೂರೈಕೆ ಸ್ಥಗಿತಗೊಳಿಸಲಾಗುವುದು’ ಎಂದು ರಾಜ್ಯ ಪೌರಸೇವಾ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎನ್. ಪ್ರಸಾದ್ ಎಚ್ಚರಿಕೆ ನೀಡಿದರು.

ಇಲ್ಲಿನ ನಗರಸಭೆ ಎದುರು ರಾಜ್ಯ ಪೌರನೌಕರರ ಸಂಘ ಹಾಗೂ ರಾಜ್ಯ ಪೌರಸೇವಾ ನೌಕರರ ಸಂಘದ ನೇತೃತ್ವದಲ್ಲಿ ನಡೆದಿರುವ ಅನಿರ್ದಿಷ್ಟಾವಧಿ ಧರಣಿಯಲ್ಲಿ ಶುಕ್ರವಾರ ಪಾಲ್ಗೊಂಡಿದ್ದ ಸಂದರ್ಭದಲ್ಲಿ ‘ಪ್ರಜಾವಾಣಿ’ ಜೊತೆ ಮಾತನಾಡಿದ ಅವರು, ‘ರಾಜ್ಯದಲ್ಲಿರುವ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಸೇರಿ 360 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಜೂನ್ 1ರಿಂದ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ’ ಎಂದರು.

ಎನ್. ಪ್ರಸಾದ್

ದಲ್ಲಾಳಿಗೆ ಚಪ್ಪಲಿಯಿಂದ ಹೊಡೆದ ಗ್ರಾ.ಪಂ ಸದಸ್ಯ

ಪ್ರಜಾವಾಣಿ ವಾರ್ತೆ

ರಾಯಬಾಗ (ಬೆಳಗಾವಿ ಜಿಲ್ಲೆ): ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ತಾಲ್ಲೂಕಿನ ಹಿಡಕಲ್ ಗ್ರಾಮ ಪಂಚಾಯಿತಿಯ 5ನೇ ವಾರ್ಡ್‌ನ ಸದಸ್ಯ ಯಲ್ಲಪ್ಪ ಮಾರುತಿ ಸಣ್ಣಕ್ಕಿನವರ ಎಂಬವರು ಜಾನುವಾರು ದಲ್ಲಾಳಿ ಆಗಿರುವ ಹಾರೂಗೇರಿ ಪಟ್ಟಣದ ನಿವಾಸಿ ಅಮೀನಸಾಬ್ ಶೇಖ್ ಎಂಬವರ ಕೈ–ಕಾಲುಗಳನ್ನು ಕಟ್ಟಿ ರಸ್ತೆಯಲ್ಲಿ ಕೆಡವಿ, ಚಪ್ಪಲಿಯಿಂದ ಹೊಡೆದ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ರಸ್ತೆಯಲ್ಲಿ ಅಮೀನಸಾಬ್ ಅವರನ್ನು ಎಳೆದುತಂದ ಯಲ್ಲಪ್ಪ ಹಾಗೂ ಇತರ ಇಬ್ಬರು ಸಹಚರರು ಹಗ್ಗದಿಂದ ಕೈ–ಕಾಲು ಕಟ್ಟಿದ್ದಾರೆ. ನೆಲಕ್ಕೆ ಬೀಳಿಸಿ, ಅವರ ಮುಖಕ್ಕೆ ಹಲವಾರು ಬಾರಿ ಚಪ್ಪಲಿಯಿಂದ ಹೊಡೆದಿದ್ದಾರೆ. ಊರಿನ ಜನ ಹಾಗೂ ಆಟವಾಡುತ್ತಿದ್ದ ಮಕ್ಕಳು ಕೂಡ ಈ ದೃಶ್ಯ ನೋಡಿದ್ದಾರೆ. ಹತ್ತಿರದಲ್ಲಿದ್ದ ವ್ಯಕ್ತಿಯೊಬ್ಬರು ಇದರ ವಿಡಿಯೊ ಮಾಡಿ ಹರಿಬಿಟ್ಟಿದ್ದಾರೆ. ಹಾರೂಗೇರಿ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಸಂತ್ರಸ್ತ ವ್ಯಕ್ತಿ ದೂರು ದಾಖಲಿಸಿಲ್ಲ.

ಕೈ– ಕಾಲು ಕಟ್ಟಿ ಹಲ್ಲೆ ಮಾಡಿದ ದೃಶ್ಯ

ಮುಖ್ಯಶಿಕ್ಷಕ ಅಮಾನತು ವಾಪಸ್‌ಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ರಾಯಬಾಗ ತಾಲ್ಲೂಕಿನ ನಿಡಗುಂದಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ವೀರಣ್ಣ ಮಡಿವಾಳರ ಅವರನ್ನು ಸೇವೆಯಿಂದ ಅಮಾನತು ಮಾಡಿದ್ದು ಸರಿಯಲ್ಲ. ಅಮಾನತು ಆದೇಶ ಹಿಂಪಡೆಯದಿದ್ದರೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಿಂದ ಚಿಕ್ಕೋಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗುವುದು’ ಎಂದು ಆಯೋಗದ ಸದಸ್ಯ ಶಶಿಧರ ಕೋಸಂಬೆ ತಿಳಿಸಿದ್ದಾರೆ.

ಶಶಿಧರ ಕೋಸಂಬೆ

‘ಶಾಲೆಗೆ ಕೊಠಡಿ ಕೇಳುವುದು ಅಪರಾಧವೇ?’

ಬೆಂಗಳೂರು: ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ನಿಡಗುಂದಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಕೊಠಡಿ ಕಟ್ಟಿಸಿಕೊಡಿ ಎಂದು ಹೋರಾಟ ಮಾಡಿದ ಮುಖ್ಯ ಶಿಕ್ಷಕ ವೀರಣ್ಣ ಮಡಿವಾಳರ ಅವರನ್ನು ಅಮಾನತು ಮಾಡಲಾಗಿದೆ. ಕೊಠಡಿ ಕೇಳುವುದು ಮಹಾಪರಾಧವೇ ಎಂದು ಜಾಗೃತ ನಾಗರಿಕರು, ಕರ್ನಾಟಕ ಸಂಘಟನೆ ಪ್ರಶ್ನಿಸಿದೆ.

ಕೆ.ಮರುಳಸಿದ್ದಪ್ಪ, ಜಿ.ರಾಮಕೃಷ್ಣ, ವಿಜಯಾ, ಎಸ್.ಜಿ.ಸಿದ್ದರಾಮಯ್ಯ, ವಿಮಲಾ.ಕೆ.ಎಸ್, ಮೀನಾಕ್ಷಿ ಬಾಳಿ, ವಸುಂಧರಾ ಭೂಪತಿ, ಬಿ. ಶ್ರೀಪಾದ ಭಟ್, ಬಂಜಗೆರೆ ಜಯಪ್ರಕಾಶ್, ಮಾವಳ್ಳಿ ಶಂಕರ್, ಟಿ.ಸುರೇಂದ್ರ ರಾವ್, ಎನ್.ಗಾಯತ್ರಿ, ವಿ.ಪಿ.ನಿರಂಜನಾರಾಧ್ಯ, ಜಾಣಗೆರೆ ವೆಂಕಟರಾಮಯ್ಯ, ಎನ್.ಕೆ.ವಸಂತ ರಾಜ್, ವಾಸುದೇವ ಉಚ್ಚಿಲ, ಕೆ.ನೀಲಾ, ಬಿ.ಆರ್.ಮಂಜುನಾಥ್, ಎಚ್.ಜಿ. ಜಯಲಕ್ಷ್ಮಿ ಈ ಬಗ್ಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆದಿದ್ದು, ‘ಅಮಾನತು ವಾಪಸ್ ಪಡೆಯಬೇಕು. ಅಮಾನತು ಮಾಡಿರುವ ಶಿಕ್ಷಣಾಧಿಕಾರಿಯ ಬಗ್ಗೆ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದ್ದಾರೆ.

ವೀರಣ್ಣ ಮಡಿವಾಳರ ಅವರು ತಮ್ಮ ಶಾಲೆಯ ಬಗ್ಗೆ ಅನನ್ಯ ಪ್ರೀತಿ ಇಟ್ಟುಕೊಂಡು 10 ವರ್ಷಗಳಿಂದ ಶಾಲೆಯ ಅಭಿವೃದ್ಧಿಗಾಗಿ ನಿರಂತರ ಶ್ರಮಿಸುತ್ತಿದ್ದಾರೆ. ಈ ಶಾಲೆಗೆ ಹಲವು ಪ್ರಶಸ್ತಿ ಬರಲು ಕಾರಣರಾಗಿದ್ದಾರೆ. ಕೆಲವು ವರ್ಷಗಳ ಹಿಂದೆ 70 ವಿದ್ಯಾರ್ಥಿಗಳಿದ್ದಾಗ ಎರಡು ಕೊಠಡಿಯಲ್ಲಿ ತರಗತಿ ನಡೆಸಲಾಗುತ್ತಿತ್ತು. ಈಗ ವಿದ್ಯಾರ್ಥಿಗಳ ಸಂಖ್ಯೆ ಅದರ ಎರಡು ಪಟ್ಟಿಗಿಂತಲೂ ಅಧಿಕವಾಗಿದೆ. ಅದಕ್ಕಾಗಿ ನಾಲ್ಕು ಕೊಠಡಿಗಳನ್ನು ಕಟ್ಟಿಸಿಕೊಡುವಂತೆ ವೀರಣ್ಣ ಅವರು ಕೇಳಿದ್ದರು. ಇದನ್ನು ನಿಯಮ ಉಲ್ಲಂಘನೆ ಎಂದು ಪರಿಗಣಿಸಿ ಅವರನ್ನು ಶಿಕ್ಷಣಾಧಿಕಾರಿ ಅಮಾನತು ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಶಿಕ್ಷಣಾಧಿಕಾರಿಯ ಸರ್ವಾಧಿಕಾರಿ ಧೋರಣೆಯು ಸರ್ಕಾರಕ್ಕೆ ಕೆಟ್ಟ ಹೆಸರು ತರಲಿದೆ. 24 ತಾಸುಗಳ ಒಳಗೆ ಅಮಾನತು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ಭಾರಿ ಮಳೆ: ಮಕ್ಕಳು ಸೇರಿ 5 ಸಾವು....

ಒಂದನೇ ಪುಟದಿಂದ...

ಪಂಬದಹಿತ್ತಿಲು ಕೋಡಿಯಲ್ಲಿ ತಡರಾತ್ರಿ 3.30ರ ವೇಳೆ ಸುಮಾರು 30 ಅಡಿ ಎತ್ತರದ ಗುಡ್ಡ ಕುಸಿದು ಮನೆಯ ಮೇಲೆ ಬಿದ್ದಿದೆ. ಇದರಿಂದ ಮನೆಗೆ ಸಂಪೂರ್ಣ ಹಾನಿಯಾಗಿದೆ. ಸಮೀಪದಲ್ಲಿದ್ದ ಮೂರು ಬೃಹತ್ ಮರಗಳೂ ಬುಡಸಮೇತ ಕಿತ್ತುಬಿದ್ದಿವೆ. ಭಾರಿ ಸದ್ದು ಕೇಳಿದ ಕಾಂತಪ್ಪ ಅವರ ಪುತ್ರ ಸೀತಾರಾಂ ಓಡಿ ಹೊರಗೆ ಬಂದಿದ್ದಾರೆ. ಕಾಂತಪ್ಪ ಅವರು ಹೊರಗೆ ಬರುವಷ್ಟರಲ್ಲಿ ಕಲ್ಲು– ಮಣ್ಣು ಅವರ ಮೇಲೆ ಬಿದ್ದಿವೆ. ಇದರಿಂದಾಗಿ ಅವರ ಎಡಗಾಲು ತುಂಡಾಗಿದೆ. ಪ್ರೇಮಾ ಮತ್ತು ಆರ್ಯನ್ ಸ್ಥಳದಲ್ಲೇ ಅಸುನೀಗಿದ್ದಾರೆ.

ಸೀತಾರಾಂ ಅವರ ಪತ್ನಿ ಅಶ್ವಿನಿ ಮತ್ತು ಮಗು ಆರುಷ್ ಮೇಲೆ ಚಾವಣಿಯ ಒಂದು ಭಾಗ ಬಿದ್ದಿತ್ತು. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಅಗ್ನಿಶಾಮಕ ದಳ ಸಿಬ್ಬಂದಿ ಮತ್ತು ಪೊಲೀಸರು ಶುಕ್ರವಾರ ಮಧ್ಯಾಹ್ನದವರೆಗೆ ಕಾರ್ಯಾಚರಣೆ ನಡೆಸಿ, ಅವರನ್ನು ಹೊರತೆಗೆದರು. ಆದರೆ ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿ ಆರುಷ್ ಅಸುನೀಗಿದ್ದಾನೆ. ಗಾಯಗೊಂಡಿರುವ ಅಶ್ವಿನಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಾಣೆಕೆರೆಯಲ್ಲಿ ಕುಸಿದ ಗುಡ್ಡದ ಮಣ್ಣು ನೌಷಾದ್ ಮನೆಯ ಬೆಡ್ ರೂಂ ಭಾಗಕ್ಕೆ ಬಿದ್ದಿದೆ. ಫಾತಿಮಾ ನಯೀಮ ಸ್ಥಳದಲ್ಲೇ ಸಾವಿಗೀಡಾಗಿದ್ದಾಳೆ.

ಕೋಟೆಕಾರ್‌ನಲ್ಲಿ 31.2 ಸೆಂ.ಮೀ ಮಳೆ

ಜಿಲ್ಲೆಯಾದ್ಯಂತ ಗುರುವಾರ ರಾತ್ರಿಯಿಂದ ಒಂದೇ ಸಮನೆ ಮಳೆಯಾಗಿದ್ದು ಉಳ್ಳಾಲ ತಾಲ್ಲೂಕಿನ ಕೋಟೆಕಾರ್‌ನಲ್ಲಿ ಮೇ 30ರಂದು ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ತಾಸುಗಳಲ್ಲಿ ಅತ್ಯಧಿಕ 31.2 ಸೆಂ.ಮೀ ಮಳೆ ದಾಖಲಾಗಿದೆ. ಜಿಲ್ಲೆಯ 20 ಕೇಂದ್ರಗಳಲ್ಲಿ 10 ಸೆಂ.ಮೀಟರ್‌ಗಿಂತ ಹೆಚ್ಚು ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕೋಟೆಕಾರ್ ಸೇರಿದಂತೆ ಉಳ್ಳಾಲ ತಾಲ್ಲೂಕಿನ ನಾಲ್ಕು ಕೇಂದ್ರಗಳಲ್ಲಿ 20ಸೆಂ.ಮೀಗೂ ಅಧಿಕ ಮಳೆಯಾಗಿದೆ. ತಲಪಾಡಿಯಲ್ಲಿ 28.8, ಕಿನ್ಯದಲ್ಲಿ 28.2, ಮುನ್ನೂರಿನಲ್ಲಿ 26.3 ಸೆಂ.ಮೀ. ಮಳೆಯಾಗಿದೆ.

ನೇತ್ರಾವತಿ ನದಿಯಲ್ಲಿ ಮೀನು ಹಿಡಿಯಲು ಗುರುವಾರ ಮಧ್ಯರಾತ್ರಿ ಹೋಗಿದ್ದ ಬೆಂಗ್ರೆ ನಿವಾಸಿಗಳಾದ ಕಮಲಾಕ್ಷ ಮತ್ತು ಯಶವಂತ ನಾಪತ್ತೆಯಾಗಿದ್ದು ಶುಕ್ರವಾರ ಸಂಜೆಯವರೆಗೂ ಹುಡುಕಾಟ ನಡೆಸಲಾಯಿತು.

ಧಾರಾಕಾರ ಮಳೆಯಿಂದ ಮಂಗಳೂರು ನಗರದ ಮಿಷನ್ ಸ್ಟ್ರೀಟ್ ರಸ್ತೆಯ ಕಾರ್ಮಿಕರು ವಾಸ ಮಾಡುವ ವಸತಿ ಸಮುಚ್ಚಯ, ಮಾಲೆಮಾರ್ ಮುಂತಾದ ಪ್ರದೇಶಗಳಲ್ಲಿ ಮನೆಗಳಿಗೆ ನೀರು ನುಗ್ಗಿತ್ತು.

ಬಿಜೈ–ಕಾಪಿಕಾಡ್ ರಸ್ತೆಯಲ್ಲಿ ಬೃಹತ್ ಮರವೊಂದು ಉರುಳಿ ಬಿದ್ದು ವಾಹನಸಂಚಾರಕ್ಕೆ ಅಡ್ಡಿಯಾಯಿತು. ಜೆಪ್ಪು ಬಳಿ ಮಂಗಳೂರು ಸೆಂಟ್ರಲ್‌ನಿಂದ ಕೇರಳಕ್ಕೆ ಸಾಗುವ ರೈಲು ಹಳಿ ಮೇಲೆ ಮರ ಬಿದ್ದು ಸ್ವಲ್ಪ ಸಮಯ ರೈಲು ಸಂಚಾರಕ್ಕೆ ಅಡ್ಡಿಯಾಯಿತು. ತಣ್ಣೀರುಬಾವಿ ಬೀಚ್‌ನಲ್ಲಿ ಶುಕ್ರವಾರ ಆರಂಭವಾಗಬೇಕಾಗಿದ್ದ ಇಂಡಿಯನ್ ಓಪನ್ ಸರ್ಫಿಂಗ್‌ನ ಮೊದಲ ದಿನದ ಸ್ಪರ್ಧೆಗಳನ್ನು ಶನಿವಾರಕ್ಕೆ ಮುಂದೂಡಲಾಯಿತು.

ನೆರೆಯ ಕಾಸರಗೋಡಿನ ಪ್ರಸಿದ್ಧ ಮಧೂರು ಮದನಂತೇಶ್ವರ ವಿನಾಯಕ ದೇವಾಲಯ ಜಲಾವೃತವಾಗಿದೆ. ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲೂ ಬಿರುಸಿನ ಮಳೆ ಸುರಿಯಿತು.

ದಕ್ಷಿಣ ಕನ್ನಡ ಜಿಲ್ಲೆ ಉಳ್ಳಾಲ ತಾಲ್ಲೂಕಿನ ಮೊಂಟೆಪದವು ಪಂಬದಹಿತ್ತಿಲು ಕೋಡಿಕೊಪ್ಪಲಿನಲ್ಲಿ ಮನೆಯ ಮೇಲೆ ಗುಡ್ಡ ಕುಸಿದು ಮಣ್ಣಿನಡಿ ಸಿಲುಕಿದ್ದ ಅಶ್ವಿನಿ ಅವರನ್ನು ರಕ್ಷಿಸಿ ಆಸ್ಪತ್ರೆಗೆ ಸಾಗಿಸಲಾಯಿತು ಚಿತ್ರ: ಫಕ್ರುದ್ದೀನ್ ಎಚ್.

ಅನುಮತಿ ರಹಿತ ಸಿಡಿಆರ್ ಪಡೆಯುವ ಕ್ರಮ

ಪೊಲೀಸ್ ರಾಜ್ಯವಾದೀತು: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೊಲೀಸ್ ಅಧಿಕಾರಿಗಳು ತಮ್ಮ ಇಚ್ಛೆಗೆ ಅನುಗುಣವಾಗಿ ಸಿಡಿಆರ್ (ಕರೆ ವಿವರ ದಾಖಲೆ) ಪಡೆಯುವ ಅಧಿಕಾರ ಚಲಾಯಿಸುತ್ತಾ ಹೋದರೆ ಅದು ಪೊಲೀಸ್ ರಾಜ್ಯವಾಗುತ್ತದೆ’ ಎಂದು ಹೈಕೋರ್ಟ್ ಎಚ್ಚರಿಸಿದೆ.

‘ನಾನು ಪೊಲೀಸ್ ಅಧಿಕಾರಿ ಎಂಬ ಅಧಿಕಾರದ ಏಕೈಕ ಗತ್ತಿನಲ್ಲಿ, ಯಾವುದೇ ಪೊಲೀಸ್ ಅಧಿಕಾರಿ, ಯಾವುದೇ ವ್ಯಕ್ತಿಯ ಮೊಬೈಲ್ ಫೋನ್‌ನ ಸಿಡಿಆರ್ ಅನ್ನು, ಕಾನೂನುಬದ್ಧ ತನಿಖಾ ಅಗತ್ಯದ ಅನುಮತಿ ಇಲ್ಲದೆ ಪಡೆಯಲು ಸಾಧ್ಯವಿಲ್ಲ’ ಎಂದು ಸ್ಪಷ್ಟಪಡಿಸಿದೆ.

ಮಹಿಳೆಯೊಬ್ಬರ ಸಿಡಿಆರ್ ಅನ್ನು ಅಕ್ರಮವಾಗಿ ಪಡೆದ ಆರೋಪ ಎದುರಿಸುತ್ತಿರುವ ಬ್ಯಾಟರಾಯನಪುರ ಪೊಲೀಸ್ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಎಂ.ವಿ.ವಿದ್ಯಾ (37), ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸುವಂತೆ ಕೋರಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸಿರುವ ರಜಾಕಾಲದ ಏಕಸದಸ್ಯ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರು ಈ ಕುರಿತಂತೆ ಆದೇಶಿಸಿದ್ದಾರೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಸತ್ಯನಾರಾಯಣ್ ಚಾಳ್ಕೆ, ‘ವಿದ್ಯಾ ತಮ್ಮ ಅಧಿಕೃತ ಕರ್ತವ್ಯ ನಿರ್ವಹಿಸುವ ನಿಟ್ಟಿನಲ್ಲಿ, ಕರ್ನಾಟಕ ಪೊಲೀಸ್ ಕಾಯ್ದೆ-1963ರ ಕಲಂ 197 (ಸಾರ್ವಜನಿಕ ಸೇವಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ತಡೆಯುವ) ಮತ್ತು ಅಪರಾಧ ದಂಡ ಪ್ರಕ್ರಿಯಾ ಸಂಹಿತೆ–1973ರ ಕಲಂ 170ರ (ಸಾರ್ವಜನಿಕ ನೌಕರನ ವಿರುದ್ಧ ಕಾನೂನು ಕ್ರಮಕೈಗೊಳ್ಳಲು ಮತ್ತು ವಿಚಾರಣೆಗೆ ಒಳಪಡಿಸಲು ಅಗತ್ಯವಿರುವ ಕೇಂದ್ರ ಅಥವಾ ರಾಜ್ಯ ಸರ್ಕಾರದ ಪೂರ್ವಾನುಮತಿ) ಅಡಿಯಲ್ಲಿ, ಅನುಮತಿಯ ಆದೇಶವಿಲ್ಲದೆ ಸಿಡಿಆರ್ ಕೋರಿದ್ದಾರೆ’ ಎಂದು ನ್ಯಾಯಪೀಠಕ್ಕೆ ಮನದಟ್ಟು ಮಾಡಲು ಪ್ರಯತ್ನಿಸಿದರು.

ಆದರೆ, ಇದನ್ನು ಒಪ್ಪದ ನ್ಯಾಯಪೀಠ, ‘ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ಕನ್ನಡಿಗ ದಿವಂಗತ ಪುಟ್ಟಸ್ವಾಮಿ ಪ್ರಕರಣದಲ್ಲಿ ಸ್ಪಷ್ಟಪಡಿಸಿರುವಂತೆ ಯಾವುದೇ ವ್ಯಕ್ತಿಯ ಸಿಡಿಆರ್ ದಾಖಲೆಗಳು ಗೋಪ್ಯತೆಯ ಹಕ್ಕಿನಿಂದ ನಿಯಂತ್ರಿಸಲಾಗುವ ವೈಯಕ್ತಿಕ ಮತ್ತು ಖಾಸಗಿ ವಿವರಗಳಾಗಿವೆ. ಹೀಗಾಗಿ, ನಿರ್ದಿಷ್ಟ ವ್ಯಕ್ತಿಯ ಸಿಡಿಆರ್ ಪಡೆಯುವ ಅಧಿಕಾರವನ್ನು ತನಿಖಾ ಅಧಿಕಾರಿ ಮಾತ್ರ ಚಲಾಯಿಸಬೇಕಾಗುತ್ತದೆ’ ಎಂಬ ಅಂಶವನ್ನು ಉಲ್ಲೇಖಿಸಿತು.

‘ಭಾರತೀಯ ದಂಡ ಸಂಹಿತೆ–1860ರ ಕಲಂ 354(ಡಿ) 409, 506, 509 ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆ–2000ರ ಕಲಂ 66(ಡಿ) ಮತ್ತು 66(ಇ) ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗಾಗಿ ನನ್ನ ವಿರುದ್ಧ ದಾಖಲಾಗಿರುವ ಪ್ರಕರಣವನ್ನು ರದ್ದುಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

ಮುಖ್ಯಾಂಶಗಳು

- ತನಿಖಾ ಅಧಿಕಾರಿಗೆ ಮಾತ್ರ ಸಿಡಿಆರ್ ಪಡೆಯುವ ಅಧಿಕಾರ
- ದಿ.ಪುಟ್ಟಸ್ವಾಮಿ ಪ್ರಕರಣ ಉಲ್ಲೇಖ

ಭಯೋತ್ಪಾದಕರ ವಿರುದ್ಧ ಹೋರಾಟ ಮುಗಿದಿಲ್ಲ, ಸ್ಥಗಿತವೂ ಆಗಿಲ್ಲ –ಪ್ರಧಾನಿ ನರೇಂದ್ರ ಮೋದಿ

‘ಉಗ್ರರು ಬಾಲಬಿಚ್ಚಿದರೆ ಹೊಸಕಿಹಾಕ್ತೇವೆ’

ಪಿಟಿಐ/ ಪ್ರಜಾವಾಣಿ ವಾರ್ತೆ

ಕಾರಾಕಾಟ (ಬಿಹಾರ): ಭಯೋತ್ಪಾದನೆ ಪಿಡುಗನ್ನು ವಿಷಸರ್ಪಕ್ಕೆ ಹೋಲಿಸಿರುವ ಪ್ರಧಾನಿ ನರೇಂದ್ರ ಮೋದಿ, ‘ಉಗ್ರರು ಮತ್ತೆ ಬಾಲಬಿಚ್ಚಿದಲ್ಲಿ, ಅಡಗುತಾಣದಿಂದ ಹೊರಗೆಳೆದು ಅವರನ್ನು ಹೊಸಕಿ ಹಾಕುತ್ತೇವೆ’ ಎಂದು ಎಚ್ಚರಿಸಿದ್ದಾರೆ.

ಬಿಹಾರ ರಾಜಧಾನಿಯಿಂದ 140 ಕಿ.ಮೀ ದೂರದ ಕಾರಾಕಾಟ ರ‍್ಯಾಲಿ ಉದ್ದೇಶಿಸಿ ಶುಕ್ರವಾರ ಮಾತನಾಡಿದ ಅವರು, ‘ಪಹಲ್ಗಾಮ್‌ನ ದಾಳಿ ಕೃತ್ಯದ ಸಂಚುಕೋರರ ಅಡಗುತಾಣಗಳನ್ನು ಭಾರತೀಯ ಸೇನಾಪಡೆಗಳು ನೆಲಸಮಗೊಳಿಸಿವೆ’ ಎಂದು ಹೇಳಿದರು.

‘ಆಪರೇಷನ್ ಸಿಂಧೂರ’ ಎಂಬುದು ಭಾರತದ ಬತ್ತಳಿಕೆಯಲ್ಲಿರುವ ಒಂದು ಬಾಣವಷ್ಟೇ. ಭಯೋತ್ಪಾದಕರ ವಿರುದ್ಧದ ಹೋರಾಟ ಮುಗಿದಿಲ್ಲ, ಸ್ಥಗಿತವೂ ಆಗಿಲ್ಲ. ಉಗ್ರರ ದಾಳಿಗೆ ತಕ್ಕ ಉತ್ತರ ಸಿಗಲಿದೆ. ದಾಳಿಯ ಸಮಯ, ಸ್ವರೂಪ ಮತ್ತು ಪರಿಸ್ಥಿತಿಯನ್ನೂ ಸೇನೆಗಳೇ ನಿರ್ಧರಿಸಲಿವೆ’ ಎಂದು ಪ್ರಧಾನಿ ಹೇಳಿದರು.

ಭಾರತವು ಅಣ್ವಸ್ತ್ರ ಬೆದರಿಕೆಗೆ ಜಗ್ಗುವುದಿಲ್ಲ. ಅದರ ಆಧಾರದಲ್ಲಿ ನಮ್ಮ ದಾಳಿ ನಿಗದಿಯಾಗುವುದಿಲ್ಲ ಎಂದ ಅವರು, ‘ಆಪರೇಷನ್ ಸಿಂಧೂರ’ ವೇಳೆ ದಾಳಿ ನಿಲ್ಲಿಸುವಂತೆ ಪಾಕಿಸ್ತಾನ ಅಂಗಲಾಚಿತ್ತು ಎಂದರು.

ಮಧುಬನಿ ಜಿಲ್ಲೆಯಲ್ಲಿ ಕಳೆದ ತಿಂಗಳು ನಡೆದಿದ್ದ ರ‍್ಯಾಲಿ ಉಲ್ಲೇಖಿಸಿದ ಅವರು, ‘ಪಹಲ್ಗಾಮ್ ದಾಳಿ ಕೃತ್ಯದ ಮಾರನೇ ದಿನ ನಾನು ಬಿಹಾರಕ್ಕೆ ಭೇಟಿ ನೀಡಿದ್ದೆ. ಆಗ, ಸಂಚುಕೋರರನ್ನು ಕನಸಿನಲ್ಲೂ ಎಣಿಸದಂತೆ ದಂಡಿಸಲಿದ್ದೇವೆ ಎಂದು ಹೇಳಿದ್ದೆ. ಈಗ, ಇಲ್ಲಿ ನಿಂತು ಮತ್ತೆ ಹೇಳುತ್ತಿದ್ದೇನೆ. ಅಂದು ನೀಡಿದ್ದ ಭರವಸೆಯನ್ನು ನಾವು ಈಡೇರಿಸಿದ್ದೇವೆ’ ಎಂದರು.

‘ಸಿಂಧೂರ’ ಕಾರ್ಯಾಚರಣೆ ವೇಳೆ ದೇಶಿ ತಯಾರಿಕೆಯ ‘ಬ್ರಹ್ಮೋಸ್’ ಕ್ಷಿಪಣಿ ಸಾಮರ್ಥ್ಯವನ್ನು ಪಾಕಿಸ್ತಾನ, ಇಡೀ ಜಗತ್ತು ನೋಡಿದೆ. ಪಾಕ್ ಸೇನೆ ಆಶ್ರಯದಲ್ಲಿ ಸುರಕ್ಷಿತವಾಗಿದ್ದೇವೆ ಎಂದು ಉಗ್ರರು ಭಾವಿಸಿದ್ದರು. ಆದರೆ, ಅವರು ಮಂಡಿ ಊರುವಂತೆ ಮಾಡಿದ್ದೇವೆ. ಪಾಕಿಸ್ತಾನದ ವಾಯುನೆಲೆ, ಸೇನಾ ಸೌಲಭ್ಯಗಳನ್ನೂ ನಾಶಪಡಿಸಿದ್ದೇವೆ. ಇದು, ನವಭಾರತ ಮತ್ತು ಅದರ ಸಾಮರ್ಥ್ಯ’ ಎಂದು ಪ್ರತಿಪಾದಿಸಿದರು.

ಬಿಎಸ್‌ಎಫ್ ಯೋಧರ ಸೇವೆಯನ್ನು ಶ್ಲಾಘಿಸಿದ ಅವರು, ‘ಯೋಧರ ಅದ್ವಿತೀಯ ಭಾರತ ಮಾತೆಯ ಸೇವೆಯಾಗಿದೆ’ ಎಂದರು. ನಕ್ಸಲ್ ಪಿಡುಗನ್ನು ಉಲ್ಲೇಖಿಸಿ, ‘ದೇಶದಲ್ಲಿನ ಎಲ್ಲ ರೀತಿಯ ವಿರೋಧಿಗಳ ವಿರುದ್ಧ ನಮ್ಮ ಹೋರಾಟ ನಡೆಯಲಿದೆ’ ಎಂದರು.

2014ರ ಬಳಿಕ ಎನ್‌ಡಿಎ ಸರ್ಕಾರ ನಕ್ಸಲ್ ಪಿಡುಗಿನ ವಿರುದ್ಧ ತೀವ್ರ ಹೋರಾಟ ನಡೆಸಿದೆ. ಇದರ ಪರಿಣಾಮ ನಕ್ಸಲ್ ಬಾಧಿತ ಜಿಲ್ಲೆಗಳ ಸಂಖ್ಯೆ 125ರಿಂದ 18ಕ್ಕೆ ಇಳಿದಿದೆ. ನಕ್ಸಲರ ನಿರ್ಮೂಲನೆ ಮತ್ತು ಅಲ್ಲಿ ಶಾಂತಿ, ಪ್ರಗತಿ ಕಾಣುವ ದಿನಗಳು ದೂರವಿಲ್ಲ ಎಂದರು.

ಇದಕ್ಕೂ ಮೊದಲು ಪ್ರಧಾನಿ ಕಾರಾಕಾಟದಲ್ಲಿ ಸುಮಾರು ₹48,520 ಕೋಟಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದರು.

ಬಿಹಾರದ ರೋಹ್ತಾಸ್ ಜಿಲ್ಲೆಯಲ್ಲಿ ನಡೆದ ಸಾರ್ವಜನಿಕ ರ‍್ಯಾಲಿಯಲ್ಲಿ ಪಾಲ್ಗೊಳ್ಳಲು ಬಂದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಜನರು ಆತ್ಮೀಯವಾಗಿ ಬರಮಾಡಿಕೊಂಡರು. ಮುಖ್ಯಮಂತ್ರಿ ನಿತೀಶ್ ಕುಮಾರ್, ಡಿಸಿಎಂ ಸಾಮ್ರಾಟ್ ಚೌಧರಿ ಅವರು ಇದ್ದರು –ಪಿಟಿಐ ಚಿತ್ರ

ಉಗ್ರರ 118 ನೆಲೆಗಳ ನಾಶ –ಅಮಿತ್ ಶಾ

ಪೂಂಛ್ (ಪಿಟಿಐ): ಜಮ್ಮು ಗಡಿಗೆ ಹೊಂದಿಕೊಂಡಂತೆ ಇದ್ದ ಸುಮಾರು 118 ಉಗ್ರರ ನೆಲೆಗಳನ್ನು ಭಾರತೀಯ ಸೇನೆಯು ಪ್ರತೀಕಾರ ನಡೆದ ದಾಳಿ ಅವಧಿಯಲ್ಲಿ ನಾಶಪಡಿಸಿದೆ ಮತ್ತು ತೀವ್ರ ಹಾನಿಯುಂಟುಮಾಡಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದರು.

‘ಆಪರೇಷನ್ ಸಿಂಧೂರ’ ಕಾರ್ಯಾಚರಣೆ ಬಳಿಕ ಇದೇ ಮೊದಲಿಗೆ ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿದ್ದ ಅವರು, ಬಿಎಸ್‌ಎಫ್ ಕಾರ್ಯವೈಖರಿಯನ್ನು ಮುಕ್ತವಾಗಿ ಶ್ಲಾಘಿಸಿದರು.

ಬಿಎಸ್‌ಎಫ್ ಪ್ರತಿದಾಳಿಗೆ ಗುಪ್ತಚರ ಜಾಲವನ್ನು ಪೂರ್ಣ ನಾಶಪಡಿಸಿದೆ. ಇದನ್ನು ಸರಿಪಡಿಸಿಕೊಳ್ಳಲು 4–5 ವರ್ಷಗಳೇ ಬೇಕಾಗುತ್ತದೆ ಎಂದರು.

ಎರಡು ದಿನದ ಭೇಟಿ ವೇಳೆ ಅವರು ಭದ್ರತಾ ವ್ಯವಸ್ಥೆ ಹಾಗೂ ಅಮರನಾಥ ಯಾತ್ರೆಯ ಸಿದ್ಧತೆಗಳನ್ನು ಪರಿಶೀಲಿಸಿದರು. ಪಾಕ್ ಸೇನೆಯ ಶೆಲ್ ದಾಳಿಯಿಂದ ಸಮಸ್ಯೆಗೆ ಗುರಿ ಆದವರನ್ನು ಭೇಟಿಯಾಗಿ ಚರ್ಚಿಸಿದರು.

ಬಿಎಸ್‌ಎಫ್ ಮುಂಚೂಣಿ ರಕ್ಷಣಾ ವ್ಯವಸ್ಥೆಯಾಗಿ ಮರುಭೂಮಿ, ಬೆಟ್ಟ ಪ್ರದೇಶ, ಅರಣ್ಯಗಳಲ್ಲಿ ಬದ್ಧತೆಯೊಂದ ಕಾರ್ಯನಿರ್ವಹಿಸುತ್ತಿದೆ ಎಂದರು.

ಶುಭಂ ದ್ವಿವೇದಿ ಬಂಧುಗಳ ಭೇಟಿ

ಕಾನ್ಪುರ (ಉತ್ತರ ಪ್ರದೇಶ) (ಪಿಟಿಐ): ಉಗ್ರರ ದಾಳಿಯಲ್ಲಿ ಮೃತಪಟ್ಟಿದ್ದ ಶುಭಂ ದ್ವಿವೇದಿ ಅವರ ಬಂಧುಗಳನ್ನು ಪ್ರಧಾನಿ ಮೋದಿ ಶುಕ್ರವಾರ ಇಲ್ಲಿನ ಚಕೇರಿ ವಿಮಾನನಿಲ್ದಾಣದಲ್ಲಿ ಭೇಟಿಯಾದರು.

‘ಅದು ಭಾವನಾತ್ಮಕ ಭೇಟಿಯಾಗಿತ್ತು, ಭೇಟಿ ವೇಳೆ, ಕುಟುಂಬದವರ ದುಃಖ ತಡೆಯದೇ ರೋದಿಸಿದರು’ ಎಂದು ಮೃತರ ಸಂಬಂಧಿ ಸೌರಭ್ ತಿಳಿಸಿದರು.

‘ಪ್ರಧಾನಿ ಕೂಡಾ ಭಾವುಕರಾಗಿದ್ದರು. ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿ, ಸರ್ಕಾರದ ಅಗತ್ಯ ನೆರವಿನ ಭರವಸೆ ನೀಡಿದರು’ ಎಂದೂ ತಿಳಿಸಿದರು.

31 ವರ್ಷದ ಶುಭಂ ಅವರಿಗೆ ದುರಂತಕ್ಕೆ ಕೆಲ ವಾರಗಳ ಹಿಂದೆ ಮದುವೆಯಾಗಿತ್ತು.

ಪಾಕ್ ಪ್ರಧಾನಿ ಷರೀಫ್ ಆಕ್ರೋಶ

ಇಸ್ಲಾಮಾಬಾದ್ (ಪಿಟಿಐ): ರಾಜಕೀಯ ಲಾಭಕ್ಕಾಗಿ ಸಿಂಧೂ ಜಲ ಒಪ್ಪಂದವನ್ನು ಅಮಾನತಿನಲ್ಲಿರಿಸಿ ಲಕ್ಷಾಂತರ ಮಂದಿಯ ಜೀವವನ್ನು ಅಪಾಯಕ್ಕೆ ಸಿಲುಕಿಸಲು ಭಾರತಕ್ಕೆ ಅವಕಾಶ ನೀಡುವುದಿಲ್ಲ ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಎಚ್ಚರಿಸಿದ್ದಾರೆ.



ಶೆಹಬಾಜ್ ಷರೀಫ್

ತಜಿಕಿಸ್ತಾನ ರಾಜಧಾನಿ ದುಶಾಂಬೆಯಲ್ಲಿ ನಡೆದ ಹಿಮನದಿಗಳ ಸಂರಕ್ಷಣೆ ಕುರಿತ ಮೂರು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡುವಾಗ ಷರೀಫ್ ಅವರು ಸಿಂಧೂ ಜಲ ಒಪ್ಪಂದದ (ಐಡಬ್ಲ್ಯುಟಿ) ವಿಷಯವನ್ನು ಪ್ರಸ್ತಾಪಿಸಿದ್ದಾರೆ.

‘ಸಿಂಧೂ ನದಿ ಜಲಾನಯನ ಪ್ರದೇಶದ ನೀರಿನ ಹಂಚಿಕೆಯನ್ನು ನಿಯಂತ್ರಿಸುವ ಸಿಂಧೂ ಜಲ ಒಪ್ಪಂದವನ್ನು ಅಮಾನತಿನಲ್ಲಿರಿಸುವ ಭಾರತದ ಏಕಪಕ್ಷೀಯ ಮತ್ತು ಕಾನೂನುಬಾಹಿರ ಕ್ರಮ ವಿಷಾದಕರ’ ಎಂದು ಶರೀಫ್ ಹೇಳಿರುವುದಾಗಿ ‘ಡಾನ್’ ವರದಿ ಮಾಡಿದೆ.

‘ರಾಜಕೀಯ ಲಾಭಕ್ಕಾಗಿ ಲಕ್ಷಾಂತರ ಜೀವಗಳನ್ನು ಅಪಾಯಕ್ಕೆ ಸಿಲುಕಿಸಬಾರದು ಮತ್ತು ಪಾಕಿಸ್ತಾನವು ಅದಕ್ಕೆ ಅವಕಾಶ ನೀಡುವುದಿಲ್ಲ. ಒಪ್ಪಂದದ ಎಲ್ಲೆ ಮೀರಲು ನಾವು ಎಂದಿಗೂ ಬಿಡುವುದಿಲ್ಲ’ ಎಂದು ವಿಶ್ವಸಂಸ್ಥೆಯ 80 ಸದಸ್ಯ ರಾಷ್ಟ್ರಗಳು ಮತ್ತು 70 ಅಂತರರಾಷ್ಟ್ರೀಯ ಸಂಸ್ಥೆಗಳ 2,500ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದ ಸಮ್ಮೇಳನದಲ್ಲಿ ಅವರು ಹೇಳಿದ್ದಾರೆ.

ಈ ಸಮ್ಮೇಳನವನ್ನು ತಜಿಕಿಸ್ತಾನ ಸರ್ಕಾರವು ವಿಶ್ವಸಂಸ್ಥೆ ಯುನೆಸ್ಕೊ, ವಿಶ್ವ ಹವಾಮಾನ ಸಂಸ್ಥೆ (ಡಬ್ಲ್ಯುಎಂಒ) ಮತ್ತು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಸಹಯೋಗದೊಂದಿಗೆ ಆಯೋಜಿಸಿತ್ತು.

ಏಪ್ರಿಲ್ 22ರ ಪಹಲ್ಗಾಮ್ ಭಯೋತ್ಪಾದಕ ದಾಳಿಯ ಬೆನ್ನಲ್ಲೇ ಭಾರತವು ಸಿಂಧೂ ಜಲ ಒಪ್ಪಂದವನ್ನು ಅಮಾನತಿನಲ್ಲಿರಿಸುವ ನಿರ್ಧಾರ ತೆಗೆದುಕೊಂಡಿತ್ತು.

ಸಿಂಧೂ ನದಿ ಜಲಾನಯನ ಪ್ರದೇಶದ ಆರು ಪ್ರಮುಖ ನದಿಗಳ ನೀರನ್ನು ಹಂಚಿಕೊಳ್ಳಲು ಮತ್ತು ತಮ್ಮ ನಡುವಿನ ನೀರಿನ ವಿವಾದ ಬಗೆಹರಿಸಲು ಎರಡೂ ದೇಶಗಳು 1960ರಲ್ಲಿ ಸಿಂಧೂ ಜಲ ಒಪ್ಪಂದಕ್ಕೆ ಸಹಿ ಹಾಕಿದ್ದವು.

ಹಫೀಜ್, ಮಸೂದ್‌ನನ್ನು ಒಪ್ಪಿಸಿ: ಸಿಂಗ್

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಭಾರತದ ಜತೆ ಮಾತುಕತೆ ನಡೆಸಬೇಕು ಎಂಬ ವಿಚಾರದಲ್ಲಿ ಪಾಕಿಸ್ತಾನ ಗಂಭೀರವಾಗಿದ್ದರೆ, ಅದು ವಿಶ್ವಸಂಸ್ಥೆಯ ‘ಜಾಗತಿಕ ಉಗ್ರ’ರ ಪಟ್ಟಿಯಲ್ಲಿರುವ ಹಫೀಜ್ ಸಯೀದ್ ಮತ್ತು ಮಸೂದ್ ಅಜರ್ ಅನ್ನು ಭಾರತಕ್ಕೆ ಹಸ್ತಾಂತರಿಸಬೇಕು ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಹೇಳಿದರು.

ಗೋವಾದಲ್ಲಿ ವಿಮಾನವಾಹಕ ನೌಕೆ ಐಎನ್‌ಎಸ್ ವಿಕ್ರಾಂತ್‌ನಲ್ಲಿ ನೌಕಾ ಯೋಧರ ಜತೆಗೆ ನಡೆದ ಸಂವಾದದಲ್ಲಿ ಅವರು ಮಾತನಾಡಿದರು.

ಭಯೋತ್ಪಾದಕ ಸಂಘಟನೆಯಾದ ‘ಲಷ್ಕರ್–ಎ–ತಯಬಾ’ದ ಮುಖ್ಯಸ್ಥ ಹಫೀಜ್ ಸಯೀದ್ ಮತ್ತು ‘ಜೈಷ್–ಎ–ಮೊಹಮ್ಮದ್’ನ ಮುಖ್ಯಸ್ಥ ಮಸೂದ್ ಅಜರ್ ಸಾಕಷ್ಟು ಭಯೋತ್ಪಾದಕ ಕೃತ್ಯ ನಡೆಸಿದ್ದಾರೆ. ಅವರ ಈ ಕೃತ್ಯಗಳಿಂದ ಸಂತ್ರಸ್ತರಾದವರಿಗೆ ನ್ಯಾಯ ದೊರಕಿಸಬೇಕಿದೆ. ಹೀಗಾಗಿ ಅವರನ್ನು ಭಾರತಕ್ಕೆ ಒಪ್ಪಿಸಿ ಎಂದು ಸಿಂಗ್ ಆಗ್ರಹಿಸಿದರು.

ಭಾರತದ ‘ಮೋಸ್ಟ್ ವಾಂಟೆಡ್’ ಭಯೋತ್ಪಾದಕರ ಪಟ್ಟಿಯಲ್ಲಿ ಇರುವ ಇವರಿಬ್ಬರು ವಿಶ್ವಸಂಸ್ಥೆಯ ಜಾಗತಿಕ ಉಗ್ರ ಪಟ್ಟಿಯಲ್ಲೂ ಇದ್ದಾರೆ. ಮುಂಬೈ ದಾಳಿಯ ಆರೋಪಿ ತಹವ್ವುರ್ ರಾಣಾನನ್ನು ಇತ್ತೀಚೆಗೆ ಭಾರತಕ್ಕೆ ಕರೆತರಲಾಗಿದೆ. ಮುಂಬೈ ದಾಳಿಯಲ್ಲಿ ಹಫೀಜ್ ಸಯೀದ್ ಕೂಡ ತಪ್ಪಿತಸ್ಥ ಎಂದು ಅವರು ಹೇಳಿದರು.

ಪಾಕ್‌ಗೆ ಎಚ್ಚರಿಕೆ: ‘ಪಾಕಿಸ್ತಾನ ಯೋಚಿಸಲೂ ಸಾಧ್ಯವಾಗದ ವಿಧಾನಗಳ ಮೂಲಕ ಭಾರತವು ಭಯೋತ್ಪಾದನೆ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ’ ಎಂದು ಸಚಿವ ರಾಜನಾಥ ಸಿಂಗ್ ಅವರು ಇಸ್ಲಾಮಾಬಾದ್‌ಗೆ ಎಚ್ಚರಿಕೆಯ ಸಂದೇಶ ರವಾನಿಸಿದರು.

ಪಾಕಿಸ್ತಾನ ಬೆಂಬಲಿತ ಭಯೋತ್ಪಾದನೆಯನ್ನು ನಿಗ್ರಹಿಸಲು ಭಾರತ ಎಲ್ಲ ರೀತಿಯ ಕಾರ್ಯ ತಂತ್ರಗಳನ್ನು ರೂಪಿಸಲಿದೆ ಎಂದರು.

‘ಪಾಕಿಸ್ತಾನದ ನೆಲದಲ್ಲಿ ಭಾರತ ವಿರೋಧಿ ಚಟುವಟಿಕೆಗಳು ಮುಕ್ತವಾಗಿ ನಡೆಯುತ್ತಿವೆ. ಹೀಗಾಗಿ ಭಾರತವು ಭಯೋತ್ಪಾದಕರ ವಿರುದ್ಧ ಗಡಿ ಆಚೆ ಮತ್ತು ಗಡಿ ಒಳಗೆ ಹಾಗೂ ಸಮುದ್ರದಿಂದ ಕಾರ್ಯಾಚರಣೆ ನಡೆಸಲು ಸಂಪೂರ್ಣ ಮುಕ್ತವಾಗಿದೆ’ ಎಂದು ಅವರು ತಿಳಿಸಿದರು.

‘ನೌಕಾಪಡೆ ಪ್ರತ್ಯುತ್ತರ ನೀಡಲಿದೆ’

ನವದೆಹಲಿ (ರಾಯಿಟರ್ಸ್): ಪಾಕಿಸ್ತಾನ ಭವಿಷ್ಯದಲ್ಲಿ ಮಾಡಬಹುದಾದ ಯಾವುದೇ ದಾಳಿಗೆ ಭಾರತದ ನೌಕಾಪಡೆ ಪ್ರತ್ಯುತ್ತರ ನೀಡಲಿದೆ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಸುದ್ದಿಗಾರರಿಗೆ ತಿಳಿಸಿದರು.

ಪಾಕಿಸ್ತಾನವು ಯಾವುದೇ ರೀತಿಯ ದುಷ್ಟ ಅಥವಾ ಅನೈತಿಕ ಕೃತ್ಯಕ್ಕೆ ಮುಂದಾದರೆ, ಭಾರತೀಯ ನೌಕಾಪಡೆಯ ಶಕ್ತಿ ಮತ್ತು ಕೋಪವನ್ನು ಅದು ಎದುರಿಸಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು.

ಕೋವಿಡ್: ಮರಣ ಪ್ರಕರಣ 3ಕ್ಕೆ ಏರಿಕೆ

ಬೆಂಗಳೂರು: ಮೈಸೂರಿನಲ್ಲಿ ಇದೇ 25ರಂದು ಮರಣ ಹೊಂದಿದ 63 ವರ್ಷದ ವ್ಯಕ್ತಿ ಕೋವಿಡ್ ಪೀಡಿತರಾಗಿದ್ದರು ಎನ್ನುವುದು ಪರೀಕ್ಷಾ ವರದಿಯಿಂದ ದೃಢಪಟ್ಟಿದೆ. ಇದರಿಂದಾಗಿ ರಾಜ್ಯದಲ್ಲಿ ಈ ವರ್ಷ ವರದಿಯಾದ ಒಟ್ಟು ಕೋವಿಡ್ ಮರಣ ಪ್ರಕರಣಗಳ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ.

ಮೂತ್ರಪಿಂಡ ವೈಫಲ್ಯದ ಕಾರಣ ಇದೇ 15 ರಂದು ಅವರು ಅಲ್ಲಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರಿಗೆ ಉಸಿರಾಟದ ಸಮಸ್ಯೆಯೂ ಕಾಣಿಸಿಕೊಂಡಿತ್ತು. ಆದ್ದರಿಂದ, ಕೋವಿಡ್ ಪರೀಕ್ಷೆಗೆ ಅವರ ಗಂಟಲ ದ್ರವದ ಮಾದರಿಯನ್ನು ಸಂಗ್ರಹಿಸಲಾಗಿತ್ತು. ಈ ಪ್ರಕರಣದ ಪರೀಕ್ಷಾ ವರದಿ ಶುಕ್ರವಾರ ಬಂದಿದ್ದು, ಕೊರೊನಾ ಸೋಂಕಿತರಾಗಿದ್ದರು ಎನ್ನುವುದು ಖಚಿತಪಟ್ಟಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದಿದೆ. ಶುಕ್ರವಾರ 114 ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಈ ವರ್ಷ ವರದಿಯಾದ ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 367ಕ್ಕೆ ಏರಿಕೆಯಾಗಿದೆ.

ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 234ಕ್ಕೆ ತಲುಪಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಡಿಪ್ಲೊಮಾ ಸಿಇಟಿ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಪ್ಲೊಮಾ ಪ್ರವೇಶಕ್ಕೆ ಮೇ 31ರಂದು ರಾಜ್ಯದ 113 ಕೇಂದ್ರಗಳಲ್ಲಿ ಪರೀಕ್ಷೆ (ಡಿ–ಸಿಇಟಿ) ನಡೆಯುತ್ತಿದೆ.

ಈ ಪರೀಕ್ಷೆಗಳಲ್ಲೂ ಮುಖ ಚಹರೆ ಪತ್ತೆ ತಂತ್ರಜ್ಞಾನದ ಮೂಲಕವೇ ಅಭ್ಯರ್ಥಿಗಳ ಗುರುತು ಪತ್ತೆ ಹಚ್ಚಲಾಗುತ್ತದೆ. ನಕಲಿ ಅಭ್ಯರ್ಥಿಗಳ ಪ್ರವೇಶಕ್ಕೆ ಅವಕಾಶವೇ ಇರುವುದಿಲ್ಲ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಡಿಪ್ಲೊಮಾ ಮುಗಿಸಿ, ಎಂಜಿನಿಯರಿಂಗ್ ಪದವಿಯ 3ನೇ ಸೆಮಿಸ್ಟರ್ ಅಥವಾ ಎರಡನೇ ವರ್ಷಕ್ಕೆ ನೇರ ಪ್ರವೇಶ ಕಲ್ಪಿಸಲು ರಾಜ್ಯದ 46 ಕೇಂದ್ರಗಳಲ್ಲಿ ಡಿ–ಸಿಇಟಿ ನಡೆಸುತ್ತಿದ್ದು, 21,201 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಎಂ.ಟೆಕ್‌ನ ಮ್ಯಾಕಾನಿಕಲ್, ಸಿವಿಲ್ ಮತ್ತು ಎಲೆಕ್ಟ್ರಿಕಲ್ ಸೈನ್ಸ್ ಕೋರ್ಸ್‌ಗಳ ಪ್ರವೇಶಕ್ಕೆ 13 ಕೇಂದ್ರಗಳಲ್ಲಿ ಪಿಜಿ– ಸಿಇಟಿ ನಡೆಯುತ್ತಿದ್ದು, 3,756 ಮಂದಿ ಪರೀಕ್ಷೆ ಬರೆಯುತ್ತಿದ್ದಾರೆ ಎಂದು ವಿವರಿಸಿದ್ದಾರೆ.

ಅಂಗವಿಕಲ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆ: ಸಿಇಟಿ ಬರೆದ ಅಂಗವಿಕಲ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆ ಜೂನ್ 3ರಿಂದ 6ರವರೆಗೆ ನಡೆಯಲಿದೆ. ಅಭ್ಯರ್ಥಿಗಳು ಮುಂಗಡವಾಗಿ ದಿನಾಂಕ ಕಾಯ್ದಿರಿಸಿಕೊಳ್ಳಲು ವೆಬ್‌ಸೈಟ್‌ನಲ್ಲಿ ಲಿಂಕ್ ಬಿಡುಗಡೆ ಮಾಡಲಾಗಿದೆ.

ಪಿಜಿ– ಸಿಇಟಿ (ಎಂ.ಇ, ಎಂ.ಟೆಕ್) ತೆಗೆದುಕೊಂಡಿರುವ ಅಂಗವಿಕಲ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆ ಜೂನ್ 9ರಂದು ಕೆಇಎ ಕಚೇರಿಯಲ್ಲಿ ನಡೆಯಲಿದೆ.

ಅಬ್ದುಲ್ ಕುಟುಂಬಕ್ಕೆ ₹ 50 ಲಕ್ಷ ಪರಿಹಾರದ ಭರವಸೆ

ಮಂಗಳೂರು: ದುಷ್ಕರ್ಮಿಗಳಿಂದ ಕೊಲೆಯಾದ ಬಂಟ್ವಾಳ ತಾಲ್ಲೂಕು ಕೊಳ್ತಮಜಲಿನ ಅಬ್ದುಲ್ ರಹಿಮಾನ್ ಅವರ ಕುಟುಂಬಕ್ಕೆ ವೈಯಕ್ತಿಕವಾಗಿ ₹ 50 ಲಕ್ಷ ನೆರವು ನೀಡುವುದಾಗಿ ವಕ್ಫ್ ಸಚಿವ ಹಾಗೂ ಕರ್ನಾಟಕ ವಕ್ಫ್ ಸಮಿತಿ ಅಧ್ಯಕ್ಷ ಜಮೀರ್ ಅಹಮ್ಮದ್ ಅವರು ಭರವಸೆ ನೀಡಿದ್ದಾರೆ ಎಂದು ಸಮಿತಿ ಉಪಾಧ್ಯಕ್ಷ ಎಂ.ಕೆ ಶಾಫಿ ಸಅದಿ ತಿಳಿಸಿದರು.

ಅಬ್ದುಲ್ ರಹಿಮಾನ್ ಅವರ ಮನೆಗೆ ಶುಕ್ರವಾರ ಭೇಟಿ ನೀಡಿ ಕುಟುಂಬದವರ ಜೊತೆ ಮಾತನಾಡಿದ ಅವರು ಸಚಿವರ ಭರವಸೆಯನ್ನು ತಿಳಿಸಿದರು. ಸಚಿವರು ಸದ್ಯದಲ್ಲೇ ಅಬ್ದುಲ್ ಮನೆಗೆ ಭೇಟಿ ನೀಡಲಿದ್ದಾರೆ ಎಂದು ಅವರು ವಿವರಿಸಿದರು.

ಭಾರತ ಸರ್ಕಾರ
ಸಂವಹನ ಸಚಿವಾಲಯ, ದೂರಸಂಪರ್ಕ ಇಲಾಖೆ
ಸಂವಹನ ಖಾತೆಗಳ ನಿಯಂತ್ರಕ ಕಚೇರಿ
ಕರ್ನಾಟಕ ವೃತ್ತ, ಅರಮನೆ ರಸ್ತೆ, ಬೆಂಗಳೂರು
ಸತ್ಯಮೇವ ಜಯತೇ

ನಿವೃತ್ತಿ ವೇತನದಾರರ ಪಿಂಚಣಿ ಅದಾಲತ್ ನಡೆಸುವ ಸಂಬಂಧ ಪ್ರಕಟನೆ (ಬಿ ಎಸ್ ಎನ್ ಎಲ್ / ಟೆಲಿಕಾಂ ಪಿಂಚಣಿದಾರರ ಗಮನಕ್ಕೆ)

40ನೇ ಪಿಂಚಣಿ ಅದಾಲತ್ ಅನ್ನು ಕರ್ನಾಟಕ ವಲಯದ ದೂರಸಂಪರ್ಕ ಇಲಾಖೆ ಅಥವಾ ಬಿ.ಎಸ್.ಎನ್.ಎಲ್ ನಿಂದ ನಿವೃತ್ತಿಯಾದವರಿಗೆ ಜೂನ್–2025 ರಂದು ನಡೆಸಲು ಉದ್ದೇಶಿಸಲಾಗಿದೆ. ಸಂಬಂಧ ಪಟ್ಟಂತಹ ನಿವೃತ್ತಿದಾರರು/ ಕುಟುಂಬ ಪಿಂಚಣಿದಾರರು ತಮ್ಮ ಅಹವಾಲುಗಳನ್ನು ತಮ್ಮ PPO ವಿವರಗಳೊಂದಿಗೆ ಅಂಚೆ ಅಥವಾ ಇ–ಮೇಲ್ ಮೂಲಕ (jtcca1.ka-dot@gov.in) ದಿನಾಂಕ 13–06–2025 ಒಳಗೆ ಸಲ್ಲಿಸಬಹುದು. ನ್ಯಾಯಾಲಯಕ್ಕೆ ಸಂಭಂದಿಸಿದ ಹಾಗೂ ಉತ್ತರಾಧಿಕಾರಿ ಸಂಬಂಧಿತ ಅಥವಾ ನೀತಿ ನಿಯಮಾವಳಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಜಂಟಿ ದೂರಸಂಪರ್ಕ ಲೆಕ್ಕ ನಿಯಂತ್ರಕರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಜಂಟಿ ಆಯುಕ್ತರವರ ಕಚೇರಿ, ದಕ್ಷಿಣ ವಲಯ ಕಚೇರಿ ಸಂಕೀರ್ಣ, 9ನೇ ಮೇನ್, 9ನೇ ಕ್ರಾಸ್, ಜಯನಗರ 2ನೇ ಬ್ಲಾಕ್, ಬೆಂಗಳೂರು–11.

ಸಂಖ್ಯೆ: ಜಂಆ(ದ)/ಕೆಪಿಪಿಪಿ/ಇ–ಪೋರ್ಟಲ್/01/2025–26 ದಿನಾಂಕ: 30.05.2025

ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ (ಐಎಫ್‌ಟಿ)

ದ್ವಿಲಕೋಟೆ ಪದ್ಧತಿ (ಜಿಓಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಜಂಟಿ ಆಯುಕ್ತರು, ದಕ್ಷಿಣ, ಬಿಬಿಎಂಪಿ, ಬೆಂಗಳೂರು ಇವರು ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ದಕ್ಷಿಣ ವಲಯ ರೆಫೆರಲ್ ಆಸ್ಪತ್ರೆಗಳು, ಹೆರಿಗೆ ಆಸ್ಪತ್ರೆಗಳು, ಡಯಾಲಿಸಿಸ್ ಕೇಂದ್ರಗಳು ಮತ್ತು ಆರೋಗ್ಯ ಕೇಂದ್ರಗಳಲ್ಲಿ ಸ್ವಚ್ಛತಾ ಮತ್ತು ಹೌಸ್ ಕೀಪಿಂಗ್ ಸೇವೆಗಳನ್ನು ಒದಗಿಸುವುದು.
	ಟೆಂಡರ್‌ಗಿಟ್ಟ ಅಂದಾಜು ಮೊತ್ತ: **ರೂ. 275.38 ಲಕ್ಷಗಳು**. ಇಎಂಡಿ: **ರೂ. 4,13,074/–**

ಕಾಮಗಾರಿ ಪೂರ್ಣಗೊಳಿಸುವ ಅವಧಿ: **11 ತಿಂಗಳು.**

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ https://kppp.karnataka.gov.inನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವ ಬಿಡ್ ಸಭೆಯ ದಿನಾಂಕ: **06.06.2025ರ ಮಧ್ಯಾಹ್ನ 3.00 ಗಂಟೆಗೆ –ಜಂಟಿ ಆಯುಕ್ತರು, ಬಿಬಿಎಂಪಿ / ಕಾರ್ಯಪಾಲಕ ಅಭಿಯಂತರರು, ಯೋಜನೆ (ದಕ್ಷಿಣ) ಇವರ ಕಚೇರಿಯಲ್ಲಿ.** (3) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **13.06.2025ರ ಸಂಜೆ 5.30 ಗಂಟೆವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **16.06.2025ರ ಸಂಜೆ 5.30 ಗಂಟೆಗೆ.** (5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **18.06.2025ರ ಸಂಜೆ 5.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಜಂಟಿ ಆಯುಕ್ತರು, ದಕ್ಷಿಣ ವಲಯ, ಬಿಬಿಎಂಪಿ

ನಗರಸಭಾ ಕಾರ್ಯಾಲಯ, ಚಿತ್ರದುರ್ಗ–577501

ಸಂ:ನಸಚಿ:ತಾಂತ್ರಿಕ(1)/ಟೆಂಡರ್:ಸಿಆರ್:06:2025–26, ದಿನಾಂಕ:28–05–2025

ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೂರ್ಣಾವಧಿ ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂರ ನಿಬಂಧನೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2025–26ನೇ ಸಾಲಿನ 15ನೇ ಹಣಕಾಸು ಅನುದಾನದಲ್ಲಿ ಅನುಮೋದನೆಯಾಗಿರುವ 35 ಕಾಮಗಾರಿಗಳ ರೂ.420.60 ಲಕ್ಷಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್ ಕರೆಯಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ https://kppp.karnataka.gov.in ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವಿಕರಿಸಲಾಗುವುದಿಲ್ಲ. ವಿವರ ಈ ಕೆಳಕಂಡಂತೆ ಇರುತ್ತದೆ. ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ಕಾಮಗಾರಿ ವಿಭಾಗದಲ್ಲಿ ಅಭಿಯಂತರರನ್ನು ವಿಚಾರಿಸಬಹುದು ಅಥವಾ ನಗರಭೆಯ ಅಂತರ್‌ಜಾಲ www.chitradurgacity.mrc. gov.in ನಲ್ಲಿ ವರ್ಕ್‌ಇಂಡೆಂಟ್ ನಂಬರ್, ಟೆಂಡರ್ ಮೀಸಲಾಯಿತಿ ಮತ್ತು ಟೆಂಡರ್ ನೋಟಿಫಿಕೇಷನ್ ಪಡೆಯಬಹುದಾಗಿದೆ. ಜಿ.ಎಸ್.ಟಿ.ಮೊತ್ತ ಪ್ರತ್ಯೇಕವಾಗಿ ಪಾವತಿಸಲಾಗುವುದು. (35 ಕಾಮಗಾರಿಗಳ ಇಂಡೆಂಟ್‌ಗಳನ್ನು ಪ್ರತ್ಯೇಕವಾಗಿ ಪ್ರಚುರಪಡಿಸಲಾಗುವುದು) (ಗರಿಷ್ಠ ಮೊತ್ತ ರೂ.30.00 ಲಕ್ಷಗಳು)

(1) ಖಾಲಿ ಟೆಂಡರ್ ಫಾರಂಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನುಭರ್ತಿವಾಡಿ ಸಲ್ಲಿಸುವಕೊನೆಯ ದಿನಾಂಕ: 17–06–2025 ರ 5.00 ಗಂಟೆ ಸಂಜೆವರೆಗೆ
(2) ಟೆಂಡರ್‌ನ್ನು ತೆರೆಯುವ ದಿನಾಂಕ (ತಾಂತ್ರಿಕ) 18–06–2025 ರ 5.30 ಗಂಟೆಗೆ
(3) ಟೆಂಡರ್‌ನ್ನು ತೆರೆಯುವ ದಿನಾಂಕ (ಆರ್ಥಿಕ) 19–06–2025 ರ 5.30 ಗಂಟೆಗೆ
(4) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) KPPP Portal ನಿಯಮಾನುಸಾರ

DIPR/CTA/KSMCA/ 117/2025-26

ಸಹಿ/–ಪೌರಾಯುಕ್ತರು, ನಗರಸಭೆ, ಚಿತ್ರದುರ್ಗ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ
ಟಿ.ಬಿ. ಸರ್ಕಲ್ ಹತ್ತಿರ, ತುಮಕೂರು ರಸ್ತೆ, ದೊಡ್ಡಬಳ್ಳಾಪುರ – 561203, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ: 080–29799416
ಇ–ಮೇಲ್: apmc.dbpur@gmail.com

ಸಂಖ್ಯೆ: ಕೃಉಮಾಸ/ದೊ/64/2025–26 ದಿನಾಂಕ: 20–05–2025

ಇ–ಟೆಂಡರ್ ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ದೊಡ್ಡಬಳ್ಳಾಪುರ ವತಿಯಿಂದ 2024–25 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ದೊಡ್ಡಬಳ್ಳಾಪುರದ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಸಿಸ್ಟರ್ನ್ ಅಳವಡಿಸಿ ಪಿ.ವಿ.ಸಿ ಪೈಪ್ ಅಳವಡಿಸುವ ಕಾಮಗಾರಿಗೆ ಕೆ.ಡಬ್ಲ್ಯೂ.–1 ರಂತೆ ಅರ್ಹ ಗುತ್ತಿಗೆದಾರರಿಂದ ಐಟಂವಾರು ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತ **ರೂ. 8,88,289=00** ಕಾಲಾವಧಿ **03 ತಿಂಗಳು** (ಮಳೆಗಾಲ ಹೊರತುಪಡಿಸಿ) ಇ.ಎಂ.ಡಿ ಶುಲ್ಕ **ರೂ. 22,300/–**. ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **20–06–2025 ರಂದು ಸಂಜೆ 4.00 ಗಂಟೆವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **23–06–2025 ರಂದು ಬೆಳಿಗ್ಗೆ 11.00 ಗಂಟೆಗೆ** ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: **27–06–2025 (ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ).** ಟೆಂಡರ್ ಷರತ್ತು–ವ–ನಿಬಂಧನೆಗಳು ಮತ್ತು ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪಡೆಯಬಹುದು ಅಥವಾ ಮೊಬೈಲ್ ಸಂಖ್ಯೆ: **9108012472** ರಲ್ಲಿ ಸಂಪರ್ಕಿಸತಕ್ಕದ್ದು.

ಸಹಿ/– ಕಾರ್ಯದರ್ಶಿ, ಕೃಉಮಾಸ, ದೊಡ್ಡಬಳ್ಳಾಪುರ
ಸಹಿ/– ಆಡಳಿತಾಧಿಕಾರಿಗಳು, ಕೃಉಮಾಸ, ದೊಡ್ಡಬಳ್ಳಾಪುರ

ವಾಸಾಸಂಇ/ವಾ.ಪ್ರ/930/ಅಡ್ವಟೋರ್/2025–26

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಆಸ್ತಿ ವಿಭಾಗ, ಕೃಷಿ ನಗರ, ಧಾರವಾಡ – 580 005. ದೂ.: 91–836–2214332/216,444.
ಮಿಂಚಂಚೆ : estateofficer@rediffmail.com

ಸಂಖ್ಯೆ : ಆ.ಅ./ಡಿ.ಬಿ./ಟಿಎನ್./ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್–127/2025–26
ದಿನಾಂಕ : 26–05–2025

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ತೃತೀಯ ಕರೆ)

ಕೃಷಿ ವಿಶ್ವವಿದ್ಯಾಲಯ ಧಾರವಾಡದ ಮುಖ್ಯ ಆವರಣದಲ್ಲಿ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರುಗಳಿಂದ ಟೆಂಡರುಗಳನ್ನು ಮರು ಅಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿಯಂತೆ http://kppp.karnataka.gov.in ಆನ್‌ಲೈನ್ ಮುಖಾಂತರ ಸಲ್ಲಿಸತಕ್ಕದ್ದು.

ಟೆಂಡರ್ ವೇಳಾ ಪಟ್ಟಿ

1) ವಿಚಾರಣೆಗಳಿಗಾಗಿ ಕೊನೆಯ ದಿನಾಂಕ : 06–06–2025 ರ ಅಪರಾಹ್ನ 4.00 ಗಂಟೆಗೆ, 2) ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ ಹಾಗೂ ವೇಳೆ : 09–06–2025 ರ ಬೆಳಿಗ್ಗೆ 11.00 ಗಂಟೆಗೆ, 3) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 12–06–2025 ರ ಅಪರಾಹ್ನ 4.00 ಗಂಟೆಗೆ, 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ : 13–06–2025 ರ ಅಪರಾಹ್ನ 4.15 ಗಂಟೆಗೆ, 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ : 14–06–2025 ರ ಅಪರಾಹ್ನ 4.00 ಗಂಟೆಗೆ.

ಹೆಚ್ಚಿನ ವಿವರಗಳಿಗಾಗಿ ಕಚೇರಿ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ : 0836 – 2214332 ಸಂಪರ್ಕಿಸಬಹುದು. ಇ–ಪ್ರೊಕ್ಯೂರ್‌ಮೆಂಟ್ ನೋಂದಣಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 080 – 4601 0000.

ಸೂಚನೆ : ಟೆಂಡರ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇ–ಪ್ರೊಕ್ಯೂರಮೆಂಟ್ ವೇದಿಕೆಯಲ್ಲಿ ಪ್ರವಹಿಸುವ ತಿದ್ದುಪಡಿಗಳು / ಮಾರ್ಪಾಡುಗಳನ್ನು ಗುತ್ತಿಗೆದಾರರು ಗಮನಿಸಬೇಕು.

ಸಹಿ/– ಆಸ್ತಿ ಅಧಿಕಾರಿಗಳು, ಕೃ.ವಿ.ವಿ., ಧಾರವಾಡ.

ಡಿಐಪಿಆರ್/ಧಾರವಾಡ/228/ಮಣಿಪಾಲ್/2025–26

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು
www.eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಈ ಕಛೇರಿ ಐಟಂವಾರು ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ:02/2024–25 ದಿನಾಂಕ: 28.05.2025

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ 'ಇಂಜಿನಿಯರ್ ರವರಿಂದ ಈ ವಿಭಾಗ ವ್ಯಾಪ್ತಿಯ ನಂ.2 ವಿಶೇಷ ಉಪ ವಿಭಾಗ ಮೈಸೂರಿನ ಒಟ್ಟು ಒಂದು ಸಂಖ್ಯೆ ಕಾಮಗಾರಿಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–4ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್‌ನಲ್ಲಿ ನೊಂದಾಯಿಸಿರುವ ಲೋಕೋಪಯೋಗಿ 2ನೇ ದರ್ಜೆ ಹಾಗೂ ಮೇಲ್ಪಟ್ಟ ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟ್‌ಲ್‌ನಲ್ಲಿ (viz https://kppp.karnataka.gov.in/) 29.05.2025 ರಿಂದ 06.06.2025 ಸಂಜೆ 17:00ರ ವರೆಗೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ ರೂ.236.85 ಲಕ್ಷಗಳು ಹಾಗೂ ಇ.ಎಂ.ಡಿ ರೂ.3.55 ಲಕ್ಷಗಳಾಗಿರುತ್ತದೆ ಸದರಿ ಕಾಮಗಾರಿಗೆ ಪೂರ್ವಭಾವಿ ಸಭೆಯನ್ನು ದಿ: 02.06.2025 ರಂದು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಪೂರ್ವಾಹ್ನ 11.00ಕ್ಕೆ ನಿಗಧಿಪಡಿಸಿದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್

DIPR/DDMYS/269/KSMCA/229/2025-26

ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–3 ರವರ ಕಚೇರಿ, 1ನೇ ಮಹಡಿ, ಬೃ.ಬೆಂ.ಮ.ಪಾಲಿಕೆ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560052.

ಸಂಖ್ಯೆ: ಉಪ್ರವ್ಯ–3/ಬೆಂಘತ್ಯಾನಿನಿ/ಟೆಂಡರ್/03/2025–26 ದಿನಾಂಕ: 30.05.2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

1. ಅನುಮೋದಿತ ತಂತ್ರಜ್ಞಾನದೊಂದಿಗೆ ಹಸಿ ತ್ಯಾಜ್ಯವನ್ನು ಸಂಸ್ಕರಿಸಿ ಎಸ್‌ಓಪಿರಂತೆ ಕಾಂಪೋಸ್ಟ್ ಉತ್ಪತ್ತಿ ಮಾಡಲು ಬೃ.ಬೆಂ.ಮ.ಪಾಲಿಕೆಯಿಂದ ಸ್ಥಾಪಿತವಾಗಿರುವ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡಬೇಕಾಗಿರುತ್ತದೆ.
2. ಈ ನಿಟ್ಟಿನಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಬೆಂ.ಘ.ತ್ಯಾ.ನಿ.ನಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಜಾಲತಾಣದ (**https://kppp.karnataka.gov.in**) ಮೂಲಕ ಪ್ರತಿ ಕಾಮಗಾರಿಯ ಐಟಂಗೆ ನಿರ್ದಿಷ್ಟಪಡಿಸಿರುವ ಶುಲ್ಕವನ್ನು (ಮರುಪಾವತಿಸಲಾಗುವುದಿಲ್ಲ) ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಇ–ಪಾವತಿಸುವುದರ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ಡರುಗಳು ಬಿಡ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸುವುದು.

ಕಾಮಗಾರಿಗಳ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಇಎಂಡಿ	ಪೂರ್ಣಗೊ–ಳಿಸಲು ನಿಗದಿತ ಅವಧಿ
ಸೀಗೇಹಳ್ಳಿಯಲ್ಲಿರುವ 120 ಟಿಪಿಡಿ ಸಾಮರ್ಥ್ಯದ ಹಸಿ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವುದು.	**994.27**	ರೂ. 1,00,000/– ಗಳನ್ನು ಆನ್‌ಲೈನ್/ಎನ್‌ಇಎಫ್‌ಟಿ/ಓಟಿಸಿಯ ಮೂಲಕ ಇ–ಪಾವತಿ ಮತ್ತು ಉಳಿಕೆ ರೂ. 13,91,405 ಗಳನ್ನು ರಾಷ್ಟ್ರೀಕೃತ/ಅನುಸೂಚಿತ ಬ್ಯಾಂಕುಗಳು ವಿತರಿಸುವ ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ.	24 ತಿಂಗಳು
ಚಿಕ್ಕನಾಗಮಂಗಲದಲ್ಲಿರುವ 300 ಟಿಪಿಡಿ ಸಾಮರ್ಥ್ಯದ ಹಸಿ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವುದು.	**1986.45**	ರೂ. 1,00,000/– ಗಳನ್ನು ಆನ್‌ಲೈನ್/ಎನ್‌ಇಎಫ್‌ಟಿ/ಓಟಿಸಿಯ ಮೂಲಕ ಇ–ಪಾವತಿ ಮತ್ತು ಉಳಿಕೆ ರೂ. 18,86,405 ಗಳನ್ನು ರಾಷ್ಟ್ರೀಕೃತ/ಅನುಸೂಚಿತ ಬ್ಯಾಂಕುಗಳು ವಿತರಿಸುವ ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ.	24 ತಿಂಗಳು

ಟೆಂಡರ್ ವೇಳಾಪಟ್ಟಿ: 1) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **10.06.2025**ರ ಮಧ್ಯಾಹ್ನ **3:00** ಗಂಟೆಗೆ ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)ರವರ ಕಚೇರಿ, ಬೆಂಘತ್ಯಾನಿನಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560052 ಇಲ್ಲಿ ನಡೆಸಲಾಗುವುದು. 2) ಬಿಡ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **30.06.2025**ರ ಸಂಜೆ **4:00** ಗಂಟೆಯೊಳಗೆ ಸಲ್ಲಿಸುವುದು. 3) ತಾಂತ್ರಿಕ ಬಿಡ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: **01.07.2025**ರ ಸಂಜೆ **4:30** ಗಂಟೆಯ ನಂತರ ತೆರೆಯಲಾಗುವುದು. **ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂ.ಘ.ತ್ಯಾ.ನಿ.ನಿ, ಬೆಂಗಳೂರು**

ಡಿಐಪಿಆರ್/ಸಿಪಿ/951/ಸಿಸಿಎಲ್/2025–26

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–2 ರವರ ಕಛೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052.

ಸಂಖ್ಯೆ: ಡಿಜಿಎಂ–2/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/08/2025–26 ದಿನಾಂಕ : 30.05.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1. ಬಿಬಿಎಂಪಿ ಸ್ಥಾಪಿಸಿದ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಎಸ್‌ಒಪಿ ಪ್ರಕಾರ ಗೊಬ್ಬರವನ್ನು ಉತ್ಪಾದಿಸಲು ಅನುಮೋದಿತ ತಂತ್ರಜ್ಞಾನದೊಂದಿಗೆ ಹಸಿ ತ್ಯಾಜ್ಯವನ್ನು ಸಂಸ್ಕರಿಸಲು ನಿರ್ವಹಿಸಬೇಕು.
2. ಈ ಹಿನ್ನೆಲೆಯಲ್ಲಿ, ಬಿಎಸ್‌ಡಬ್ಲ್ಯೂಎಂಎಲ್‌ನ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
3. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ **(https://kppp.karnataka.gov.in)** ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರತಿ ಕೆಲಸದ ಮುಂದೆ ನಿಗದಿತ ಶುಲ್ಕವನ್ನು (ಮರುಪಾವತಿಸಲಾಗುವುದಿಲ್ಲ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಇ–ಪಾವತಿ ರೂಪದಲ್ಲಿ ಪಾವತಿಸಬೇಕು. ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಬೇಕು.

ಕ್ರ ಸಂ	ಕಾಮಗಾರಿಗಳ ಹೆಸರು	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	ಇಎಂಡಿ (ಮೊತ್ತ ರೂ.ಗಳಲ್ಲಿ)	ಸೇವಾ ಒಪ್ಪಂದದ ನಿಗದಿತ ಅವಧಿ
1	ಲಿಂಗಧೀರನಹಳ್ಳಿಯಲ್ಲಿರುವ 150 ಟಿಪಿಡಿ ಹಸಿ ತ್ಯಾಜ್ಯ ಸಂಸ್ಕರಣಾ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆ	992.46	ರೂ. 1,00,000/– ಅನ್ನು ಇ–ಪಾವತಿ ಮೂಲಕ, ಅಂದರೆ ಆನ್‌ಲೈನ್/ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಓಟಿಸಿ ಮೂಲಕ, ಮತ್ತು ಉಳಿದ ರೂ.13,88,700/– ಅನ್ನು ರಾಷ್ಟ್ರೀಕೃತ/ಕೋಷ್ಟಕ ಬ್ಯಾಂಕ್ ನೀಡಿದ ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ ಪಾವತಿಸಲಾಗುತ್ತದೆ.	24 ತಿಂಗಳು
2	ಸುಬ್ಬರಾಯನಪಾಳ್ಯದಲ್ಲಿರುವ 150 ಟಿಪಿಡಿ ಹಸಿ ತ್ಯಾಜ್ಯ ಸಂಸ್ಕರಣಾ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆ	992.46	ರೂ. 1,00,000/– ಅನ್ನು ಇ–ಪಾವತಿ ಮೂಲಕ, ಅಂದರೆ ಆನ್‌ಲೈನ್/ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಓಟಿಸಿ ಮೂಲಕ, ಮತ್ತು ಉಳಿದ ರೂ.13,88,700/– ಅನ್ನು ರಾಷ್ಟ್ರೀಕೃತ/ಕೋಷ್ಟಕ ಬ್ಯಾಂಕ್ ನೀಡಿದ ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ ಪಾವತಿಸಲಾಗುತ್ತದೆ.	24 ತಿಂಗಳು

ಟೆಂಡರ್‌ನ ಕಾರ್ಯಸೂಚಿ :
1. ಪೂರ್ವ ಬಿಡ್ ಸಭೆಯು **ದಿನಾಂಕ 10.06.2025 ರಂದು ಮಧ್ಯಾಹ್ನ 3:00 ಗಂಟೆಗೆ** ಮುಖ್ಯ ಎಂಜಿನಿಯರ್ ಮತ್ತು ಮುಖ್ಯ ಜನರಲ್ ಮ್ಯಾನೇಜರ್ (ತಂತ್ರಜ್ಞಾನ), ಬಿಎಸ್‌ಡಬ್ಲ್ಯೂಎಂಎಲ್, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು–52 ರವರ ಕಚೇರಿಯಲ್ಲಿ ನಡೆಯಲಿದೆ.
2. ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 30.06.2025 ರಂದು ಸಂಜೆ 4:00 ಗಂಟೆಯ ಮೊದಲು.**
3. **ಕೆಪಿಪಿ ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01.07.2025 ರಂದು ಸಂಜೆ 4:30 ರ ನಂತರ.**

ಸೂಚನೆ :
1. ಜಂಟಿ ಉದ್ಯಮವು 2 (ಎರಡು) ಘಟಕಗಳವರೆಗೆ ಅನುಮತಿಸಲಾಗಿದೆ. ಟೆಂಡರ್‌ನ ಮಾನ್ಯತೆಯು ಟೆಂಡರ್ ತೆರೆದ ದಿನಾಂಕದಿಂದ 180 ದಿನಗಳು.
2. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೋಂದಾಯಿಸದ ಆಕಾಂಕ್ಷಿ ಬಿಡ್ಡರ್‌ಗಳು/ಗುತ್ತಿಗೆದಾರರು ವೆಬ್‌ಸೈಟ್ **(https://kppp.karnataka.gov.in)**ಮೂಲಕ ಭಾಗವಹಿಸುವ ಮೊದಲು ನೋಂದಾಯಿಸಿಕೊಳ್ಳಬೇಕು.
3. ಬಿಡ್ ದಸ್ತಾವೇಜಿನಲ್ಲಿರುವ ಟೆಂಡರ್ ಷರತ್ತುಗಳ ಪ್ರಕಾರ ಬಿಡ್ದಾರರು ಅರ್ಹತಾ ಮಾನದಂಡಗಳನ್ನು ಪೂರೈಸಬೇಕಾಗುತ್ತದೆ.
4. ಆನ್‌ಲೈನ್ ಬಿಡ್‌ಗಳನ್ನು ಸಲ್ಲಿಸುವ ಮೊದಲು, ಬಿಡ್‌ದಾರರು ಎಲ್ಲಾ ಅಗತ್ಯ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಬಿಡ್‌ನೊಂದಿಗೆ ಲಗತ್ತಿಸುವುದು.
5. ಬಿಡ್‌ಗಳಿಗೆ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಭರ್ತಿ ಮಾಡಿ ಆನ್‌ಲೈನ್‌ನಲ್ಲಿ ಸಲ್ಲಿಸುವುದು.
6. ಹೆಚ್ಚಿನ ವಿವರಗಳಿಗಾಗಿ, ನೋಂದಣಿ ಮತ್ತು ಇ–ಪಾವತಿಗಾಗಿ ಜಿಓಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ಗೆ ಭೇಟಿ ನೀಡುವುದು ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಸಹಾಯವಾಣಿಯನ್ನು ಸಂಪರ್ಕಿಸುವುದು.
7. ಯಾವುದೇ ತಿದ್ದುಪಡಿ / ಅನುಬಂಧವನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–2, ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/950/ಎಸ್‌ಎಸ್‌ಸಿ/2025–26

ಸುಭಾಷಿತ

ನೀವು ಸಂಖ್ಯೆಯೊಂದರ ಮುಂದೆ ಇರುವ ಶೂನ್ಯದಂತೆ ಮೌನವಾಗಿದ್ದರೆ ನಿಮಗೆ ಬೆಲೆ ಬರುತ್ತದೆ. ಒಂದು ಸಂಖ್ಯೆಯ ಮುಂದೆ ಎಷ್ಟು ಶೂನ್ಯಗಳು ಇರುತ್ತವೋ ಆ ಸಂಖ್ಯೆಯ ಬೆಲೆ ಅಷ್ಟೇ ಹೆಚ್ಚಾಗುತ್ತದೆ. –ಸಿದ್ಧೇಶ್ವರ ಸ್ವಾಮೀಜಿ

ಕೇಂದ್ರ–ರಾಜ್ಯಗಳ ಸಂಬಂಧ: ಅಪನಂಬಿಕೆ ನಿವಾರಿಸಿ ವಿಶ್ವಾಸ ಮೂಡಿಸಬೇಕಿದೆ

ಕೇಂದ್ರ ಮತ್ತು ರಾಜ್ಯಗಳ ನಡುವಣ ಸಂಬಂಧವು ಸುದೀರ್ಘ ಕಾಲದಿಂದ ಹದಗೆಟ್ಟಿರುವ ಈ ಸಂದರ್ಭದಲ್ಲಿ 'ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಂದು ತಂಡವಾಗಿ ಕೆಲಸ ಮಾಡಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿರುವುದು ಸ್ವಾಗತಾರ್ಹ. ಬಿಜೆಪಿಯ ಪ್ರತಿಸ್ಪರ್ಧಿ ಪಕ್ಷಗಳ ನೇತೃತ್ವದ ಸರ್ಕಾರ ಇರುವ ರಾಜ್ಯಗಳ ಜೊತೆಗೆ ಈ ಬಿಕ್ಕಟ್ಟು ಎದ್ದು ಕಾಣುವಂತಿದೆ. ಇಂತಹ ಸಂದರ್ಭದಲ್ಲಿ, ನೀತಿ ಆಯೋಗದ ಆಡಳಿತ ಮಂಡಳಿಯ 10ನೇ ಸಭೆಯಲ್ಲಿ ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ಪ್ರಧಾನಿಯವರು ಆಡಿದ ಮಾತು ಸಮಂಜಸವಾಗಿದೆ. ಕರ್ನಾಟಕ, ಪಶ್ಚಿಮ ಬಂಗಾಳ ಮತ್ತು ಕೇರಳದ ಮುಖ್ಯಮಂತ್ರಿಗಳು ಈ ಸಭೆಗೆ ಹಾಜರಾಗಿಲ್ಲ ಎನ್ನುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಣ ವಿಷಮ ಸಂಬಂಧವನ್ನು ಸೂಚಿಸುತ್ತದೆ. ಭಾರತದ ಅಭಿವೃದ್ಧಿಗೆ ವೇಗ ತುಂಬಲು ಕೇಂದ್ರ ಮತ್ತು ರಾಜ್ಯಗಳು ಜೊತೆಯಾಗಿ ಪ್ರಯತ್ನಿಸಬೇಕು ಎಂದು ಪ್ರಧಾನಿ ಹೇಳಿದ್ದಾರೆ. 2047ರಲ್ಲಿ ಭಾರತವು ನೂರನೇ ಸ್ವಾತಂತ್ರ್ಯ ದಿನ ಆಚರಿಸುವ ಸಂದರ್ಭಕ್ಕೆ 'ವಿಕಸಿತ ಭಾರತ'ದ ಗುರಿಯನ್ನು ದೇಶವು ಹಾಕಿಕೊಂಡಿದೆ. ಈ ಗುರಿ ಸಾಧನೆಗೆ ಕೇಂದ್ರ ಮತ್ತು ರಾಜ್ಯಗಳ ಕೊಡುಗೆ ಬೇಕೇ ಬೇಕು.

ದೇಶದ ಅಭಿವೃದ್ಧಿ ಎಂದರೆ ರಾಜ್ಯಗಳ ಅಭಿವೃದ್ಧಿ ಎಂಬ ಮೌಲಿಕ ವಿಚಾರವನ್ನು ಪ್ರಧಾನಿಯವರು ಹೇಳಿದ್ದಾರೆ. ಕೇಂದ್ರದ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ರಾಜ್ಯಗಳು ಕೇಂದ್ರ ಸರ್ಕಾರದ ಜೊತೆಗೆ ಬಲವಾದ ನಂಟನ್ನು ಹೊಂದಿರಬೇಕು. ಮೂರು ರಾಜ್ಯಗಳ ಮುಖ್ಯಮಂತ್ರಿಗಳ ಅನುಪಸ್ಥಿತಿ ಹಾಗೂ ಉಪಸ್ಥಿತರಿದ್ದ ಮುಖ್ಯಮಂತ್ರಿಗಳು ಮುಂದಿಟ್ಟ ಬೇಡಿಕೆಗಳಿಂದ ಕೇಂದ್ರ ಮತ್ತು ರಾಜ್ಯಗಳ ನಡುವಣ ನಂಟು ವಿಷಮ ಸ್ಥಿತಿಗೆ ತಲುಪಿದೆ ಎಂಬ ಅಂಶವು ಪ್ರಧಾನಿಯವರಿಗೆ ಮನದಟ್ಟಾಗಿರಬಹುದು. ಹಾಗಾಗಿಯೇ ಒಂದು ತಂಡವಾಗಿ ಇನ್ನೂ ಹೆಚ್ಚಿನ ಸಹಕಾರದಿಂದ ಕೆಲಸ ಮಾಡಬೇಕಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ. ತೆರಿಗೆ ವರಮಾನದಲ್ಲಿ ಹೆಚ್ಚಿನ ಪಾಲು ಬೇಕು ಎಂದು ತಮಿಳುನಾಡು ಮತ್ತು ಜಾರ್ಖಂಡ್‌ನ ಮುಖ್ಯಮಂತ್ರಿಗಳು ಆಗ್ರಹಿಸಿದ್ದಾರೆ. ರಾಜ್ಯಗಳು ಮತ್ತು ಕೇಂದ್ರದ ನಡುವೆ ಹಣಕಾಸಿನ ಹಂಚಿಕೆಯ ಕುರಿತಾದ ಕಳವಳಗಳನ್ನು ಅವರು ಪುನರುಚ್ಚರಿಸಿದ್ದಾರೆ. ಕೇಂದ್ರದಿಂದ ಹಣಕಾಸಿನ ಹಂಚಿಕೆಯು ಅಭಿವೃದ್ಧಿಯ ಗುರಿ ಸಾಧನೆಗೆ ಅತ್ಯಂತ ನಿರ್ಣಾಯಕವಾದುದು. ಕೇಂದ್ರ ಮತ್ತು ರಾಜ್ಯಗಳ ನಡುವೆ ಇರಬೇಕಾದ ಒಕ್ಕೂಟ ವ್ಯವಸ್ಥೆಯ ಸಂಬಂಧವು ಇತ್ತೀಚಿನ ಕೆಲವು ವರ್ಷಗಳಲ್ಲಿ ತೀರಾ ವಿಷಮ ಸ್ಥಿತಿಗೆ ತಲುಪಿದೆ ಎಂಬ ವಿಸ್ತೃತ ದೃಷ್ಟಿಕೋನದಲ್ಲಿಯೂ ಈ ಆಗ್ರಹವನ್ನು ನೋಡಬೇಕು.

ರಾಜ್ಯಗಳು ವ್ಯಕ್ತಪಡಿಸಿರುವ ಕಳವಳಗಳ ನಿವಾರಣೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಪೂರಕವಾಗಿ ಸ್ಪಂದಿಸಬೇಕಾಗುತ್ತದೆ

ಈ ಅಪನಂಬಿಕೆಯ ಭಾವನೆಯು ಕೇಂದ್ರ ಮತ್ತು ರಾಜ್ಯಗಳ ಮೇಲೆ ಒಂದು ರೀತಿಯ ಮಿತಿಯನ್ನು ಹೇರಿದೆ. ಅಪನಂಬಿಕೆ ಸೃಷ್ಟಿ ಮತ್ತು ಅದು ಉಲ್ಬಣಗೊಳ್ಳಲು ಕೇಂದ್ರ ಸರ್ಕಾರವೇ ಕಾರಣ ಎಂದು ಬಿಜೆಪಿಯ ಪ್ರತಿಸ್ಪರ್ಧಿ ಪಕ್ಷಗಳ ನೇತೃತ್ವದ ಸರ್ಕಾರಗಳು ಹೇಳುತ್ತಿವೆ. ರಾಜ್ಯಪಾಲರ ಪ್ರತಿಕೂಲ ನಡವಳಿಕೆ, ಕೇಂದ್ರದ ಯೋಜನೆಗಳ ಹೇರಿಕೆ, ನಿಧಿ ಬಿಡುಗಡೆ ಮಾಡದಿರುವುದು, ಪ್ರತಿಸ್ಪರ್ಧಿ ಪಕ್ಷಗಳ ನೇತೃತ್ವದ ಸರ್ಕಾರಗಳು ಮತ್ತು ರಾಜಕಾರಣಿಗಳ ಮೇಲೆ ಕೇಂದ್ರೀಯ ತನಿಖಾ ಸಂಸ್ಥೆಗಳಿಂದ ತನಿಖೆಯಂತಹ ಕ್ರಮಗಳು ಒಕ್ಕೂಟ ಸಂಬಂಧವನ್ನು ತೀವ್ರವಾಗಿ ಹಾಳುಗೆಡವಿವೆ. ತಮ್ಮನ್ನು ತಾರತಮ್ಯದಿಂದ ನೋಡಲಾಗುತ್ತಿದೆ ಮತ್ತು ಕೇಂದ್ರವು ತಮಗೆ ಪ್ರತಿಕೂಲವಾಗಿದೆ ಎಂಬ ಭಾವನೆ ಕೆಲವು ರಾಜ್ಯಗಳಲ್ಲಿ ಇದೆ. ಕೇಂದ್ರ ಸರ್ಕಾರವು ವೈವಿಧ್ಯ ಮತ್ತು ಬಹುತ್ವವನ್ನು ಗೌರವಿಸುತ್ತಿಲ್ಲ ಹಾಗೂ ಇಡೀ ದೇಶದ ಮೇಲೆ ಏಕರೂಪತೆಯನ್ನು ಹೇರಲು ಪ್ರಯತ್ನಿಸುತ್ತಿದೆ ಎಂಬ ಭಾವನೆಯೂ ಇದೆ. ರಾಜ್ಯಗಳು ಪರಸ್ಪರ ಮತ್ತು ಕೇಂದ್ರದ ಜೊತೆ ಮುಖಾಮುಖಿ ಆಗಬಹುದಾದ ವೇದಿಕೆಗಳ ಸಂಖ್ಯೆ ಹೆಚ್ಚಿಲ್ಲ. ಅಂತಹ ಅವಕಾಶಗಳನ್ನು ಸೃಷ್ಟಿಸಿಕೊಳ್ಳಬೇಕಾದ ಅಗತ್ಯ ಇದೆ. ಅಭಿವೃದ್ಧಿಗಾಗಿ ರಾಜ್ಯಗಳು ಮತ್ತು ಕೇಂದ್ರ ಒಂದು ತಂಡವಾಗಿ ಕೆಲಸ ಮಾಡಬೇಕು ಎಂದು ಹೇಳುವಾಗ ಪ್ರಧಾನಿಯವರು ರಾಜ್ಯಗಳು ಎತ್ತಿರುವ ಕಳವಳಗಳ ನಿವಾರಣೆಗೂ ಪೂರಕವಾಗಿ ಸ್ಪಂದಿಸಬೇಕಾಗುತ್ತದೆ.

ದಿನದ ಟ್ವೀಟ್

ದಾಳಿಗಳ ಹಿಂದೆ ಇರುವವರು...

ಮಾನ್ಯ ಮುಖ್ಯಮಂತ್ರಿ ಮತ್ತು ಗೃಹ ಸಚಿವರೇ, 2008–09ರಿಂದ ಇಲ್ಲಿಯವರೆಗೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರುವ ನೈತಿಕತೆಯ ನೆಪದ ದಾಳಿಗಳಿಗೆ ಸಂಬಂಧಿಸಿದಂತೆ ಸಿಕ್ಕಸಿಕ್ಕವರನ್ನು ಪೊಲೀಸ್ ಠಾಣೆಗಳಿಗೆ ಎಳೆದು ತಂದವರನ್ನು ಈ ಕೂಡಲೇ ಬಂಧಿಸಿ, ಅವರ ಮೇಲೆಯೇ ಗೂಂಡಾಗಿರಿಯ ಮೊಕದ್ದಮೆಗಳನ್ನು ದಾಖಲಿಸಿ. ಬೇಗನೆ ಎಲ್ಲವೂ ಸರಿಹೋಗುವುದಕ್ಕೆ ಅದುವೇ ನಾಂದಿಯಾಗುತ್ತದೆ.

ಡಾ.ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

ಕಿಡಿನುಡಿ

ಧನಿಕರು ಮತ್ತು ಪ್ರಭಾವಿಗಳಿಗೆ ಸೇರಿದ ಯಾವ ಬೃಹತ್ ಕಟ್ಟಡಗಳನ್ನೂ ಉರುಳಿಸುವುದಿಲ್ಲ. ಬಡವರು ಹಾಗೂ ಮಧ್ಯಮವರ್ಗದವರ ಕಟ್ಟಡಗಳನ್ನಷ್ಟೇ ನಿರ್ದಯವಾಗಿ ಕೆಡವಲಾಗುತ್ತದೆ. ಒಂದು ತಿಂಗಳು ಹೀಗೇ ಗಮನಿಸಿ. ಬಳಿಕ ಎಲ್ಲರೂ ವಿಷಯವನ್ನು ಮರೆತುಬಿಡುತ್ತಾರೆ.

ನರಸಿಂಹ

(ರಾಜಕಾಲುವೆಗೆ ಅಡ್ಡಿಪಡಿಸುವ ಕಟ್ಟಡಗಳನ್ನು ತೆರವುಗೊಳಿಸಲಾಗುವುದು ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ಪ್ರತಿಕ್ರಿಯೆ)

25 ವರ್ಷಗಳ ಹಿಂದೆ

ಬುಧವಾರ, 31-5-2000

● **ಟಿ.ವಿ ಹಗರಣ: ಜಯಾ ಮುಕ್ತಿ**

ಚೆನ್ನೈ, ಮೇ 30 (ಪಿಟಿಐ) – 1995ರ 'ಬಣ್ಣದ ಟಿ.ವಿ ಹಗರಣ'ದಲ್ಲಿ ಭ್ರಷ್ಟಾಚಾರದ ಆರೋಪ ಎದುರಿಸುತ್ತಿದ್ದ ಅಣ್ಣಾಡಿಎಂಕೆ ನಾಯಕಿ ಜಯಲಲಿತಾ ಅವರನ್ನು ಇಂದು ವಿಶೇಷ ನ್ಯಾಯಾಲಯ ಆರೋಪಮುಕ್ತಗೊಳಿಸಿ ಬಿಡುಗಡೆ ಮಾಡಿದೆ.

ಆದರೆ ಈಗ ಸಂಸತ್ ಸದಸ್ಯರಾಗಿರುವ ಜಯಲಲಿತಾರ ಮಾಜಿ ಸಚಿವ ಸಹೋದ್ಯೋಗಿ ಟಿ.ಎಂ. ಸೆಲ್ವಗಣಪತಿ ಮತ್ತು ಮೂವರು ಐಎಎಸ್ ಅಧಿಕಾರಿಗಳು ಸೇರಿದಂತೆ ಆರು ಮಂದಿಯನ್ನು ಕಠಿಣ ಶಿಕ್ಷೆಗೆ ಒಳಪಡಿಸಲಾಗಿದೆ.

ಸೆಲ್ವಗಣಪತಿ, ತಮಿಳುನಾಡು ಸರ್ಕಾರದ ಮಾಜಿ ಮುಖ್ಯ ಕಾರ್ಯದರ್ಶಿ ಎನ್.ಹರಿಭಾಸ್ಕರ್ ಮತ್ತಿತರ ಐವರನ್ನು ವೆಲ್ಲೂರು ಜೈಲಿಗೆ ಕಳುಹಿಸಲಾಯಿತು.

ಜಯಲಲಿತಾ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಗ್ರಾಮ ಪಂಚಾಯಿತಿಗಳಿಗೆ 45 ಸಾವಿರ ಟಿ.ವಿ ಸೆಟ್ಟುಗಳ ಖರೀದಿಗೆ ಸಂಬಂಧಿಸಿದಂತೆ ಜಯಲಲಿತಾ ಹಾಗೂ ಅವರ ನಂಬಿಕಸ್ಥ ಸಹಾಯಕಿ ಶಶಿಕಲಾ ನಟರಾಜನ್ ಅವರ ಪಾತ್ರ ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದ್ದು, ಈ ಪ್ರಕರಣದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿರುವುದನ್ನು ಮಾತ್ರ ಸಾಬೀತುಪಡಿಸುವಲ್ಲಿ ಯಶಸ್ವಿಯಾಗಿದೆ.

● **ಮೋಸದಾಟ: ಪೊಲೀಸರಿಂದ 'ಮಾಯ'ವಾದ ಧ್ವನಿಮುದ್ರಿಕೆ**

ನವದೆಹಲಿ, ಮೇ 30 – ಕ್ರಿಕೆಟ್ ಆಟಗಾರರು ಮತ್ತು ಬುಕ್ಕಿಗಳ ನಡುವೆ ನಡೆದಿದ್ದ ಟೆಲಿಫೋನ್ ಸಂಭಾಷಣೆಯನ್ನು ಒಳಗೊಂಡಿದ್ದ ಧ್ವನಿಮುದ್ರಿಕೆ 'ಕಳೆದುಹೋಗಿರುವುದು' ಇನ್ನಿಲ್ಲದ ಊಹಾಪೋಹಗಳಿಗೆ ಎಡೆಕೊಟ್ಟಿದೆ.

1997ರ ಟೈಟಾನ್ ಕಪ್ ಕ್ರಿಕೆಟ್ ಟೂರ್ನಿಯ ಸಂದರ್ಭದಲ್ಲಿ ಈ 'ಸಂಭಾಷಣೆ'ಯನ್ನು ಪೊಲೀಸರು ಧ್ವನಿಮುದ್ರಿಸಿಕೊಂಡು ತಮ್ಮಲ್ಲಿರಿಸಿಕೊಂಡಿದ್ದರು ಎಂದು ಮುಂಬೈನ ಉನ್ನತ ಪೊಲೀಸ್ ಅಧಿಕಾರಿ ಹೇಳಿದ್ದ ಹಿನ್ನೆಲೆಯಲ್ಲಿ, ಸಿಬಿಐ ಆ ಧ್ವನಿಮುದ್ರಿಕೆ ಬೇಕೆಂದು ಮುಂಬೈ ಪೊಲೀಸರಲ್ಲಿ ಮನವಿ ಮಾಡಿಕೊಂಡಿತ್ತು. ಇದಕ್ಕೆ ಮುಂಬೈ ಪೊಲೀಸರು 'ನಮ್ಮಲ್ಲಿ ಅಂತಹ ಧ್ವನಿಮುದ್ರಿಕೆ ಇಲ್ಲ' ಎಂದು ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 31-5-1975

● **ವಿದೇಶಿ ಚಿನ್ನ ಹೊಂದಿದ್ದ ನಗರದ ಒಬ್ಬರಿಗೆ ಕರ್ನೂಲಿನಲ್ಲಿ ಶಿಕ್ಷೆ**

ಕರ್ನೂಲ್, ಮೇ 30 – ವಿದೇಶಿ ಮುದ್ರೆಗಳಿದ್ದ 3499.2 ಗ್ರಾಂ ಚಿನ್ನವನ್ನು ಹೊಂದಿದ್ದರೆಂಬ ಆಪಾದನೆ ಮೇಲೆ ಬೆಂಗಳೂರಿನ ತ್ರಿವಿಕ್ರಮ್ ಬಿ. ರಾಮಲಿಂಗಂ ಎಂಬುವರಿಗೆ ಒಂದು ತಿಂಗಳು ಕಠಿಣ ಶಿಕ್ಷೆ ಹಾಗೂ ಸಾವಿರ ರೂ. ದಂಡ, ತಪ್ಪಿದರೆ ಮೂರು ತಿಂಗಳ ಸಾದಾ ಶಿಕ್ಷೆಯನ್ನು ಇಲ್ಲಿನ ಅಡಿಷನಲ್ ಮುನ್ಸಿಫ್ ನ್ಯಾಯಾಧೀಶರು ನಿನ್ನೆ ವಿಧಿಸಿದರು.

1974ರ ಜುಲೈ ತಿಂಗಳಿನಲ್ಲಿ ರೈಲ್ವೆ ನಿಲ್ದಾಣವೊಂದರಲ್ಲಿ ಅನಂತಪುರದ ಸುಂಕದಕಟ್ಟೆ ಅಸಿಸ್ಟೆಂಟ್ ಕಲೆಕ್ಟರ್ ಅವರು ರಾಮಲಿಂಗಂ ಅವರನ್ನು ಹಿಡಿದಿದ್ದರು.

● **'ಬೆಣ್ಣೆ ಕಳ್ಳ'**

ಬ್ರಿಡ್ಜ್‌ಪೋರ್ಟ್, ಮೇ 30 – ಕೊಲೆ ಆರೋಪಿಯೊಬ್ಬ ತನ್ನ ಮೈಗೆಲ್ಲ ಬೆಣ್ಣೆ ಬಳಿದುಕೊಂಡು ಕಳೆದ ಗುರುವಾರ ಇಲ್ಲಿನ ಸೆರೆಮನೆಯ ಕಿಟಕಿಯಿಂದ ನುಣುಚಿಕೊಂಡು ಪರಾರಿಯಾದನೆಂದು ಸೆರೆಮನೆ ಅಧಿಕಾರಿಗಳು ತಿಳಿಸಿದ್ದಾರೆ.

● **ಕಾಲೇಜು ವಿದ್ಯಾರ್ಥಿನಿಯರಿಂದ ಹಲ್ಲೆ: ನ್ಯಾಯಾಧೀಶರು, ಪೊಲೀಸರಿಗೆ ಗಾಯ**

ಹೈದರಾಬಾದ್ (ಪಾಕಿಸ್ತಾನ), ಮೇ 30– ಕಾಲೇಜು ಚುನಾವಣೆ ಹಿನ್ನೆಲೆಯಲ್ಲಿ ಸರ್ಕಾರಿ ಬಾಲಕಿಯರ ಕಾಲೇಜಿನ 80ಕ್ಕೂ ಹೆಚ್ಚು ಬಾಲಕಿಯರು ಗುರುವಾರ ಪ್ರಿನ್ಸಿಪಾಲರ ಕೊಠಡಿಗೆ ನುಗ್ಗಿ ಎರಡು ಗಂಟೆಗಳ ಕಾಲ ಕಲ್ಲುತೂರಾಟ ನಡೆಸಿ ಮೇಜು, ಕುರ್ಚಿಗಳಿಗೆ ಹಾನಿಯನ್ನುಂಟು ಮಾಡಿದರು.

ತರಗತಿಗಳನ್ನು ಬಹಿಷ್ಕರಿಸಿ ವಿದ್ಯಾರ್ಥಿನಿಯರು ಬೀಸುತ್ತಿದ್ದ ಕಲ್ಲುಗಳಿಂದ ನ್ಯಾಯಾಧೀಶರೂ ಸೇರಿ ಅನೇಕ ಪೊಲೀಸರು ಗಾಯಗೊಂಡರು.

ಶಿಕ್ಷಣದಲ್ಲಿ ಡಿಜಿಟಲ್ ಪ್ರವೇಶದ ಸ್ವರೂಪದ ಬಗ್ಗೆ ಸ್ಪಷ್ಟ ನೀತಿ ರೂಪಿಸಬೇಕಿದೆ

ಕಲಿಕಾ ಪ್ರಕ್ರಿಯೆ ಮತ್ತು ಆಧುನಿಕ ಮಾಧ್ಯಮ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ದಶಕದ ಹಿಂದೆ ಪಾಠ ಬೋಧನೆಗೆ ಪೂರಕ ಸಲಕರಣೆಗಳಾಗಿದ್ದ ಹಲವು ಬೋಧನೋಪಕರಣಗಳು ಇಂದು ಕಲಿಕೆಯ ಮೂಲಗಳೇ ಆಗಿ ಬದಲಾಗಿವೆ. ಆಡಿಯೊ–ವಿಡಿಯೊಗಳು ಪಠ್ಯವಸ್ತುವನ್ನು ಪರಿಣಾಮಕಾರಿಯಾಗಿ ಅರ್ಥ ಮಾಡಿಸಲು ಬಳಸಲಾಗುತ್ತಿದ್ದ ಪೂರಕ ಉಪಕರಣಗಳಾಗಿದ್ದವು. ಉದಾಹರಣೆಗೆ, 'ಕೃಷ್ಣದೇವರಾಯ'ನ ಪಾಠ ಬೋಧನೆಗೆ 'ಶ್ರೀ ಕೃಷ್ಣದೇವರಾಯ' ಸಿನಿಮಾ ಸಹಾಯಕ ಕಲಿಕಾ ಉಪಕರಣವಾಗಿ ಬಳಕೆಯಾಗುತ್ತಿತ್ತು. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಬರೆದ ಚಿತ್ರಗಳು, ರಚಿಸಿದ ಚಾರ್ಟುಗಳು, ತಯಾರಿಸಿದ 'ಮಾದರಿ'ಗಳೆಲ್ಲವೂ ಪಠ್ಯವಸ್ತುವನ್ನು ಪರಿಣಾಮಕಾರಿಯಾಗಿಸಲು ಬಳಸುವ ಸಹಾಯಕ ವಸ್ತುಗಳೇ ಆಗಿದ್ದವು. ಹಲವು ಮರಗಳ ಎಲೆಗಳನ್ನು ತಂದಿರಿಸಿ ಅವುಗಳನ್ನು ಗುರುತಿಸುವ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿತ್ತು. ಈ ರೀತಿಯ ಚಟುವಟಿಕೆಗಳು ವಿದ್ಯಾರ್ಥಿಗಳ ಬುದ್ಧಿಶಕ್ತಿಯನ್ನು ಹರಿತಗೊಳಿಸುವುದರೊಂದಿಗೆ ಸಸ್ಯಶಾಸ್ತ್ರದ ಪಠ್ಯವಸ್ತುವಿನ ಕಲಿಕೆಯನ್ನು ಪರಿಣಾಮಕಾರಿಯಾಗಿಸುತ್ತಿದ್ದವು.

ಈಗ, ಬದಲಾಗಿರುವ ಕಲಿಕಾ ಸನ್ನಿವೇಶದಲ್ಲಿ ಹಿಂದಿನ ಬಹುತೇಕ ಕಲಿಕಾ ಸಹಾಯಕ ಸಂಗತಿಗಳು ಕಲಿಕಾ ಮೂಲಗಳೇ ಆಗಿ ಪರಿವರ್ತನೆಯಾಗಿವೆ. ಕಲಿಕೆಗೆ ಸಹಾಯಕವಾಗಿದ್ದ ಬಹುತೇಕ ಸಂಗತಿಗಳು ಕ್ರೋಡೀಕೃತಗೊಂಡು 'ಯೂಟ್ಯೂಬ್' ಎಂಬ ಒಂದೇ ಕಲಿಕಾ ಮೂಲವಾಗಿ ರೂಪಾಂತರಗೊಂಡಿವೆ. ಯೂಟ್ಯೂಬ್ ನೋಡಿ ಕಲಿತುಕೊಳ್ಳುವುದು ಇಂದಿನ ಶೈಕ್ಷಣಿಕ ಸನ್ನಿವೇಶದ ಮುಖ್ಯ ಪದ್ಧತಿಗಳಲ್ಲಿ ಒಂದಾಗಿದೆ ಮತ್ತು ಈ ಪದ್ಧತಿಯು ಯೂಟ್ಯೂಬ್‌ಗಷ್ಟೇ ಸೀಮಿತವಾಗಿಲ್ಲ. ಕಲಿಕೆಗಾಗಿ ಹಲವು 'ಅಪ್ಲಿಕೇಷನ್'ಗಳು ಬಂದಿವೆ. ಇಡೀ ಪಾಠಪುಸ್ತಕವನ್ನೇ ಸ್ಮಾರ್ಟ್‌ಕ್ಲಾಸ್‌ಗಳಲ್ಲಿ ಬೋಧಿಸಿ ಜಾಲತಾಣಗಳ ಮೂಲಕ ಪೂರೈಸುವ ಪದ್ಧತಿ ಬಂದಿದೆ.

ಈ ವ್ಯವಸ್ಥೆಯ ಜೊತೆಗೆ ಡಿಜಿಟಲ್ ತರಗತಿಗಳು ನಡೆಯುತ್ತಿವೆ. ಅಲ್ಲಿ ತರಬೇತುದಾರ ತರಗತಿಯ ನಿರ್ವಹಣೆ ಮಾಡುವುದು 'ಡಿಜಿಟಲ್ ಮಂಡನೆ'ಗೆ ಸೀಮಿತವಾಗುತ್ತದೆ. ವಿದ್ಯಾರ್ಥಿಯನ್ನು ವೈಯಕ್ತಿಕವಾಗಿ ನಿರ್ವಹಣೆ ಮಾಡುವುದಕ್ಕೆ ಆದ್ಯತೆ ಇರುವುದಿಲ್ಲ. ಈ ರೀತಿಯ ತರಗತಿ ನಿರ್ವಹಣೆಗಾಗಿ ಮತ್ತು ಪಠ್ಯಪುಸ್ತಕದ ಯಾವುದೋ ಒಂದು ಅಥವಾ ಕೆಲವು ಅಂಶಗಳನ್ನು ಬಹಳ ಮಹತ್ವದ್ದೆಂದು ಗುರುತಿಸಿ ಅದನ್ನೇ ಒಂದು ಬೋಧನಾ ಪ್ಯಾಕೇಜ್ ಆಗಿ ಮಾಡಿ ಶಾಲೆಗಳಿಗೆ ತಲುಪಿಸುವ ಯಶಸ್ವಿ ಉದ್ಯಮವೂ ನಡೆಯುತ್ತಿದೆ. ಉದಾಹರಣೆಗೆ, ಸಂವಿಧಾನ ಕಲಿಸುವ ಪ್ಯಾಕೇಜ್‌ಗಳು ಬಹಳಷ್ಟಿವೆ. ಈ ಪ್ಯಾಕೇಜನ್ನು ಯಾವ ಶಾಲೆಯ ವ್ಯವಸ್ಥಾಪಕರೂ ನಿರಾಕರಿಸುವುದಿಲ್ಲ. ಏಕೆಂದರೆ ಸಂವಿಧಾನ ಎಲ್ಲರಿಗೂ ತಿಳಿದಿರಬೇಕಾದಂಥದ್ದು ಎಂದು ಎಲ್ಲರಿಗೂ ಗೊತ್ತಿರುತ್ತದೆ. ಆದರೆ ನಿಜವಾಗಿ ಸಂವಿಧಾನದ ಬಗೆಗಿನ ಪಾಠವು ತರಗತಿಯ ಪುಸ್ತಕದಲ್ಲೇ ಇರುವಾಗ ಅದಕ್ಕಾಗಿ ಪ್ರತ್ಯೇಕ ಪ್ಯಾಕೇಜಿನ ಅವಶ್ಯಕತೆ ಏನು ಎಂದು ಯೋಚಿಸಲು ಹೋಗುವುದಿಲ್ಲ. ಪಾಠಪುಸ್ತಕದಲ್ಲಿ ಕೊಟ್ಟಿರುವ ಸಂವಿಧಾನದ ವಿವರದ ಬಗ್ಗೆ ತರಗತಿಯಲ್ಲಿ ಸರಿಯಾಗಿ ಬೋಧನೆ ನಡೆದಿರುವುದಿಲ್ಲ ಎಂದು ಭಾವಿಸುವುದಾದರೆ, ಉಳಿದ ಕಲಿಕಾಂಶಗಳ ಬೋಧನೆಯೂ ಸರಿಯಾಗಿ ನಡೆದಿರುವುದಿಲ್ಲ. ಆಗ ಸರಿಪಡಿಸಬೇಕಾದದ್ದು ತರಗತಿಯ ಕಲಿಕೆಯನ್ನೇ ವಿನಾ ಪಾಠಪುಸ್ತಕದಿಂದ ಯಾವುದೋ ವಿಷಯವನ್ನು ತೆಗೆದು ಪ್ರತ್ಯೇಕ ಪಠ್ಯಕ್ರಮ ಮಾಡಿ ಸಾಫ್ಟ್ ಸ್ಕಿಲ್ಸ್ ತರಬೇತುದಾರರಿಂದ ಪ್ರತ್ಯೇಕ ತರಗತಿ ಕೊಡಿಸುವುದಲ್ಲ.

ಶಿಕ್ಷಣ ತಜ್ಞರಿಂದಾಗಲಿ, ಶಿಕ್ಷಣ ಅಧಿಕಾರಿಗಳಿಂದಾಗಲಿ, ಪಾಲಕರಿಂದಾಗಲಿ ಯಾವುದೇ ಪರಿಶೀಲನೆ ಮತ್ತು ವಿಮರ್ಶೆಗೆ ಒಳಗಾಗದೇ ಇರುವ, ಆದರೆ ಔಪಚಾರಿಕ ಪಠ್ಯಕ್ರಮವನ್ನು ಹೇಗೆ ಬೇಕಾದರೂ ಬಳಸಿಕೊಂಡು ಶಿಕ್ಷಣೋದ್ಯಮವನ್ನು ನಡೆಸಬಹುದಾದ ಈ ಎಲ್ಲ ನಮೂನೆಯ ಯೋಜನೆಗಳನ್ನು ಸಮರ್ಥ ಶಿಕ್ಷಣ ಪರಿಣತರಿಂದ ಪರಿಶೀಲನೆ ಮಾಡಿಸುವ ಕೆಲಸ ಮೊದಲು ನಡೆಯಬೇಕಾಗಿದೆ. ಏಕೆಂದರೆ ಈ ರೀತಿಯ ವ್ಯವಸ್ಥೆಗಳು ಅನೇಕ ಸಂದರ್ಭಗಳಲ್ಲಿ ಔಪಚಾರಿಕ ಶಿಕ್ಷಣದ ಗುಣಮಟ್ಟವನ್ನು ಹಾಳುಗೆಡಹುವ ವ್ಯವಸ್ಥೆಯಾಗಿ ಬರುತ್ತಿವೆ. ಉದಾಹರಣೆಗೆ, ಔಪಚಾರಿಕ ಕಲಿಕೆಗಾಗಿ ಶೈಕ್ಷಣಿಕ ಆಡಳಿತ ನಿಗದಿಪಡಿಸಿದ್ದ ಸಮಯವನ್ನು ಸಾಫ್ಟ್ ಸ್ಕಿಲ್‌ನವರಿಗೆ ಕೊಟ್ಟಾಗ, ಆ ಸಮಯವು ಸಂಬಂಧಪಟ್ಟ ಶಿಕ್ಷಕರಿಗೆ ಲಭ್ಯವಾಗುವುದಿಲ್ಲ. ಆಗ ವಿಶೇಷ ತರಗತಿಗಳನ್ನು ನಡೆಸಲು ಮುಂದಾದರೆ, ಮಕ್ಕಳ ವಿಶ್ರಾಂತಿಯ ಹಕ್ಕು, ಆಟವಾಡುವ ಹಕ್ಕನ್ನು ಕಿತ್ತುಕೊಂಡಂತೆ ಆಗುತ್ತದೆ. ಹೀಗಿರುವಾಗ, ಔಪಚಾರಿಕ ಕಲಿಕಾ ವ್ಯವಸ್ಥೆಗೆ ಯಾವುದೇ ನಿಗದಿತ ವಿಧಾನ ಇಲ್ಲದೆ ಒಳನುಸುಳುವ ಸಾಫ್ಟ್ ಸ್ಕಿಲ್ಸ್ ರೂಪದ ವ್ಯವಸ್ಥೆಗಳಿಗೆ ಒಂದು ಸಮರ್ಪಕ ನೀತಿಯನ್ನು ರೂಪಿಸಬೇಡವೇ?

ಶಿಕ್ಷಣದಲ್ಲಿ ಆಧುನಿಕ ಮಾಧ್ಯಮಗಳ ಬಳಕೆಯನ್ನು ಹಲವು ಆಯಾಮಗಳಲ್ಲಿ ಅರ್ಥ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ಸ್ವ-ಇಚ್ಛೆಯಿಂದ ತಮಗೆ ಬೇಕೆನಿಸಿದ ಜ್ಞಾನವನ್ನು ಪಡೆಯಲು ಆಧುನಿಕ ಮಾಧ್ಯಮಗಳನ್ನು ಬಳಸುವುದು ಅವರವರ ವೈಯಕ್ತಿಕ ಆಯ್ಕೆಯಾಗಿರುತ್ತದೆ. 'ಅಧಿಕೃತ' ಮಾಹಿತಿ ಮೂಲಗಳನ್ನೇ ಬಳಸಿದಾಗ ಅದು ಕಲಿಕೆಗೆ 'ವರ'ವಾಗಿ ಬರುತ್ತದೆ.

ಎರಡನೆಯದು, ಔಪಚಾರಿಕ ಶಿಕ್ಷಣದ ವಿಚಾರ. ಈ ಬಗೆಯ ಶಿಕ್ಷಣಕ್ಕೆ ಪಠ್ಯ ಪೂರಕ ಸಾಧನಗಳಾಗಿ ಆಧುನಿಕ ಮಾಧ್ಯಮಗಳ ಬಳಕೆಯು ಕಲಿಕೆಗೆ ಅನುಕೂಲಕಾರಿಯಾಗಿ ಬರುತ್ತದೆ. ಆದರೆ ಸಂಬಂಧಪಟ್ಟ ಅಧ್ಯಾಪಕರೇ ಅದನ್ನು ಬಳಸಬೇಕು ಮತ್ತು ಯಾವ ಸಂದರ್ಭದಲ್ಲಿ ಅದನ್ನು ಬಳಸಿದರೆ ಕಲಿಕಾಂಶವು ಪರಿಣಾಮಕಾರಿಯಾಗಿ ತಲುಪುತ್ತದೆ ಎಂಬ ತಿಳಿವಳಿಕೆ ಆ ಅಧ್ಯಾಪಕರಿಗೆ ಇರಬೇಕಾಗುತ್ತದೆ. ಉದಾಹರಣೆಗೆ, ಭಾರತದ ನಕಾಶೆಯನ್ನು ಡಿಜಿಟಲ್ ಆಗಿ ತೋರಿಸಿದರೆ ಕಲಿಕೆ ದುರ್ಬಲ ಆಗುತ್ತದೆ. ಬದಲು ಅಧ್ಯಾಪಕರೇ ಭಾರತದ ನಕಾಶೆಯನ್ನು ಬೋರ್ಡ್ ಮೇಲೆ ಚಿತ್ರಿಸಿದಾಗ ವಿದ್ಯಾರ್ಥಿಗೆ ನಕಾಶೆಯನ್ನು ಚಿತ್ರಿಸುವ ಕೌಶಲ ಬೇಗ ಬೆಳೆಯುತ್ತದೆ. ಡಿಜಿಟಲ್ ನಕಾಶೆ ತೋರಿಸಿದರೆ ನಕಾಶೆಯನ್ನು ರಚಿಸುವ ಕೌಶಲ ವಿದ್ಯಾರ್ಥಿಗಳಿಗೆ ಗೊತ್ತಾಗುವುದಿಲ್ಲ. ನಕಾಶೆ ಮಾತ್ರ ಗೊತ್ತಾಗುತ್ತದೆ ಅಷ್ಟೆ. ಆಗ ಅದು ಬೋಧನಾ ಪದ್ಧತಿಯಲ್ಲಿ ಅತೀ ಪ್ರಧಾನವಾದ 'ರಚನಾ ವಾದ'ವನ್ನು (ಬೋಧನೆಯು ವಿದ್ಯಾರ್ಥಿಗಳು ಜ್ಞಾನದ ರಚನೆ ಮಾಡಿಕೊಳ್ಳುವಂತೆ ಇರಬೇಕು ಎಂಬ ತತ್ವ) ಈಡೇರಿಸುವುದಿಲ್ಲ. ಬದಲಿಗೆ ಭಾರತದ ನಕಾಶೆಯಲ್ಲಿ ಯಾವ ಯಾವ ಭಾಗದಲ್ಲಿ ಯಾವ ಬೆಳೆಗಳು ಪ್ರಧಾನವಾಗಿವೆ ಎಂಬುದನ್ನು ತೋರಿಸಬೇಕಾದಾಗ 'ಡಿಜಿಟಲ್ ಮಂಡನೆ'ಯನ್ನು ಮಾಮೂಲಿ ಬೋಧನೆಗಿಂತ ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಸಾಧ್ಯವಾಗುತ್ತದೆ. ಆಗ ಅದು ರಚನಾ ವಾದದ ಆಶಯವನ್ನು ಮಾತಿನಲ್ಲಿ ವಿವರಿಸುವುದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ಸಾಧಿಸುತ್ತದೆ.

ಸಂಬಂಧಪಟ್ಟ ಅಧ್ಯಾಪಕರು ಆಧುನಿಕ ಮಾಧ್ಯಮಗಳನ್ನು ಔಪಚಾರಿಕ ಶಿಕ್ಷಣಕ್ಕೆ ಬಳಸಿಕೊಳ್ಳುವಾಗ ಆಯಾ ಅಧ್ಯಾಪಕರು ಆಯಾ ಸಂದರ್ಭದಲ್ಲಿ ಅನುಸರಿಸುವ ಬೋಧನಾ ವಿಧಾನ, ಪಠ್ಯವಸ್ತುವಿನ ಪ್ರಮಾಣ, ಶೈಕ್ಷಣಿಕ ವರ್ಷದಲ್ಲಿ ಪಠ್ಯದ ವಿವಿಧ ಘಟಕಗಳಿಗೆ ದೊರೆಯುವ ಬೋಧನಾ ಅವಧಿ, ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯ ಸ್ವರೂಪದಂತಹ ಹಲವಾರು ಅಂಶಗಳನ್ನು ಆಧರಿಸಿರಬೇಕಾಗುತ್ತದೆ. ಈ ವಿಚಾರದಲ್ಲಿ ಅಧ್ಯಾಪಕರಿಗೆ ತರಬೇತಿ ಕೊಡಬೇಕಾಗಬಹುದು. ಆದರೆ ಆಯಾ ತರಗತಿಗಳಲ್ಲಿ ಅಧ್ಯಾಪಕರೇ ನಿರ್ಧರಿಸಬೇಕಾದದ್ದನ್ನು ಸಾರ್ವತ್ರಿಕವಾಗಿ ಎಲ್ಲೋ ಒಂದು ಕಡೆ ಯಾರೋ ಒಬ್ಬರು ನಿರ್ಧರಿಸಿ ಅನುಷ್ಠಾನ ಮಾಡಲು ಬರುವುದಿಲ್ಲ. ವಿದ್ಯಾರ್ಥಿಗಳನ್ನು ವೈಯಕ್ತಿಕವಾಗಿ ವ್ಯಕ್ತಿ ಭಿನ್ನತೆಯ ನೆಲೆಯಲ್ಲಿ ತಿಳಿದಿಲ್ಲದವರು ತೆಗೆದುಕೊಳ್ಳುವ ನಿರ್ಧಾರಗಳು ಶಿಕ್ಷಣಶಾಸ್ತ್ರದ ನೆಲೆಯಲ್ಲಿ ಅವೈಜ್ಞಾನಿಕವಾಗುತ್ತವೆ.

ಮೂರನೆಯದಾಗಿ, ಮಕ್ಕಳು ಮೊಬೈಲ್ ಫೋನ್ ಅನ್ನು ಹೆಚ್ಚು ನೋಡಿದರೆ ಕಣ್ಣಿಗೆ ಹಾನಿಯಾಗುತ್ತದೆ, ಕಲಿಕಾನುಭವ ಆಗುವುದಿಲ್ಲ, ದುರಭ್ಯಾಸಗಳು ಬೆಳೆಯುತ್ತವೆ ಎಂದೆಲ್ಲ ಹೇಳುತ್ತಾ, ಎಲ್ಲ ಪಾಠಗಳನ್ನೂ ಯೂಟ್ಯೂಬ್ ಮೂಲಕ ನೋಡಿಕೊಳ್ಳಿ ಎಂದು ಹೇಳುವ ವಿರೋಧಾಭಾಸವು ಔಪಚಾರಿಕ ಶಿಕ್ಷಣವನ್ನು ಹದಗೆಡಿಸುತ್ತದೆ. ಯೂಟ್ಯೂಬ್ ಪಾಠಗಳು ವಿದ್ಯಾರ್ಥಿಗಳ ಮೇಲುಸ್ತುವಾರಿ ಮಾಡುವುದಿಲ್ಲ. ತನ್ನದಲ್ಲದ ಬೋಧನಾ ಪದ್ಧತಿಗೆ ವಿದ್ಯಾರ್ಥಿಯ ಸ್ಪಂದಿಸುವಿಕೆಯನ್ನು ಸಂಬಂಧಪಟ್ಟ ಶಿಕ್ಷಕರು ಅರ್ಥೈಸಲು ಆಗುವುದಿಲ್ಲ. ಕೇವಲ ಫಲಿತಾಂಶವನ್ನು ಹೆಚ್ಚಿಸುವ ದೃಷ್ಟಿಯಿಂದಲೇ ನೋಡಿದಾಗಲೂ ಡಿಜಿಟಲ್ ಪಾಠಗಳು ಅಧ್ಯಾಪಕರು ನಡೆಸಿದ ಪಾಠಗಳಿಗಿಂತ ಉತ್ತಮ ಫಲಿತಾಂಶವನ್ನು ಸಾರ್ವತ್ರಿಕವಾಗಿ ಕೊಟ್ಟಿವೆ ಎನ್ನಲು ಆಧಾರಗಳಿಲ್ಲ.

ಶಿಕ್ಷಣದಲ್ಲಿ ಡಿಜಿಟಲ್ ಪ್ರವೇಶವು ಅಧ್ಯಾಪಕರ ಬೋಧನಾ ಕೌಶಲ ದುರ್ಬಲಗೊಳಿಸುತ್ತದೆ, ಶಿಕ್ಷಕ-ವಿದ್ಯಾರ್ಥಿ ಸಂಬಂಧವನ್ನು ಸಡಿಲಗೊಳಿಸುತ್ತದೆ. ಹೀಗಾಗಿ, ಶಿಕ್ಷಣಕ್ಕೆ ಡಿಜಿಟಲ್ ಪ್ರವೇಶದ ಒಟ್ಟೂ ಸ್ವರೂಪದ ಬಗ್ಗೆ ವ್ಯಾಪಕ ಅಧ್ಯಯನ ನಡೆದು ಅದಕ್ಕೊಂದು ಸ್ಪಷ್ಟ ನೀತಿಯನ್ನು ರೂಪಿಸಬೇಕಾದ ಅಗತ್ಯವಿದೆ.

ಚುರುಮುರಿ



ಸಂಕಷ್ಟತಜ್ಞರ ನೆರವು!

● ಚಂದ್ರಕಾಂತ ವಡ್ಡು

'ಇವರಿಗೆ ಮೈಸೂರೂ ಬೇಕಿಲ್ಲ, ಮೈಸೂರು ಸ್ಯಾಂಡಲ್ಲೂ ಬೇಕಿಲ್ಲ...' ತಿಂಗಳೇಶನ ಬೈಟೂ ಕಾಫಿ ಬಳಗದಲ್ಲಿ ಗೊಣಗಾಟ ಶುರುವಾಯಿತು.

'ದೇಶಾಭಿಮಾನದ ಒಂಚೂರು ಭಾಗವಾದ್ರೂ ರಾಜ್ಯಾಭಿಮಾನ ಇದ್ದಿದ್ರೇ... ಬಾಲಿವುಡ್ ತಾರೆಗೆ 6 ಕೋಟಿಗೂ ಹೆಚ್ಚು ದುಡ್ಡು ಕೊಟ್ಟು ಮೈಸೂರು ಸ್ಯಾಂಡಲ್ ಸೋಪಿಗೆ ರಾಯಭಾರಿ ಮಾಡುತ್ತಿದ್ದರಾ?'

'ಹೌದು, ಇದು ಸ್ಯಾಂಡಲ್-ವುಡ್‌ಗೆ ಮಾಡಿದ ಘೋರ ಅನ್ಯಾಯ!'

'ಮೈಸೂರು ಬ್ಯಾಂಕನ್ನು ಬೇರೆ ಭಾರತೀಯ ಸ್ಟೇಟ್ ಬ್ಯಾಂಕ್ ಜೊತೆ ಕೂಡಿಕೆ ಮಾಡಿದ್ದಾರೆ. ಈ ಬ್ಯಾಂಕಿನ ಸಿಬ್ಬಂದಿ ಹಿಂದಿ ರಾಯಭಾರಿಗಳಾಗಿ ನಾಡಿನ ತುಂಬಾ ಆವರಿಸಿದ್ದಾರೆ'.

'ಮೈಸೂರು ಪಾಕ್ ಕೂಡ 'ಶ್ರೀ'ಪಾದ ಕಾಣುವಂತಿದೆ'.

'ಭ್ರಷ್ಟಾಚಾರ ತಾರಕಕ್ಕೇರಿದೆ ಅಂತ ಆರೋಪಿಸಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆಯ ನೌಕರರ ಸಂಘ, ಸಿಐಡಿ ತನಿಖೆ ನಡೆಸುವಂತೆ ಆಗ್ರಹಿಸಿದೆ'.

'ಮೈಸೂರು ಸ್ಯಾಂಡಲ್ ಸೋಪಿಗೆ ಬೇರೇನಾದರೂ ನಾಮಕರಣ ಮಾಡಿದರೆ ಸರಿಹೊಂದುತ್ತದೆ' ತಿಂಗಳೇಶ ಸೇರಿಸಿದ.

'ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಎಂದು ನಾಮಕರಣ ಮಾಡಿ ಡಿಕೆಶಿ ರಿಯಲ್ ಎಸ್ಟೇಟಿಗೆ ಉತ್ತೇಜನ ನೀಡಿದ್ದಾರೆ ನೋಡಿ' ಮತ್ತೊಬ್ಬ ತಿರುವು ನೀಡಿದ.

'ಪರಮೇಶ್ವರ ತುಮಕೂರನ್ನು ಬೆಂಗಳೂರು ಪಶ್ಚಿಮ, ಮುನಿಯಪ್ಪ ಕೋಲಾರವನ್ನು ಬೆಂಗಳೂರು ಪೂರ್ವ, ಸುಧಾಕರ ಚಿಕ್ಕಬಳ್ಳಾಪುರವನ್ನು ಬೆಂಗಳೂರು ಉತ್ತರ ಜಿಲ್ಲೆ ಎಂದು ಬದಲಿಸಲು ಬೇಡಿಕೆ ಇಟ್ಟರೆ ರಾಜ್ಯ ತತ್ತರಿಸುತ್ತದೆ'.

'ಅಷ್ಟೇ ಆದರೆ ಪರವಾಗಿಲ್ಲ, ಬೆಂಗಳೂರು ರಾಜ್ಯ ಮಾಡಿಕೊಂಡು ನೀವೇ ಇಟ್ಟುಕೊಳ್ಳಿ, ಧಾರವಾಡ ರಾಜ್ಯ ನಮಗಿರಲಿ ಎಂದು ಸದ್ಯ ಬಿಡುವಾಗಿರುವ ಯತ್ನಾಳ್ ಹೋರಾಟಕ್ಕಿಳಿದರೆ ಕಷ್ಟ!'

'ಒಟ್ಟಾರೆ ಅಖಂಡ ರಾಜ್ಯಕ್ಕೆ ಏನೋ ಕುತ್ತು ಬಂದಂತಿದೆ. ನಮ್ಮ ಹೊಳೆನರಸೀಪುರದ ಸಂಕಷ್ಟತಜ್ಞರ ನೆರವು ಪಡೆದು ಪರಿಹಾರ ಯಾಗ ಮಾಡಬೇಕು' ತಿಂಗಳೇಶ ಮಾತು ಮುಗಿಸಿದ.

ಸಂಗತ

ನಿರಂತರ ಒತ್ತಡ: ನಿರ್ವಹಣೆಯೇ ಪರಿಹಾರ

ಸಮಯ ನಿರ್ವಹಣೆಯ ಕೌಶಲಗಳನ್ನು ಕರಗತ ಮಾಡಿಕೊಂಡಾಗ ಮಾತ್ರವೇ ನಾವು ನಮ್ಮ ಒತ್ತಡಗಳನ್ನು ಸರಾಗವಾಗಿ ನಿಭಾಯಿಸಲು ಸಾಧ್ಯ

● ಮುರಳೀಧರ ಕಿರಣಕೆರೆ

ಅದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನೌಕರರ ಸಂಘಟನೆ ಏರ್ಪಡಿಸಿದ್ದ ಒತ್ತಡ ನಿರ್ವಹಣಾ ಕಾರ್ಯಾಗಾರ. 'ಸರ್, ನಮ್ಮ ಇಲಾಖೆಯಲ್ಲಿ ಕೆಲಸದ ಒತ್ತಡ ತುಂಬಾ ಜಾಸ್ತಿ. ನಿರಂತರ ಒತ್ತಡದಿಂದ ನೌಕರರ ಆರೋಗ್ಯ ಹಾಳಾಗುತ್ತಿದೆ. ಅದಕ್ಕೇ ಹೀಗೊಂದು ಕಾರ್ಯಕ್ರಮವನ್ನು ನಡೆಸುತ್ತಿದ್ದೇವೆ. ನಮ್ಮ ಇಲಾಖೆಯ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ಭಾಗವಹಿಸುತ್ತಾರೆ' ಎಂದು ಸಂಘಟನೆಯ ಅಧ್ಯಕ್ಷರು ತಿಳಿಸಿದಾಗ, ಆ ತಾಲ್ಲೂಕು ಸಂಘದ ಕಾರ್ಯದ ಬಗ್ಗೆ ಅಭಿಮಾನ ಮೂಡಿತ್ತು!

ಹೌದು, ಅತಿಯಾದ ಕೆಲಸದ ಹೊರೆಯಿಂದ ಬಳಲುವ ಸರ್ಕಾರಿ ಇಲಾಖೆಗಳಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯೂ ಒಂದು. ಗ್ರಾಮ ಪಂಚಾಯಿತಿ ವ್ಯವಸ್ಥೆ ಎಂಬುದು ಆ ಗ್ರಾಮದ ಸ್ಥಳೀಯ ಸರ್ಕಾರ, ಅಲ್ಲಿನ ಎಲ್ಲಾ ಆಗುಹೋಗುಗಳ ಜವಾಬ್ದಾರಿ ಹೊತ್ತಿರುವಂಥದ್ದು. ಸಾರ್ವಜನಿಕರೊಂದಿಗೆ ನೇರ ಸಂಪರ್ಕ ಹೊಂದಿರುವ ಕಾರಣದಿಂದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅವರ ಸಿಬ್ಬಂದಿಗೆ ಕೆಲಸದ ಒತ್ತಡ ಹೆಚ್ಚು. ಇಂತಹ ಕಾರ್ಯಾಗಾರದಲ್ಲಿ ಭಾಗವಹಿಸಿದಾಗ ಮನಸ್ಸು ಹಗುರವಾಗುತ್ತದೆ, ಒತ್ತಡಗಳನ್ನು ಸಮರ್ಪಕವಾಗಿ ನಿಭಾಯಿಸುವ ಕೌಶಲಗಳನ್ನು ಕಲಿತುಕೊಳ್ಳುವುದರಿಂದ ಕಾರ್ಯದಕ್ಷತೆ, ಗುಣಮಟ್ಟದ ಜೊತೆಗೆ ಉತ್ಪಾದಕತೆಯೂ ಹೆಚ್ಚುತ್ತದೆ.

ಅತಿಯಾದ ಒತ್ತಡಕ್ಕೆ ಕಾರಣಗಳು, ಅಂತಹ ಒತ್ತಡವನ್ನು ನಿರ್ವಹಿಸುವ ವಿಧಾನಗಳ ಕುರಿತು ಮನದಟ್ಟು ಮಾಡಿಸುತ್ತಿದ್ದೆ. ಶಿಬಿರದಲ್ಲಿ ಭಾಗವಹಿಸಿದ್ದವರು ತಮ್ಮ ತಮ್ಮ ಸಮಸ್ಯೆಗಳನ್ನು ಬಿಚ್ಚಿಡುತ್ತಾ ಉತ್ತಮವಾಗಿ ಸ್ಪಂದಿಸುತ್ತಿದ್ದ ಹೊತ್ತಿನಲ್ಲೇ ಮೇಲಧಿಕಾರಿಗಳು ಬಂದು 'ಈ ಕಾರ್ಯಕ್ರಮ ಮುಗಿದ ಮೇಲೆ ಪ್ರಗತಿ ಪರಿಶೀಲನಾ ಸಭೆ ಇದೆ. ಎಲ್ಲರೂ ಕಡ್ಡಾಯವಾಗಿ ಭಾಗವಹಿಸಬೇಕು' ಎಂದಾಗ ಸಭೆಯಲ್ಲಿದ್ದವರ ಮುಖ ಕಪ್ಪಿಟ್ಟಿತು. ತರಬೇತಿಯ ಮುಂದಿನ ಹಂತದಲ್ಲಿ ಅವರಿಂದ ನಿರೀಕ್ಷಿಸಿದ್ದ ಸ್ಪಂದನ ಸಿಗಲೇ ಇಲ್ಲ. ಮೀಟಿಂಗ್ ವಿಚಾರ ತಂದಿತ್ತ ಒತ್ತಡವು ತೆರೆದ ಮನಗಳನ್ನು ಮತ್ತೆ ಮುದುಡಿಸಿತ್ತು.

'ಸ್ಟ್ರೆಸ್' ಎಂದು ಎಲ್ಲರೂ ಗೊಣಗುವ ಈ ಒತ್ತಡ ಒಂದು ಸಾರ್ವತ್ರಿಕ ಸಮಸ್ಯೆಯಾಗಿದೆ. ಹಾಗಂತ ಒತ್ತಡಗಳೆಲ್ಲಾ ಅಪಾಯಕಾರಿಯಲ್ಲ. ಹಿತಮಿತವಾದ ಒತ್ತಡ ಕಾರ್ಯಕ್ಷಮತೆ ಸುಧಾರಿಸಿಕೊಳ್ಳಲು, ಕೆಲಸಗಳನ್ನು ಸಕಾಲಿಕವಾಗಿ ಮಾಡಿ ಮುಗಿಸಲು ಸಹಕಾರಿ. ಇದು ಪ್ರೇರಕವೂ ಹೌದು. ಅದೇ ದೀರ್ಘಕಾಲದ ಅತಿ ಒತ್ತಡ ಅನಾರೋಗ್ಯಕಾರಿ. ಇದರ ಒಟ್ಟಾರೆ ಪರಿಣಾಮವು ವೈಯಕ್ತಿಕವಾಗಷ್ಟೇ ಅಲ್ಲ, ಕೌಟುಂಬಿಕವಾಗಿಯೂ ಸಾಮಾಜಿಕವಾಗಿಯೂ ಹಲವು ಸಮಸ್ಯೆಗಳನ್ನು ತಂದೊಡ್ಡುತ್ತದೆ. ವ್ಯಕ್ತಿಗೆ ತನ್ನ ನಿಭಾಯಿಸುವ ಸಾಮರ್ಥ್ಯವನ್ನು ಮೀರಿದ ಬೇಡಿಕೆಗಳನ್ನು ಎದುರಿಸುವಾಗ ಒತ್ತಡದ ಸ್ಥಿತಿ ನಿರ್ಮಾಣವಾಗುವುದು ಹೌದಾದರೂ ಹಲವು ಕಾರಣಗಳಿಂದ ಇಂತಹ ಸಾಮರ್ಥ್ಯ ಕುಸಿಯುತ್ತಿರುವುದು ಆತಂಕಕಾರಿ ವಿದ್ಯಮಾನವೇ ಸರಿ.

ನಿರಂತರ ಒತ್ತಡ ವ್ಯಕ್ತಿಯ ಮನಸ್ಸು, ದೇಹ ಮತ್ತು ನಡವಳಿಕೆಯ ಮೇಲೆ ಪರಿಣಾಮ ಬೀರುತ್ತದೆ. ಏಕಾಗ್ರತೆಯ ತೊಂದರೆ, ಮರೆವು, ನಿರ್ಧಾರ ತೆಗೆದುಕೊಳ್ಳುವಲ್ಲಿ ಹಿನ್ನಡೆಯ ಜೊತೆಗೆ ಗಂಭೀರ ಶಾರೀರಿಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ತೀವ್ರ ಒತ್ತಡ ಅನುಭವಿಸುವವರು ಸಾಮಾಜಿಕ ಸಂಪರ್ಕ, ಚಟುವಟಿಕೆಗಳಿಂದ ದೂರವಿರುವುದು, ಒತ್ತಡದ ಉಪಶಮನಕ್ಕಾಗಿ ಧೂಮಪಾನ, ಮದ್ಯಪಾನ, ಮಾದಕದ್ರವ್ಯಗಳ ಮೊರೆ ಹೋಗಿ ಮುಂದೆ ವ್ಯಸನಿಗಳಾಗಬಹುದು.

ಬಹುತೇಕ ಸಂದರ್ಭಗಳಲ್ಲಿ ಸಮಯದ ಸರಿಯಾದ ನಿರ್ವಹಣೆಯಲ್ಲಿ ವಿಫಲರಾಗುವುದೇ ಒತ್ತಡ ಹೆಚ್ಚಲು ಪ್ರಮುಖ ಕಾರಣ. ಮುಖ್ಯವೂ ಅಲ್ಲದ ತುರ್ತೂ ಅಲ್ಲದ ಚಟುವಟಿಕೆಗಳಿಂದ ದೂರವಿದ್ದಾಗ ಸಮಯದ ಉಳಿತಾಯವಾಗಿ, ಅಗತ್ಯ ಕೆಲಸಗಳನ್ನು ಮಾಡಿಕೊಳ್ಳಲು ವೇಳೆ ದೊರೆಯುತ್ತದೆ. ದೂರವಾಣಿಯಲ್ಲಿ ಸಮಯದ ಪರಿವೆಯೇ ಇಲ್ಲದೆ ಹರಟುವುದು, ಸಾಮಾಜಿಕ ಜಾಲತಾಣಗಳಲ್ಲಿ ತಾಸುಗಟ್ಟಲೆ ಜಾಲಾಡುವಂತಹ ಚಟುವಟಿಕೆಗಳು ಎಲ್ಲರ ಸಮಯವನ್ನೂ ನುಂಗುತ್ತಿರುವುದು ಸದ್ಯದ ವಾಸ್ತವ. ಸಮಯ ನಿರ್ವಹಣೆಯ ಕೌಶಲ ಕರಗತವಾದಾಗ ಒತ್ತಡಗಳನ್ನು ಸರಾಗವಾಗಿ ನಿಭಾಯಿಸಬಹುದು. ಇದರಿಂದ ಮಾಡುವ ಕೆಲಸದ ಗುಣಮಟ್ಟದ ಜೊತೆಗೆ ಉತ್ಪಾದಕತೆಯೂ ಹೆಚ್ಚುತ್ತದೆ, ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಕೌಟುಂಬಿಕ ಬದುಕು ಮತ್ತು ವೃತ್ತಿ ಬದುಕಿನ ನಡುವೆ ಸಮತೋಲನ ಸಾಧಿಸಲು ಸಾಧ್ಯವಾಗುತ್ತದೆ.



ಸರಿಯಾದ ಯೋಜನೆ, ಕೆಲಸಗಳನ್ನು ಆದ್ಯತೆಗೆ ಅನುಸಾರವಾಗಿ ವಿಂಗಡಿಸಿಕೊಂಡು ಗಡುವಿನೊಳಗೆ ಪೂರ್ಣಗೊಳಿಸುವುದು, ಒತ್ತಡ ಉಂಟು ಮಾಡಬಲ್ಲ ದೊಡ್ಡ ಕೆಲಸಗಳನ್ನು ನಿರ್ವಹಿಸಬಹುದಾದ ಸಣ್ಣ ಸಣ್ಣ ಹಂತಗಳನ್ನಾಗಿ ವಿಂಗಡಿಸಿಕೊಂಡು ಕಾರ್ಯ ಮುಗಿಸುವುದು, ವ್ಯಾಯಾಮ, ನಡಿಗೆಯಂತಹ ದೈಹಿಕ ಚಟುವಟಿಕೆಗಳು, ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದು, ಅಗತ್ಯದಷ್ಟು ನಿದ್ರೆ, ಸಕ್ಕರೆ, ಕೊಬ್ಬು, ಸಂಸ್ಕರಿತ ಆಹಾರದ ಮಿತ ಬಳಕೆ, ಉತ್ತಮ ಸಾಮಾಜಿಕ ಸಂಪರ್ಕಗಳು ಒತ್ತಡವನ್ನು ಮೆಟ್ಟಿ ನಿಲ್ಲಲು ಸಹಕಾರಿ.

ಮೊದಲೇ ಸರ್ಕಾರಿ ಇಲಾಖೆಗಳು ಸಿಬ್ಬಂದಿ ಕೊರತೆಯಿಂದ ಬಳಲುತ್ತಿವೆ. ಹಾಗಾಗಿ, ಹೆಚ್ಚಿನ ಕೆಲಸದ ಹೊರೆಯನ್ನು ಹೊರುವುದು ಅನಿವಾರ್ಯ. ಇದರಿಂದ ಒತ್ತಡ ಮತ್ತಷ್ಟು ಹೆಚ್ಚುತ್ತಿದೆ. ಅತಿ ಒತ್ತಡವೆಂಬುದು ಗಂಭೀರ ಆರೋಗ್ಯ ಸಮಸ್ಯೆಗಳು, ಹಠಾತ್ ಸಾವುಗಳಿಗೆ ಮುಖ್ಯ ಕಾರಣವಾಗುತ್ತಿರುವ ಈ ಹೊತ್ತಿನಲ್ಲಿ, ಒತ್ತಡ ನಿರ್ವಹಣೆಯಂತಹ ಸ್ವಾಸ್ಥ್ಯ ಸಂಬಂಧಿ ಕಾರ್ಯಕ್ರಮಗಳು ಸರ್ಕಾರಿ ಇಲಾಖೆಗಳು, ಖಾಸಗಿ ವೃತ್ತಿ ಸ್ಥಳಗಳಲ್ಲಿ ನಿಯಮಿತವಾಗಿ ನಡೆಯಬೇಕಿದೆ. ಸಮಗ್ರ ಸ್ವಾಸ್ಥ್ಯ ಮತ್ತು ಉತ್ಪಾದಕತೆ ದೃಷ್ಟಿಯಿಂದ ಇಂತಹ ನಡೆ ಸಾರ್ವತ್ರಿಕವಾಗಬೇಕಾದ ಅಗತ್ಯ ಖಂಡಿತಾ ಇದೆ.

ವಾಚಕರ ವಾಣಿ

ಮಕ್ಕಳ ಬಗೆಗಿನ ಕಾಳಜಿಯೇ ಮುಳುವಾಯಿತೆ?

ರಾಯಬಾಗ ತಾಲ್ಲೂಕಿನ ನಿಡಗುಂದಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ತರಗತಿ ಕೊಠಡಿಗಳ ಮಂಜೂರಾತಿಗಾಗಿ ಆಗ್ರಹಿಸಿ ಉಪವಾಸ ಹಾಗೂ ಮೌನ ಕಾಲ್ನಡಿಗೆ ನಡೆಸಿದ್ದ ಮುಖ್ಯ ಶಿಕ್ಷಕ ವೀರಣ್ಣ ಮಡಿವಾಳರ ಅವರನ್ನು ಸೇವೆಯಿಂದ ಅಮಾನತು ಮಾಡಿರುವುದಾಗಿ ವರದಿಯಾಗಿದೆ (ಪ್ರ.ವಾ., ಮೇ 30). ಸರ್ಕಾರಿ ನೌಕರ ಪ್ರತಿಭಟನೆ ಮಾಡುವುದು 'ನಿಯಮದ ಉಲ್ಲಂಘನೆ' ಎಂದು ಹೀಗೆ ಅಮಾನತು ಮಾಡಿರುವುದು 'ಎತ್ತು ಈಯಿತು ಎಂದರೆ ಕೊಟ್ಟಿಗೆಗೆ ಕಟ್ಟು' ಎಂಬಂತಾಯಿತು. ಏಕೆಂದರೆ ಪ್ರತಿಭಟನೆಯ ಹಿಂದೆ ಶಿಕ್ಷಕನಿಗೆ ಇದ್ದ ಕಾಳಜಿಯನ್ನು ಸರ್ಕಾರ ಅರ್ಥ ಮಾಡಿಕೊಳ್ಳದೆ ಕುರುಡಾಗಿ ವರ್ತಿಸಿದೆ.

ಹೋದ ಪುಟ್ಟ ಬಂದ ಪುಟ್ಟ ಎಂದು ಶಾಲೆಗೆ ಹೋಗಿ ಬಂದು ಮಾಡಿ, ತಿಂಗಳು ತಿಂಗಳು ಸಂಬಳ ಎಣಿಸಿಕೊಂಡು ಎಲ್ಲರಂತೆ ಈ ಶಿಕ್ಷಕನೂ ಇರಬಹುದಾಗಿತ್ತು. ಶಾಲೆಗೆ ಬಂದ ಮಕ್ಕಳನ್ನು ಇರುವ ಜಾಗದಲ್ಲಿ ಕುಳ್ಳಿರಿಸಿ ಪಾಠ ಮಾಡಿಕೊಂಡೋ ಚೀಟಿ ವ್ಯವಹಾರ ಮಾಡಿಕೊಂಡೋ ರಾಜಕೀಯ ಮಾಡಿಕೊಂಡೋ ಇರಬಹುದಾಗಿತ್ತು. ಆದರೆ ಈ ಶಿಕ್ಷಕನಿಗೆ ಶಾಲೆಯ ಬಗ್ಗೆ, ಮಕ್ಕಳ ಬಗ್ಗೆ ಕಾಳಜಿ ಇರುವುದೇ ತಪ್ಪಾಗಿಹೋಯಿತು. ಇವರು ತಮ್ಮ ಸಂಬಳ ಹೆಚ್ಚಿಸಿರಿ ಎಂದೋ ತಾನು ಕೇಳಿದ ಊರಿಗೆ ವರ್ಗಾವಣೆ ಮಾಡಿರಿ ಎಂದೋ ಮುಂಬಡ್ತಿಗಾಗಿಯೋ ಪ್ರತಿಭಟಿಸಿಲ್ಲ ಎಂಬುದನ್ನು ಸರ್ಕಾರ ಗಣನೆಗೆ ತೆಗೆದುಕೊಂಡು, ಅವರಿಗೆ ಎಚ್ಚರಿಕೆ ನೀಡಬಹುದಿತ್ತೇ ವಿನಾ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸಬಾರದಿತ್ತು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಶಿಕ್ಷಕರಿಗೆ ತರಬೇತಿ ಇದೆ, ನೇಮಕಾತಿ ಇಲ್ಲ!

51 ಸಾವಿರ ಅತಿಥಿ ಶಿಕ್ಷಕರ ನೇಮಕಕ್ಕೆ ರಾಜ್ಯ ಸರ್ಕಾರ ನಿರ್ಧರಿಸಿರುವುದರ ಕುರಿತು ಸಂಪಾದಕೀಯವು (ಪ್ರ.ವಾ., ಮೇ 30) ಸಮಯೋಚಿತ ಹಾಗೂ ಸಕಾಲಿಕವಾದ ಸಲಹೆ ನೀಡಿದೆ. ಅನೇಕ ವರ್ಷಗಳಿಂದಲೂ ಶಿಕ್ಷಕರನ್ನು ನೇಮಿಸಿಯೇ ಇಲ್ಲ. ಶಿಕ್ಷಣ ಸಚಿವರಾಗಿದ್ದ ಗೋವಿಂದೇಗೌಡರು ಇದ್ದಾಗ ನಡೆದ ರೀತಿಯಲ್ಲಿ ಆದಂತಹ ನೇಮಕಾತಿ ಮತ್ತೆ ಆಗಿಯೇ ಇಲ್ಲ. ಕಾಲಕಾಲಕ್ಕೆ ನೇಮಿಸುತ್ತಾ ಬಂದಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. ಶಿಕ್ಷಕರ ತರಬೇತಿ ನೀಡುವ ಶಿಕ್ಷಣ ಸಂಸ್ಥೆಗಳು ಮಾತ್ರ ಅಧಿಕಗೊಂಡಿವೆ. ಪ್ರಶಿಕ್ಷಣದಲ್ಲಿ ಪ್ರಾವೀಣ್ಯ ಪಡೆದವರು ನೇಮಕಾತಿಗಾಗಿ ಬಕಪಕ್ಷಿಗಳಂತೆ ಕಾಯುವಂತೆ ಆಗಿದೆ. ರಾಜ್ಯದ ಅದೆಷ್ಟೋ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿಂದ ಎರಡೆರಡು ತರಗತಿಗಳನ್ನು ಒಟ್ಟಿಗೆ ಸೇರಿಸಿ ಪಾಠ ಮಾಡುವ ಪರಿಸ್ಥಿತಿ ಇದೆ. ವಿಷಯವಾರು ಶಿಕ್ಷಕರ ಕೊರತೆಗೇನೂ ಕಮ್ಮಿ ಇಲ್ಲ. ಸರ್ಕಾರಿ ಶಾಲೆಗಳ ಸ್ಥಿತಿ ಹೀಗೇ ಇದ್ದರೆ ಅಭಿವೃದ್ಧಿ ಆಗಲು ಹೇಗೆ ಸಾಧ್ಯ? ಬಡಮಕ್ಕಳ ಬಗ್ಗೆ ಕಾಳಜಿ ಇಲ್ಲದಿರುವುದೇ ಇಂತಹ ಸಮಸ್ಯೆಯ ಮೂಲ.

ಕಾಯಂ ಶಿಕ್ಷಕರಿಗೆ ಅಧಿಕ ಸಂಬಳ ಇರುವಾಗ, ಅತಿಥಿ ಶಿಕ್ಷಕರು ಅಲ್ಪ ಸಂಬಳಕ್ಕೆ ಕೆಲಸ ಮಾಡಬೇಕಾಗುತ್ತದೆ. ಹೀಗೆ ಶಿಕ್ಷಕರ ನಡುವೆಯೇ ತಾರತಮ್ಯ ನಿಲುವು ಹೊಂದುವುದು ಎಷ್ಟು ಸರಿ? ಸರ್ಕಾರ ಇಂತಹ ನಿರ್ಧಾರದಿಂದ ಹಿಂದೆ ಸರಿದು, ಕಾಯಂ ಶಿಕ್ಷಕರನ್ನು ತೆಗೆದುಕೊಂಡರೆ ಮಾತ್ರ ಸರ್ಕಾರಿ ಶಾಲೆಗಳ ಸಮಸ್ಯೆಗೆ ಕಾಯಂ ಪರಿಹಾರ ಸಿಗುತ್ತದೆ. ಇಲ್ಲದಿದ್ದರೆ ಸರ್ಕಾರಿ ಶಾಲೆಗಳು ಇನ್ನಷ್ಟು ದುಃಸ್ಥಿತಿ ತಲುಪುತ್ತವೆ.

ಬಿ.ಮೊಹಿದ್ದೀನ್ ಖಾನ್, ಚಿತ್ರದುರ್ಗ

ಇದೊಳ್ಳೆ 'ರಾಮಾಯಣ'!

ರಾವಣ ದೇಶವನ್ನಾಳಿದ ದ್ವೀಪ ರಾಷ್ಟ್ರ ಲಂಕಾದಲ್ಲಿ ಲವಣಕ್ಕೆ (ಉಪ್ಪಿಗೆ) ಬರವಂತೆ! ಕೆ.ಜಿ.ಗೆ ₹145 ಅಂತೆ! ಉತ್ಪಾದನೆಗೆ ಅಕಾಲಿಕ ಮಳೆ ಸಮಸ್ಯೆಯಂತೆ. ಊಟಕ್ಕೆ ಉಪ್ಪಿನಕಾಯಿ ಇದ್ದರೂ ಉಪ್ಪಿಲ್ಲ! ಸದ್ಯ ಭಾರತದಿಂದ 3,050 ಟನ್ ರಫ್ತಾಗಿದೆ ಎಂದು ಮಾಹಿತಿ ಇದೆ. ಇಂತಹ ಕೊರತೆ ಇದೆ ಉಪ್ಪಿಗೂ ಎಂದು ಕೇಳಿದವರು ಆಗಿದ್ದಾರೆ ಬೆಪ್ಪು! ಅಲ್ಲಿನ ನಾಗರಿಕರಿಗಂತೂ ಇದೊಳ್ಳೆ 'ರಾಮಾಯಣ'!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ, ಶಿವಮೊಗ್ಗ

ಎಲ್ಲ ಜಿಲ್ಲೆಗೂ ಬೇಕು ವಿಶೇಷ ಕಾರ್ಯಪಡೆ

ಕೋಮುದ್ವೇಷ ಪ್ರಚೋದನೆಯನ್ನು ನಿಗ್ರಹಿಸಲು ರಾಜ್ಯ ಸರ್ಕಾರ 'ವಿಶೇಷ ಕಾರ್ಯಪಡೆ' ರಚಿಸಿರುವುದು ಸ್ವಾಗತಾರ್ಹ (ಪ್ರ.ವಾ., ಮೇ 30). ಆದರೆ ದಕ್ಷಿಣ ಕನ್ನಡ, ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಮಾತ್ರ ಈ ಯೋಜನೆಯನ್ನು ಸೀಮಿತಗೊಳಿಸಿರುವುದು ಸರಿಯಲ್ಲ. ರಾಜ್ಯದ ಎಲ್ಲ ಜಿಲ್ಲೆಗಳಿಗೂ ಇದನ್ನು ವಿಸ್ತರಿಸಬೇಕಾಗಿದೆ.

ಯಾವಾಗ ಎಲ್ಲಿ ರಾಜಕೀಯಪ್ರೇರಿತ ಕೋಮುಗಲಭೆಗಳು ಭುಗಿಲೇಳುತ್ತವೆ ಎಂದು ಹೇಳಲು ಬರುವುದಿಲ್ಲ. ಈ ವಿಶೇಷ ಕಾರ್ಯಪಡೆ ನಾಮಕಾವಸ್ಥೆಯ ಸ್ಥಿತಿಯಲ್ಲಿರದೆ ಸದಾ ಕ್ರಿಯಾಶೀಲವಾಗಿ ಇರಬೇಕಾಗುತ್ತದೆ. ಯಾವ ಕೋಮಿನವರು ಶಾಂತಿಯನ್ನು ಕದಡಲು ಪ್ರಯತ್ನಿಸಿದರೂ ಯಾವುದೇ ಮುಲಾಜಿಲ್ಲದೆ ಕ್ರಮ ಕೈಗೊಳ್ಳುವಂತೆ ಸರ್ಕಾರ ನಿಗಾ ವಹಿಸಬೇಕಾಗಿದೆ. ರಾಜಕಾರಣಿಗಳ ಅನಗತ್ಯ ಹಸ್ತಕ್ಷೇಪ ಇಲ್ಲದಂತೆ ಆ ಕಾರ್ಯಪಡೆಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಬಿಟ್ಟಾಗ ಮಾತ್ರ ಕೋಮುಗಲಭೆಗಳನ್ನು ಸ್ವಲ್ಪಮಟ್ಟಿಗಾದರೂ ನಿಯಂತ್ರಿಸಬಹುದೇನೊ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಫಲವತ್ತು ಭೂಮಿಯ ಸ್ವಾಧೀನ ಬೇಡ

ಗ್ರಾಮೀಣ ಪ್ರದೇಶಗಳಲ್ಲಿನ ಅನಧಿಕೃತ ಬಡಾವಣೆಗಳ ನಿಯಂತ್ರಣಕ್ಕೆ ಕಾಯ್ದೆ ರೂಪಿಸುವುದಾಗಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿರುವುದು ಶೀಘ್ರವಾಗಿ ಕಾರ್ಯರೂಪಕ್ಕೆ ಬರಲಿ. ಫಲವತ್ತಾದ ಭೂಮಿಗಳನ್ನು ರೈತರಿಂದ ಕಡಿಮೆ ಬೆಲೆಗೆ ಖರೀದಿಸಿ ನಿವೇಶನಗಳಾಗಿ ಮಾರ್ಪಡಿಸುತ್ತಿರುವುದು ಶೋಚನೀಯ. ಇರುವ ಅರ್ಧ, ಒಂದು, ಎರಡು ಎಕರೆ ಜಮೀನನ್ನು ಮಾರಿ ರೈತ ಬೀದಿ ಪಾಲಾಗುತ್ತಿದ್ದಾನೆ. ಬಂದ ದುಡ್ಡಿನಲ್ಲಿ ಮೋಜು, ಮಸ್ತಿ ಮಾಡಿ, ಜನ್ಮ ಕೊಟ್ಟ ಊರನ್ನು ತೊರೆದು ಪಟ್ಟಣಗಳಲ್ಲಿ ಕೂಲಿ ನಾಲಿ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಸಾವಿರಾರು ಕುಟುಂಬಗಳಿವೆ.

ಈಗಾಗಲೇ ನಿರ್ಮಾಣಗೊಂಡಿರುವ ಬಡಾವಣೆಗಳಿಗೆ ಮೂಲ ಸೌಕರ್ಯ ಕೊಡಿ. ಮಳೆಗಾಲದಲ್ಲಿ ಕೆರೆಯಂತಾಗುವ ಬಡಾವಣೆಗಳನ್ನು ಸರಿಪಡಿಸಿ ನೆಮ್ಮದಿಯ ಜೀವನಕ್ಕೆ ಅವಕಾಶ ಮಾಡಿ. ಕೊಡುಕೊಳ್ಳುವಿಕೆಯ ತಂತ್ರ ಸರ್ಕಾರದ್ದಾಗಲಿ. ರಿಯಲ್ ಎಸ್ಟೇಟ್ ದಂಧೆಗೆ ರೈತರು ಹಾಳಾಗುವುದು ಬೇಡ. ಆಹಾರಧಾನ್ಯಗಳ ಬೆಲೆ ಈಗಾಗಲೇ ಗಗನಕ್ಕೆ ಏರಿರುವ ಬಗ್ಗೆ ಸರ್ಕಾರ ಚಿಂತಿಸಲಿ.

ಮಲ್ಲತಹಳ್ಳಿ ಎಚ್. ತುಕಾರಾಂ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕನ್ನಡದ ಮೂಲ ತಮಿಳು ಎಂಬ ಕಮಲ್ ಹಾಸನ್ ಹೇಳಿಕೆ, ಬೆಂಗಳೂರಿನಲ್ಲಿ ನಡೆದ 'ನುಡಿ ಜಗಳ'ದ ಹಿನ್ನೆಲೆಯಲ್ಲಿ ತಜ್ಞರ ಬರಹಗಳು

ಕನ್ನಡ–ತಮಿಳು: ಒಂದೇ ಬೇರು, ಭಿನ್ನ ಕವಲು

● ಪ್ರೊ. ಹಂಪ ನಾಗರಾಜಯ್ಯ

ಸಂಸ್ಕೃತ, ಪ್ರಾಕೃತದ ವ್ಯಾಕರಣಕ್ಕೂ ದ್ರಾವಿಡ ಭಾಷೆಗಳ ವ್ಯಾಕರಣಕ್ಕೂ ಹೋಲಿಸಿದರೆ ಬಹಳ ವ್ಯತ್ಯಾಸ ಕಾಣುತ್ತದೆ. ಆದರೆ, ತಮಿಳು ಮತ್ತು ಕನ್ನಡ, ತೆಲುಗು ಮತ್ತು ಕನ್ನಡ, ಮಲಯಾಳ ಮತ್ತು ಕನ್ನಡ ವ್ಯಾಕರಣಗಳಲ್ಲಿ ಹೊಂದಾಣಿಕೆ ಇದೆ. ಇವು ಒಂದು ಮೂಲಕ್ಕೆ ಸೇರಿದವು ಎನ್ನುವುದು ಈ ಹೊಂದಾಣಿಕೆಯಿಂದ ತಿಳಿಯುತ್ತದೆ. ಅದೇ ರೀತಿ ತಮಿಳರ ಪೂರ್ವದ ಸಾಹಿತ್ಯ ಓದಿದರೆ ಇದು ನಮ್ಮದೇ ಎಂದು ಕನ್ನಡಿಗರಿಗೆ ಅನ್ನಿಸುತ್ತದೆ. ಹಾಗೆ ಅನ್ನಿಸಿದ ಮಾತ್ರಕ್ಕೆ, ಸಾಮ್ಯ ಇದ್ದ ಮಾತ್ರಕ್ಕೆ ಇವು ಒಂದರಿಂದ ಒಂದು ಬಂದದ್ದಲ್ಲ; ಒಂದು ಮೂಲದಿಂದ ಬಂದು ಬೇರೆ ಬೇರೆ ಆದಂಥವು. ಇವುಗಳ ಲಿಪಿಗಳು ಭಿನ್ನ. ಇವು ಪ್ರತ್ಯೇಕ ಭಾಷೆಗಳು, ಸೋದರ ಭಾಷೆಗಳು, ಜ್ಞಾತಿ ಭಾಷೆಗಳು ಎನ್ನುವುದು ಭಾಷಾವಿಜ್ಞಾನದ ಆಧಾರದಿಂದಲೂ ಚಾರಿತ್ರಿಕ ಆಧಾರದಿಂದಲೂ ನಿರೂಪಿತವಾಗಿದೆ

ನಮ್ಮ ದೇಶದಲ್ಲಿ ಭಾಷೆಗಳು, ಉಪಭಾಷೆಗಳು ಸೇರಿ ಸುಮಾರು ಒಂದು ಸಾವಿರ ಭಾಷೆಗಳು ಜೀವಂತವಾಗಿವೆ. ಸಂಸ್ಕೃತ, ಪ್ರಾಕೃತ, ಮರಾಠಿ ಇವೆಲ್ಲ ಇಂಡೋ ಆರ್ಯನ್ ಭಾಷೆಗಳು. ಕನ್ನಡ, ತೆಲುಗು, ತಮಿಳು, ಮಲಯಾಳ ಇವು ದ್ರಾವಿಡ ಭಾಷೆಗಳು. ಇವುಗಳ ಜತೆಗೆ ಕೊಡವ ಮತ್ತು ತುಳು ಕೂಡ ಜೀವಂತವಿರುವ ಪ್ರಮುಖ ದ್ರಾವಿಡ ಭಾಷೆಗಳಾಗಿವೆ. ದ್ರಾವಿಡ ಭಾಷಾ ಪರಿವಾರದ ಪ್ರಾಚೀನತೆ ಕ್ರಿ.ಪೂ 7–8ನೇ ಶತಮಾನದಷ್ಟು ಹಳೆಯದು. ಈಗ ಉಳಿದಿರುವ ಭಾಷೆಗಳಲ್ಲಿ 65–70 ದ್ರಾವಿಡ ಭಾಷೆಗಳಿವೆ (ಉಪಭಾಷೆಗಳೂ ಸೇರಿ). ಸಾವಿರಾರು ವರ್ಷಗಳ ಹಿಂದೆ ಅನೇಕ ದ್ರಾವಿಡ ಭಾಷೆಗಳು ಉತ್ತರದಿಂದ ದಕ್ಷಿಣದವರೆಗೂ ಹರಡಿಕೊಂಡಿದ್ದವು. ಈ ಪೈಕಿ ದಕ್ಷಿಣದಲ್ಲಿ ಸಾಹಿತ್ಯ, ಲಿಪಿ, ಆಡಳಿತ ಭಾಷೆಯ ಅನುಕೂಲ ಇರುವ ಪ್ರಮುಖ ಭಾಷೆಗಳು ಕನ್ನಡ, ತೆಲುಗು, ತಮಿಳು ಮತ್ತು ಮಲಯಾಳ. ಜತೆಗೆ, ತುಳು, ಕುರುಹು, ವಲ್ಲಾರಿ, ಗದಬ, ಗೋಂಡಿ ಈ ಎಲ್ಲ ದ್ರಾವಿಡ ಭಾಷೆಗಳೂ ಕ್ರಿ.ಪೂ 8ನೇ ಶತಮಾನದ ವೇಳೆಗೆ ಒಂದು ರೂಪ ಪಡೆದುಕೊಂಡಿದ್ದವು. ಒಂದೇ ಕುಟುಂಬಕ್ಕೆ (ಮೂಲದ್ರಾವಿಡ ಭಾಷೆ- ಪ್ರೋಟೊ ದ್ರವಿಡಿಯನ್ ಲ್ಯಾಂಗ್ವೇಜ್) ಸೇರಿದ ಇವೆಲ್ಲ ಕ್ರಮೇಣ ಬೇರೆ ಬೇರೆ ಭಾಷೆಗಳಾದವು.

ಭಾಷೆಗಳು ಒಂದೇ ಮೂಲದಿಂದ ಬಂದವು, ಏಕೆ ಬೇರೆ ಬೇರೆ ಆದವು ಎನ್ನುವುದಕ್ಕೆ ಮುಖ್ಯವಾಗಿ ಮೂರು ಕಾರಣಗಳು. ಒಂದು, ಬೆಟ್ಟಗುಡ್ಡಗಳು. ಎರಡು, ನದಿಗಳು; ಮೂರನೇ ಕಾರಣ ಅರಣ್ಯ. ನೈಸರ್ಗಿಕ ಕಾರಣಗಳಿಂದ ಜನರು ಮತ್ತೆ ಮತ್ತೆ ಸೇರುವ ಅವಕಾಶಗಳು ಇಲ್ಲದ ಕಾರಣಕ್ಕೆ, ಪ್ರತ್ಯೇಕವಾಗಿ ಇರುವ ಗುಂಪುಗಳ ಭಾಷೆಗಳಲ್ಲಿ ವ್ಯತ್ಯಾಸ ಉಂಟಾಗಿ ಕಾಲಾಂತರದಲ್ಲಿ ಅವು ಭಿನ್ನ, ಸ್ವತಂತ್ರ ಭಾಷೆಗಳೇ ಆಗುತ್ತವೆ. ಕನ್ನಡ, ತಮಿಳು ಸೇರಿದಂತೆ ಎಲ್ಲ ದ್ರಾವಿಡ ಭಾಷೆಗಳೂ ಒಂದು ಮೂಲದಿಂದ, ಒಂದು ಬೇರಿನಿಂದ ಬಂದವು. ಹೀಗೆ ಕನ್ನಡ, ತಮಿಳು ಎರಡಕ್ಕೂ ಮೂಲದ್ರಾವಿಡವೇ ಬೇರು. ಎರಡೂ ಪಡಿಮೂಡಿರುವುದು ಒಂದೇ ಬೇರಿನಿಂದ, ಒಂದೇ ಕಾಂಡದಿಂದ. ಒಂದೇ ಬೇರಿನಿಂದ ಬಂದಿರುವುದರಿಂದ ಆ ಕೊಂಬೆಗೂ ಈ ಕೊಂಬೆಗೂ ಸಾಮೀಪ್ಯ ಇರುತ್ತದೆ. ಆದರೆ, ಆ ಕೊಂಬೆಯಿಂದ ಈ ಕೊಂಬೆ ಹುಟ್ಟಿರುವುದಿಲ್ಲ. ತಮಿಳು ಮತ್ತು ಕನ್ನಡ ಭಾಷೆಗಳು ಒಂದು ಬೇರಿನಿಂದ ಬಂದು ಕ್ರಿ.ಪೂ 5ನೇ ಶತಮಾನದಲ್ಲೇ ಸ್ವತಂತ್ರ ಭಾಷೆಗಳಾದವು. ಅದೇ ಮೂಲದಿಂದ ಬಂದಿದ್ದ ಮಲಯಾಳ ಮತ್ತು ತಮಿಳು ಹೆಚ್ಚು ಕಾಲ ಒಂದಾಗಿಯೇ ಇದ್ದವು. ಅವು ಬೇರೆ ಆದದ್ದು ಕ್ರಿ.ಶ 9ನೇ ಶತಮಾನದಲ್ಲಿ.

> **ದೇಶದ ಮೊದಲ ಗವರ್ನರ್ ಜನರಲ್ ಆಗಿದ್ದ ಸಿ.ರಾಜಗೋಪಾಲಚಾರಿ ಅವರು 1968–69ರಲ್ಲಿ ಒಂದು ಲೇಖನ ಬರೆದಿದ್ದರು. ಕನ್ನಡವು ತಮಿಳಿನಿಂದ ಹುಟ್ಟಿದ ಭಾಷೆಯಾಗಿದ್ದು, ತೆಲುಗು ಲಿಪಿಯನ್ನು ಬಳಸುತ್ತದೆ ಎಂದು ಅದರಲ್ಲಿ ಪ್ರತಿಪಾದಿಸಿದ್ದರು. ಆಗ ಸಾಹಿತಿಗಳು, ಕನ್ನಡ ಹೋರಾಟಗಾರರು ನಾವೆಲ್ಲ ಸೇರಿ ದೊಡ್ಡ ಪ್ರತಿಭಟನೆಯನ್ನೇ ನಡೆಸಿದೆವು. ನಂತರ ಅವರು ಕ್ಷಮೆಯಾಚಿಸಿದ್ದರು**

ದ್ರಾವಿಡ ಭಾಷೆಗಳು ಒಂದೇ ಮೂಲದಿಂದ ಬಂದಿರುವುದರಿಂದ ಇವುಗಳ ನಡುವೆ ಸಾಮ್ಯ ಇದೆ. ನಮ್ಮ ಹಳಗನ್ನಡ ಸಾಹಿತ್ಯ ಓದಿದರೆ, ತಮಿಳರಿಗೆ ಇದು ತಮ್ಮ ಭಾಷೆ ಎಂದು ಭಾಸವಾಗುತ್ತದೆ. ಮನುಷ್ಯ ದೇಹದ ಅಂಗಾಂಗಗಳು, ಸಂಖ್ಯಾವಾಚಕಗಳು ಎರಡರಲ್ಲೂ ಒಂದೇ ರೀತಿ ಧ್ವನಿಸುತ್ತವೆ. ಕನ್ನಡದ ಪ್ರಾಚೀನ ಶಾಸನಗಳಲ್ಲಿ 'ದೇವಲೋಕಕ್ಕೆ ಸಂದಾನ್' ಎನ್ನುವ ಪದಗಳಿವೆ. 'ಸಂದಾನ್' ಎನ್ನುವುದು ತಮಿಳಿನ 'ವಂದಾನ್' ಎನ್ನುವಂತೆ ಕೇಳಿಸುತ್ತದೆ. ಆದರೆ, ಇದು ಕನ್ನಡ ಪದವೇ.



ಸಂಸ್ಕೃತ, ಪ್ರಾಕೃತದ ವ್ಯಾಕರಣಕ್ಕೂ ದ್ರಾವಿಡ ಭಾಷೆಗಳ ವ್ಯಾಕರಣಕ್ಕೂ ಹೋಲಿಸಿದರೆ ಬಹಳ ವ್ಯತ್ಯಾಸ ಕಾಣುತ್ತದೆ. ಆದರೆ, ತಮಿಳು ಮತ್ತು ಕನ್ನಡ, ತೆಲುಗು ಮತ್ತು ಕನ್ನಡ, ಮಲಯಾಳ ಮತ್ತು ಕನ್ನಡ ವ್ಯಾಕರಣಗಳಲ್ಲಿ ಹೊಂದಾಣಿಕೆ ಇದೆ. ಇವು ಒಂದು ಮೂಲಕ್ಕೆ ಸೇರಿದವು ಎನ್ನುವುದು ಈ ಹೊಂದಾಣಿಕೆಯಿಂದ ತಿಳಿಯುತ್ತದೆ. ಅದೇ ರೀತಿ ತಮಿಳರ ಪೂರ್ವದ ಸಾಹಿತ್ಯ ಓದಿದರೆ ಇದು ನಮ್ಮದೇ ಎಂದು ಕನ್ನಡಿಗರಿಗೆ ಅನ್ನಿಸುತ್ತದೆ. ಹಾಗೆ ಅನ್ನಿಸಿದ ಮಾತ್ರಕ್ಕೆ, ಸಾಮ್ಯ ಇದ್ದ ಮಾತ್ರಕ್ಕೆ ಇವು ಒಂದರಿಂದ ಒಂದು ಬಂದದ್ದಲ್ಲ; ಒಂದು ಮೂಲದಿಂದ ಬಂದು ಬೇರೆ ಬೇರೆ ಆದಂಥವು. ಇವುಗಳ ಲಿಪಿಗಳು ಭಿನ್ನವಾಗಿರುತ್ತವೆ. ಇವು ಪ್ರತ್ಯೇಕ ಭಾಷೆಗಳು, ಸೋದರ ಭಾಷೆಗಳು, ಜ್ಞಾತಿ ಭಾಷೆಗಳು ಎನ್ನುವುದು ಭಾಷಾವಿಜ್ಞಾನದ ಆಧಾರದಿಂದಲೂ ಚಾರಿತ್ರಿಕ ಆಧಾರದಿಂದಲೂ ನಿರೂಪಿತವಾಗಿದೆ.

ತಮಿಳಿನ ವಿದ್ವಾಂಸರಾದ ಐರಾವತನ್ ಮಹಾದೇವನ್ ಅವರು 'ದಿ ಅರ್ಲಿ ತಮಿಳ್ ಎಪಿಗ್ರಫಿ' ಎನ್ನುವ ಕೃತಿ ರಚನೆ ಮಾಡಿದ್ದಾರೆ. ಅತ್ಯಂತ ಪ್ರಾಚೀನವಾದ ಕ್ರಿ.ಪೂ 4ನೇ ಶತಮಾನದಿಂದ ಕ್ರಿ.ಶ 4ನೇ ಶತಮಾನದವರೆಗಿನ 89 ಶಾಸನಗಳನ್ನು ಇಟ್ಟುಕೊಂಡು ವಿಸ್ತಾರವಾದ ಪೀಠಿಕೆ ಬರೆದಿದ್ದಾರೆ. ಕ್ರಿ.ಪೂ 3 ಮತ್ತು ಕ್ರಿ.ಪೂ 2ನೇ ಶತಮಾನದ ತಮಿಳು ಶಾಸನಗಳಲ್ಲೇ ಕನ್ನಡದ ರೂಪಗಳಿವೆ, ಕನ್ನಡದ ಪ್ರಭಾವ ಇದೆ, ಕನ್ನಡದ ಹೆಸರುಗಳಿವೆ; ಕನ್ನಡದ ವಿಭಕ್ತಿ ಪ್ರತ್ಯಯಗಳೂ ಸೇರಿವೆ ಎಂದು ಅವರು ಉಲ್ಲೇಖಿಸಿದ್ದಾರೆ. ಕನ್ನಡವೂ ತಮಿಳಿನಷ್ಟೇ ಪ್ರಾಚೀನವಾದದ್ದು ಎನ್ನುವುದಕ್ಕೆ ಇದು ಮುಖ್ಯ ಆಧಾರವಾಗಿದೆ.

ನಮ್ಮ ದೇಶದ ಅನೇಕ ಭಾಷೆಗಳು ಸಂಸ್ಕೃತದಿಂದ ಬಂದಿವೆ. ಆದರೆ, ಎಲ್ಲವೂ ಅಲ್ಲ. ಕೆಲವರು ಪಂಚದ್ರಾವಿಡ ಭಾಷೆಗಳನ್ನೂ ಅದರಲ್ಲಿಯೇ ಸೇರಿಸಿದ್ದರು. ಕನ್ನಡದ ಮೂಲವೂ ಸಂಸ್ಕೃತ ಎಂದು ಕೆಲವು ಭಾಷಾವಿಜ್ಞಾನಿಗಳು ವಾದಿಸುತ್ತಿದ್ದರು. 1816ರಲ್ಲಿ ಫ್ರಾನ್ಸಿಸ್ ವೈಟ್ ಎಲ್ಲಿಸ್ ಎನ್ನುವ ವಿದ್ವಾಂಸ ದ್ರಾವಿಡ ಭಾಷೆಗಳು ಸಂಸ್ಕೃತ ಭಾಷಾ ಪರಿವಾರಕ್ಕೆ ಸೇರಿದವು ಅಲ್ಲ, ಸ್ವತಂತ್ರ ಭಾಷೆಗಳು ಎಂಬ ಸೂಚನೆಯನ್ನು ನೀಡಿದ್ದ. ಮೊಟ್ಟಮೊದಲ ಬಾರಿಗೆ ಸಂಸ್ಕೃತ ಮೂಲ ಸಿದ್ಧಾಂತವನ್ನು ಬುಡಮೇಲು ಮಾಡಿ ಹೊಸ ಸಿದ್ಧಾಂತವನ್ನು ರೂಪಿಸಿದವರು ರಾಬರ್ಟ್ ಕಾಲ್ಡ್‌ವೆಲ್. ಸ್ಕಾಟ್ಲೆಂಡ್‌ನಿಂದ ಬಂದು ತಮಿಳುನಾಡಿನಲ್ಲಿ ನೆಲಸಿದ್ದ ಅವರು, ದ್ರಾವಿಡ ಭಾಷೆಗಳು ಆರ್ಯನ್ ಭಾಷೆಗಳಿಂದ, ಸಂಸ್ಕೃತ ಭಾಷೆಯಿಂದ ನಿಷ್ಪನ್ನವಾದದ್ದಲ್ಲ ಎಂದು ನಿರೂಪಿಸಿದರು. ದ್ರಾವಿಡ ಭಾಷೆಗಳ ಮೇಲೆ ಸಂಸ್ಕೃತದ ಪ್ರಭಾವ ಇರುವುದು ವಾಸ್ತವ. ಸಾವಿರಾರು ವರ್ಷ ಒಟ್ಟಿಗೆ ಇದ್ದುದರಿಂದ ಪರಸ್ಪರ ಪ್ರಭಾವ ಇರುವುದು ಸ್ವಾಭಾವಿಕ. ಆದರೆ, ಇವು ಸ್ವತಂತ್ರವಾದ, ಭಿನ್ನ ಭಾಷಾ ಪರಿವಾರಕ್ಕೆ ಸೇರಿದ ಭಾಷೆಗಳು ಎಂದು ನಿರೂಪಿಸಿ, 12 ದ್ರಾವಿಡ ಭಾಷೆಗಳ ಕುರಿತು ವಿಸ್ತಾರವಾಗಿ 'ಎ ಕಂಪೇರಿಟಿವ್ ಗ್ರಾಮರ್ ಆಫ್ ದ್ರವಿಡಿಯನ್ ಆರ್ ಸೌಥ್ ಇಂಡಿಯನ್ ಫ್ಯಾಮಿಲಿ ಆಫ್ ಲ್ಯಾಂಗ್ವೇಜಸ್' ಕೃತಿ ಬರೆದರು. ದ್ರಾವಿಡ ಭಾಷೆಗಳು ಭಿನ್ನ ಎಂದು ಅವುಗಳ ವ್ಯಾಕರಣದ ಕ್ರೊನಾಲಜಿ, ಧ್ವನಿರೂಪ, ವ್ಯಾಕರಣ ನಿಯಮ, ಶಬ್ದರೂಪಗಳನ್ನು, ಅದರ ಅರ್ಥ ವಿನ್ಯಾಸವನ್ನು ಆಧಾರವಾಗಿ ನೀಡಿ ಸ್ಥಾಪಿಸಿದವರು ಕಾಲ್ಡ್‌ವೆಲ್.

ನಂತರದಲ್ಲಿ ದ್ರಾವಿಡ ಭಾಷೆಗಳ ಅಧ್ಯಯನಕ್ಕೆ ಅಸ್ತಿಭಾರ ಹಾಕಿಕೊಟ್ಟ ಪ್ರಮುಖ ಕೃತಿ 1961ರಲ್ಲಿ ಪ್ರಕಟವಾದ, ಅಮೆರಿಕದ ಎಂ.ಬಿ.ಎಮಿನೊ ಮತ್ತು ಬ್ರಿಟನ್‌ನ ಥಾಮಸ್ ಬರೋ ರಚಿಸಿದ 'ದ ದ್ರವಿಡಿಯನ್ ಎಟಿಮಾಲಾಜಿಕಲ್ ಡಿಕ್ಷನರಿ'. ಒಂದು ನಿರ್ದಿಷ್ಟ ಪದ ಯಾವ ಭಾಷೆಯದ್ದು, ಇತರ ಭಾಷೆಗಳಲ್ಲಿ ಅದಕ್ಕೆ ಸಂಬಂಧಪಟ್ಟ ಪದ ಯಾವುದು ಎನ್ನುವುದನ್ನು ಸಂಗ್ರಹಿಸುವ ಮೂಲಕ ದ್ರಾವಿಡ ಭಾಷೆಗಳ ಮೂಲರೂಪಗಳ ಬಗ್ಗೆ ಬರೆದರು. ಅದು ದ್ರಾವಿಡ ಪದಗಳ ನಿಷ್ಪತ್ತಿ ಕೇಂದ್ರಿತ ವಿವರಣೆ ಇರುವ ಡಿಕ್ಷನರಿ. ಬರೋ ಸಂಸ್ಕೃತದ ಪ್ರೊಫೆಸರ್ ಆದರೂ ದ್ರಾವಿಡ ಭಾಷೆಗಳು ಸಂಸ್ಕೃತದಿಂದ ಬಂದಿಲ್ಲ ಎಂದು ಮತ್ತೊಮ್ಮೆ ನಿರೂಪಿಸಿದರು. ಕನ್ನಡವು ತಮಿಳಿನಿಂದ ಹುಟ್ಟಿದ ಭಾಷೆಯಲ್ಲ ಎನ್ನುವುದಕ್ಕೂ ಈ ಕೃತಿಯಲ್ಲಿ ಆಧಾರಗಳಿವೆ.

ಕನ್ನಡಕ್ಕೆ ಜ್ಞಾತಿ ಭಾಷೆಗಳೂ ಸೇರಿದಂತೆ ಇತರ ಭಾಷೆಗಳೊಂದಿಗೆ ಕೊಡುಕೊಳ್ಳುವಿಕೆ ಇದೆ. ಕನ್ನಡವು ತಮಿಳು, ಸಂಸ್ಕೃತ ಎಲ್ಲ ಭಾಷೆಗಳಿಂದಲೂ ಪದಗಳನ್ನು ಸ್ವೀಕರಿಸಿ, ಜೀರ್ಣಿಸಿಕೊಂಡಿದೆ. ಸಂಸ್ಕೃತ, ಪ್ರಾಕೃತದಿಂದ ಛಂದಸ್ಸು, ಶಬ್ದರೂಪಗಳನ್ನೂ ಪಡೆದಿದೆ. ತಮಿಳರು ಆದಷ್ಟೂ ಅವರ ಭಾಷೆಯ ಮೂಲರೂಪಗಳನ್ನೇ ಉಳಿಸಿಕೊಳ್ಳಲು ಪ್ರಯತ್ನ ಪಟ್ಟಿದ್ದಾರೆ. ಕನ್ನಡ, ತೆಲುಗಿಗಿಂತ ಹೆಚ್ಚು ಸಂಸ್ಕೃತ ರೂಪ ಬಳಸುವ ಭಾಷೆ ಮಲಯಾಳ. ಧಾರ್ಮಿಕ, ರಾಜಕೀಯ ಕಾರಣಕ್ಕೂ ಕೊಡುಕೊಳ್ಳುವಿಕೆ ನಡೆದಿದೆ. ಎರಡೂ ಭೂಪ್ರದೇಶಗಳನ್ನು ಒಬ್ಬನೇ ರಾಜ ಆಳಿದ್ದರಿಂದಲೂ ಕೊಡುಕೊಳ್ಳುವಿಕೆ ನಡೆದಿದೆ.

ಲೇಖಕ: ಹಿರಿಯ ಸಂಶೋಧಕ
ನಿರೂಪಣೆ: ಬಿ.ವಿ.ಶ್ರೀನಾಥ್

ಕನ್ನಡವೂ ತಮಿಳಿನಷ್ಟೇ ಪ್ರಾಚೀನ

ತಮ್ಮದೇ ಜಗತ್ತಿನ ಪ್ರಾಚೀನ ಭಾಷೆ ಎಂದು ತಮಿಳರು ಹಿಂದಿನಿಂದಲೂ ಪ್ರತಿಪಾದಿಸುತ್ತಲೇ ಬರುತ್ತಿದ್ದಾರೆ. ಜನ ಮಾತನಾಡುವ ಭಾಷೆಯಾಗಿ ಕನ್ನಡವೂ ಪ್ರಾಚೀನ ಕಾಲದಿಂದಲೇ ಚಾಲ್ತಿಯಲ್ಲಿತ್ತು. ಕನ್ನಡದಲ್ಲಿ ಲಿಖಿತ ರೂಪಗಳು ಸ್ವಲ್ಪ ತಡವಾಗಿ ದೊರಕಿದವು. ಕ್ರಿ.ಪೂ 4ನೇ ಶತಮಾನದಿಂದಲೇ ತಮಿಳು ಶಾಸನಗಳು ಉಪಲಬ್ದ ಇವೆ. ವಿದ್ವಾಂಸರು ಮಾನ್ಯ ಮಾಡಿರುವ ಪ್ರಕಾರ, ಕನ್ನಡದಲ್ಲಿ ಕ್ರಿ.ಶ 4ನೇ ಶತಮಾನದಿಂದ ಶಾಸನಗಳು ಲಭ್ಯ ಇವೆ. ಅದಕ್ಕಿಂತಲೂ ಹಿಂದೆಯೇ ತಮಿಳಿನಲ್ಲಿ ಶಾಸನ ಸಿಕ್ಕಿತ್ತು. ಸ್ವಾರಸ್ಯ ಎಂದರೆ, ಅವುಗಳಲ್ಲಿ ಕನ್ನಡದ ರೂಪಗಳು ಕಂಡುಬಂದಿರುವುದು ಕನ್ನಡವೂ ಅಷ್ಟೇ ಪ್ರಾಚೀನ ಭಾಷೆ ಎನ್ನುವುದನ್ನು ಶ್ರುತಪಡಿಸುತ್ತದೆ. ಆದರೆ, ತಮಿಳರು ರಾಜಕೀಯ ಪ್ರಭಾವ ಬಳಸಿ ಬಹುಬೇಗ ಶಾಸ್ತ್ರೀಯ ಭಾಷೆ ಸ್ಥಾನಮಾನ ಪಡೆದರು. ಆಮೇಲೆ ಅದನ್ನು ನಾವು ಹೋರಾಟ ಮಾಡಿ ಪಡೆದೆವು. ತರುವಾಯ, ತೆಲುಗು, ಮಲಯಾಳ ಕೂಡ ಶಾಸ್ತ್ರೀಯ ಭಾಷೆಗಳಾದವು.

ತಮಿಳರು ಬಲುಬೇಗ ಬ್ರಾಹ್ಮೀ ಲಿಪಿಯನ್ನು ಆಧರಿಸಿ ತಮ್ಮದೇ ಲಿಪಿ ರೂಪಿಸಿಕೊಂಡರು. ಬಹಳ ಬೇಗ ಲಿಪಿಯನ್ನು ಶಾಸನಕ್ಕೆ ಅಳವಡಿಸಿಕೊಂಡರು. ಆದರೆ, ಅಲ್ಲಿ ಕೃತಿಗಳು ಪ್ರಕಟವಾಗಿದ್ದು ತಡವಾಗಿ. ಕನ್ನಡದಲ್ಲಿ ಲಿಪಿ ಬಂದಿದ್ದು ತಡವಾಗಿ. ಆದರೆ, ಕೃತಿಗಳು ಬೇಗ ಬಂದವು. ಲಿಪಿಯ ದೃಷ್ಟಿಯಿಂದ ತಮಿಳಿನಂತೆಯೇ ಕನ್ನಡ, ತೆಲುಗು ಹಾಗೂ ಇತರ ಭಾಷೆಗಳಿಗೂ ಒಂದು ವಿಶಿಷ್ಟ ಸ್ಥಾನ ಇದೆ. ಸಾಹಿತ್ಯದ ದೃಷ್ಟಿಯಿಂದ ನೋಡಿದರೆ, ನಮ್ಮಲ್ಲಿ ಕವಿರಾಜಮಾರ್ಗ ಇದ್ದ ಹಾಗೆ ತಮಿಳಿನಲ್ಲಿ ತೊಲಗಾಪ್ಪಿಯಂ ಇದೆ. ಅದು ಕ್ರಿ.ಶ ಐದು, ಆರನೇ ಶತಮಾನಕ್ಕೆ ಸೇರಿದ್ದು. ಸಂಗಂ ಸಾಹಿತ್ಯವೂ ಪ್ರಾಚೀನವಾದದ್ದು. ನಮ್ಮಲ್ಲಿ ಕ್ರಿ.ಶ 850ರಲ್ಲಿ ರಚಿತವಾದ ಕವಿರಾಜಮಾರ್ಗಕ್ಕೂ ಮುನ್ನ ವಡ್ಡಾರಾಧನೆ ಉಪಲಬ್ದವಿದೆ. ಅದಕ್ಕಿಂತಲೂ ಹಿಂದೆ ರಚಿತವಾದ ಪ್ರಾಚೀನವಾದ ಕೃತಿಗಳ ಮಾಹಿತಿಯೂ ಲಭ್ಯವಿದೆ. ಕವಿರಾಜಮಾರ್ಗ ಶಾಸ್ತ್ರ ಗ್ರಂಥ. ವಡ್ಡಾರಾಧನೆ ಸೃಜನಶೀಲ ಕೃತಿ. ತಮಿಳಿನಲ್ಲಿ ಅತ್ಯಂತ ಪ್ರಾಚೀನ ಕೃತಿ ಶಿಲಪ್ಪದಿಗಾರಂ. ಅದನ್ನು ಬರೆದವನು ಇಳಂಗೋ ಅಡಿಗನ್. ಕನ್ನಡದಲ್ಲಿ ಪಂಪನಂತೆ ಅವನು ತಮಿಳಿನ ಆದಿಕವಿ.

ಪ್ರಾಚೀನ ಸಾಹಿತ್ಯ, ಶ್ರೀಮಂತ ಸಾಹಿತ್ಯ, ಪ್ರಾಚೀನ ಶಾಸನಗಳು ಇರುವ ದಕ್ಷಿಣದ ಎರಡು ಪ್ರಮುಖ ಭಾಷೆಗಳು ಅಂದರೆ, ಅವು ತಮಿಳು, ಕನ್ನಡ. ಇವು ಸೋದರ ಭಾಷೆಗಳು. ತಮಿಳಿನಿಂದ ಕನ್ನಡ ಬಂತು ಎಂದಾಗಲಿ, ಕನ್ನಡದಿಂದ ತಮಿಳು ಬಂತು ಎಂದಾಗಲಿ ಹೇಳುವುದು ಶುದ್ಧಾಂಗ ತಪ್ಪು.

ಕನ್ನಡಿಗರು ಗಟ್ಟಿಗೊಳ್ಳಲಿ, ಪರಭಾಷಿಕರು ಕನ್ನಡದ ಮುಖ್ಯವಾಹಿನಿಯೊಳಗೆ ಬರಲಿ

ಪರಭಾಷಿಕರಲ್ಲಿ ಕನ್ನಡದ ಬಗ್ಗೆ ಪ್ರೀತಿ ಮೂಡಿಸಲು ಹೇರಿಕೆ ಎನಿಸದ, ಬೆನ್ನುತಟ್ಟುವ ರೂಪದ ಕ್ರಮಗಳನ್ನು ಕೈಗೊಳ್ಳಬೇಕು. ಇದು ಖಂಡಿತವಾಗಿಯೂ ತಮ್ಮದೇ ದ್ವೀಪಗಳಲ್ಲಿರುವ ಪರಭಾಷಿಕರನ್ನು ಕನ್ನಡದ ಮುಖ್ಯವಾಹಿನಿಗೆ ಸೆಳೆಯುವಲ್ಲಿ ಮತ್ತು ಬೆಂಗಳೂರಿನಲ್ಲಿ ಮತ್ತೊಮ್ಮೆ ಒಂದು ಜಾಗೃತ ನಾಗರಿಕ ಸಮಾಜ ಕಟ್ಟುವಲ್ಲಿ ನೆರವಾಗಬಲ್ಲದು. ಕನ್ನಡಿಗರು ತಮ್ಮ ನುಡಿಗಾಗಿ, ಹಕ್ಕುಗಳಿಗಾಗಿ ದನಿ ಎತ್ತುವುದು ಸರಿಯೆ. ಆದರೆ ಒಳಗಿನಿಂದ ಕನ್ನಡಿಗರನ್ನು ಗಟ್ಟಿಗೊಳಿಸುವ, ದೂರಗಾಮಿ 'ಕಟ್ಟುವ' ಯೋಜನೆಗಳಿಗೆ ಈ ಎಚ್ಚರವನ್ನು ಹರಿಸದಿದ್ದರೆ ಅದು ಸಾಮಾಜಿಕ ಜಾಲತಾಣಗಳಲ್ಲಿ ಆಗಾಗ ಆಕ್ರೋಶ ಹೊರಹಾಕುವ ಮಟ್ಟಕ್ಕಷ್ಟೇ ಸೀಮಿತವಾಗುತ್ತದೆ

● ವಸಂತ ಶೆಟ್ಟಿ

ತಮಿಳು ನಟ ಕಮಲ್ ಹಾಸನ್, ಕನ್ನಡ ಭಾಷೆಯು ತಮಿಳಿನಿಂದ ಹುಟ್ಟಿದ್ದು ಎಂದು ಹೇಳಿಕೆ ನೀಡಿ ವಿವಾದ ಮೈಮೇಲೆ ಎಳೆದುಕೊಂಡರು. ಇನ್ನೊಂದೆಡೆ ಆನೇಕಲ್ ಬಳಿಯ ರಾಷ್ಟ್ರೀಯ ಬ್ಯಾಂಕ್ ಒಂದರ ಮ್ಯಾನೇಜರ್ ಕನ್ನಡದಲ್ಲಿ ಸೇವೆ ನೀಡಿ ಅನ್ನುವ ಒತ್ತಾಯಕ್ಕೆ ಸಿಟ್ಟಾಗಿ ಕನ್ನಡದಲ್ಲಿ ಮಾತನಾಡುವುದಿಲ್ಲ ಎಂದು ಅಬ್ಬರಿಸಿ ಕೊನೆಗೆ ವಿವಾದ ದೊಡ್ಡ ಮಟ್ಟಕ್ಕೆ ತಿರುಗಿದ ಮೇಲೆ ಕ್ಷಮೆ ಕೇಳಿದ ಘಟನೆ ನಡೆಯಿತು. ತಿಂಗಳೊಂದರ ಮುಂಚೆ ವಾಯುಪಡೆಯ ಸಿಬ್ಬಂದಿ ಎಂದು ಹೇಳಿಕೊಂಡ ವ್ಯಕ್ತಿಯೊಬ್ಬ ಡೆಲಿವರಿ ಹುಡುಗನೊಬ್ಬನ ಮೇಲೆ ಹಲ್ಲೆ ನಡೆಸಿ ಅದನ್ನು ಕನ್ನಡ ಮಾತನಾಡಲಾಗದಿದ್ದಕ್ಕೆ ತನ್ನ ಮೇಲಾದ ಹಲ್ಲೆ ಎಂದು ಬಿಂಬಿಸಿ ಬೀದಿ ಬದಿಯ ಜಗಳವೊಂದಕ್ಕೆ ಭಾಷಾ ಕದನದ ಸ್ವರೂಪ ಕೊಟ್ಟ ಘಟನೆ ನಡೆಯಿತು. ವಿವಾದಗಳಿಗೆ ಕಾಯುವ ದೆಹಲಿಯ ಇಂಗ್ಲಿಷ್ ಸುದ್ದಿವಾಹಿನಿಗಳು ಇವುಗಳನ್ನು ಕನ್ನಡಿಗರು ಭಾಷಾಂಧರು ಅನ್ನುವ ಹಣೆಪಟ್ಟಿ ಕಟ್ಟಲು ಬಳಸಿಕೊಂಡವು. ಸಾಮಾಜಿಕ ಜಾಲತಾಣದಲ್ಲಿ ಕನ್ನಡ ಪರ-ವಿರೋಧದ ಬಿರುಸಾದ ಚರ್ಚೆಗೂ ಈ ಘಟನೆಗಳು ಕಾರಣವಾದವು.

ಈ ಘಟನೆಗಳೆಲ್ಲದರ ಹಿನ್ನೆಲೆಯಲ್ಲಿ ಕನ್ನಡಿಗರು, ವಿಶೇಷವಾಗಿ ಹೊಸ ತಲೆಮಾರಿನ ಕನ್ನಡಿಗರು, ತಮ್ಮ ನುಡಿಗಾಗಿ ಸಾಮಾಜಿಕ ಜಾಲತಾಣಗಳ ಒಳಗೂ, ಹೊರಗೂ ಅಳುಕಿಲ್ಲದೆ ದನಿ ಎತ್ತುತ್ತಿದ್ದಾರೆ. ಅದು ಕನ್ನಡಕ್ಕೆ ಒಂದು ಶಕ್ತಿ ಅನ್ನುವ ವಾದ ಒಂದು ಕಡೆಯದ್ದಾದರೆ, ಇಂತಹ ಘಟನೆಗಳು ಭಾಷಾ ಸಂಘರ್ಷಕ್ಕೆ ದಾರಿ ಮಾಡಿಕೊಡುತ್ತಿವೆ ಅನ್ನುವ ವಾದ ಇನ್ನೊಂದೆಡೆ ಕೇಳಿಬಂದಿದೆ. ಇಂತಹ ಘಟನೆಗಳನ್ನು ಕೊಂಚ ಆಳಕ್ಕಿಳಿದು ನೋಡಿದರೆ ಕನ್ನಡಿಗರು, ಕರ್ನಾಟಕದಲ್ಲಿ, ಅದರಲ್ಲೂ ವಿಶೇಷವಾಗಿ ಬೆಂಗಳೂರಿನಲ್ಲಿ ಈ ಹೊತ್ತಿಗೆ ಎದುರಿಸುತ್ತಿರುವ ಗುರುತಿನ, ಅಸ್ತಿತ್ವದ ಪ್ರಶ್ನೆಗಳು, ಅದಕ್ಕಿರುವ ಕಾರಣಗಳು ಮತ್ತು ಪರಿಹಾರದ ಆಲೋಚನೆಗಳೆಲ್ಲವನ್ನೂ ಹೊಸತಾಗಿ ನೋಡುವ ಅಗತ್ಯವಿದೆ ಅನ್ನಿಸುತ್ತದೆ.

ಒಂದು ಕಾಲಕ್ಕೆ ನಿವೃತ್ತರ ಸ್ವರ್ಗ ಎಂಬಂತಿದ್ದ ಬೆಂಗಳೂರು ಮೂವತ್ತು ವರ್ಷಗಳಲ್ಲಿ ಭಾರತದ ಸಿಲಿಕಾನ್ ವ್ಯಾಲಿಯೇನೋ ಆಯಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲಿಗೆ ತೆರಿಗೆಯ ವಿಷಯದಲ್ಲಿ ಕಾಮಧೇನುವೂ ಆಯಿತು. ತೊಂಬತ್ತರ ದಶಕದಲ್ಲಿ ಬೆಂಗಳೂರು ಸಹಜವಾಗಿ ಬೆಳೆಯುತ್ತ, ವಲಸೆ ಬರುವ ಎಲ್ಲರನ್ನೂ ಮೆಲ್ಲಗೆ ತನ್ನೊಳಗೆ ಇಳಿಸಿಕೊಳ್ಳುತ್ತ ಹಂತ ಹಂತವಾಗಿ ಅವರನ್ನು ಸ್ಥಳೀಯ ಮುಖ್ಯವಾಹಿನಿಗೆ ತರುವ ರೂಪದಲ್ಲಿತ್ತು. ಬೆಂಗಳೂರಿನ ವಲಸೆಯ ಸ್ವರೂಪ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಬಹಳ ಬೇರೆಯ ರೂಪ ಪಡೆಯಿತು. ಇಪ್ಪತ್ತೈದು ವರ್ಷಗಳಲ್ಲಿ ಒಂದು ಕೋಟಿಗೂ ಹೆಚ್ಚು ಜನರು ಬೆಂಗಳೂರಿನ ಜನಸಂಖ್ಯೆಗೆ ಸೇರ್ಪಡೆಯಾದರು. ಇಂತಹ ತೀವ್ರ ವೇಗದ ವಲಸೆ ಮೂಲಸೌಕರ್ಯಗಳ ಮೇಲೆ ತನ್ನದೇ ಒತ್ತಡ ತಂದಿದ್ದು ಒಂದು ತೆರನಾದರೆ, ಸ್ಥಳೀಯ ಕನ್ನಡದ ಮುಖ್ಯವಾಹಿನಿಯಲ್ಲಿ ಬೆರೆಯದ, ತಮ್ಮದೇ ದ್ವೀಪಗಳಲ್ಲಿ ವಾಸಿಸುವ ಹಲವಾರು ಸಮೂಹಗಳನ್ನು ಇದು ನಗರದೊಳಗೆ ಸೃಷ್ಟಿ ಮಾಡಿತು. ಒಂದು ಸಮುದಾಯದ ಸ್ವರೂಪದಲ್ಲಿ ಜನರೆಲ್ಲರೂ ಒಟ್ಟಿಗೆ ಬಂದಾಗ ಆ ನಗರಕ್ಕೆ ಗುರುತಿಸಬಹುದಾದ ಸಾಂಸ್ಕೃತಿಕ ಚಹರೆಯೊಂದು ದಕ್ಕುತ್ತದೆ. ಹಾಗೆ ಒಟ್ಟಿಗೆ ಬರಲು ನುಡಿಯೊಂದು ಕೊಂಡಿಯಂತೆ ಕೆಲಸ ಮಾಡುತ್ತದೆ ಕೂಡ. ಅಂತಹ ನಾಗರಿಕ ಸಮಾಜ ರೂಪುಗೊಂಡಾಗ ಅದು ಅಲ್ಲಿನ ಸ್ಥಳೀಯ ಆಡಳಿತದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಆಡಳಿತ ಹಳಿ ತಪ್ಪದಂತೆ ನೋಡಿಕೊಳ್ಳುವ ಸಾಧನವೂ ಆಗಬಲ್ಲದು.



ಆದರೆ ಬೆಂಗಳೂರಿನಲ್ಲಿ ಇದಾವುದೂ ಆಗಲಿಲ್ಲ... ನಗರದ ಜೊತೆ ವ್ಯಾವಹಾರಿಕ ನಂಟೊಂದನ್ನೇ ಹೊಂದಿರುವ, ಚಿಕ್ಕ ಚಿಕ್ಕ ಗುಂಪುಗಳಲ್ಲಿ ಹರಡಿರುವ ಜನಸಮುದಾಯವೇ ಬೆಂಗಳೂರಿನ ಗುರುತು ಎಂಬ ಬದಲಾವಣೆ ಕಳೆದೆರಡು ದಶಕಗಳಲ್ಲಿ ಆಗಿದೆ. ಸಹಜವಾಗಿಯೇ ಇಂದು ಬೆಂಗಳೂರಿನಲ್ಲಿ ಕಾಣುವ ಅನೇಕ ಭಾಷಿಕ ಸಂಘರ್ಷಗಳಿಗೆ ಒಂದು ಕಾರಣ ಒಂದು ಗಟ್ಟಿಯಾದ, ಕನ್ನಡದ ನೆರಳಿನಲ್ಲಿ ಅರಳಿದ, ಎಲ್ಲರನ್ನೂ ಒಳಗೊಳ್ಳುವ 'ಬೆಂಗಳೂರಿಗ' ಅನ್ನುವ ಗುರುತಿನ ಕೊರತೆ ಅನ್ನಬಹುದು. ಇದನ್ನು ಬದಲಿಸಲು ಪರಭಾಷಿಕರನ್ನು ಕನ್ನಡದ ಮುಖ್ಯವಾಹಿನಿಗೆ ಸೆಳೆಯುವ ಹಲವಾರು ಪ್ರೋತ್ಸಾಹದ ಹೆಜ್ಜೆಗಳ ಅಗತ್ಯವಿದೆ. ಶಾಲೆಗಳಲ್ಲಿ ಕನ್ನಡದ ಕಲಿಕೆ ಕಡ್ಡಾಯ ಮಾಡುವುದು, ಸಾರ್ವಜನಿಕ ಸೇವೆಯಲ್ಲಿರುವ ಸರ್ಕಾರಿ ಮತ್ತು ಖಾಸಗಿ ಉದ್ಯೋಗಗಳಿಗೆ ಕನ್ನಡ ನುಡಿಯ ಜ್ಞಾನ ಕಡ್ಡಾಯಗೊಳಿಸುವುದು, ರೈಲು, ವಿಮಾನ, ಬಸ್ ನಿಲ್ದಾಣಗಳಲ್ಲಿ ಕನ್ನಡ ಕಲಿಯುವ ಸುಲಭದ ಪರಿಕರಗಳನ್ನು ಒದಗಿಸುವುದು, ತಂತ್ರಜ್ಞಾನ ಬಳಸಿ ಯಾವ ಭಾಷೆಯಿಂದ ಬೇಕಿದ್ದರೂ ಕನ್ನಡ ಕಲಿಯುವುದನ್ನು ಸುಲಭವಾಗಿಸುವುದು, ಪರಭಾಷಿಕರು ಹೆಚ್ಚಿರುವ ಸ್ಥಳಗಳಲ್ಲಿ ಕನ್ನಡದ ನಡೆ-ನುಡಿ ಪರಿಚಯಿಸುವ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುವುದು ಹೀಗೆ ಅನೇಕ ಹೇರಿಕೆ ಎನಿಸದ, ಬೆನ್ನುತಟ್ಟುವ ರೂಪದ ಕ್ರಮಗಳನ್ನು ಕೈಗೊಳ್ಳಬೇಕು. ಇದು ಖಂಡಿತವಾಗಿಯೂ ತಮ್ಮದೇ ದ್ವೀಪಗಳಲ್ಲಿರುವ ಪರಭಾಷಿಕರನ್ನು ಕನ್ನಡದ ಮುಖ್ಯವಾಹಿನಿಗೆ ಸೆಳೆಯುವಲ್ಲಿ ಮತ್ತು ಬೆಂಗಳೂರಿನಲ್ಲಿ ಮತ್ತೊಮ್ಮೆ ಒಂದು ಜಾಗೃತ ನಾಗರಿಕ ಸಮಾಜ ಕಟ್ಟುವಲ್ಲಿ ನೆರವಾಗಬಲ್ಲದು. ಅಂತಹ ಸಮುದಾಯದ ಕಲ್ಪನೆ ಈಡೇರಿದರೆ ಭಾಷಿಕ ಸಂಘರ್ಷವೂ ಕಡಿಮೆಯಾಗುತ್ತದೆ. ಇದು ಈ ಕ್ಷಣಕ್ಕೆ ಏನಾಗಬೇಕು ಅನ್ನುವ ಬಗೆಗಿನ ಒಂದು ಯೋಚನೆ.

ಇನ್ನೊಂದೆಡೆ ದೂರಗಾಮಿ ನೆಲೆಯಲ್ಲಿ ಏನಾಗಬೇಕು ಎನ್ನುವುದನ್ನೂ ಯೋಚಿಸಬೇಕಿದೆ. ಬೆಂಗಳೂರಿನಲ್ಲಿ ಕನ್ನಡಿಗರಲ್ಲಿ ಅಭದ್ರತೆಯ ಭಾವ ಹುಟ್ಟಲು ಒಂದು ಮುಖ್ಯ ಕಾರಣವೆಂದರೆ, ಕಳೆದ ಮೂವತ್ತು ವರ್ಷಗಳ ಬೆಂಗಳೂರಿನ ಆರ್ಥಿಕ ಬೆಳವಣಿಗೆಯ ಲಾಭದ ಸಿಂಹಪಾಲು ಕನ್ನಡೇತರರಿಗೆ ದಕ್ಕಿದೆ ಅನ್ನುವ ಭಾವನೆ. ಇದು ತಕ್ಕಮಟ್ಟಿಗೆ ನಿಜವೂ ಹೌದು. ಬೆಂಗಳೂರಿನ ಬೆಳವಣಿಗೆಯ ಜೊತೆ ದೊಡ್ಡ ಮಟ್ಟದಲ್ಲಿ ಆರ್ಥಿಕ ಬಲ ಜನರಿಗೆ ತಂದುಕೊಟ್ಟ ಐಟಿ, ಸೇವಾ ವಲಯ, ಸ್ಟಾರ್ಟ್‌ಅಪ್, ರಿಯಲ್ ಎಸ್ಟೇಟ್, ನಿರ್ಮಾಣದಂತಹ ಕ್ಷೇತ್ರಗಳಲ್ಲಿನ ಬಹುತೇಕ ಉದ್ಯಮಿಗಳು ಕನ್ನಡೇತರರಾಗಿದ್ದಾರೆ. ಉದ್ಯಮಶೀಲತೆಯ ಒಂದು ನಡೆ-ನುಡಿ ನಾನೂರು, ಐನೂರು ವರ್ಷಗಳಿಂದ ಕನ್ನಡ ಮಾತನಾಡುವ ಸಮುದಾಯದಲ್ಲಿ ಅಷ್ಟಾಗಿ ವಿಕಾಸವಾಗದ ಕಾರಣಕ್ಕೆ ಕನ್ನಡಿಗರು ಈ ಅಲೆಯ ಮೇಲೆ ಸವಾರಿ ಮಾಡಿ, ಉದ್ಯಮಿಗಳಾಗಿ ಆರ್ಥಿಕವಾಗಿ ಬಲಶಾಲಿಗಳಾಗಲು ಹೆಚ್ಚಿನಂಶ ಸಾಧ್ಯವಾಗಿಲ್ಲ. ಯಾವ ಭಾಷಿಕ ಸಮುದಾಯ ಆರ್ಥಿಕವಾಗಿ ಬಲಗೊಳ್ಳುವುದಿಲ್ಲವೋ ಆಗ ಆ ಸಮುದಾಯದ ಭಾಷೆಯೂ ಮಾರುಕಟ್ಟೆಯಲ್ಲಿ ನ್ಯಾಯವಾಗಿ ಪಡೆದುಕೊಳ್ಳಬೇಕಾದ ಸ್ಥಾನ ಪಡೆದುಕೊಳ್ಳುವುದಿಲ್ಲ. ಬೆಂಗಳೂರಿನಲ್ಲಿ, ತಕ್ಕ ಮಟ್ಟಿಗೆ ಕರ್ನಾಟಕದ ಇತರೆ ಊರುಗಳಲ್ಲಿಯೂ ಮಾರುಕಟ್ಟೆಯ ಆದ್ಯತೆಯ ಭಾಷೆಯಾಗಿ ಕನ್ನಡ ಗಟ್ಟಿಯಾಗಿ ತಳವೂರಿಲ್ಲದಿದ್ದರೆ ಅದಕ್ಕೆ ಒಂದು ಕಾರಣ ಇದೇ ಅನ್ನಬಹುದು. ಇದನ್ನು ಬದಲಿಸಲು ಇರುವ ಒಂದೇ ದಾರಿ; ಹೆಚ್ಚೆಚ್ಚು ಕನ್ನಡಿಗರು ಉದ್ಯಮಿಗಳಾಗುವತ್ತ ಗಮನ ಹರಿಸುವುದು. ಹೆಚ್ಚು ಬಂಡವಾಳ ಬೇಡುವ, ಈಗಾಗಲೇ ಇತರರು ಆಳವಾಗಿ ಪಟ್ಟಭದ್ರರಂತೆ ಬೇರೂರಿರುವ ಕ್ಷೇತ್ರಗಳಲ್ಲಿ ಉದ್ಯಮದ ಸಾಹಸ ಮಾಡುವುದು ಕನ್ನಡಿಗರಿಗೆ ಕಷ್ಟ. ಆದರೆ ಕೃತಕ ಬುದ್ಧಿಮತ್ತೆಯ ಕಾಲವು ಜ್ಞಾನವನ್ನೇ ಒಂದು ಸರಕಾಗಿಸಿ, ಯಾರಿಗೂ ಅದನ್ನು ಬಳಸಿ ತಂತ್ರಜ್ಞಾನ ಆಧಾರಿತ ಉದ್ಯಮಗಳನ್ನು ಕಟ್ಟುವ ಸಮಾನ ಅವಕಾಶ ಕಲ್ಪಿಸುತ್ತಿರುವಾಗ ಕನ್ನಡದ ಯುವಕರು ಅದನ್ನು ಸಶಕ್ತವಾಗಿ ಬಳಸಿ ಉದ್ಯಮಶೀಲತೆಯ ಕೊರತೆಯನ್ನು ನೀಗಿಸಿ, ಆರ್ಥಿಕವಾಗಿ ಬಲ ಪಡೆದುಕೊಳ್ಳುವುದು ಈಗ ಆಗಬೇಕು. ಈ ಹಿಂದಿನ ಯಾವ ಔದ್ಯೋಗಿಕ ಕ್ರಾಂತಿಯೂ ಇಂತಹದೊಂದು ಸಾಧ್ಯತೆಯನ್ನು ತಂದಿರಲಿಲ್ಲ. ಈ ಅಲೆಯನ್ನಾದರೂ ಕನ್ನಡಿಗರು ಏರಬೇಕು. ಕನ್ನಡಿಗರು ತಮ್ಮ ನುಡಿಗಾಗಿ, ಹಕ್ಕುಗಳಿಗಾಗಿ ದನಿ ಎತ್ತುವುದು ಸರಿಯೇ, ಆದರೆ ಒಳಗಿನಿಂದ ಕನ್ನಡಿಗರನ್ನು ಗಟ್ಟಿಗೊಳಿಸುವ, ದೂರಗಾಮಿ 'ಕಟ್ಟುವ' ಯೋಜನೆಗಳಿಗೆ ಈ ಎಚ್ಚರವನ್ನು ಹರಿಸದಿದ್ದರೆ ಅದು ಸಾಮಾಜಿಕ ಜಾಲತಾಣಗಳಲ್ಲಿ ಆಗಾಗ ಆಕ್ರೋಶ ಹೊರಹಾಕುವ ಮಟ್ಟಕ್ಕಷ್ಟೇ ಸೀಮಿತವಾಗಿ ಉಳಿಯುತ್ತದೆ. ಇಂತಹ ಪ್ರತಿಕ್ರಿಯಾತ್ಮಕ ನಡೆ ಹೆಚ್ಚು ಕಾಲ ಬಾಳದು. ಹೆಚ್ಚು ಕನ್ನಡಿಗರನ್ನು ಜ್ಞಾನದ ಹಾದಿಯಲ್ಲಿ ಕೊಂಡೊಯ್ಯಲು ಕನ್ನಡವೊಂದಕ್ಕೇ ಸಾಧ್ಯ. ಆದರೆ ಅದಕ್ಕೆ ಅಂತಹ ಬಲ ತುಂಬುವ ಕೆಲಸ ಸರಿಯಾದ ನುಡಿ ಹಮ್ಮುಗೆ (ಲ್ಯಾಂಗ್ವೇಜ್ ಪ್ಲಾನಿಂಗ್) ಮೂಲಕ ಈಗ ಆಗಬೇಕು.

ಲೇಖಕ: ಪ್ರಕಾಶಕ, ನವೋದ್ಯಮಿ

ಪದಬಂಧ 6059

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಭಾರವುಳ್ಳ ಅಡಿಪಾಯ (4)
2.ಉತ್ತಮ ಕುಲದಲ್ಲಿ ಹುಟ್ಟಿದವನು (4)
4.ಸಂಪೂರ್ಣ ನಾಶವನ್ನು ಹೀಗೆನ್ನಿ (3)
6.ಹಾಡಿನ ಪುನರಾವರ್ತನೆಗೊಳ್ಳುವ ಸಾಲು (3)
8.ಕರುವಿಗೆ ತೋರಿದ ದಯೆ (3)
9.ಜಗತ್ತಿನ ಒಳಿತಿದು (5)
10.ಮಲಗುವಾಗ ಬಂದಿರುವ ಸೇವಕ (3)
11.ಇನ್ನೂ ಕರು ಹಾಕದ ಹಸು (3)
13.ಕಲೆಸಿರುವ ಗೋಧಿಹಿಟ್ಟು (3)
14.ತೋರಿಕೆಗೆ ಸ್ನೇಹಿತನಂತಿದ್ದು ಮರೆಯಲ್ಲಿ ಹಗೆ ಸಾಧಿಸುವವನು (4)
15.ಒಪ್ಪವಾಗಿ ಬಳಿಯುವುದು (4)

ಮೇಲಿಂದ ಕೆಳಕ್ಕೆ

1.ಸಾಮಾನ್ಯವಾಗಿ ದೊರಕದೆ ವಿರಳವಾಗಿರುವಂಥದ್ದು (4)
3.ಶಿರ ಮೇಲೆತ್ತಿರುವ ಧೂರ್ತ (4)
5.ಹೆಸರಿಡುವ ಶಾಸ್ತ್ರವಿದು (5)
7.ವಿರುದ್ಧವಾದುದನ್ನು ಹೀಗೆನ್ನಿ (3)
8.ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
10.ಒಳ್ಳೆಯದನ್ನ ಗ್ರಹಿಸುವವನು (4)
12.ಚಾರನಿಗೆ ಕಾಣಿಸಿದ ಕಾಮನಬಿಲ್ಲು (4)



6058ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಲ್ಮೀಕ 3.ಸಮೀಕ್ಷೆ
4.ಗಡಾರಿ 5.ಅಳು
6.ಕರಗ 8.ವಿಷಾದ
9.ಮಾತುಲ 11.ನಗರ
15.ಹಮಾಲ 16.ಬಯಲು
17.ನಜರು

ಮೇಲಿಂದ ಕೆಳಕ್ಕೆ:
2.ಕರುಳು 3.ಸರಿಗೆ
4.ಗಟಾರ 5.ಅಡವಿ
6.ಕದನ 7.ಗಮಾರ
10.ಲಲಾಟ 12.ಗದ್ದಲ
13.ಮಹಲು 14.ದಿವಾನ

ಸುಡೊಕು 6443

2				9		7		
	1		4		7		5	
		9		5			6	
	9			2		8		6
3		7	1		6			
	2			7		1		4
1			9	8			4	
	7					2		8
8		2		1	3		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6442 ಸುಡೊಕು

9	6	4	1	3	8	7	2	5
1	5	3	7	6	2	8	9	4
2	8	7	5	4	9	1	6	3
3	9	1	2	7	4	6	5	8
6	2	5	9	8	3	4	7	1
7	4	8	6	1	5	2	3	9
5	7	2	8	9	1	3	4	6
4	1	9	3	2	6	5	8	7
8	3	6	4	5	7	9	1	2

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಶನಿವಾರ ಮೇ 31, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಪಂಚಮಿ ಗಂ. 20-16 ನಕ್ಷತ್ರ: ಪುಷ್ಯ ಗಂ. 21-08 ಯೋಗ: ವೃದ್ಧಿ ಗಂ. 10-43 ಕರಣ: ಬವ ಗಂ. 8-43 ನಂತರ ಬಾಲವ ಗಂ. 20-16, ವೃಷಭ ಮಾಸದ 17 ನೇ ದಿನ.
ರಾಹುಕಾಲ: ಬೆಳಿಗ್ಗೆ 09-00 – 10-30
ಸೂರ್ಯೋದಯ: 06-06 **ಸೂರ್ಯಾಸ್ತ:** 06-50
ಮುಸ್ಲಿಂ ದಿನಾಂಕ: 03 ಜುಲ್‌ಹಿಜಾ
ಅದೃಷ್ಟ ಸಂಖ್ಯೆ: 1, 6

ಮೇಷ: ಹೊಸದನ್ನು ಕಲಿಯುವುದಕ್ಕೆ ನೀವು ಬಹಳ ಉತ್ಸುಕರಾಗಿದ್ದೀರಿ. ಇತರರನ್ನು ಹೀಯಾಳಿಸುವ ಅಥವಾ ನಿಂದನೆ ಮಾಡುವ ಮನೋಭಾವವನ್ನು ಕಡಿಮೆ ಮಾಡಿಕೊಳ್ಳಿ. ಬಹುಕಾಲದ ಯೋಜನೆಗಳು ಯಶಸ್ವಿಯಾಗಲಿವೆ.

ವೃಷಭ: ಅಧಿಕಾರಿಗಳ ಜೊತೆ ವ್ಯವಹರಿಸುವಾಗ ಕೆಲವೊಂದು ಸನ್ನಿವೇಶಗಳು ನಿಮ್ಮ ಪರವಾಗಿರುವಂತೆ ತೋರುವುದರಿಂದ ನಿರಾಳವಾಗಿ ಮುಂದುವರೆಯಿರಿ. ಕುಲದೇವರ ದರ್ಶನದಿಂದ ವ್ಯವಹಾರದಲ್ಲಿ ಅಭಿವೃದ್ಧಿ ಕಾಣುವಿರಿ.

ಮಿಥುನ: ಅಸಾಧ್ಯ ಕಾರ್ಯಗಳನ್ನು ಸಹ ಸಾಧಿಸುವಷ್ಟು ಮನೋಬಲ ನಿಮ್ಮಲ್ಲಿದೆ. ಆದರೆ ಇಂದು ಯಾವುದೇ ಹೊಸ ಉದ್ಯೋಗ ಅಥವಾ ಕರಾರಿಗೆ ಆತುರದಲ್ಲಿ ಸಹಿ ಹಾಕಬೇಡಿ. ಪೂರ್ವಸಿದ್ಧತೆಯಿಲ್ಲದೆ ಯಾವುದೇ ಕೆಲಸ ಮಾಡಬೇಡಿ.

ಕರ್ಕಾಟಕ: ಒಂದು ವಿಚಾರದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳದೇ ಯಾವುದೇ ರೀತಿಯ ತೀರ್ಮಾನ ಕೈಗೊಳ್ಳಬೇಡಿ. ಈ ದಿನ ಎದುರಾಗುವ ಕಹಿ ಘಟನೆಗಳಿಗೆ ಹೆಚ್ಚು ಪಾಶಸ್ತ್ಯ ಕೊಡುವ ಅವಶ್ಯಕತೆಯಿಲ್ಲ.

ಸಿಂಹ: ನೈತಿಕ ಶಕ್ತಿ ಹೆಚ್ಚುವುದರಿಂದ ಕೆಲಸದಲ್ಲಿ ಉತ್ತಮ ಅಭಿವೃದ್ಧಿಯನ್ನು ಕಾಣುವಿರಿ. ಮಗನೊಡನೆ ವ್ಯಾವಹಾರಿಕ ಬಾಂಧವ್ಯ ಹೆಚ್ಚಿ, ವ್ಯವಹಾರದಲ್ಲಿ ಲಾಭವನ್ನು ಹೆಚ್ಚಿಸಿಕೊಳ್ಳುವಿರಿ. ನಿಮ್ಮ ಎಣಿಕೆಯಂತೆ ಕಾರ್ಯಗಳು ಸಿದ್ಧಿಸಲಿವೆ.

ಕನ್ಯಾ: ಈ ದಿನ ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲ ಕಾರ್ಯಗಳಲ್ಲಿಯೂ ಯಶಸ್ಸು ಪಡೆಯುವಿರಿ. ಅಧಿಕಾರಿಗಳಿಗೆ ಸಹೋದ್ಯೋಗಿಗಳಿಂದ ಸಹಾಯ ದೊರೆಯುವುದು. ಭೂ ವ್ಯವಹಾರದಲ್ಲಿ ಹೆಚ್ಚಿನ ಲಾಭವಿದೆ.

ತುಲಾ: ಸ್ವಂತ ಉದ್ಯಮದಲ್ಲಿರುವವರು ತಮ್ಮ ಕಾರ್ಯ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದರಲ್ಲಿ ಬಹಳ ಉತ್ಸಾಹವನ್ನು ತೋರಿ ಅದರಲ್ಲಿ ಯಶಸ್ಸು ಪಡೆಯುವಿರಿ. ಧಾನ್ಯಗಳ ರಫ್ತು ಮಾರಾಟಗಾರರಿಗೆ ಹೆಚ್ಚಿನ ಲಾಭವಿದೆ.

ವೃಶ್ಚಿಕ: ನಿರುದ್ಯೋಗಿಗಳಿಗೆ ನಿರೀಕ್ಷೆಗೂ ಮೀರಿದಂತಹ ಕೆಲಸ ಸಿಗುವ ಸಾಧ್ಯತೆ ಇದೆ. ನಿಮ್ಮ ಕೆಲಸಗಳಲ್ಲಿನ ಜವಾಬ್ದಾರಿಗಳು ಹೆಚ್ಚಿ, ನಿಮ್ಮ ಆರ್ಥಿಕ ಸ್ಥಿತಿ ಸುಧಾರಿಸಲಿದೆ. ವಿದೇಶದಲ್ಲಿನ ಹುದ್ದೆಗಾಗಿ ಅರ್ಜಿ ಸಲ್ಲಿಸಬಹುದು.

ಧನು: ಕುಟುಂಬದಲ್ಲಿ ಹಿರಿಯರ ಭಿನ್ನಾಭಿಪ್ರಾಯವನ್ನು ಮುರಿದು ಹೊಸ ತಲೆಮಾರಿನವರು ನೂತನವಾಗಿ ಸಂಬಂಧವನ್ನು ಬೆಳೆಸುವಂತಾಗಲಿದೆ. ಈ ದಿನ ಕ್ರೀಡೆಯಂತಹ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿಯು ಮೂಡಲಿದೆ.

ಮಕರ: ಉಪಹಾರ ಗೃಹಗಳ ಮಾಲೀಕರು ಅಧಿಕ ಲಾಭವನ್ನು ಪಡೆಯುವಿರಿ. ಹಿರಿಯರಿಂದ ಪಡೆದ ಸಲಹೆಯು ನಿಮ್ಮ ಜೀವನಕ್ಕೆ ಹೊಸ ಬುನಾದಿಯಾಗಲಿದೆ. ತೆಂಗಿನ ಕೃಷಿ ಮಾಡುವ ರೈತರಿಗೆ ಹೇರಳವಾಗಿ ಲಾಭವಾಗಲಿದೆ.

ಕುಂಭ: ರಾಜಕೀಯ ವ್ಯಕ್ತಿಗಳು ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರಿಂದ ಜನ ಸಂಪಾದನೆಯಾಗಲಿದೆ. ನಿಮ್ಮ ನೂತನ ಕೆಲಸ ಕಾರ್ಯಗಳಿಗೆ ಅಪೇಕ್ಷಿಸಿದ ಬೆಂಬಲ ನಿಮಗೆ ದೊರೆಯಲಿದೆ.

ಮೀನ: ಮನೆಯಲ್ಲಿ ಆನಂದದ ವಾತಾವರಣ ಇರಲಿದೆ. ಹಣದ ವಿಚಾರದಲ್ಲಿ ಖರ್ಚು-ವೆಚ್ಚಗಳ ವಿಷಯದಲ್ಲಿ ಜಾಗ್ರತೆ ಇರಲಿ. ಮನೆಗೆ ಬಂಧುಗಳ, ಆತ್ಮೀಯರ ಆಗಮನವಿರುವುದು. ಬರಹಗಾರರಿಗೆ ಉತ್ತೇಜನದ ಕೊರತೆ ಕಾಣಲಿದೆ.

ಷೇರುಪೇಟೆ ವಹಿವಾಟು 182



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,833
ಇಂದಿನ ಅಂತ್ಯ	24,750
▼	82
ದಿನದ ಗರಿಷ್ಠ	24,738

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹610

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹202-578

ದ್ವಿತಳಿ (ಬಿ.ವಿ) ₹350-730

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹196.50

ಆರ್‌ಎಸ್‌ಎಸ್-5 ₹192

ಗುಡ್ ಲಾಟ್ ₹182

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹26500
ಎಸಿ	₹15260
ಆರ್‌ಪಿ	₹20500
ಆರ್‌ಸಿ	₹11125

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ		ರಾಶಿ	31000-58599	ತಟ್ಟಿಬೆಟ್ಟೆ	29899-45809
ಚಾಲಿ	39099-43598	ಸಿಪ್ಪೆಗೋಟು	6099-18189	**ಶಿರಸಿ**	
ಚಿಪ್ಪು	25869-31099	**ಶಿವಮೊಗ್ಗ**		ಬೆಟ್ಟೆ	25399-41099
ಕೋಕ	6899-20019	ಬೆಟ್ಟೆ	50009-59429	ಬಿಳಿಗೋಟು	16799-32299
ಹೊಸಚಾಲಿ	37119-44999	ಗೊರಬಲು	17780-33199	ಚಾಲಿ	35999-43111
ಪುತ್ತೂರು		ರಾಶಿ	48169-58699	ರಾಶಿ	42099-49909
ಕೋಕ	20000-31500	ಸರಕು	54009-89240	**ಯಲ್ಲಾಪುರ**	
ಹೊಸತು	26000-49500	**ಸಿದ್ದಾಪುರ**		ಬಿಳಿಗೋಟು	14899-34301
ಸಾಗರ		ಬಿಳಿಗೋಟು	24899-31689	ಚಾಲಿ	34803-43899
ಬಿಳಿಗೋಟು	8129-26696	ಚಾಲಿ	34869-42509	ಕೋಕ	6899-16899
ಚಾಲಿ	15899-39299	ಕೋಕ	16699-27669	ಕೆಂಪುಗೋಟು	16399-26099
ಕೋಕ	8129-21399	ಕೆಂಪುಗೋಟು	21019-23019	ರಾಶಿ	40119-53315
ಕೆಂಪುಗೋಟು	16899-28099	ರಾಶಿ	42089-46599	ತಟ್ಟಿಬೆಟ್ಟೆ	27016-38199

2024–25ನೇ ಆರ್ಥಿಕ ವರ್ಷದಲ್ಲಿ ಶೇ 6.5ರಷ್ಟು ದಾಖಲು

ಜಿಡಿಪಿ ನಾಲ್ಕು ವರ್ಷದ ಕನಿಷ್ಠ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದಲ್ಲಿ ದೇಶದ ಒಟ್ಟು ಆರ್ಥಿಕ ಉತ್ಪನ್ನವು (ಜಿಡಿಪಿ) ನಾಲ್ಕು ವರ್ಷದ ಕನಿಷ್ಠ ಮಟ್ಟವಾದ ಶೇ 6.5ರಷ್ಟು ದಾಖಲಾಗಿದೆ.

2023–24ರಲ್ಲಿ ಶೇ 9.2ರಷ್ಟು ಪ್ರಗತಿ ಕಂಡಿತ್ತು. ತಯಾರಿಕಾ ವಲಯದ ಬೆಳವಣಿಗೆ ಕುಸಿತವೇ ಈ ಇಳಿಕೆಗೆ ಕಾರಣ ಎಂದು ಶುಕ್ರವಾರ ಬಿಡುಗಡೆಯಾಗಿರುವ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ವರದಿ ಹೇಳಿದೆ.

ದೇಶದ ಒಟ್ಟು ಜಿಡಿಪಿ ಗಾತ್ರ ₹330.68 ಲಕ್ಷ ಕೋಟಿ ಅಥವಾ 3.9 ಟ್ರಿಲಿಯನ್ ಡಾಲರ್‌ಗೆ ಮುಟ್ಟಿದೆ. ಮುಂದಿನ ಕೆಲವು ವರ್ಷಗಳಲ್ಲಿ 5 ಟ್ರಿಲಿಯನ್ ಡಾಲರ್ ದಾಟುವ ಗುರಿ ಹೊಂದಲಾಗಿದೆ ಎಂದು ಹೇಳಿದೆ.

ಮುಂದಿನ ಆರ್ಥಿಕ ವರ್ಷವನ್ನು ಅದರ ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಲು ಜಿಡಿಪಿಯನ್ನು ಮಾರುಕಟ್ಟೆ ದರಗಳಲ್ಲಿ ಲೆಕ್ಕ ಹಾಕುವುದಕ್ಕೆ ಸಾಂಕೇತಿಕ (ನಾಮಿನಲ್) ಜಿಡಿಪಿ ಎಂದು ಕರೆಯುತ್ತಾರೆ. 2023–24ರಲ್ಲಿ ಸಾಂಕೇತಿಕ ಜಿಡಿಪಿ ಗಾತ್ರವು ₹301.23 ಲಕ್ಷ ಕೋಟಿ ಇತ್ತು. 2024–25ರಲ್ಲಿ ₹330.68 ಲಕ್ಷ ಕೋಟಿಗೆ ಏರಿಕೆಯಾಗಿದೆ. ಒಟ್ಟಾರೆ ಬೆಳವಣಿಗೆಯು ಶೇ 9.8ರಷ್ಟು ಏರಿಕೆ ಕಂಡಿದೆ.

2023–24ರಲ್ಲಿ ಉತ್ಪಾದನೆಯಾದ ಸರಕು ಮತ್ತು ಸೇವೆಗಳ ಒಟ್ಟಾರೆ ಮೌಲ್ಯ ಸೇರ್ಪಡೆಯು (ಜಿವಿಎ) ₹274.13 ಲಕ್ಷ ಕೋಟಿ ಇತ್ತು. 2024–25ರಲ್ಲಿ ₹300.22 ಲಕ್ಷ ಕೋಟಿ ಆಗಿದೆ. ಒಟ್ಟಾರೆ ಶೇ 9.5ರಷ್ಟು ಹೆಚ್ಚಳವಾಗಿದೆ.

ಮಾರ್ಚ್ ತ್ರೈಮಾಸಿಕದಲ್ಲಿನ ಜಿಡಿಪಿ ಬೆಳವಣಿಗೆಯು ಪೂರ್ಣ ಆರ್ಥಿಕ ವರ್ಷದಲ್ಲಿ ಎನ್‌ಎಸ್‌ಒ ಅಂದಾಜಿಸಿದ್ದ ಶೇ 6.5ರಷ್ಟು ಪ್ರಗತಿ ಸಾಧಿಸಲು ನೆರವಾಗಿದೆ. 2025–26ನೇ ಆರ್ಥಿಕ ವರ್ಷದಲ್ಲಿ ಜಪಾನ್ ಅನ್ನು ಹಿಂದಿಕ್ಕಿ ಭಾರತವು ಜಾಗತಿಕ ಮಟ್ಟದಲ್ಲಿ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಲು ನೆರವಾಗಲಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಕೃಷಿ ವಲಯ ಸದೃಢ; ತಯಾರಿಕೆ ಮಸುಕು

2024–25ನೇ ಪೂರ್ಣ ಆರ್ಥಿಕ ವರ್ಷದ ಜಿಡಿಪಿ ಕುಸಿತದಲ್ಲಿ ತಯಾರಿಕಾ ವಲಯದ ಇಳಿಕೆ ಪಾಲು ಹೆಚ್ಚಿದೆ. 2023–24ರಲ್ಲಿ ಶೇ 12.3ರಷ್ಟಿದ್ದ ಈ ವಲಯದ ಬೆಳವಣಿಗೆಯು, 2024–25ರಲ್ಲಿ ಶೇ 4.5ಕ್ಕೆ ತಗ್ಗಿದೆ. ಆದಾಗ್ಯೂ, ಕೃಷಿ ವಲಯ ಬೆಳವಣಿಗೆಯು ಶೇ 2.7ರಿಂದ ಶೇ 4.6ರಷ್ಟು ಏರಿಕೆ ಕಂಡಿದೆ ಎಂದು ಎನ್‌ಎಸ್‌ಒ ತಿಳಿಸಿದೆ.

2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ತಯಾರಿಕಾ ವಲಯವು ಶೇ 4.8ರಷ್ಟು ಬೆಳವಣಿಗೆ ಕಂಡಿದೆ. 2023–24ನೇ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಶೇ 11.3ರಷ್ಟು ಪ್ರಗತಿ ಕಂಡಿತ್ತು. ಇದಕ್ಕೆ ಹೋಲಿಸಿದರೆ ಇಳಿಕೆಯಾಗಿದೆ.

ನಿರ್ಮಾಣ ವಲಯವು ಶೇ 8.7ರಿಂದ ಶೇ 10.8ರಷ್ಟು ಹಾಗೂ ಕೃಷಿ ವಲಯವು ಶೇ 0.9ರಿಂದ ಶೇ 5.4ರಷ್ಟು ಪ್ರಗತಿ ಕಂಡಿದೆ. ವಿದ್ಯುತ್, ಅನಿಲ, ನೀರು ಪೂರೈಕೆ ಸೇರಿ ಇತರೆ ಉಪಯುಕ್ತ ವಲಯಗಳ ಬೆಳವಣಿಗೆಯು ಧನಾತ್ಮಕವಾಗಿದೆ.

ಆದರೆ ವ್ಯಾಪಾರ, ಹೋಟೆಲ್, ಸಾರಿಗೆ, ಸಂವಹನ ಮತ್ತು ಸೇವಾ ವಲಯದ ಬೆಳವಣಿಗೆಯು ಶೇ 6.2ರಿಂದ ಶೇ 6ಕ್ಕೆ ತಗ್ಗಿದೆ. ಹಣಕಾಸು, ರಿಯಲ್ ಎಸ್ಟೇಟ್, ವೃತ್ತಿಪರ ಸೇವಾ ವಲಯದ ಪ್ರಗತಿಯು ಶೇ 9ರಿಂದ ಶೇ 7.8ಕ್ಕೆ ಇಳಿಕೆಯಾಗಿದೆ. ಸಾರ್ವಜನಿಕ ಆಡಳಿತ, ರಕ್ಷಣೆ ಸೇರಿ ಇತರೆ ಸೇವಾ ವಲಯದ ಬೆಳವಣಿಗೆಯು ಶೇ 8.7ರಷ್ಟು ದಾಖಲಾಗಿದ್ದು, ಸ್ಥಿರವಾಗಿದೆ.

ಮಾರ್ಚ್ ತ್ರೈಮಾಸಿಕ: ಶೇ 7.4ರಷ್ಟು ಪ್ರಗತಿ

2024-25ರ ಮಾರ್ಚ್ ತ್ರೈಮಾಸಿಕದಲ್ಲಿ ಜಿಡಿಪಿಯು ಶೇ 7.4ರಷ್ಟು ಪ್ರಗತಿ ದಾಖಲಿಸಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 6.4ರಷ್ಟು ದಾಖಲಾಗಿತ್ತು. ಇದಕ್ಕೆ ಹೋಲಿಸಿದರೆ ಏರಿಕೆ ಕಂಡಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 5.6ರಷ್ಟು ಹಾಗೂ ಜೂನ್ ತ್ರೈಮಾಸಿಕದಲ್ಲಿ ಶೇ 6.5ರಷ್ಟು ಪ್ರಗತಿ ಕಂಡಿದೆ ಎಂದು ಎನ್‌ಎಸ್‌ಒ ವರದಿ ವಿವರಿಸಿದೆ.

2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಜಿಡಿಪಿ ಶೇ 8.4ರಷ್ಟು ಪ್ರಗತಿ ಕಂಡಿತ್ತು. ಇದಕ್ಕೆ ಹೋಲಿಸಿದರೆ ಇಳಿಕೆಯಾಗಿದೆ. ಪ್ರಸಕ್ತ ವರ್ಷದ ಮೊದಲ ಮೂರು ತಿಂಗಳಿನಲ್ಲಿ ಚೀನಾದ ಆರ್ಥಿಕತೆಯು ಶೇ 5.4ರಷ್ಟು ಬೆಳವಣಿಗೆ ದಾಖಲಿಸಿದೆ.

> **ಭಾರತದ ಆರ್ಥಿಕತೆ ಬೆಳವಣಿಗೆ ವೇಗವು ಸುಸ್ಥಿರವಾಗಿದೆ. ಸತತ ನಾಲ್ಕನೇ ವರ್ಷವೂ ಜಾಗತಿಕ ಮಟ್ಟದಲ್ಲಿ ಅತ್ಯಂತ ವೇಗದ ಆರ್ಥಿಕತೆಯಾಗಿ ಮುಂದುವರಿದಿದೆ**
> **ನಿರ್ಮಲಾ ಸೀತಾರಾಮನ್,** ಕೇಂದ್ರ ಹಣಕಾಸು ಸಚಿವೆ

> **2047ರ ವೇಳೆಗೆ ಭಾರತವು ಅಭಿವೃದ್ಧಿ ಹೊಂದಿದ ದೇಶವಾಗಿ ಹೊರಹೊಮ್ಮಲು ತಯಾರಿಕಾ ವಲಯವು ವಾರ್ಷಿಕವಾಗಿ ಶೇ 15ರಷ್ಟು ಬೆಳವಣಿಗೆ ಸಾಧಿಸಬೇಕಿದೆ**
> **ಬಿ.ವಿ.ಆರ್. ಸುಬ್ರಹ್ಮಣ್ಯಂ,** ಸಿಇಒ, ನೀತಿ ಆಯೋಗ

ವಿತ್ತೀಯ ಕೊರತೆ: ಗುರಿ ಸಾಧನೆ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು ವಿತ್ತೀಯ ಕೊರತೆಗೆ ನಿಗದಿಪಡಿಸಿದ್ದ ಗುರಿ ಸಾಧಿಸುವಲ್ಲಿ ಯಶಸ್ವಿಯಾಗಿದೆ ಎಂದು ಶುಕ್ರವಾರ ಬಿಡುಗಡೆಯಾಗಿರುವ ಲೆಕ್ಕಪತ್ರಗಳ ಮಹಾನಿಯಂತ್ರಕರ (ಸಿಜಿಎ) ವರದಿ ತಿಳಿಸಿದೆ.

ಫೆಬ್ರುವರಿಯಲ್ಲಿ ಸರ್ಕಾರವು ಸಂಸತ್‌ನಲ್ಲಿ ಮಂಡಿಸಿದ್ದ ಪರಿಷ್ಕೃತ ವರದಿಯಲ್ಲಿ 2024–25ನೇ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯನ್ನು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 4.8ಕ್ಕೆ ನಿಗದಿಪಡಿಸಿತ್ತು. ಮೌಲ್ಯದ ಲೆಕ್ಕದಲ್ಲಿ ಇದು ₹15.69 ಲಕ್ಷ ಕೋಟಿ ಆಗಿದೆ.

ಸಂಕ್ಷಿಪ್ತ ಸುದ್ದಿ

ಐಟಿಆರ್ ಸಹಜ್, ಸುಗಮ್ ಅರ್ಜಿ ಲಭ್ಯ

ನವದೆಹಲಿ (ಪಿಟಿಐ): ಆದಾಯ ತೆರಿಗೆ ಇಲಾಖೆಯು 2025–26ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ ಎಕ್ಸೆಲ್ ಆಧಾರಿತ ಐಟಿಆರ್ 1 (ಸಹಜ್) ಮತ್ತು ಐಟಿಆರ್ 4 (ಸುಗಮ್) ಅರ್ಜಿ ನಮೂನೆಗಳನ್ನು ಬಿಡುಗಡೆ ಮಾಡಿದೆ.

2024–25ನೇ ಸಾಲಿನಡಿ ಗಳಿಸಿದ ಆದಾಯಕ್ಕೆ ಈ ನಮೂನೆಯಡಿ ಅರ್ಹರಿರುವ ತೆರಿಗೆದಾರರು ರಿಟರ್ನ್ಸ್ ಸಲ್ಲಿಸಬಹುದಾಗಿದೆ ಎಂದು ಇಲಾಖೆಯು ‘ಎಕ್ಸ್’ನಲ್ಲಿ ತಿಳಿಸಿದೆ.

ವಾರ್ಷಿಕ ₹50 ಲಕ್ಷದವರೆಗೆ ಒಟ್ಟು ಆದಾಯ ಹೊಂದಿದ ತೆರಿಗೆದಾರರು, ಅವಿಭಕ್ತ ಕುಟುಂಬಗಳು ಮತ್ತು ಸಂಸ್ಥೆಗಳು ಈ ನಮೂನೆಗಳ ಅಡಿ ರಿಟರ್ನ್ಸ್ ಸಲ್ಲಿಸಬೇಕಿದೆ.

ಪ್ರಸಕ್ತ ವರ್ಷ ಆದಾಯ ಹೊಂದಾಣಿಕೆಯ ನಿಯಮಗಳನ್ನು ಸರಳೀಕರಿಸಲಾಗಿದೆ. ಹಾಗಾಗಿ, ಸೆಪ್ಟೆಂಬರ್ 15ರ ವರೆಗೂ ತೆರಿಗೆ ದಾರರಿಗೆ ರಿಟರ್ನ್ಸ್ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗಿದೆ.

ಕಾಫಿ ಡೇಗೆ ನಷ್ಟ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಕಾಫಿ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್‌ಗೆ (ಸಿಡಿಇಎಲ್) ₹114 ಕೋಟಿ ನಿವ್ವಳ ನಷ್ಟವಾಗಿದೆ.

2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹250 ಕೋಟಿ ವರಮಾನ ಗಳಿಸಿತ್ತು. ಈ ತ್ರೈಮಾಸಿಕದಲ್ಲಿ ₹268 ಕೋಟಿ ಗಳಿಸಿದೆ. ಒಟ್ಟಾರೆ ವರಮಾನದಲ್ಲಿ ಶೇ 7ರಷ್ಟು ಏರಿಕೆಯಾಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಕಂಪನಿಯ ಒಟ್ಟು ವೆಚ್ಚ ₹313 ಕೋಟಿ ಆಗಿದೆ.

ನೈಜೀರಿಯಾದಲ್ಲಿ ಪ್ರವಾಹ: 117 ಸಾವು

ಅಬುಜಾ (ನೈಜೀರಿಯಾ) (ಪಿಟಿಐ): ಇಲ್ಲಿನ ನಿಗರ್ ಪ್ರಾಂತ್ಯದಲ್ಲಿ ಸಂಭವಿಸಿದ ಭಾರಿ ಪ್ರವಾಹಕ್ಕೆ ಮಾರುಕಟ್ಟೆ ಪಟ್ಟಣ ಮೊಕ್ವಾ ಮುಳುಗಡೆಯಾಗಿ 117 ಮಂದಿ ಮೃತಪಟ್ಟಿದ್ದಾರೆ. ಮೊಕ್ವಾ ಪಟ್ಟಣವು ದೇಶದ ದಕ್ಷಿಣ ಹಾಗೂ ಉತ್ತರ ಭಾಗದ ನಡುವಿನ ವ್ಯಾಪಾರದ ಕೊಂಡಿಯಾಗಿದೆ.

‘ಈ ಹಿಂದೆ 20 ಮಂದಿ ಮೃತಪಟ್ಟಿದ್ದಾರೆ ಎಂದು ಭಾವಿಸಲಾಗಿತ್ತು. ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ. ಇದುವರೆಗೂ 117 ಮಂದಿಯ ಮೃತದೇಹಗಳು ಸಿಕ್ಕಿವೆ. ಇನ್ನಷ್ಟು ಹೆಚ್ಚು ಮಂದಿ ಅಪಾಯಕ್ಕೆ ಸಿಲುಕಿರುವ ಸಾಧ್ಯತೆಯಿದೆ’ ಎಂದು ರಕ್ಷಣಾ ಕಾರ್ಯಾಚರಣಾ ವಿಭಾಗದ ಮುಖ್ಯಸ್ಥ ಹುಸೇನಿ ಇಶಾ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಇಳಿಕೆ ಕಂಡ ಷೇರುಪೇಟೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಕಗಳು ಇಳಿಕೆ ಕಂಡಿವೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ಸುಂಕ ನೀತಿಗೆ ಅಲ್ಲಿನ ಅಂತರರಾಷ್ಟ್ರೀಯ ವ್ಯಾಪಾರ ನ್ಯಾಯಾಲಯವು ತಡೆಯಾಜ್ಞೆ ನೀಡಿದೆ.



ಇದರಿಂದ ವ್ಯಾಪಾರ ಅನಿಶ್ಚಿತ ಸ್ಥಿತಿ ಸೃಷ್ಟಿಯಾಗಿದೆ. ಹಾಗಾಗಿ, ಜಾಗತಿಕ ಷೇರು ಮಾರುಕಟ್ಟೆಗಳು ಕುಸಿತ ಕಂಡಿವೆ. ದೇಶೀಯ ಮಾರುಕಟ್ಟೆಯೂ ಇದೇ ಹಾದಿಯಲ್ಲಿ ಸಾಗಿದೆ ಎಂದು ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 182 ಅಂಶ ಇಳಿಕೆ ಕಂಡು, 81,451 ಅಂಶಗಳಲ್ಲಿ ಮುಕ್ತಾಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 82 ಅಂಶ ಇಳಿಕೆಯಾಗಿದ್ದು, 24,750 ಅಂಶಗಳಲ್ಲಿ ಸ್ಥಿರಗೊಂಡಿತು.

ಲೋಹ, ಐ.ಟಿ ಮತ್ತು ಆಟೊ ವಲಯದ ಷೇರುಗಳ ಮೌಲ್ಯ ಇಳಿಕೆಯಾಗಿದ್ದರೆ, ಬ್ಯಾಂಕಿಂಗ್ ಷೇರುಗಳ ಮೌಲ್ಯ ಏರಿಕೆಯಾಗಿದೆ.

ವಾಕಿ–ಟಾಕಿ ಮಾರಾಟಕ್ಕೆ ಹೊಸ ಮಾರ್ಗಸೂಚಿ

ನವದೆಹಲಿ (ಪಿಟಿಐ): ಇ-ಕಾಮರ್ಸ್ ವೇದಿಕೆಗಳಲ್ಲಿ ವಾಕಿ-ಟಾಕಿಗಳ ಅನಧಿಕೃತ ಪ್ರದರ್ಶನ ಮತ್ತು ಮಾರಾಟಕ್ಕೆ ಕಡಿವಾಣ ಹಾಕಲು ಕೇಂದ್ರ ಗ್ರಾಹಕ ಹಿತರಕ್ಷಣಾ ಪ್ರಾಧಿಕಾರವು (ಸಿಸಿಪಿಎ), ಹೊಸ ಮಾರ್ಗಸೂಚಿ ಪ್ರಕಟಿಸಿದೆ.

ವಾಕಿ-ಟಾಕಿಗಳ ಬಗ್ಗೆ ಸೂಕ್ತ ಮಾಹಿತಿ, ಪರವಾನಗಿ ಅಥವಾ ಸಲಕರಣೆ ಪ್ರಕಾರದ ಬಗ್ಗೆ ಅನುಮೋದನೆ ಪಡೆಯದೆ ಮಾರಾಟ ಮಾಡಲಾಗುತ್ತಿದೆ. ಇದು ಗ್ರಾಹಕ ಸಂರಕ್ಷಣಾ ಕಾಯ್ದೆ 2019ರ ಸ್ಪಷ್ಟ ಉಲ್ಲಂಘನೆಯಾಗಿದೆ. ಇದನ್ನು ತಡೆಯುವ ಉದ್ದೇಶದಿಂದ ಹೊಸ ಚೌಕಟ್ಟು ರೂಪಿಸಲಾಗಿದೆ ಎಂದು ಸಿಸಿಪಿಎ ಹೇಳಿದೆ.

ಕೇಂದ್ರ ದೂರಸಂಪರ್ಕ ಇಲಾಖೆ ಮತ್ತು ಕೇಂದ್ರ ಗೃಹ ಸಚಿವಾಲಯದ ಜೊತೆಗೆ ಸಮಾಲೋಚನೆ ನಡೆಸಿದ ಬಳಿಕ ಈ ಮಾರ್ಗಸೂಚಿ ಸಿದ್ಧಪಡಿಸಲಾಗಿದೆ ಎಂದು ತಿಳಿಸಿದೆ.

ಇ-ಕಾಮರ್ಸ್ ವೇದಿಕೆಗಳಲ್ಲಿ ಸರ್ಕಾರದ ನಿಯಮಾವಳಿ ಮತ್ತು ವೈರ್‌ಲೆಸ್ ಕಾರ್ಯಾಚರಣೆಯ ಪರವಾನಗಿ ಅಥವಾ ಸಂಬಂಧಪಟ್ಟ ಕಾನೂನನ್ನು ಉಲ್ಲಂಘಿಸಿ ವಾಕಿ-ಟಾಕಿಗಳನ್ನು ಮಾರಾಟ ಮಾಡಲಾಗುತ್ತಿದೆ ಎಂದು ಹೇಳಿದೆ.

ವಾಕಿ-ಟಾಕಿಗಳ ಫ್ರೀಕ್ವೆನ್ಸಿ ಸಾಮರ್ಥ್ಯದ ಬಗ್ಗೆ ವಿವರಣೆ ಇರುವುದಿಲ್ಲ. ಭಾರತೀಯ ಟೆಲಿಗ್ರಾಫ್ ಕಾಯ್ದೆ 1885, ವೈರ್‌ಲೆಸ್ ಟೆಲಿಗ್ರಾಫ್ ಕಾಯ್ದೆ 1993, ಕಡಿಮೆ ಶಕ್ತಿ ಹೊಂದಿದ ರೇಡಿಯೊ ಫ್ರೀಕ್ವೆನ್ಸಿ ಸಾಧನಗಳ ಬಳಕೆಗೆ ಸಂಬಂಧಿಸಿದಂತೆ 2018ರಲ್ಲಿ ರೂಪಿಸಿರುವ ನಿಯಮಾವಳಿಗಳನ್ನು ಉಲ್ಲಂಘಿಸಿ ಮಾರಾಟ ಮಾಡಲಾಗುತ್ತಿದೆ. ಇದಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಮಾರ್ಗಸೂಚಿ ರೂಪಿಸಲಾಗಿದೆ ಎಂದು ಹೇಳಿದೆ.

ಇಎಸ್‌ಐಸಿ ಚಂದಾದಾರರಿಗೆ ಅನುಕೂಲ: ಕೇಂದ್ರ ಸಚಿವೆ ಶೋಭಾ ಹೇಳಿಕೆ

ಖಾಸಗಿ ಆಸ್ಪತ್ರೆಯಲ್ಲೂ ಚಿಕಿತ್ಸೆ ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕರ ರಾಜ್ಯ ವಿಮಾ ನಿಗಮದ (ಇಎಸ್‌ಐಸಿ) ಚಂದಾದಾರರು ಹಾಗೂ ಅವರ ಕುಟುಂಬದವರು ಆಯುಷ್ಮಾನ್ ಆರೋಗ್ಯ ಯೋಜನೆಯಲ್ಲಿ ನೋಂದಣಿಯಾಗಿರುವ ಖಾಸಗಿ ಆಸ್ಪತ್ರೆಯಲ್ಲೂ ಚಿಕಿತ್ಸೆ ಪಡೆಯಬಹುದು ಎಂದು ಕೇಂದ್ರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಪ್ರತಿಯೊಂದು ಜಿಲ್ಲೆಯಲ್ಲೂ ಇಎಸ್‌ಐ ಆಸ್ಪತ್ರೆ ಆರಂಭಿಸಲು ಕೇಂದ್ರ ಸರ್ಕಾರ ನಿರ್ಧರಿಸಿದ್ದರೂ, ತಜ್ಞ ವೈದ್ಯರ ಕೊರತೆ ಇದೆ. ಹೀಗಾಗಿ, ಆಯುಷ್ಮಾನ್ ಯೋಜನೆಯಲ್ಲಿರುವ ಎಲ್ಲ ಖಾಸಗಿ ಆಸ್ಪತ್ರೆಗಳಲ್ಲೂ ಇಎಸ್‌ಐಸಿ ಚಂದಾದಾರರು ನಗದುರಹಿತವಾಗಿ ಚಿಕಿತ್ಸೆ ಪಡೆಯಬಹುದು. ಅದರ ವೆಚ್ಚವನ್ನು ಇಎಸ್‌ಐಸಿ ಭರಿಸಲಿದೆ. ಈ ಬಗ್ಗೆ ಶೀಘ್ರವೇ, ನಿಯಮಗಳಲ್ಲಿ ಬದಲಾವಣೆ ಮಾಡಿ, ಆದೇಶ ಹೊರಡಿಸಲಾಗುತ್ತದೆ ಎಂದು ಸುದ್ದಿಗೋಷ್ಠಿ ಯಲ್ಲಿ ಶುಕ್ರವಾರ ಮಾಹಿತಿ ನೀಡಿದರು.

‘ಬ್ರಿಟಿಷರ ಕಾಲದ ಕಾರ್ಮಿಕ ಕಾಯ್ದೆಯನ್ನು ಸುಧಾರಿತ ಕೋಡ್‌ಗಳಾಗಿ ಮಾಡಲಾಗುತ್ತಿದೆ. ಈ ಬಗ್ಗೆ ಎಲ್ಲ ರಾಜ್ಯ ಸರ್ಕಾರಗಳೊಂದಿಗೆ ಚರ್ಚೆ ನಡೆಸಲಾಗಿದ್ದು, ಅನುಮಾನಗಳನ್ನು ಬಗೆಹರಿಸಲಾಗುತ್ತಿದೆ.

ಕೆಲವು ರಾಜ್ಯದಲ್ಲಿ ಕೆಲವು ಕೋಡ್‌ಗಳು ಜಾರಿಯಾಗಿವೆ. ಮುಂದಿನ ಬಜೆಟ್ ಮಂಡನೆಗೆ ಮುನ್ನ ಹೊಸ ‘ಲೇಬರ್ ಕೋಡ್’ ಎಲ್ಲೆಡೆ ಜಾರಿಗೆ ಬರುತ್ತದೆ’ ಎಂದು ಹೇಳಿದರು.

‘ದೇಶದ ಒಟ್ಟಾರೆ ಉದ್ಯೋಗಿಗಳಲ್ಲಿ ಶೇ 10 ರಷ್ಟು ಜನರು ಮಾತ್ರ ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಒ) ಸೌಲಭ್ಯ ಹೊಂದಿದ್ದಾರೆ. ಉಳಿದ ಶೇ 90ರಷ್ಟು ಜನರಿಗೆ ಯಾವುದೇ ಸೌಲಭ್ಯವಿಲ್ಲ. ಇವರಿಗೆಲ್ಲ ಸಾಮಾಜಿಕ ಭದ್ರತೆ ಕಲ್ಪಿಸಬೇಕಿದೆ. ಹೀಗಾಗಿ, ಸುಧಾರಿತ ಕಾನೂನು ತರಲಾಗುತ್ತಿದೆ ಎಂದರು.

ಉದ್ಯೋಗಿಗಳನ್ನು ಅರಿಯಲು ‘ಇ-ಶ್ರಮ್’ ಪೋರ್ಟಲ್ ಆರಂಭಿಸಲಾಗಿದೆ. ಸುಮಾರು 80 ಕೋಟಿ ಉದ್ಯೋಗಿಗಳಲ್ಲಿ 60 ಕೋಟಿ ಉದ್ಯೋಗಿಗಳು ಅಸಂಘಟಿತ ವಲಯದಲ್ಲಿದ್ದಾರೆ. ₹30 ಕೋಟಿ ಉದ್ಯೋಗಿಗಳು ಮಾತ್ರ ನೋಂದಣಿ ಮಾಡಿಕೊಂಡಿದ್ದಾರೆ. ಸುಮಾರು 75 ಲಕ್ಷ ಗಿಗ್ ಕಾರ್ಮಿಕರಲ್ಲಿ 53.74 ಲಕ್ಷ ಜನರು ನೋಂದಣಿಯಾಗಿದ್ದಾರೆ’ ಎಂದು ಮಾಹಿತಿ ನೀಡಿದರು.

‘ದೇಶದ ಜಿಡಿಪಿಗೆ ಶೇ 30ರಷ್ಟು ಕೊಡುಗೆ ನೀಡುತ್ತಿರುವ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ (ಎಂಎಸ್‌ಎಂಇ) ಸಮೀಕ್ಷೆ ನಡೆದಿದೆ. 6.36 ಕೋಟಿ ಎಂಎಸ್‌ಎಂಇಗಳು 26 ಕೋಟಿ ಜನರಿಗೆ ಉದ್ಯೋಗ ನೀಡಿವೆ. ಇನ್ನೂ ಸುಮಾರು 40 ಲಕ್ಷ ಎಂಎಸ್‌ಎಂಇಗಳು ಟಯರ್-2, ಟಯರ್-3 ಪ್ರದೇಶಗಳಲ್ಲಿದ್ದು, ನೋಂದಣಿಯಾಗಿಲ್ಲ’ ಎಂದರು.

‘ದೇಶ ಸೇರಿದಂತೆ ವಿದೇಶಗಳ ಕಂಪನಿಗಳಿಗೆ ಕೌಶಲಯುತ ಉದ್ಯೋಗಿಗಳ ಅಗತ್ಯವಿದೆ. ಹೀಗಾಗಿ, ರಾಜ್ಯ ಸರ್ಕಾರ ಪೀಣ್ಯದಲ್ಲಿ ನೀಡಿರುವ ಭೂಮಿಯಲ್ಲಿ ಎನ್‌ಎಸ್‌ಐಸಿ ತಾಂತ್ರಿಕ ಸೇವಾ ಕೇಂದ್ರ (ಎನ್‌ಟಿಎಸ್‌ಸಿ) ಸ್ಥಾಪಿಸಲಾಗುತ್ತದೆ. ಮುಂದಿನ ತಲೆಮಾರಿನ ಎಐ, ಏರೊನಾಟಿಕ್ಸ್ ಸೇರಿದಂತೆ ಅತ್ಯುನ್ನತ ತಂತ್ರಜ್ಞಾನದ ಕೌಶಲಯುತ ತರಬೇತಿ ನೀಡಲಾಗುತ್ತದೆ. ದೆಹಲಿಯಲ್ಲಿರುವ ಕೇಂದ್ರಕ್ಕಿಂತ ಉನ್ನತಮಟ್ಟದಲ್ಲಿ ಈ ಕೇಂದ್ರ ನಿರ್ಮಾಣವಾಗಲಿದೆ’ ಎಂದು ತಿಳಿಸಿದರು.

‘ಎಂಎಸ್‌ಎಂಇಗಳಿಗೆ ಕೇಂದ್ರ ಸರ್ಕಾರ ನೇರವಾಗಿ ಸೌಲಭ್ಯ ಕಲ್ಪಿಸುತ್ತಿದೆ. ಮೊದಲು ಬಂದವರಿಗೆ ಮೊದಲ ಆದ್ಯತೆ. ರಾಜ್ಯಗಳ ಮಧ್ಯೆ ತಾರತಮ್ಯ ಮಾಡುವುದಿಲ್ಲ. ಕರ್ನಾಟಕದ ಎಂಎಸ್‌ಎಂಇ ಸಚಿವರನ್ನು ಇವತ್ತೇ ನಾನು ಭೇಟಿಯಾಗಿದ್ದು’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

7.1 ಕೋಟಿ ಜನರಿಗೆ ಉದ್ಯೋಗ

‘ದೇಶದಲ್ಲಿ 2017ರಿಂದ ಈವರೆಗೆ 7.1 ಕೋಟಿ ಜನರಿಗೆ ಉದ್ಯೋಗ ಲಭ್ಯವಾಗಿದೆ. ಇಪಿಎಫ್‌ಒ ಸೌಲಭ್ಯ ಹೊಂದಿರುವವರ ಸಂಖ್ಯೆ ಇದಾಗಿದ್ದು, ಇತರೆ ವರ್ಗದಲ್ಲಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಲಭಿಸಿದೆ’ ಎಂದು ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

‘ಜೂನ್ 9ಕ್ಕೆ ಸಚಿವೆಯಾಗಿ ಒಂದು ವರ್ಷ ಪೂರ್ಣಗೊಳ್ಳುತ್ತಿದ್ದು, ನನ್ನ ಇಲಾಖೆಯಲ್ಲಿ ಹಲವು ರೀತಿಯ ಪ್ರಗತಿಯಾಗಿದೆ’ ಎಂದರು.

‘ಉದ್ಯೋಗಿಗಳ ಹೊರತಾಗಿ ಎಲ್ಲ ನಾಗರಿಕರೂ ಇಪಿಎಫ್‌ಒ ಸೌಲಭ್ಯ ಪಡೆದುಕೊಳ್ಳಬಹುದು. ಮಾಸಿಕವಾಗಿ ಹಣ ಕಟ್ಟುವ ವ್ಯವಸ್ಥೆಯನ್ನೂ ಶೀಘ್ರ ಜಾರಿಗೆ ತರಲಾಗುತ್ತದೆ’ ಎಂದು ತಿಳಿಸಿದರು.

‘ವಿದೇಶದಲ್ಲಿ ಕೆಲಸಕ್ಕಾಗಿ ಹಣ ನೀಡಿ ಹಲವರು ಸಮಸ್ಯೆ ಎದುರಿಸುತ್ತಿದ್ದಾರೆ. ಯಾರನ್ನೋ ನಂಬುವುದು ಬೇಡ. ಕೇಂದ್ರ ಸರ್ಕಾರದ ಪೋರ್ಟಲ್‌ನಲ್ಲಿ ನೋಂದಾಯಿತ ಕಂಪನಿಗಳ ಮೂಲಕ ವ್ಯವಹರಿಸಬೇಕು. ಯಾವುದೋ ಕಂಪನಿಯನ್ನು ನಂಬಿ ವಂಚನೆಗೆ ಒಳಗಾಗಬಾರದು’ ಎಂದು ಮನವಿ ಮಾಡಿದರು.

ಕವಿ ಎಚ್ಚೆಸ್ವಿ ಇನ್ನಿಲ್ಲ

ಒಂದನೇ ಪುಟದಿಂದ...

ಬಳಿಕ, ಮೃತ ದೇಹವನ್ನು ಹೊಸಕೆರೆಹಳ್ಳಿಯ ಪುಷ್ಪಗಿರಿ ನಗರದಲ್ಲಿರುವ ಅವರ ಸ್ವಗೃಹಕ್ಕೆ ಕೊಂಡೊಯ್ಯಲಾಯಿತು. ಸಕಲ ಸರ್ಕಾರಿ ಗೌರವಗಳೊಂದಿಗೆಅವರ ಅಂತ್ಯಕ್ರಿಯೆ ನೆರವೇರಿಸುವಂತೆ ಸರ್ಕಾರ ಆದೇಶ ಹೊರಡಿಸಿದೆ. ಚಾಮರಾಜಪೇಟೆಯ ಟಿ.ಆರ್.ಮಿಲ್ ಚಿತಾಗಾರದಲ್ಲಿ ಶನಿವಾರ ಬೆಳಿಗ್ಗೆ ಅಂತ್ಯಸಂಸ್ಕಾರ ನಡೆಸಲು ಕುಟುಂಬಸ್ಥರು ನಿರ್ಧರಿಸಿದ್ದಾರೆ.

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಹೊದಿಗೆರೆ ಗ್ರಾಮದಲ್ಲಿ ಜನಿಸಿದ ವೆಂಕಟೇಶಮೂರ್ತಿ ಅವರು, 1973ರಲ್ಲಿ ಬೆಂಗಳೂರಿನ ಸೇಂಟ್ ಜೋಸೆಫ್ ವಾಣಿಜ್ಯ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿ ಆರಂಭಿಸಿದರು. ಮೂರು ದಶಕ ಅಲ್ಲಿ ಕಾರ್ಯನಿರ್ವಹಿಸಿದ ಅವರು, ಇದೇ ಕಾಲೇಜಿನಲ್ಲಿ 2000ನೇ ಇಸವಿಯಲ್ಲಿ ನಿವೃತ್ತರಾಗಿದ್ದರು.

‘ಎಚ್ಚೆಸ್ವಿ’ ಎಂದೇ ಸಾಹಿತ್ಯ ಕ್ಷೇತ್ರದಲ್ಲಿ ಚಿರಪರಿಚಿತರಾದ ಅವರು, ಕವಿತೆ, ನಾಟಕ, ಪ್ರಬಂಧ, ಕಾದಂಬರಿ, ಮಕ್ಕಳ ಸಾಹಿತ್ಯ, ಅನುವಾದ, ವಿಮರ್ಶೆ ಸೇರಿ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಚಲನಚಿತ್ರ ಹಾಗೂ ಕಿರುತೆರೆ ಧಾರಾವಾಹಿಗಳಿಗೂ ಗೀತೆಗಳನ್ನು ಬರೆದಿದ್ದಾರೆ.

ಅವರು ಅನುವಾದಿಸಿದ ಕಾಳಿದಾಸನ ‘ಋತು ಸಂಹಾರ’ ಕಾವ್ಯ ಕೃತಿಯು ಕೇಂದ್ರ ಸಾಹಿತ್ಯ ಅಕಾಡೆಮಿಯ ‘ಅನುವಾದ ಪುರಸ್ಕಾರ’ ಪಡೆದಿದೆ. ‘ಕ್ರಿಯಾಪರ್ವ’, ‘ಎಷ್ಟೊಂದು ಮುಗಿಲು’, ‘ನದೀತೀರದಲ್ಲಿ’, ‘ಉತ್ತರಾಯಣ’ ಮೊದಲಾದವು ಅವರ ಪ್ರಮುಖ ಕಾವ್ಯಕೃತಿಗಳಾಗಿವೆ. ‘ಅಗ್ನಿವರ್ಣ’, ‘ಚಿತ್ರಪಟ’, ‘ಉರಿಯ ಉಯ್ಯಾಲೆ’, ‘ಮಂಥರೆ’ ಮೊದಲಾದವು ಅವರ ಪ್ರಮುಖ ನಾಟಕಗಳು. ಕಲಬುರಗಿಯಲ್ಲಿ ನಡೆದ 85ನೇ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಅವರಿಗೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಸೇರಿ ವಿವಿಧ ಪುರಸ್ಕಾರಗಳು ಸಂದಿವೆ.

ಅತಿಥಿ ಉಪನ್ಯಾಸಕರಿಗೆ ₹5 ಲಕ್ಷ ಇಡುಗಂಟು: ಆದೇಶ

ಒಂದನೇ ಪುಟದಿಂದ...

ಅಂದು ನೀಡಿದ್ದ ಭರವಸೆಯಂತೆ ಉನ್ನತ ಶಿಕ್ಷಣ ಇಲಾಖೆ ಕ್ರಮ ಕೈಗೊಂಡಿದೆ. ಇಡುಗಂಟು ಯೋಜನೆ ಜನವರಿ 2024ರಿಂದಲೇ ಪೂರ್ವಾನ್ವಯವಾಗಲಿದ್ದು, ಆ ದಿನಾಂಕಕ್ಕೆ ಹಾಗೂ ನಂತರ 60 ವರ್ಷ ಪೂರೈಸಿದ ಎಲ್ಲರಿಗೂ ಸೌಲಭ್ಯ ಸಿಗಲಿದೆ. 2024ರ ಜನವರಿ 1ಕ್ಕಿಂತ ಹಿಂದಿನ ಐದು ವರ್ಷಗಳಲ್ಲಿ ಕನಿಷ್ಠ ಒಂದು ವರ್ಷ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, 60 ವರ್ಷ ದಾಟಿದವರು ಇಟುಗಂಟು ಸೌಲಭ್ಯ ಪಡೆಯಬಹುದು.

ಆಯಾ ಕಾಲೇಜುಗಳ ಪ್ರಾಂಶುಪಾಲರು ಸೇವಾ ದೃಢೀಕರಣ ಪತ್ರ ನೀಡಬೇಕು. ಅತಿಥಿ ಉಪನ್ಯಾಸಕರು ಸಲ್ಲಿಸಿದ ಸೇವಾ ವರ್ಷಗಳ ಆಧಾರದಲ್ಲಿ ಪ್ರತಿ ವರ್ಷಕ್ಕೆ ₹50 ಸಾವಿರದಂತೆ ಗರಿಷ್ಠ 10 ವರ್ಷಗಳ ಸೇವೆಯನ್ನು ಪರಿಗಣಿಸಲಾಗುವುದು. ಆಯಾ ಶೈಕ್ಷಣಿಕ ವರ್ಷದಲ್ಲಿ 240 ದಿನಗಳು ಕೆಲಸ ಮಾಡಿರಬೇಕು. 8 ತಿಂಗಳಿಗಿಂತ ಕಡಿಮೆ ಅವಧಿ ಕೆಲಸ ಮಾಡಿದ್ದರೆ ಅದನ್ನು ಭಾಗಶಃ ವರ್ಷ ಎಂದು ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ಕೆಲಸದ ಅವಧಿಯಲ್ಲೇ ಮರಣ ಹೊಂದಿದರೆ ಅವರ ಕುಟುಂಬಕ್ಕೆ ಮೊತ್ತವನ್ನು ಹಸ್ತಾಂತರಿಸಲಾಗುವುದು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಖಾದ್ಯಗಳ ಪೊಟ್ಟಣದ ಮೇಲೆ ‘ಶೇ100’ ಪದ ಬಳಕೆ ಬೇಡ: ಎಫ್‌ಎಸ್‌ಎಸ್‌ಎಐ

ನವದೆಹಲಿ(ಪಿಟಿಐ): ಖಾದ್ಯ ಪದಾರ್ಥಗಳ ಪೊಟ್ಟಣಗಳ ಮೇಲೆ ‘ಶೇ 100ರಷ್ಟು’ ಎಂಬ ಪದ ಬಳಸಬಾರದು. ಈ ರೀತಿಯ ಪದ ಬಳಕೆಯು ಗ್ರಾಹಕರ ದಾರಿ ತಪ್ಪಿಸಬಹುದು ಎಂದು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಸಲಹೆ ನೀಡಿದೆ.

ಅಹಾರ ಪದಾರ್ಥಗಳ ಪೊಟ್ಟಣಗಳ ಮೇಲೆ ಲೇಬಲ್ ಅಂಟಿಸುವಾಗ, ಪ್ಯಾಕಿಂಗ್ ಮತ್ತು ಪ್ರಚಾರ ಕಾರ್ಯದ ವಿಷಯವಸ್ತು ಗಳಲ್ಲಿ ಈ ಪದವನ್ನು (ಶೇ 100) ಬಳಸದಂತೆ ಆಹಾರ ವ್ಯಾಪಾರ ನಿರ್ವಹಣೆಗಾರರಿಗೆ (ಎಫ್‌ಬಿಒ) ಪ್ರಾಧಿಕಾರವು ಗುರುವಾರ ಸೂಚನೆ ನೀಡಿದೆ.

ಇಂತಹ ಪದ ಬಳಕೆಯು ಗ್ರಾಹಕರಲ್ಲಿ ಗೊಂದಲ ಮೂಡಿಸುವ ಜೊತೆಗೆ, ಆಹಾರ ಗುಣಮಟ್ಟ ನಿಯಂತ್ರಣಕ್ಕೆ ಸಂಬಂಧಿಸಿ ಜಾರಿಯಲ್ಲಿರುವ ಅವಕಾಶಗಳ ತಪ್ಪು ವ್ಯಾಖ್ಯಾನಕ್ಕೆ ಕಾರಣವಾಗುವ ಸಾಧ್ಯತೆ ಹೆಚ್ಚು ಎಂದೂ ಹೇಳಿದೆ.

ಆಹಾರ ಪದಾರ್ಥಗಳ ಗುಣಮಟ್ಟ ನಿಯಂತ್ರಣಕ್ಕೆ ಸಂಬಂಧಿಸಿದ ನಿಯಮಗಳಡಿ ‘ಶೇ 100’ ಪದವನ್ನು ವ್ಯಾಖ್ಯಾನಿಸ ಲಾಗಿಲ್ಲ ಹಾಗೂ ಇದು ಗ್ರಾಹಕರಲ್ಲಿ ಗೊಂದಲ ಮೂಡಿಸುವ ಸಾಧ್ಯತೆಯೇ ಹೆಚ್ಚು ಎಂದಿದೆ.

ಫೈಜಾನ್ ಸ್ಪೆಲ್ಲಿಂಗ್ ಬೀ ಚಾಂಪಿಯನ್

ಆಕ್ಸನ್ ಹಿಲ್ (ಅಮೆರಿಕ) (ಎಪಿ): 13 ವರ್ಷದ ಭಾರತೀಯ ಅಮೆರಿಕನ್ ಫೈಜಾನ್ ಝೂಕಿ ಅಮೆರಿಕದ ಪ್ರತಿಷ್ಠಿತ 2025ರ ‘ಸ್ಕ್ರಿಪ್ಸ್ ನ್ಯಾಷನಲ್ ಸ್ಪೆಲ್ಲಿಂಗ್ ಬೀ ಚಾಂಪಿಯನ್‌ಷಿಪ್’ ಪಟ್ಟ ಅಲಂಕರಿಸಿದ್ದಾರೆ.

ಫೈಜಾನ್ ಝೂಕಿ ಫೈಜಾನ್ ಕಳೆದ ಬಾರಿ ‘ಸ್ಕ್ರಿಪ್ಸ್ ನ್ಯಾಷನಲ್ ಸ್ಪೆಲ್ಲಿಂಗ್ ಬೀ ಚಾಂಪಿಯನ್‌ಷಿಪ್’ನಲ್ಲಿ ರನ್ನರ್ ಅಪ್ ಆಗಿದ್ದರು. ಈತನ ತಂದೆ ದಕ್ಷಿಣ ಭಾರತದಿಂದ ಅಮೆರಿಕಕ್ಕೆ ವಲಸೆ ಹೋಗಿದ್ದರು. ಹಿಂದಿನ 36 ಚಾಂಪಿಯನ್‌ಗಳಲ್ಲಿ 30 ಚಾಂಪಿಯನ್‌ಗಳು ಭಾರತೀಯ ಅಮೆರಿಕನ್ನರು ಆಗಿದ್ದಾರೆ.

ಅಡಿಕೆ ಹಾಳೆಗೆ ಅಮೆರಿಕ ನಿರ್ಬಂಧ: ರೈತರಿಗೆ ಸಂಕಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಡಿಕೆ ಹಾಳೆ ಉತ್ಪನ್ನಗಳ ರಫ್ತಿಗೆ ಅಮೆರಿಕ ವಿಧಿಸಿರುವ ನಿರ್ಬಂಧವನ್ನು ತೆರವುಗೊಳಿಸಲು ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘ ಆಗ್ರಹಿಸಿದೆ.

ಭಾರತದಿಂದ ರಫ್ತಾಗುವ ಅಡಿಕೆ ಹಾಳೆಯಿಂದ ತಯಾರಿಸಿದ ತಟ್ಟೆ, ಲೋಟ ಮತ್ತಿತರ ಊಟದ ಪರಿಕರಗಳು ಆರೋಗ್ಯಕ್ಕೆ ಹಾನಿಕರ ಹಾಗೂ ಕ್ಯಾನ್ಸರ್ ಕಾರಕ ಎಂದು ಅಮೆರಿಕ ಆಹಾರ ಮತ್ತು ಔಷಧ ಆಡಳಿತ ಸಂಸ್ಥೆ (ಎಫ್‌ಡಿಎ) ಮೇ 8ರಂದು ನಿರ್ಬಂಧ ಹೇರಿದೆ. ಭಾರತದ ವಸ್ತುಗಳಿಗೆ ಸುಂಕ ವಿಧಿಸುತ್ತಿರುವ ಅಮೆರಿಕ ಬೇರೆ ಬೇರೆ ನೆಪಗಳನ್ನು ಒಡ್ಡುತ್ತಾ ಭಾರತದ ರೈತರನ್ನು ಸಂಕಷ್ಟಕ್ಕೆ ದೂಡುತ್ತಿದೆ ಎಂದು ಸಂಘದ ಅಧ್ಯಕ್ಷ ಯು. ಬಸವರಾಜ, ಪ್ರಧಾನ ಕಾರ್ಯದರ್ಶಿ ಟಿ. ಯಶವಂತ ದೂರಿದ್ದಾರೆ.

ಅಡಿಕೆ ಹಾಳೆಗಳಿಂದ ತಯಾರಿಸುವ ಊಟದ ಪರಿಕರ ವಹಿವಾಟು ಜಾಗತಿಕವಾಗಿ ₹3,500 ಕೋಟಿ ಇದ್ದು, ಅದರಲ್ಲಿ ಕರ್ನಾಟಕದ ಕೊಡುಗೆಯೇ ₹2,500 ಕೋಟಿಯಾಗಿದೆ. ಅಮೆರಿಕದ ಈ ನಿರ್ಬಂಧವು ಅಡಿಕೆ ಹಾಳೆ ಮಾರುಕಟ್ಟೆ ಮೇಲೆ ದುಷ್ಪರಿಣಾಮ ಉಂಟು ಮಾಡಿದೆ ಎಂದು ತಿಳಿಸಿದ್ದಾರೆ.

ಭಾರತದ ವಸ್ತುಗಳು ಅಮೆರಿಕಕ್ಕೆ ಬಾರದಂತೆ ತಡೆಯೊಡ್ಡುತ್ತಿದೆ. ಮಾವು ಬೆಳೆಯನ್ನು ಇಂತಹದ್ದೇ ನೆಪ ಒಡ್ಡಿ ತಿರಸ್ಕರಿಸಿತ್ತು. ರೈತರಿಗೆ ಇದರಿಂದ ಕೋಟ್ಯಂತರ ರೂಪಾಯಿ ನಷ್ಟವಾಗಿತ್ತು. ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಒಳಪಡಿಸಲು ಇತ್ತೀಚಿನ ಭಾರತ ಮತ್ತು ಪಾಕಿಸ್ತಾನ ನಡುವಿನ ಉದ್ವಿಗ್ನತೆಯ ಸಂದರ್ಭವನ್ನು ಕೂಡ ದುರುಪಯೋಗ ಮಾಡಿಕೊಂಡಿದೆ ಎಂದು ಹೇಳಿದ್ದಾರೆ.

ಈ ಕ್ರಮಗಳನ್ನು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಖಂಡಿಸುತ್ತಿಲ್ಲ. ರೈತರ ಹಿತ ಕಾಪಾಡುವ ಕೆಲಸ ಮಾಡುತ್ತಿಲ್ಲ. ಟ್ರಂಪ್‌ನ ಅಡಿಯಾಳಾಗಿ ವರ್ತಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಲಸಿಗರ ‘ಪೆರೋಲ್’ ರದ್ದು: ಟ್ರಂಪ್ ಆಡಳಿತಕ್ಕೆ ‘ಸುಪ್ರೀಂ’ ಅನುಮತಿ

ವಾಷಿಂಗ್ಟನ್(ರಾಯಿಟರ್ಸ್): ದೇಶದಲ್ಲಿನ ವಲಸಿಗರಿಗೆ ನೀಡಲಾಗಿರುವ ತಾತ್ಕಾಲಿಕ ‘ಪೆರೋಲ್’ ರದ್ದುಗೊಳಿಸಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತಕ್ಕೆ ಅಮೆರಿಕ ಸುಪ್ರೀಂ ಕೋರ್ಟ್ ಶುಕ್ರವಾರ ಅನುಮತಿ ನೀಡಿದೆ.

ವೆನೆಜುವೆಲಾ, ಕ್ಯೂಬಾ, ಹೈಟಿ, ನಿಕಾರಾಗುವದಿಂದ ವಲಸೆ ಬಂದು ಅಮೆರಿಕದಲ್ಲಿ ನೆಲಸಿರುವ ಸಾವಿರಾರು ಜನರ ತಾತ್ಕಾಲಿಕ ‘ಪೆರೋಲ್’ ರದ್ದಾಗಲಿದೆ. ಅಲ್ಲದೇ, ಸುಪ್ರೀಂ ಕೋರ್ಟ್‌ನ ಈ ತೀರ್ಪು, ದೇಶದಿಂದ ವಲಸಿಗರನ್ನು ಗಡೀಪಾರು ಮಾಡಬೇಕೆಂಬ ಟ್ರಂಪ್ ಅವರ ನಿರ್ಧಾರಕ್ಕೆ ಮತ್ತಷ್ಟು ಬಲ ನೀಡಿದಂತಾಗಿದೆ.

ಈ ಹಿಂದೆ ಅಧ್ಯಕ್ಷರಾಗಿದ್ದ ಜೋ ಬೈಡನ್ ನೇತೃತ್ವದ ಸರ್ಕಾರವು 5,32,000 ವಲಸಿಗರಿಗೆ ನೀಡಿದ್ದ ಪೆರೋಲ್ ನೀಡಿತ್ತು. ಈ ಪೆರೋಲ್ ರದ್ದು ಮಾಡಿ, ಹಾಲಿ ಅಧ್ಯಕ್ಷ ಟ್ರಂಪ್ ಜನವರಿ 20ರಂದು ಕಾರ್ಯಾದೇಶ ಹೊರಡಿಸಿದ್ದರು.

ಆದರೆ, ಬಾಸ್ಟನ್‌ನ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶೆ ಇಂದಿರಾ ತಲ್ವಾನಿ ಅವರು ಟ್ರಂಪ್ ಆದೇಶ ರದ್ದುಮಾಡಿ ಆದೇಶಿಸಿದ್ದರು. ಈಗ, ಸುಪ್ರೀಂ ಕೋರ್ಟ್, ಜಿಲ್ಲಾ ನ್ಯಾಯಾಲಯದ ಆದೇಶಕ್ಕೆ ತಡೆ ನೀಡಿದೆ.

ಮಾನವೀಯತೆ ಇಲ್ಲವೇ ಸಾರ್ವಜನಿಕ ಹಿತದೃಷ್ಟಿ ಆಧಾರದಲ್ಲಿ, ವಲಸಿಗರಿಗೆ ಪೆರೋಲ್ ನೀಡಲು ಕಾನೂನಿನಲ್ಲಿ ಅವಕಾಶ ಇದೆ. ಈ ರೀತಿ ಪೆರೋಲ್ ಪಡೆದವರು ಅಮೆರಿಕದಲ್ಲಿ ವಾಸಿಸಬಹುದು ಹಾಗೂ ಉದ್ಯೋಗವನ್ನೂ ಪಡೆಯಬಹುದಾಗಿದೆ.

‘ಕದನ ವಿರಾಮ ಶಿಫಾರಸಿಗೆ ಒಪ್ಪಿಗೆ’

ಜೆರುಸಲೇಂ (ಎಪಿ): ಹಮಾಸ್ ಬಂಡುಕೋರರೊಂದಿಗಿನ ಯುದ್ಧಕ್ಕೆ ತಾತ್ಕಾಲಿಕ ಕದನ ವಿರಾಮ ಘೋಷಿಸುವ ಅಮೆರಿಕ ಶಿಫಾರಸಿಗೆ ಇಸ್ರೇಲ್ ಒಪ್ಪಿಗೆ ನೀಡಿದೆ ಎಂದು ಶ್ವೇತಭವನ ಗುರುವಾರ ತಿಳಿಸಿದೆ.

ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕರೋಲಿನ್ ಲೀವಿಟ್ ಅವರು, ‘ನೂತನ ಶಿಫಾರಸಿಗೆ ಇಸ್ರೇಲ್ ಒಪ್ಪಿಗೆ ನೀಡಿದೆ ಮತ್ತು ಅದನ್ನು ಬೆಂಬಲಿಸಿದೆ’ ಎಂದು ತಿಳಿಸಿದರು.

ಇಸ್ರೇಲ್ ಒಪ್ಪಿಗೆ ನೀಡಿರುವ ಶಿಫಾರಸಿಗೆ ಹಮಾಸ್ ಅಧಿಕಾರಿಗಳು ತಣ್ಣನೆಯ ಪ್ರತಿಕ್ರಿಯೆ ನೀಡಿದ್ದಾರೆ. ಆದರೆ ಅಧಿಕೃತವಾಗಿ ಪ್ರತಿಕ್ರಿಯೆ ನೀಡುವ ಮುನ್ನ ಶಿಫಾರಸನ್ನು ಮತ್ತಷ್ಟು ಸೂಕ್ಷ್ಮವಾಗಿ ಪರಿಶೀಲಿಸಬೇಕು ಎಂದು ತಿಳಿಸಿದ್ದಾರೆ.

ಇದಕ್ಕೂ ಮೊದಲು, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು, ಹಮಾಸ್ ತನ್ನ ಬಳಿ ಇರಿಸಿಕೊಂಡಿರುವ ಎಲ್ಲಾ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವವರೆಗೂ ಯುದ್ಧವನ್ನು ನಿಲ್ಲಿಸುವುದಿಲ್ಲ ಎಂದು ಹೇಳಿದ್ದರು. ಗಾಜಾವನ್ನು ಅನಿರ್ದಿಷ್ಟಾವಧಿಗೆ ಇಸ್ರೇಲ್ ನಿಯಂತ್ರಣದಲ್ಲಿ ಇಟ್ಟುಕೊಳ್ಳಲಿದೆ ಎಂದೂ ಹೇಳಿದ್ದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

ರೆಂಟಲ್ ಪ್ರಾಪರ್ಟೀಸ್

Accommodation Available

House

2 BHK ಲಿಫ್ಟ್ ಹೊಂದಿರುವ ಮನೆ ಕೆಂಗೇರಿ ಮೆಟ್ರೋ ಹತ್ತಿರ Sunil - 9448479766

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Chitradurga

HIRIYUR 6000 sqft of commercial property in prime location of Hiriyur Main Road for immediate sale. Genuine buyers only. 8861246560

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಬೇಕಾಗಿದ್ದಾರೆ: WORK from Home. SSLC, 2nd PUC, Degree. 10,000 to 29,999. ಮೊದಲು ಬಂದವರಿಗೆ ಆದ್ಯತೆ. 8792745918

ಸಾರ್ವಜನಿಕ ಪ್ರಕಟಣೆ

ವಿಚಾರಣಾ ನೋಟಿಸ್

ಮಲ್ಲಪ್ಪ s/o ರಂಗಪ್ಪ # 135 ವೀರಾಪುರ ಹವೇಲಿ, ಬಾಗಲಕೋಟೆ, ಕರ್ನಾಟಕ-587103 ವಾಸಿಯಾದ ನೀವು, ಬೆಂಗಳೂರಿನ ಷ್ನೇಯ್ಡರ್ ಎಲೆಕ್ಟ್ರಿಕ್ # 12A ಅತ್ತಿಬೆಲೆ ಕೈಗಾರಿಕಾ ಪ್ರದೇಶ, ಹೊಸೂರು ಮುಖ್ಯ ರಸ್ತೆ, ನೇರಲೂರು ಅಂಚೆ, ಬೆಂಗಳೂರು, ಕರ್ನಾಟಕ-562107, ಕಾರ್ಖಾನೆಯ ಕಾರ್ಮಿಕರಾಗಿದ್ದು, ನಿಮ್ಮ ಮೇಲೆ ದುರ್ನಡತೆಯ ಆರೋಪಕ್ಕಾಗಿ ವಿಚಾರಣೆ ಪ್ರಾರಂಭಿಸಲಾಗಿದೆ. ನೀವು ಕೂಡಲೇ ಕಾರ್ಖಾನೆಗೆ ಬಂದು ವಿಚಾರಣೆಯಲ್ಲಿ ಭಾಗವಹಿಸತಕ್ಕದ್ದು.

ಆಡಳಿತ ವರ್ಗ
ಷ್ನೇಯ್ಡರ್ ಎಲೆಕ್ಟ್ರಿಕ್, ಬೆಂಗಳೂರು.

ಪ್ರವಾಸ

Travel

ಭಾರತಪರಂಪರ ದರ್ಶನ: 9.6.2025 7 ದಿನಗಳು ಅಯೋಧ್ಯ ಕಾಶಿಯಾತ್ರೆ ವಿಮಾನದಲ್ಲಿ. 18.6.2025 ಚಾರ್`ಧಾಮ್ 13 ದಿನಗಳು ವಿಮಾನದಲ್ಲಿ. ಪ್ರಕಾಶ್`ಹೆಬ್ಬಾರ್: 9448792891.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
*Conditions apply
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9886213331 | 080-45557163/164

ಪ್ರಜಾವಾಣಿ
ಪ್ರಜಾ ಪ್ಲಸ್
| ಮನರಂಜನೆ
| ಜಾಹೀರಾತು ಪ್ರೋತ್ಸಾಹ
| ಉದ್ಯಮ ಅಭಿವೃದ್ಧಿ



‘ದೃಶ್ಯಂ–3’ ನಲ್ಲಿ ಅಜಯ್ ದೇವಗನ್

ಜೀತು ಜೋಸೆಫ್ ನಿರ್ದೇಶಿಸಿ, ಮೋಹನ್ ಲಾಲ್ ನಟಿಸಿರುವ ‘ದೃಶ್ಯಂ–3’ ಈ ವರ್ಷ ತೆರೆಗೆ ಬರಲಿದೆ. ಮಲಯಾಳ ಮತ್ತು ಹಿಂದಿ ಭಾಷೆಯಲ್ಲಿ ಚಿತ್ರ ಸಿದ್ಧಗೊಳ್ಳುತ್ತಿದ್ದು, ಹಿಂದಿಯಲ್ಲಿ ಅಜಯ್ ದೇವಗನ್ ನಾಯಕನಾಗಿ ಕಾಣಿಸಿಕೊಂಡಿರುವುದು ಖಚಿತವಾಗಿದೆ.

ಜೂ.6ಕ್ಕೆ ಕಾಲೇಜ್ ಕಲಾವಿದ

ಬಹುತೇಕ ಹೊಸಬರಿಂದಲೇ ಕೂಡಿರುವ ‘ಕಾಲೇಜ್ ಕಲಾವಿದ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕಾಲೇಜು ಆವರಣದಲ್ಲಿ ನಡೆಯುವ ಪ್ರೇಮಕಥೆ ಇದಾಗಿದ್ದು, ಚಿತ್ರಕ್ಕೆ ಸಂಜಯ್ ಮಳವಳ್ಳಿ ಆ್ಯಕ್ಷನ್ ಕಟ್ ಹೇಳಿದ್ದಾರೆ. ಖಳನಟ ಕೋಟೆ ಪ್ರಭಾಕರ್, ನಟ ನಿರ್ದೇಶಕ ನಾಗೇಂದ್ರ ಅರಸ್, ಪ್ರಥಮ್ ಮೊದಲಾದವರು ಟ್ರೇಲರ್ ಬಿಡುಗಡೆಗೊಳಿಸಿ ಹೊಸತಂಡಕ್ಕೆ ಶುಭ ಹಾರೈಸಿದರು.

‘ಹದಿನೈದಕ್ಕೂ ಹೆಚ್ಚು ಚಿತ್ರಗಳಲ್ಲಿ ಸಹಾಯಕ, ಸಹ ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ. ಬರಹಗಾರ ಹಾಗೂ ಚಿತ್ರ ಸಾಹಿತಿ ಕೂಡ. ಪೂರ್ಣ ಪ್ರಮಾಣದ ನಿರ್ದೇಶಕನಾಗಿ ಮೊದಲ ಚಿತ್ರ. ನನ್ನ ಗುರುಗಳಾದ ಮಂಡ್ಯ ರಮೇಶ್ ಮಾರ್ಗದರ್ಶನ ನನ್ನನ್ನು ಈ ಹಂತಕ್ಕೆ ತಂದು ನಿಲ್ಲಿಸಿದೆ. ಚಿತ್ರ ಕುರಿತು ಹೇಳುವುದಾದರೆ, ಇದೊಂದು ಪ್ರೇಮಮಯ ಪಯಣ. ಮ್ಯೂಸಿಕಲ್ ಜರ್ನಿ ಹೊಂದಿರುವ ಈ ಸಿನಿಮಾದಲ್ಲಿ ಡ್ರಗ್ಸ್ ವಿಚಾರವೂ ಇದೆ. ಕಾಲೇಜು ವಿದ್ಯಾರ್ಥಿಗಳ ಸ್ನೇಹ, ಪ್ರೀತಿ, ಸಂಬಂಧ, ಹಾಸ್ಯ, ಫೈಟ್ ಸೇರಿದಂತೆ ಮನರಂಜನೆಯ ಎಲ್ಲ ಅಂಶಗಳನ್ನು ಒಳಗೊಂಡಿವೆ. ಬೆಂಗಳೂರು, ಚಿಕ್ಕಮಗಳೂರು ಸೇರಿದಂತೆ ಹಲವು ಸುಂದರ ತಾಣಗಳಲ್ಲಿ ಚಿತ್ರೀಕರಿಸಲಾಗಿದೆ. ಜೂನ್ 6ರಂದು ನಮ್ಮ ಚಿತ್ರ ಬಿಡುಗಡೆ ಆಗಲಿದೆ’ ಎಂದರು ನಿರ್ದೇಶಕರು.

ಚೈತ್ರಾ

ಗಜಾನನ ಫಿಲ್ಮ್ಸ್ ಬ್ಯಾನರ್‌ನಲ್ಲಿ ತರುಣ್ ಶರ್ಮಾ ನಿರ್ಮಾಣ ಮಾಡಿದ್ದಾರೆ. ಸಾಕಷ್ಟು ಧಾರಾವಾಹಿಗಳಲ್ಲಿ ನಟಿಸಿರುವ ಆರವ್ ಸೂರ್ಯ ನಾಯಕರಾಗಿ ಕಾಣಿಸಿಕೊಂಡಿದ್ದಾರೆ. ಅವರಿಗೆ ಚೈತ್ರ ಲೋಕನಾಥ್ ಜೋಡಿಯಾಗಿದ್ದಾರೆ. ಹುಲಿ ಕಾರ್ತಿಕ್, ಹರಿಣಿ ಶ್ರೀಕಾಂತ್, ರಮೇಶ್ ಭಟ್ ಮುಂತಾದವರು ಚಿತ್ರದಲ್ಲಿದ್ದಾರೆ.

‘ನಾನು 2016ರಿಂದ ಸಿನಿಮಾಗಳಲ್ಲಿ, ಧಾರಾವಾಹಿಗಳಲ್ಲಿ ನಟಿಸುತ್ತಿರುವೆ. ಇದೊಂದು ಸುಂದರ ಪ್ರೇಮಕಥೆಯ ಚಿತ್ರ. ಚಿತ್ರದಲ್ಲಿ ನಾನೊಬ್ಬ ಸ್ಕೆಚ್ ಆರ್ಟಿಸ್ಟ್, ಕಾಲೇಜು ವಿದ್ಯಾರ್ಥಿಯಾಗಿ ನನ್ನದೊಂದು ಗೆಳೆಯರ ಗುಂಪಿರುತ್ತದೆ. ಮುದ್ದಾದ ಹುಡುಗಿ ನನ್ನ ಬದುಕಿಗೆ ಪ್ರವೇಶವಾದಾಗ ಆಗುವ ಏರಿಳಿತಗಳೇ ಚಿತ್ರಕಥೆ’ ಎಂದರು ಆರವ್ ಸೂರ್ಯ.

ಸುರಾಜ್ ಜೋಯಿಸ್ ಸಂಗೀತ, ಆನಂದ್ ಸುಂದರೇಶ ಛಾಯಾಚಿತ್ರಗ್ರಹಣ, ಮಹೇಶ್ ಗಂಗಾವತಿ ಸಂಕಲನವಿದೆ.

‘ವಿಡಿಯೋ’ದೊಂದಿಗೆ ಬಂದ ದೀಕ್ಷಿತ್ ಶೆಟ್ಟಿ

ದೀಕ್ಷಿತ್ ಶೆಟ್ಟಿ ಅಭಿನಯದ ‘ಬ್ಲಿಂಕ್’ ಚಿತ್ರ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಪಡೆದಿತ್ತು. ಅದೇ ತಂಡದೊಂದಿಗೆ ದೀಕ್ಷಿತ್ ಮತ್ತೊಂದು ಚಿತ್ರ ಮುಗಿಸಿದ್ದಾರೆ. ಚಿತ್ರಕ್ಕೆ ‘ವಿಡಿಯೋ’ ಎಂಬ ಶೀರ್ಷಿಕೆ ಇಡಲಾಗಿದ್ದು, ಶ್ರೀನಿಧಿ ಬೆಂಗಳೂರು ಆ್ಯಕ್ಷನ್ ಕಟ್ ಹೇಳಿದ್ದಾರೆ. ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

‘ಟೀಸರ್ ಮೂಲಕ ಪ್ರೇಕ್ಷಕರ ತಲೆಯಲ್ಲಿ ಹುಳ ಬಿಟ್ಟಿದ್ದೇವೆ ಅಂದುಕೊಳ್ಳುತ್ತೇನೆ. ಈ ಸಿನಿಮಾ ಮಾಡಲು ಎರಡು ಕಾರಣಗಳಿವೆ. ದುಡ್ಡು ಮಾಡುವ ಉದ್ದೇಶದಿಂದ ಚಿತ್ರ ಮಾಡಿದ್ದಲ್ಲ. ಈಗ ಪರಿಸ್ಥಿತಿ ಹೇಗಿದೆ ಎಂದು ಗೊತ್ತಿದೆ. ಸಿನಿಮಾದಿಂದ ದುಡ್ಡು ಮಾಡುತ್ತೇವೆ ಎಂಬುದು ಕನಸು. ನಾನು ಬೇರೆ ಬೇರೆ ಭಾಷೆಗಳಲ್ಲಿ ಸಿನಿಮಾ ಮಾಡುತ್ತಿರುವೆ. ಅಲ್ಲಿ ಮೊದಲನೆ ಸಿನಿಮಾ ಚೆನ್ನಾಗಿ ಮಾಡಿದ ನಿರ್ದೇಶಕರಿಗೆ ಎರಡನೆ ಸಿನಿಮಾದಲ್ಲಿ ದೊಡ್ಡದಾಗಿ ಅವಕಾಶ ಸಿಗುತ್ತದೆ. ಆದರೆ ಕನ್ನಡದಲ್ಲಿ ಈ ರೀತಿ ಅವಕಾಶವಿಲ್ಲ. ಹಾಗಾಗಿ ‘ಬ್ಲಿಂಕ್’ ತಂಡದ ಜತೆ ಸಾಥ್ ಕೊಟ್ಟೆ. ಶ್ರೀನಿಧಿ ಬಳಿ ಉತ್ತಮ ಕಥೆಯಿತ್ತು. ನಾನೇ ಬಂಡವಾಳ ಹೂಡಲು ಮುಂದಾದೆ. ಇದೊಂದು ಪ್ರಯೋಗಾತ್ಮಕ ಸಿನಿಮಾ. ಗೆದ್ದರೆ ಒಂದಷ್ಟು ಕನಸು ಕಟ್ಟಿಕೊಂಡವರಿಗೆ ದಾರಿಯಾಗುತ್ತದೆ. ಇಂಡಸ್ಟ್ರಿ ನನಗೆ ಇಷ್ಟೆಲ್ಲ ಕೊಟ್ಟಿರುವಾಗ ಅದಕ್ಕೆ ಪ್ರತಿಯಾಗಿ ನಾನು ಕೊಡಬೇಕೆಂದು ಈ ಸಿನಿಮಾ ಮಾಡಿದ್ದು. ಮುಂದೆ ಇನ್ನೊಂದು ಸಿನಿಮಾ ನಿರ್ಮಾಣ ಮಾಡುತ್ತೇನೋ ಇಲ್ಲವೋ ಗೊತ್ತಿಲ್ಲ’ ಎಂದು ದೀಕ್ಷಿತ್ ತಿಳಿಸಿದರು.

‘ಎರಡನೇ ಕಾರಣ ‘ಬ್ಲಿಂಕ್’ ಚಿತ್ರದಲ್ಲಿ ಆದ ಕೆಲವು ಕಹಿ ಅನುಭವಗಳು ಈ ಸಿನಿಮಾ ಮಾಡುವಂತೆ ಪ್ರೇರೇಪಿಸಿತು. ನಮಗೆ ಯಾರೂ ಕೈಹಿಡಿದು ಎತ್ತಲು ಇಲ್ಲದಾಗ ನಮ್ಮನ್ನು ನಾವೇ ಕೈ ಹಿಡಿದು ಎತ್ತಿಕೊಳ್ಳಬೇಕು. ಹೊಸಬರೆಲ್ಲ ಒಟ್ಟಾಗಿ ಆ ಕೆಲಸ ಮಾಡೋಣ’ ಎಂದರು.

ಭರತ್, ಜೀವನ್ ಶಿವಕುಮಾರ್, ತೇಜೇಶ್, ಪ್ರಿಯಾ ಜೆ.ಆಚಾರ್, ನಲ್ಮೆ ನಾಚಿಯಾರ್ ಪ್ರಮುಖ ಪಾತ್ರದಲ್ಲಿದ್ದಾರೆ. ಪ್ರಸನ್ನ ಕುಮಾರ್ ಸಂಗೀತ, ಅವಿನಾಶ್ ಶಾಸ್ತ್ರಿ ಛಾಯಾಚಿತ್ರಗ್ರಹಣವಿದೆ.



ದೀಕ್ಷಿತ್ ಶೆಟ್ಟಿ

‘ನಾಯಕನಿಗೆ ಕೇವಲ ಮೂರ್ನಾಲ್ಕು ನಿಮಿಷ ಸಂಭಾಷಣೆ’

ಅಭಿಲಾಷ್ ಪಿ.ಎಸ್.

ನಾಯಕನಿಗೆ ಪ್ರತಿ ದೃಶ್ಯಗಳಲ್ಲೊಂದು ಪಂಚಿಂಗ್ ಡೈಲಾಗ್ಸ್ ಸಿನಿಮಾದ ಸಿದ್ಧಸೂತ್ರಗಳಲ್ಲೊಂದು. ಆದರೆ ಜೂನ್ 6ರಂದು ತೆರೆಕಾಣಲಿರುವ ‘ಮಾದೇವ’ ಸಿನಿಮಾ ಇದಕ್ಕೆ ತದ್ವಿರುದ್ಧವಾಗಿದೆ. ಈ ಸಿನಿಮಾದಲ್ಲಿ ‘ಮಾದೇವ’ನೆಂಬ ವ್ಯಕ್ತಿಯ ಪಾತ್ರ ನಿಭಾಯಿಸುತ್ತಿರುವ ನಟ ವಿನೋದ್ ಪ್ರಭಾಕರ್ ಅವರಿಗೆ ಇಡೀ ಸಿನಿಮಾದಲ್ಲಿರುವ ಒಟ್ಟು ಸಂಭಾಷಣೆಯ ಅವಧಿ ಕೇವಲ ಮೂರ್ನಾಲ್ಕು ನಿಮಿಷವಷ್ಟೇ! ಹೌದು. ಒಂದು ಭಿನ್ನವಾದ ಪಾತ್ರದೊಂದಿಗೆ ಪ್ರೇಕ್ಷಕರೆದುರಿಗೆ ಬರಲಿರುವ ವಿನೋದ್, ಸಿನಿಮಾ ಹಾಗೂ ತಮ್ಮ ಪಾತ್ರದ ಬಗ್ಗೆ ಮಾಹಿತಿ ಹಂಚಿಕೊಂಡರು.

‘ನನ್ನ ಈ ‘ಮಾದೇವ’ ಸಿನಿಮಾ ತಾಂತ್ರಿಕ ಕಾರಣಗಳಿಂದ ವಿಳಂಬವಾಯಿತು. ಮೇ 30ಕ್ಕೆ ಚಿತ್ರ ಬಿಡುಗಡೆಗೆ ನಿರ್ಧರಿಸಿ, ಪ್ರಚಾರಕ್ಕೆ ಸಿದ್ಧರಾಗುತ್ತಿರುವ ಸಂದರ್ಭದಲ್ಲಿ ಪಹಲ್ಗಾಮ್ ದಾಳಿ ನಡೆಯಿತು. ದೇಶಕ್ಕಿಂತ ಮಿಗಿಲು ಬೇರೇನಿಲ್ಲ ಎಂದುಕೊಂಡು ಮುಂದೂಡಿದೆವು. ಇದಕ್ಕೆ ನಿರ್ಮಾಪಕರೂ ಬೆನ್ನೆಲುಬಾಗಿ ನಿಂತರು’ ಎಂದು ಮಾತು ಆರಂಭಿಸಿದರು ವಿನೋದ್.

‘ನಾನು ಸಿನಿಮಾದೊಳಗೆ ನಾಯಕನಾಗಿ ಎಂದೂ ಕೆಲಸ ಮಾಡಿಲ್ಲ. ಒಬ್ಬ ತಂತ್ರಜ್ಞನಾಗಿ ಎಲ್ಲಾ ವಿಭಾಗಗಳಲ್ಲೂ ಕೆಲಸ ಮಾಡಿದ್ದೇನೆ. ಇದು ರಕ್ತದಲ್ಲೇ ಬಂದಿದೆ. ‘ಇದು ನಾನು ಮಾಡಿದ ಕಥೆ, ಇದರಲ್ಲಿ ಯಾರ ಹಸ್ತಕ್ಷೇಪವೂ ಇರಬಾರದು’ ಎನ್ನುವ ಮನಃಸ್ಥಿತಿ ಎಲ್ಲಾ ನಿರ್ದೇಶಕರಿಗೂ ಇರುತ್ತದೆ. ಆದರೆ ನಮ್ಮ ಈ ಸಿನಿಮಾದ ನಿರ್ದೇಶಕರಾದ ನವೀನ್ ರೆಡ್ಡಿಯವರು ನಮ್ಮೆಲ್ಲರ ಸಲಹೆಗಳನ್ನು ಪಡೆದು ಬದಲಾವಣೆಗಳನ್ನು ಮಾಡಿಕೊಳ್ಳುತ್ತಿದ್ದರು. ನನ್ನ ಸಿನಿಪಯಣದಲ್ಲಿ ಬಹಳ ಮುಖ್ಯವಾದ ಸಿನಿಮಾ ಈ ‘ಮಾದೇವ’. ಒಬ್ಬ ನಟನಾಗಿ ಪರಿವರ್ತನೆ ಆಗುವ ಅವಕಾಶವನ್ನು ಈ ಸಿನಿಮಾ ನೀಡಿದೆ. ನನಗೆ ಆ್ಯಕ್ಷನ್‌ನಲ್ಲಿ ವಹಿವಾಟು ಇದೆ ಎಂದು ಗೊತ್ತಿತ್ತು. ಸತತವಾಗಿ ಆ್ಯಕ್ಷನ್ ಸಿನಿಮಾಗಳನ್ನು ಮಾಡಿದೆ. ಫೈಟ್‌ಗಾಗಿಯೇ ದೃಶ್ಯಗಳನ್ನು ಬರೆಯುತ್ತಿದ್ದರು. ಇದರಿಂದಾಗಿ ಕಥೆಯ ಹಾದಿ ತಪ್ಪುತ್ತಿತ್ತು. ನಟನೆಗೆ ಅವಕಾಶ ಸಿಗುತ್ತಿಲ್ಲವಲ್ಲ ಎಂಬ ಕೊರಗು ಇತ್ತು. ಅದು ಈ ಸಿನಿಮಾದಿಂದ ನೀಗಿದೆ’ ಎಂದರು.

‘ಜಿದ್ದು ಸಿನಿಮಾದ ಪಾತ್ರ ಸ್ಫೂರ್ತಿ’

‘ಕೋವಿಡ್ ಸಂದರ್ಭದಲ್ಲಿ ನಿರ್ದೇಶಕರು ನನಗೆ ಈ ಸಿನಿಮಾದ ಕಥೆ ಹೇಳಿದ್ದರು. ನನಗು ಮೊದಲೇ ಒಂದಿಷ್ಟು ಹೀರೊಗಳ ಬಳಿಗೆ ಅವರು ಹೋಗಿದ್ದರು. ಜೈಲುಗಳಲ್ಲಿ ಅಪರಾಧಿಗಳಿಗೆ ನೇಣುಹಾಕುವ ವ್ಯಕ್ತಿಯ(ಹ್ಯಾಂಗ್‌ಮ್ಯಾನ್) ಪಾತ್ರವೇ ಎಂದು ಹಲವರು ತಿರಸ್ಕರಿಸಿದ್ದರು. ನಾನು ಮಾಡಿದ ಸಂಶೋಧನೆಯ ಪ್ರಕಾರ ನಾಯಕನೊಬ್ಬ ಇಂತಹ ಪಾತ್ರವನ್ನು ನಿಭಾಯಿಸಿರುವುದು ಕಾಣಿಸಿಲ್ಲ. ಈ ಪಾತ್ರ ಭಿನ್ನವಾಗಿದೆ ಎಂದು ನನಗೆ ಅನಿಸಿತು. 1984ರಲ್ಲಿ ತೆರೆಕಂಡ ನನ್ನ ತಂದೆಯವರ ಸಿನಿಮಾ ‘ಜಿದ್ದು’ವಿನಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿ ಅನ್ಯಾಯವನ್ನು ತಡೆಯಲಾರದೆ ಮೃಗವಾಗಿ ಬದಲಾಗುತ್ತಾನೆ. ಈ ಘಟನೆ ನನಗೆ ಸ್ಫೂರ್ತಿಯಾಗಿತ್ತು. ಇದನ್ನು ಎಲ್ಲಿಯಾದರೂ ಬಳಸಿಕೊಳ್ಳಬೇಕು ಎನ್ನುವ ಆಸೆ ಇತ್ತು. ‘ಮಾದೇವ’ ಸಿನಿಮಾದಲ್ಲಿ ನನ್ನ ಪಾತ್ರವೂ ಇದೇ ರೀತಿಯಿದೆ. ಮೃಗವಾಗಿದ್ದ ವ್ಯಕ್ತಿ ಮನುಷ್ಯನಾಗಿ ಬದಲಾಗಿ ಬಳಿಕ ರಾಕ್ಷಸನಾಗುವ ಹಂತಗಳಿವೆ. ‘ಮಾದೇವ’ನ ಬಾಲ್ಯದಲ್ಲಿ ನಡೆದ ಘಟನೆಯೊಂದು ಆತನಿಗೆ ಆಘಾತವನ್ನು ಉಂಟು ಮಾಡಿರುತ್ತದೆ. ಇದರಿಂದ ಆತ ಮಾತು, ಭಾವನೆಗಳನ್ನು ಮರೆತುಬಿಟ್ಟಿರುತ್ತಾನೆ. ಇಡೀ ಸಿನಿಮಾದಲ್ಲಿ ನನಗೆ ಕೇವಲ ಮೂರ್ನಾಲ್ಕು ನಿಮಿಷದ ಸಂಭಾಷಣೆಯಿದೆ. ಈ ಪಾತ್ರ ಮಾತನಾಡಿದರೆ ಗತ್ತು ಕಳೆದುಕೊಳ್ಳುತ್ತದೆ. ಕಣ್ಣಿನಿಂದಲೇ ಮಾತನಾಡುವ ಪಾತ್ರವಿದು’ ಎಂದು ‘ಮಾದೇವ’ನನ್ನು ವಿವರಿಸಿ ಮಾತಿಗೆ ವಿರಾಮವಿತ್ತರು ವಿನೋದ್.

> “ರಾಬರ್ಟ್ ಸಿನಿಮಾದ ‘ರಾಘವ–ತನು’ ಆನ್‌ಸ್ಕ್ರೀನ್ ಜೋಡಿಯನ್ನು ಜನತೆ ಒಪ್ಪಿಕೊಂಡಿತ್ತು. ಬಳಿಕ ಹಲವು ಸ್ಕ್ರಿಪ್ಟ್‌ಗಳು ನಮಗಿಬ್ಬರಿಗೂ ಬಂದರೂ ಯಾವುದೂ ಒಪ್ಪಿಗೆಯಾಗಿರಲಿಲ್ಲ. ‘ಮಾದೇವ’ ನಾವಿಬ್ಬರೂ ಇಷ್ಟಪಟ್ಟು ಒಪ್ಪಿದ ಕಥೆ.”
>
> **ವಿನೋದ್ ಪ್ರಭಾಕರ್,** ನಟ

ಸಂಪೂರ್ಣ ಪಾರದರ್ಶಕವಾಗಿರುವುದನ್ನು ಖಾತ್ರಿಪಡಿಸಲು ‘ಸುಪ್ರೀಂ’ ಸೂಚನೆ

‘ನೀಟ್–ಪಿಜಿ’: ಒಂದೇ ಪಾಳಿಯಲ್ಲಿ ನಡೆಸಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶಕ್ಕಾಗಿ ನಡೆಯುವ ಪ್ರಸಕ್ತ ಸಾಲಿನ ಪರೀಕ್ಷೆ ‘ನೀಟ್–ಪಿಜಿ’ಯನ್ನು ಜೂನ್ 15ರಂದು ಒಂದೇ ಪಾಳಿಯಲ್ಲಿ ನಡೆಸುವಂತೆ ಸುಪ್ರೀಂ ಕೋರ್ಟ್ ಶುಕ್ರವಾರ ಆದೇಶ ನೀಡಿದೆ.

‘ಪರೀಕ್ಷೆಯನ್ನು ಎರಡು ಪಾಳಿಯಲ್ಲಿ ನಡೆಸುವುದು ಸ್ವೇಚ್ಛೆಗೆ ಆಸ್ಪದ ನೀಡುತ್ತದೆ. ಹೀಗಾಗಿ, ಅದನ್ನು ಒಂದೇ ಪಾಳಿಯಲ್ಲಿ ನಡೆಸಬೇಕು’ ಎಂದು ನ್ಯಾಯಮೂರ್ತಿ ವಿಕ್ರಮನಾಥ್ ನೇತೃತ್ವದ ತ್ರಿಸದಸ್ಯ ಪೀಠ ನಿರ್ದೇಶಿಸಿದೆ.

‘ಪರೀಕ್ಷೆಯನ್ನು ಒಂದೇ ಪಾಳಿಯಲ್ಲಿ ನಡೆಸಬೇಕು ಹಾಗೂ ಅದು ಸಂಪೂರ್ಣ

ಪಾರದರ್ಶಕವಾಗಿರುವುದನ್ನು ಖಾತ್ರಿಪಡಿಸಬೇಕು’ ಎಂದು ರಾಷ್ಟ್ರೀಯ ವೈದ್ಯಕೀಯ ವಿಜ್ಞಾನಗಳ ಪರೀಕ್ಷೆ ಮಂಡಳಿಗೆ (ಎನ್‌ಬಿಇಎಂಎಸ್) ಪೀಠವು ಸೂಚಿಸಿದೆ. ನ್ಯಾಯಮೂರ್ತಿಗಳಾದ ಸಂಜಯಕುಮಾರ್ ಹಾಗೂ ಎನ್.ವಿ. ಅಂಜಾರಿಯಾ ಈ ಪೀಠದಲ್ಲಿದ್ದಾರೆ.

‘ನೀಟ್–ಪಿಜಿ 2025’ ಅನ್ನು ಎರಡು ಪಾಳಿಗಳಲ್ಲಿ ಸಂಘಟಿಸುವ ಮಂಡಳಿಯ ನಿರ್ಧಾರ ಪ್ರಶ್ನಿಸಿ ಅದಿತಿ ಹಾಗೂ ಇತರರು ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸಿ, ಪೀಠ ಈ ಆದೇಶ ನೀಡಿದೆ.

‘ಯಾವುದೇ ಎರಡು ಪ್ರಶ್ನೆಪತ್ರಿಕೆಗಳು ಒಂದೇ ಮಟ್ಟದಲ್ಲಿ ಕಠಿಣವಾಗಿ ಇರುವುದಿಲ್ಲ ಅಥವಾ ಸರಳವೂ ಇರುವುದಿಲ್ಲ’ ಎಂದು ಪೀಠ ಹೇಳಿದೆ.

‘ಕಳೆದ ವರ್ಷ ಪರೀಕ್ಷೆಯನ್ನು ಎರಡು ಪಾಳಿಯಲ್ಲಿ ನಡೆಸಲಾಗಿತ್ತು ಹಾಗೂ ಅಂಕಗಳ ಸಾಮಾನ್ಯೀಕರಣ ಪ್ರಕ್ರಿಯೆಗೂ ಅವಕಾಶ ನೀಡಲಾಗಿತ್ತು. ಅಸಾಧಾರಣ ಪ್ರಕರಣಗಳಲ್ಲಿ ಮಾತ್ರ ಅಂಕಗಳ ಸಾಮಾನ್ಯೀಕರಣ ಪ್ರಕ್ರಿಯೆ ಅನುಸರಿಸಬಹುದೇ ಹೊರತು ವರ್ಷ–ವರ್ಷವೂ ಇದು ಸಾಧ್ಯವಿಲ್ಲ. ಪರೀಕ್ಷೆಯನ್ನು ಒಂದೇ ಪಾಳಿಯಲ್ಲಿ ನಡೆಸಲು ಮಂಡಳಿ ಪರಿಗಣಿಸಬೇಕಿತ್ತು’ ಎಂದು ಪೀಠ ಹೇಳಿದೆ. ಅರ್ಜಿದಾರರ ಪರ ವಕೀಲರಾದ ಸುಕೃತಿ ಭಟ್ನಾಗರ್, ತನ್ವಿ ದುಬೆ ಹಾಜರಿದ್ದರು.

‘ಸುಪ್ರೀಂ’ ಆದೇಶದ ಪ್ರಮುಖ ಅಂಶಗಳು

- 2,42,678 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದು, ಪ್ರವೇಶ ಪರೀಕ್ಷೆಯು ದೇಶದಾದ್ಯಂತ ನಡೆಯಲಿದೆಯೇ ಹೊರತು, ಒಂದೇ ಪರೀಕ್ಷಾ ಕೇಂದ್ರದಲ್ಲಿ ಅಲ್ಲ
- ತಂತ್ರಜ್ಞಾನ ಕ್ಷೇತ್ರದಲ್ಲಿನ ಪ್ರಗತಿಯನ್ನು ಗಣನೆಗೆ ತೆಗೆದುಕೊಂಡಲ್ಲಿ ಅಗತ್ಯಕ್ಕೆ ತಕ್ಕಷ್ಟು ಪರೀಕ್ಷಾ ಕೇಂದ್ರಗಳನ್ನು ಗುರುತಿಸಲು ಮಂಡಳಿಗೆ ಸಾಧ್ಯವಾಗಿಲ್ಲ ಎಂಬುದನ್ನು ಒಪ್ಪಲು ಸಾಧ್ಯವಿಲ್ಲ
- ‘ನೀಟ್–ಪಿಜಿ’ ಜೂನ್ 15ರಂದು ನಿಗದಿಯಾಗಿದೆ. ಒಂದೇ ಪಾಳಿಯಲ್ಲಿ ನಡೆಸುವುದಕ್ಕೆ ಅಗತ್ಯವಿರುವ ಹೆಚ್ಚುವರಿ ಪರೀಕ್ಷಾ ಕೇಂದ್ರಗಳನ್ನು ಗುರುತಿಸಿ, ಸಿದ್ಧತೆ ಮಾಡಿಕೊಳ್ಳಲು ಎರಡು ವಾರಗಳಿಗೂ ಹೆಚ್ಚು ಸಮಯ ಇದೆ
- ಜೂನ್ 15ರ ಒಳಗಾಗಿ ಅಗತ್ಯಕ್ಕೆ ತಕ್ಕಷ್ಟು ಪರೀಕ್ಷಾ ಕೇಂದ್ರಗಳನ್ನು ಗುರುತಿಸಿ, ಸಿದ್ಧತೆ ಮಾಡಿಕೊಳ್ಳಲು ಸಾಧ್ಯವಾಗದಿದ್ದಲ್ಲಿ, ಸಮಯ ವಿಸ್ತರಣೆ ಕೋರಿ ಮಂಡಳಿ ಅರ್ಜಿ ಸಲ್ಲಿಸಿದರೆ ಪರಿಗಣಿಸಲಾಗುವುದು

ಯೂಟ್ಯೂಬರ್ ಶುಕ್ಲಾ ವಿರುದ್ಧ ವಿಚಾರಣೆ

‘ಸುಪ್ರೀಂ’ ನ್ಯಾಯಮೂರ್ತಿಗಳ ಅವಹೇಳನ ಆರೋಪ

ನವದೆಹಲಿ(ಪಿಟಿಐ): ಸುಪ್ರೀಂ ಕೋರ್ಟ್‌ನ ಕೆಲ ನ್ಯಾಯಮೂರ್ತಿಗಳ ಕುರಿತು ‘ಮಾನಹಾನಿಕರ’ ಹಾಗೂ ‘ಅಪಹಾಸ್ಯ’ದ ಹೇಳಿಕೆ ನೀಡಿ, ಅದರ ವಿಡಿಯೊ ಅಪ್‌ಲೋಡ್ ಮಾಡಿದ ಆರೋಪ ಎದುರಿಸುತ್ತಿರುವ ಚಂಡೀಗಢ ಮೂಲದ ಪತ್ರಕರ್ತ ಹಾಗೂ ಯೂಟ್ಯೂಬರ್ ಅಜಯ್ ಶುಕ್ಲಾ ವಿರುದ್ಧದ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಆರಂಭಿಸಿತು.

‘ಯೂಟ್ಯೂಬ್ ಚಾನೆಲ್‌ನಿಂದ, ಅವಹೇಳನಕಾರಿ ವಿಡಿಯೊಗಳನ್ನು ಕೂಡಲೇ ತೆಗೆದು ಹಾಕಬೇಕು ಹಾಗೂ ಈ ವಿಡಿಯೊಗಳು ಅಥವಾ ಇಂಥದೇ ವಿಷಯವಸ್ತುವಿರುವ ವಿಡಿಯೊಗಳನ್ನು ಚಾನೆಲ್‌ನಲ್ಲಿ ಪ್ರಸಾರ ಮಾಡಬಾರದು’ ಎಂದು ಸಿಜೆಐ ಬಿ.ಆರ್.ಗವಾಯಿ ನೇತೃತ್ವದ ತ್ರಿಸದಸ್ಯ ಪೀಠ ಅದೇಶಿಸಿತು.

ಅಲ್ಲದೇ, ವರಪ್ರದ ಮೀಡಿಯಾದ ಪ್ರಧಾನ ಸಂಪಾದಕರೂ ಆಗಿರುವ ಶುಕ್ಲಾ ಅವರಿಗೆ ನೋಟಿಸ್ ಜಾರಿ ಮಾಡಿತು.

ನ್ಯಾಯಮೂರ್ತಿಗಳಾದ ಆಗಸ್ಟೀನ್ ಜಾರ್ಜ್ ಮಸೀಹ್ ಹಾಗೂ ಎ.ಎಸ್. ಚಂದೂರ್ಕರ್ ಈ ಪೀಠದಲ್ಲಿ ಇದ್ದಾರೆ. ಪೀಠವು, ಶುಕ್ಲಾ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

ಇತ್ತೀಚೆಗೆ ನಿವೃತ್ತರಾದ ನ್ಯಾಯಮೂರ್ತಿ ಬೇಲಾ ಎಂ.ತ್ರಿವೇದಿ ಕುರಿತು ಮಾನಹಾನಿಕರ ಹೇಳಿಕೆಗಳಿರುವ ವಿಡಿಯೊವನ್ನು ಶುಕ್ಲಾ ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ಪೋಸ್ಟ್ ಮಾಡಿದ್ದರು ಎನ್ನಲಾಗಿದೆ.

ದಾಳಿ: ₹ 2 ಕೋಟಿ ನಗದು ವಶ

ಭುವನೇಶ್ವರ (ಪಿಟಿಐ): ಒಡಿಶಾದ ಗ್ರಾಮೀಣಾಭಿವೃದ್ಧಿ ವಿಭಾಗದ ಮುಖ್ಯ ಎಂಜಿನಿಯರೊಬ್ಬರ ಮನೆ ಮತ್ತು ನಿವಾಸದ ಮೇಲೆ ದಾಳಿ ನಡೆಸಿರುವ ಪೊಲೀಸ್ ಇಲಾಖೆ ಭ್ರಷ್ಟಾಚಾರ ನಿಗ್ರಹ ಪಡೆಯ ಅಧಿಕಾರಿಗಳು, ₹2 ಕೋಟಿ ನಗದು ವಶಕ್ಕೆ ಪಡೆದಿದ್ದಾರೆ.

ಆದಾಯ ಮೀರಿದ ಆಸ್ತಿ ಹೊಂದಿರುವ ಮಾಹಿತಿ ಆಧರಿಸಿ ಗುಪ್ತದಳ ಸಿಬ್ಬಂದಿ ಅಧಿಕಾರಿಯ ಮನೆ ಮತ್ತು ಕಚೇರಿಯ ಮೇಲೆ ಏಕಕಾಲದಲ್ಲಿ ದಾಳಿ ನಡೆಸಿದ್ದರು.

ಅಧಿಕಾರಿಗೆ ಸೇರಿದ ಭುವನೇಶ್ವರದ ಫ್ಲ್ಯಾಟ್‌ನಲ್ಲಿ ₹ 1 ಕೋಟಿ ನಗದು, ಅಂಗುಲ್ ಜಿಲ್ಲೆಯ ಸಾರಂಗಿಯ ನಿವಾಸದಲ್ಲಿ ₹1 ಕೋಟಿ ಪತ್ತೆಯಾಗಿದೆ ಎಂದು ಹೇಳಿಕೆ ತಿಳಿಸಿದೆ.

ದಾಳಿ ನಡೆಸಿದ ತಕ್ಷಣ ಬೈಕುಂಠ ನಾಥ್ ಸಾರಂಗಿ ಅವರು ಕಿಟಕಿಯಿಂದ ₹500ರ ನೋಟುಗಳ ಕಂತೆಯನ್ನು ಎಸೆದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುಪ್ರೀಂಕೋರ್ಟ್ ನೂತನ ನ್ಯಾಯಮೂರ್ತಿಗಳ ಪ್ರಮಾಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೂವರು ನ್ಯಾಯಮೂರ್ತಿಗಳಾದ ಎನ್.ವಿ.ಅಂಜಾರಿಯಾ, ವಿಜಯ್ ಬಿಷ್ಣೋಯಿ ಮತ್ತು ಎ.ಎಸ್. ಚಂದುರ್ಕರ್ ಅವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಿದರು.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಕೋರ್ಟ್ ಆವರಣದಲ್ಲಿ ಈ ಮೂವರು ನ್ಯಾಯ ಮೂರ್ತಿಗಳಿಗೆ ಪ್ರಮಾಣ ವಚನ ಬೋಧಿಸಿದರು.

ನ್ಯಾಯಮೂರ್ತಿ ಚಂದುರ್ಕರ್ ಅವರು ಹಿಂದಿಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಈ ಮೂವರ ನೇಮಕದ ನಂತರ ಸುಪ್ರೀಂ ಕೋರ್ಟ್‌ನಲ್ಲಿ ಒಟ್ಟು ನ್ಯಾಯಮೂರ್ತಿಗಳ ಸಂಖ್ಯೆ 34ಕ್ಕೆ ಏರಿಕೆಯಾಗಿದೆ. ಇವರ ಬಡ್ತಿಗೆ ಮೇ 26ರಂದು ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಶಿಫಾರಸು ಮಾಡಿತ್ತು. ಮೇ 29ರಂದು ಕೇಂದ್ರ ಸರ್ಕಾರ ನೇಮಕಾತಿ ಮಾಡಿ ಆದೇಶ ಹೊರಡಿಸಿತ್ತು.

ಈ ಮೊದಲು ಅಂಜಾರಿಯಾ ಅವರು ಗುಜರಾತ್ ಹೈಕೋರ್ಟ್ ನ್ಯಾಯಮೂರ್ತಿ ನಂತರ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿದ್ದರು. ಬಿಷ್ಣೋಯಿ ಅವರು ರಾಜಸ್ತಾನ ಹೈಕೋರ್ಟ್ ನ್ಯಾಯಮೂರ್ತಿ ನಂತರ ಗುವಾಹಟಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿದ್ದರು. ಚಂದುರ್ಕರ್ ಅವರು ಬಾಂಬೆ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದರು.

ಈ ತಿಂಗಳ ಆರಂಭದಲ್ಲಿ ಸಿಜೆಐ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ, ಎ.ಎಸ್. ಓಕಾ ಅವರು ನಿವೃತ್ತಿಯಾಗಿದ್ದರಿಂದ ಸುಪ್ರೀಂ ಕೋರ್ಟ್‌ನಲ್ಲಿ ಮೂವರು ನ್ಯಾಯಮೂರ್ತಿಗಳ ಹುದ್ದೆಗಳು ಖಾಲಿ ಇದ್ದವು.

ಮಹಿಳೆ ಕೊಲೆ: ಮೂವರಿಗೆ ಜೀವಾವಧಿ ಸಜೆ

ಲಖನೌ: ಮಹಿಳೆಯನ್ನು ಕೊಲೆ ಮಾಡಿ, ಕಾಲುವೆಗೆ ಶವ ಎಸೆದಿದ್ದ ಪ್ರಕರಣದಲ್ಲಿ ಮೂವರು ಅಪರಾಧಿಗಳಿಗೆ ಉತ್ತರಾಖಂಡದ ಕೋಟ್ದ್ವಾರ್ ಜಿಲ್ಲಾ ನ್ಯಾಯಾಲಯ ಜೀವಾವಧಿ ಸಜೆ ವಿಧಿಸಿದೆ.

32 ತಿಂಗಳ ಹಿಂದೆ ನಡೆದಿದ್ದ ಅಂಕಿತಾ ಭಂಡಾರಿ ಕೊಲೆ ಪ್ರಕರಣದಲ್ಲಿ ಕೋರ್ಟ್, ಅಪರಾಧಿಗಳಾದ ಪುಲಕಿತ ಆರ್ಯ, ಸೌರವ್ ಭಾಸ್ಕರ್ ಮತ್ತು ಅಂಕಿತ್ ಗುಪ್ತಾ ಅವರಿಗೆ ಈ ಸಜೆ ವಿಧಿಸಿದೆ. ಮೂವರು ಅಪರಾಧಿಗಳಿಗೂ ತಲಾ ₹ 50ಸಾವಿರ ದಂಡ ವಿಧಿಸಿರುವ ಕೋರ್ಟ್, ಮೃತ ಅಂಕಿತಾ ಕುಟುಂಬಕ್ಕೆ ₹ 4 ಲಕ್ಷ ಪರಿಹಾರ ಪಾವತಿಸಬೇಕು ಎಂದೂ ಆದೇಶಿಸಿದೆ.

ರೆಸಾರ್ಟ್‌ನಲ್ಲಿ ಸ್ವಾಗತಕಾರಿಣಿ ಅಂಕಿತಾ ಸೆ. 18,2022ರಿಂದ ನಾಪತ್ತೆಯಾಗಿದ್ದರು. ಅವರ ಶವ ಬಳಿಕ ಚೀಲಾ ಕಾಲುವೆಯಲ್ಲಿ ಸಿಕ್ಕಿತ್ತು. ಕೊಲೆ ಪ್ರಕರಣ ದಾಖಲಿಸಿದ್ದ ಪೊಲೀಸರು, ರೆಸಾರ್ಟ್ ಮಾಲೀಕ ಪುಲಕಿತ ಮತ್ತು ನೌಕರರಾದ ಸೌರವ್, ಅಂಕಿತ್‌ರನ್ನು ಬಂಧಿಸಿದ್ದರು.

‘ವಂದೇ ಭಾರತ್’ನಲ್ಲಿ ಅವಧಿ ಮೀರಿದ ತಂಪು ಪಾನೀಯ

ಕಣ್ಣೂರು (ಪಿಟಿಐ): ಮಂಗಳೂರು–ತಿರುವನಂತಪುರ ವಂದೇ ಭಾರತ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಕರಿಗೆ ಅವಧಿ ಮೀರಿದ ತಂಪು ಪಾನೀಯಗಳನ್ನು ಪೂರೈಕೆ ಮಾಡಿದ ಆರೋಪದ ಕುರಿತು ತನಿಖೆ ನಡೆಸುವಂತೆ ಕೇರಳ ರಾಜ್ಯ ಮಾನವ ಹಕ್ಕುಗಳ ಆಯೋಗ ಶುಕ್ರವಾರ ಆದೇಶ ಹೊರಡಿಸಿದೆ.

ಅವಧಿ ಮೀರಿದ ತಂಪು ಪಾನೀಯ ಪೂರೈಕೆಯಾದ ಕುರಿತು ಅಲ್ಲಿನ ಸ್ಥಳೀಯ ಮಾಧ್ಯಮ ವರದಿ ಪ್ರಕಟಿಸಿತ್ತು. ಅದನ್ನು ಆಧರಿಸಿ ಆಯೋಗ ಪ್ರಕರಣ ದಾಖಲಿಸಿ ಕೊಂಡಿದೆ. ಈ ಕುರಿತು ತನಿಖೆ ನಡೆಸಿ 15 ದಿನಗಳಲ್ಲಿ ವರದಿ ನೀಡುವಂತೆ ಪಾಲಕ್ಕಾಡಿನ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಿಗೆ ಸೂಚನೆ ನೀಡಿದ ಆಯೋಗದ ಸದಸ್ಯ ಕೆ. ಬೈಜುನಾಥ್ ಅವರು, ವಿಚಾರಣೆಯನ್ನು ಜೂನ್ 26ಕ್ಕೆ ಮುಂದೂಡಿದರು.

ಪಾನೀಯದ ಬಾಟಲಿಗಳ ಮೇಲಿದ್ದ ಮಾಹಿತಿಯ ಪ್ರಕಾರ, ಅದರ ತಯಾರಿಕೆಯು 2024ರ ಸೆಪ್ಟೆಂಬರ್ 25ರಂದು ಆಗಿದ್ದರೆ, ಅದರ ಅವಧಿಯು 2025ರ ಸೆಪ್ಟೆಂಬರ್ 25ರಂದು ಮುಗಿಯಲಿದೆ. ಈ ಕುರಿತು ಪ್ರಯಾಣಿಕರೊಬ್ಬರು ನೀಡಿದ್ದ ದೂರನ್ನು, ಆಹಾರ ಪೂರೈಕೆ ಸಿಬ್ಬಂದಿ ಕಡೆಗಣಿಸಿದ್ದರು ಎಂದು ಮಾಧ್ಯಮ ವರದಿ ಉಲ್ಲೇಖಿಸಿದೆ.

ಹೈದರಾಬಾದ್‌ನಲ್ಲಿ ನಡೆಯುತ್ತಿರುವ ವಿಶ್ವಸುಂದರಿ ಸ್ಪರ್ಧೆಯ 72ನೇ ಆವೃತ್ತಿಯ ಸ್ಪರ್ಧಿಗಳು ಎಎಫ್‌ಪಿ ಚಿತ್ರ

ವಿಶ್ವಸುಂದರಿ ಗ್ರ್ಯಾಂಡ್ ಫಿನಾಲೆ ಇಂದು

ಹೈದರಾಬಾದ್ (ಪಿಟಿಐ): ವಿಶ್ವಸುಂದರಿ ಸ್ಪರ್ಧೆಯ 72ನೇ ಆವೃತ್ತಿಯ ಗ್ರ್ಯಾಂಡ್ ಫಿನಾಲೆ ಶನಿವಾರ ಸಂಜೆ ಇಲ್ಲಿನ ಹೈಟೆಕ್ ಎಕ್ಸಿಬಿಷನ್ ಸೆಂಟರ್‌ನಲ್ಲಿ ನಡೆಯಲಿದೆ.

ಈ ಸ್ಪರ್ಧೆಯಲ್ಲಿ ವಿಶ್ವ ಸುಂದರಿಯ ಕಿರೀಟವನ್ನು ಮುಡಿಗೇರಿಸಿಕೊಳ್ಳಲು ಜಗತ್ತಿನಾದ್ಯಂತ ವಿವಿಧ ದೇಶಗಳ 108 ಸುಂದರಿಯರು ಪಾಲ್ಗೊಂಡಿದ್ದಾರೆ. ವಿಶ್ವ ಸುಂದರಿ ಆಯ್ಕೆಯ ಸ್ವರೂಪದ ಪ್ರಕಾರ ಈ 108 ಸ್ಪರ್ಧಿಗಳನ್ನು ಜಗತ್ತಿಗೆ ಪರಿಚಯಿಸಲಾಗುತ್ತದೆ. ಕಳೆದ ಒಂದು ತಿಂಗಳಿನಿಂದ ತೆಲಂಗಾಣದ ಪ್ರವಾಸಿಗಳ ತಾಣಗಳ ಭೇಟಿ, ವಿವಿಧ ಕಾರ್ಯಕ್ರಮಗಳು ಈ ಸ್ಪರ್ಧೆಯ ಭಾಗವಾಗಿ ನಡೆದಿವೆ.

ಭಾರತದಿಂದ ಮಿಸ್ ಇಂಡಿಯಾ ವಿಜೇತೆ ನಂದಿ ಗುಪ್ತಾ ಅವರು ಅಂತಿಮ 40 ಮಂದಿಯ ಕ್ವಾರ್ಟರ್ ಫೈನಲ್ ಪಟ್ಟಿಯಲ್ಲಿ ಹಾಗೂ ಏಷ್ಯಾ ಪ್ರದೇಶದ ಮೊದಲ ಹತ್ತರಲ್ಲಿ ಒಬ್ಬರಾಗಿ ಸ್ಥಾನ ಪಡೆದಿದ್ದಾರೆ. ಗ್ರ್ಯಾಂಡ್ ಫಿನಾಲೆಯ ನಿರೂಪಣೆಯನ್ನು 2016ರ ವಿಶ್ವಸುಂದರಿ ಸ್ಪರ್ಧೆಯ ವಿಜೇತೆ ಸ್ಟೆಫಾನಿ ಡೆಲ್ ವ್ಯಾಲೆ ಅವರು ಭಾರತದ ಖ್ಯಾತ ನಿರೂಪಕ ಸಚಿನ್ ಕುಂಭಾರ್ ಜತೆಗೆ ನಡೆಸಿಕೊಡಲಿದ್ದಾರೆ.

2017ರ ಸಾಲಿನ ವಿಶ್ವಸುಂದರಿಯಾಗಿದ್ದ ಮಾನುಶಿ ಚಿಲ್ಲರ್ ಅವರು ವಿಶೇಷವಾಗಿ ಕಾಣಿಸಿಕೊಳ್ಳಲಿದ್ದಾರೆ. ಬಾಲಿವುಡ್ ತಾರೆಗಳಾದ ಜಾಕ್ವೆಲಿನ್ ಫರ್ನಾಂಡೀಸ್ ಮತ್ತು ಇಶಾನ್ ಖಟ್ಟರ್ ಅವರು ನೃತ್ಯ ಪ್ರದರ್ಶನ ನೀಡಲಿದ್ದಾರೆ. ತೀರ್ಪುಗಾರರ ಸ್ಥಾನದಲ್ಲಿ ನಟ, ಸಾಮಾಜಿಕ ಕಾರ್ಯಕರ್ತ ಸೋನು ಸೂದ್ ಇರಲಿದ್ದು, ಕಾರ್ಯಕ್ರಮದಲ್ಲಿ ಇವರಿಗೆ ಪ್ರತಿಷ್ಠಿತ ‘ವಿಶ್ವ ಸುಂದರಿ ಮಾನವೀಯ ಪ್ರಶಸ್ತಿ’ ನೀಡಿ ಗೌರವಿಸಲಾಗುತ್ತಿದೆ.

ಕಳೆದ ವರ್ಷ ಮುಂಬೈನಲ್ಲಿ ನಡೆದಿದ್ದ ಗ್ರ್ಯಾಂಡ್ ಫಿನಾಲೆಯಲ್ಲಿ 71ನೇ ವಿಶ್ವ ಸುಂದರಿಯಾಗಿ ಆಯ್ಕೆಯಾಗಿದ್ದ ಕ್ರಿಸ್ಟಿನಾ ಪಿಸ್ಕೋವಾ ಅವರು ಹೊಸ ವಿಶ್ವ ಸುಂದರಿಗೆ ಕಿರೀಟ ತೊಡಿಸಲಿದ್ದಾರೆ.

ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಲ್ಲಿ ಮೊದಲ ಬಾರಿ ತರಬೇತಿ ಪಡೆದ ಮಹಿಳೆಯರು

17 ಮಹಿಳಾ ಕೆಡೆಟ್‌ಗಳಿಂದ ಐತಿಹಾಸಿಕ ಸಾಧನೆ

ಪ್ರಜಾವಾಣಿ ವಾರ್ತೆ

ಪುಣೆ: ಹದಿನೇಳು ಮಹಿಳಾ ಕೆಡೆಟ್‌ಗಳು ಇದೇ ಮೊದಲ ಬಾರಿಗೆ ಪುಣೆಯ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಿಂದ (ಎನ್‌ಡಿಎ) ಶುಕ್ರವಾರ ತರಬೇತಿ ಪಡೆಯುವ ಮೂಲಕ ಐತಿಹಾಸಿಕ ಮೈಲಿಗಲ್ಲು ಸ್ಥಾಪಿಸಿದರು.

ಅಕಾಡೆಮಿಯಲ್ಲಿ ಶುಕ್ರವಾರ ನಡೆದ ತರಬೇತಿ ಅಂಗವಾಗಿ ನಡೆದ ಅಂತಿಮ ಪರೇಡ್‌ನಲ್ಲಿ ಪುರುಷರೂ ಸೇರಿ 1,341 ಮಂದಿ ಭಾಗಿಯಾಗಿದ್ದರು.

ಖಡಕವಾಸ್ಲಾದಲ್ಲಿರುವ ಸೇನಾ ಪಡೆಗಳ ತರಬೇತಿ ಕೇಂದ್ರದ ಖೇತ್ರಪಾಲ್ ಪರೇಡ್ ಮೈದಾನದಲ್ಲಿ ಪಥಸಂಚಲನ ನಡೆಯಿತು. ಕೆಡೆಟ್‌ಗಳು ಅತ್ಯಂತ ಕರಾರುವಕ್ಕಾಗಿ ಮತ್ತು ಶಿಸ್ತಿನಿಂದ ಹೆಜ್ಜೆ ಹಾಕಿದರು.

ಅಕಾಡೆಮಿಯ ಕೆಡೆಟ್ ಕ್ಯಾಪ್ಟನ್ ಉದಯವೀರ್ ಸಿಂಗ್ ನೇಗಿ ಅವರು ಪರೇಡ್ ಮುನ್ನಡೆಸಿದರು. ಸೇನಾಪಡೆಯ ಮಾಜಿ ಮುಖ್ಯಸ್ಥ, ಮಿಜೋರಾಂ ರಾಜ್ಯಪಾಲ ಜನರಲ್ ವಿ.ಕೆ.ಸಿಂಗ್

> **ಈ ಮಹಿಳೆಯರು ‘ನಾರಿಶಕ್ತಿ’ಯ ಸಂಕೇತ. ಮಹಿಳೆಯರ ಬೆಳವಣಿಗೆ ಮಾತ್ರವಲ್ಲದೆ; ಮಹಿಳಾ ನೇತೃತ್ವದ ಅಭಿವೃದ್ಧಿಗೆ ಇದು ಮುನ್ನುಡಿ**
>
> **ವಿ.ಕೆ.ಸಿಂಗ್,** ಮಿಜೋರಾಂ ರಾಜ್ಯಪಾಲ

ಅವರು ನಿರ್ಗಮನ ಪಥಸಂಚಲನದ ಪರಿಶೀಲನೆ ನಡೆಸಿದರು.

ಕಾರ್ಯಕ್ರಮದಲ್ಲಿ ಸಾಧಕರ ಪೋಷಕರು, ಗಣ್ಯರು, ಶಾಲಾ ಮಕ್ಕಳು, ನಾಗರಿಕರು, ಯೋಧರು ಮತ್ತು ನಿವೃತ್ತ ಯೋಧರು ಭಾಗಿಯಾಗಿದ್ದರು. ಸಂಪೂರ್ಣ ವಾತಾವರಣವು ಉತ್ಸಾಹಭರಿತವೂ, ವೈವಿಧ್ಯತೆಯಿಂದ ಕೂಡಿತ್ತು.

ವಿ.ಕೆ ಸಿಂಗ್ ಅವರು ಮೆರಿಟ್ ಆಧಾರದಲ್ಲಿ ಮೊದಲ ಮೂರು ಸ್ಥಾನ ಪಡೆದವರಿಗೆ ಚಿನ್ನ, ಬೆಳ್ಳಿ ಮತ್ತು ಕಂಚಿನ ರಾಷ್ಟ್ರಪತಿಗಳ ಪದಕವನ್ನು ಪ್ರದಾನ ಮಾಡಿದರು.

ಬಿಸಿಎ ಪ್ರಿನ್ಸ್ ರಾಜ್ ಅವರಿಗೆ ಚಿನ್ನದ ಪದಕ, ಎಸಿಸಿ ಉದಯ್‌ವೀರ ಸಿಂಗ್ ನೇಗಿ ಅವರಿಗೆ ಬೆಳ್ಳಿ ಪದಕ ಮತ್ತು ಬಿಸಿಸಿ ತೇಜಸ್ ಭಟ್ ಅವರಿಗೆ ಕಂಚಿನ ಪದಕವನ್ನು ನೀಡಲಾಯಿತು.

ಪುಣೆಯ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಲ್ಲಿ (ಎನ್‌ಡಿಎ) ಶುಕ್ರವಾರ ತರಬೇತಿ ಪಡೆದ ಮೊದಲ ಬ್ಯಾಚ್‌ನ ಮಹಿಳಾ ಕೆಡೆಟ್‌ಗಳು ಪಿಟಿಐ ಚಿತ್ರ

ಸುಪ್ರೀಂ ನಿರ್ದೇಶನದ ಬಳಿಕ ಅವಕಾಶ: ಸುಪ್ರೀಂ ಕೋರ್ಟ್ 2021ರಲ್ಲಿ ನಿರ್ದೇಶನ ನೀಡಿದ ನಂತರ ಕೇಂದ್ರ ಲೋಕಸೇವಾ ಆಯೋಗವು ಮಹಿಳೆಯರಿಗೆ ರಕ್ಷಣಾ ಅಕಾಡೆಮಿಗೆ ಸೇರ್ಪಡೆಯಾಗಲು ಅವಕಾಶ ನೀಡಿತ್ತು. ಹೀಗಾಗಿ ಮೊದಲ ಬ್ಯಾಚ್‌ನ ಮಹಿಳಾ ಕೆಡೆಟ್‌ಗಳು 2022ರಲ್ಲಿ ‘ಎನ್‌ಡಿಎ’ ಕೋರ್ಸ್‌ಗೆ ಸೇರ್ಪಡೆಯಾಗಿದ್ದರು.

ರೋಹಿತ್ ಅಬ್ಬರ • ಬೂಮ್ರಾ ಯಾರ್ಕರ್‌ಗೆ ಮಣಿದ ಗುಜರಾತ್ • ಸಾಯಿ ದಿಟ್ಟ ಹೋರಾಟ

ಕ್ವಾಲಿಫಯರ್‌ಗೆ ಮುಂಬೈ ಇಂಡಿಯನ್ಸ್

ಮುಲ್ಲನಪುರ, ಚಂಡೀಗಢ (ಪಿಟಿಐ): ಗುಜರಾತ್ ಟೈಟನ್ಸ್ ತಂಡದ ಸಾಯಿ ಸುದರ್ಶನ್ ಮತ್ತು ವಾಷಿಂಗ್ಟನ್ ಸುಂದರ್ ಅವರ ದಿಟ್ಟ ಹೋರಾಟವನ್ನು ಮೀರಿ ನಿಂತ ಮುಂಬೈ ಇಂಡಿಯನ್ಸ್ ತಂಡವು ಎಲಿಮಿನೇಟರ್ ಪಂದ್ಯದಲ್ಲಿ ಜಯಭೇರಿ ಬಾರಿಸಿತು. ಅದರೊಂದಿಗೆ ಎರಡನೇ ಕ್ವಾಲಿಫಯರ್‌ಗೆ ಪ್ರವೇಶಿಸಿತು.

ಮಹಾರಾಜ ಯಾದವೇಂದ್ರ ಸಿಂಗ್ ಅಂತರ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ 229 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಗುಜರಾತ್ ತಂಡಕ್ಕೆ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 208 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಮುಂಬೈ ತಂಡವು 20 ರನ್‌ಗಳಿಂದ ಗೆದ್ದಿತು. ಭಾನುವಾರ ನಡೆಯುವ ಎರಡನೇ ಕ್ವಾಲಿಫಯರ್‌ನಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ. ಅದರಲ್ಲಿ ಜಯಿಸಿದ ತಂಡವು ಜೂನ್ 3ರಂದು ನಡೆಯುವ ಫೈನಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಆಡಲಿದೆ

ಟೂರ್ನಿಯುದ್ದಕ್ಕೂ ಅಮೋಘ ಬ್ಯಾಟಿಂಗ್ ಮಾಡಿರುವ ಸಾಯಿ ಸುದರ್ಶನ್ (80; 49ಎ, 4X10, 6X1) ಮತ್ತು ವಾಷಿಂಗ್ಟನ್ ಸುಂದರ್ (48; 24ಎ, 4X5, 6X3) ಮೂರನೇ ವಿಕೆಟ್ ಜೊತೆಯಾಟದಲ್ಲಿ 84 ರನ್ ಸೇರಿಸಿದರು. ಇದರಿಂದಾಗಿ ಗುಜರಾತ್‌ಗೆ ಗೆಲುವಿನ ಆಸೆ ಚಿಗುರಿತ್ತು. ಇಬ್ಬರೂ ಬ್ಯಾಟರ್‌ಗಳು ಬೌಲರ್‌ಗಳ ಎಸೆತಗಳನ್ನು ಮನಬಂದಂತೆ ದಂಡಿಸಿದರು. ಟ್ರೆಂಟ್ ಬೌಲ್ಟ್ ಅವರಂತಹ ನುರಿತ ವೇಗಿಯ ಎದುರು ಲೀಲಾಜಾಲವಾಗಿ ಆಡಿದರು. ಆದರೆ 14ನೇ ಓವರ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ ಹಾಕಿದ ಯಾರ್ಕರ್ ಎಸೆತವನ್ನು ಆಡುವ ಪ್ರಯತ್ನ ದಲ್ಲಿ ವಾಷಿಂಗ್ಟನ್ ಸುಂದರ್ ಮುಗ್ಗರಿಸಿ ಬೀಳುವುದರ ಜೊತೆಗೆ ಕ್ಲೀನ್‌ಬೌಲ್ಡ್ ಕೂಡ ಆದರು. ಇದು ಇನಿಂಗ್ಸ್‌ಗೆ ತಿರುವು ನೀಡಿತು.

ಆದರೆ ಇನ್ನೊಂದು ಬದಿಯಲ್ಲಿ ಸಾಯಿ ಹೋರಾಟ ಜಾರಿಯಲ್ಲಿತ್ತು. 16ನೇ ಓವರ್‌ನಲ್ಲಿ ರಿಚರ್ಡ್ ಗ್ಲೀಸನ್ ಎಸೆತದಲ್ಲಿ ಸಾಯಿ ಸುದರ್ಶನ್ ಕೂಡ ಕ್ಲೀನ್‌ಬೌಲ್ಡ್ ಆದರು. ನಂತರ ಬಂದ ಬ್ಯಾಟರ್‌ಗಳೂ ಹೋರಾಟ ಮಾಡಿದರು. ಆದರೆ ಮುಂಬೈ ಬೌಲರ್‌ಗಳು ಬಿಗಿಹಿಡಿತ ಸಾಧಿಸಿದರು.

ಗುಜರಾತ್ ಟೈಟನ್ಸ್‌ನ ಸಾಯಿ ಸುದರ್ಶನ್ ವಿಕೆಟ್ ಪಡೆದ ವೇಳೆ ಮುಂಬೈ ಇಂಡಿಯನ್ಸ್ ತಂಡದ ಆಟಗಾರರು ಸಂಭ್ರಮಿಸಿದರು ಎಎಫ್‌ಪಿ ಚಿತ್ರ

ಆರೆಂಜ್ ಕ್ಯಾಪ್	ಪರ್ಪಲ್ ಕ್ಯಾಪ್
ಸಾಯಿ ಸುದರ್ಶನ್ (ಜಿಟಿ) 759 ರನ್	ಪ್ರಸಿದ್ಧಕೃಷ್ಣ (ಜಿಟಿ) 25 ವಿಕೆಟ್

ರೋಹಿತ್, ಜಾನಿ ಅಬ್ಬರ: ಟಾಸ್ ಗೆದ್ದ ಮುಂಬೈ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಅದಕ್ಕೆ ತಕ್ಕಂತೆ ಆರಂಭಿಕ ಜೋಡಿ ರೋಹಿತ್ (81; 50ಎ) ಮತ್ತು ಜಾನಿ ಬೆಸ್ಟೊ (47; 22ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 84 ರನ್ ಸೇರಿಸಿದರು. ಈ ಅಡಿಪಾಯದ ಮೇಲೆ ಮುಂಬೈ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 228 ರನ್ ಗಳಿಸಿತು.

ಪ್ರಸಿದ್ಧಕೃಷ್ಣ ಹಾಕಿದ ಎರಡನೇ ಓವರ್‌ನಲ್ಲಿ ಫೀಲ್ಡರ್ ಗೆರಾಲ್ಡ್ ಕೋಟ್ಜಿಯೆ ಮತ್ತು ಸಿರಾಜ್ ಹಾಕಿದ 3ನೇ ಓವರ್‌ನಲ್ಲಿ ಕುಸಾಲ ಮೆಂಡಿಸ್ ಅವರು ರೋಹಿತ್‌ಗೆ ಜೀವದಾನ ನೀಡಿದರು. ಇದನ್ನು ಸಮರ್ಥವಾಗಿ ಬಳಸಿಕೊಂಡ ರೋಹಿತ್ ಅಬ್ಬರಿಸಿದರು. ಈ ಐಪಿಎಲ್‌ನಲ್ಲಿ ತಮ್ಮ ಚೊಚ್ಚಲ ಪಂದ್ಯವಾಡಿದ ಇಂಗ್ಲೆಂಡ್ ಆಟಗಾರ ಜಾನಿ ಅವರು ರೋಹಿತ್ ಅವರೊಂದಿಗೆ ಮೊದಲ ವಿಕೆಟ್ ಜೊತೆ ಯಾಟದಲ್ಲಿ 7 ಓವರ್‌ಗಳಲ್ಲಿ 84 ರನ್ ಗಳಿಸಿದರು.

ರೋಹಿತ್ 28 ಎಸೆತಗಳಲ್ಲಿ ಅರ್ಧಶತಕದ ಗಡಿ ದಾಟಿದರು. ಅವರು ಶತಕ ಗಳಿಸುವ ಭರವಸೆ ಕೂಡ ಮೂಡಿಸಿದ್ದರು. ನಾಲ್ಕು ಸಿಕ್ಸರ್ ಮತ್ತು 9 ಬೌಂಡರಿಗಳನ್ನು ಸಿಡಿಸಿದರು. ಜಾನಿ ಕೂಡ 4 ಬೌಂಡರಿ ಮತ್ತು 3 ಸಿಕ್ಸರ್ ಹೊಡೆದರು. ಎಂಟನೇ ಓವರ್‌ನಲ್ಲಿ ಸಾಯಿಕಿಶೋರ್ ಅವರು ಜಾನಿ ವಿಕೆಟ್ ಗಳಿಸುವ ಮೂಲಕ ಜೊತೆಯಾಟ ಮುರಿದರು.

ಆದರೆ ಕ್ರೀಸ್‌ಗೆ ಬಂದ ಸೂರ್ಯಕುಮಾರ್ ಯಾದವ್ 20 ಎಸೆತಗಳಲ್ಲಿ 33 ರನ್ ಸೂರೆ ಮಾಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ರೋಹಿತ್ ಮತ್ತು ಸೂರ್ಯಕುಮಾರ್ ಅವರು 59 ರನ್ ಸೇರಿಸಿದರು. ಆದರೆ ಕ್ರೀಸ್‌ನಲ್ಲಿದ್ದ ನಾಯಕ ಹಾರ್ದಿಕ್ 9 ಎಸೆತಗಳಲ್ಲಿ 22 ರನ್ ಹೊಡೆದರು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 228 (ರೋಹಿತ್ ಶರ್ಮಾ 81, ಜಾನಿ ಬೆಸ್ಟೊ 47, ಸೂರ್ಯಕುಮಾರ್ ಯಾದವ್ 33, ತಿಲಕ್ ವರ್ಮಾ 25, ಹಾರ್ದಿಕ್ ಪಾಂಡ್ಯ ಔಟಾಗದೇ 22, ಪ್ರಸಿದ್ಧಕೃಷ್ಣ 53ಕ್ಕೆ2, ಸಾಯಿಕಿಶೋರ್ 42ಕ್ಕೆ2, ಸಿರಾಜ್ 37ಕ್ಕೆ1) ಗುಜರಾತ್ ಟೈಟನ್ಸ್: 20 ಓವರ್‌ಗಳಲ್ಲಿ 6ಕ್ಕೆ208 (ಸಾಯಿ ಸುದರ್ಶನ್ 80, ಕುಶಾಲ ಮೆಂಡಿಸ್ 20, ವಾಷಿಂಗ್ಟನ್ ಸುಂದರ್ 48, ಶೆರ್ಫೈನ್ ರುದರ್‌ಫೋರ್ಡ್ 24, ಟ್ರೆಂಟ್ ಬೌಲ್ಟ್ 56ಕ್ಕೆ2) ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 20 ರನ್‌ಗಳ ಜಯ. ಪಂದ್ಯ ಶ್ರೇಷ್ಠ: ರೋಹಿತ್ ಶರ್ಮಾ

ಆರ್‌ಸಿಬಿ ಪ್ರಶಸ್ತಿ ಕನಸಿಗೆ ಜೋಶ್ ಬಲ

ಆಸ್ಟ್ರೇಲಿಯಾ ವೇಗಿ ಹ್ಯಾಜಲ್‌ವುಡ್ ಪರಿಣಾಮಕಾರಿ ದಾಳಿ

• ಸಿಡ್ನಿ ಕಿರಣ್

ಮುಲ್ಲನಪುರ, ಚಂಡೀಗಢ: ಬಹಳಷ್ಟು ಕ್ಷೇತ್ರಗಳಲ್ಲಿ 'ಯಾರೂ ಅನಿವಾರ್ಯವಲ್ಲ' ಎಂಬ ಮಾತು ಆಗಾಗ ಕೇಳಿಬರುತ್ತಲೇ ಇರುತ್ತದೆ. ಆದರೆ ಈ ಮಾತನ್ನು ಆಸ್ಟ್ರೇಲಿಯಾದ ವೇಗದ ಬೌಲರ್ ಜೋಶ್ ಹ್ಯಾಜಲ್‌ವುಡ್ ಅವರ ಬಗ್ಗೆ ಹೇಳುವಂತಿಲ್ಲ. ಏಕೆಂದರೆ ಅವರಿಗೆ ಅವರೇ ಸಾಟಿ. ಅವರ ಸ್ಥಾನ ತುಂಬುವವರು ಇನ್ನೊಬ್ಬರಿಲ್ಲ.

ಅದರಲ್ಲೂ ಈ ಬಾರಿಯ ಐಪಿಎಲ್ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಫೈನಲ್ ತಲುಪುವಲ್ಲಿ ಜೋಶ್ ಅವರ ಪಾತ್ರ ಮಹತ್ವದ್ದಾಗಿದೆ. ಶುಕ್ರವಾರ ಪಂಜಾಬ್ ಕಿಂಗ್ಸ್ ಎದುರು ನಡೆದ ಮೊದಲ ಕ್ವಾಲಿಫಯರ್‌ನಲ್ಲಿ ಜೋಶ್ ಅವರ (21ಕ್ಕೆ3) ಬೌಲಿಂಗ್ ಅಪಾರ ಪರಿಣಾಮಕಾರಿ ಯಾಗಿತ್ತು. ಅವರಿಗೆ ಸ್ಪಿನ್ನರ್ ಸುಯಶ್ ಶರ್ಮಾ (17ಕ್ಕೆ3) ಕೂಡ ಉತ್ತಮ ಜೊತೆ ನೀಡಿದ್ದರು. ಅದರಿಂದಾಗಿ ಆರ್‌ಸಿಬಿ ತಂಡವು 8 ವಿಕೆಟ್‌ಗಳಿಂದ ಜಯಿಸಿ, ಫೈನಲ್ ಪ್ರವೇಶಿಸಿತ್ತು.

ಭುಜದ ಗಾಯದಿಂದಾಗಿ ಜೋಶ್ ಅವರು ಸುಮಾರು ಒಂದು ತಿಂಗಳಿನಿಂದ ಯಾವುದೇ ಪಂದ್ಯ ಆಡಿರಲಿಲ್ಲ. ಆದರೆ ಪಂಜಾಬ್ ಎದುರಿನ ಪಂದ್ಯದಲ್ಲಿ ಅವರ ಸಾಮರ್ಥ್ಯ ಉತ್ಕೃಷ್ಟ ಮಟ್ಟದಲ್ಲಿತ್ತು. ಇನಿಂಗ್ಸ್‌ನಲ್ಲಿ ತಮ್ಮ ಮೊದಲ ಓವರ್‌ನಲ್ಲಿಯೇ ಪಂಜಾಬ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಅವರ ವಿಕೆಟ್ ಉರುಳಿಸಿದರು. ಇದು ಕಿಂಗ್ಸ್ ತಂಡಕ್ಕೆ ಕೊಟ್ಟ ಪ್ರಮುಖ ಪೆಟ್ಟಾಗಿತ್ತು. ನಂತರದ ಓವರ್‌ನಲ್ಲಿ ಉತ್ತಮ ಲಯದಲ್ಲಿರುವ ಜೋಶ್ ಇಂಗ್ಲಿಸ್ ಅವರ ವಿಕೆಟ್ ಕೂಡ ಜೋಶ್ ಪಾಲಾಯಿತು.

ಏಪ್ರಿಲ್ 27ರಂದು ಡೆಲ್ಲಿ ಕ್ಯಾಪಿಟಲ್ಸ್ ಎದುರಿನ ಪಂದ್ಯದ ಸಂದರ್ಭದಲ್ಲಿ ಜೋಶ್ ಗಾಯಗೊಂಡಿದ್ದರು. ಅದಕ್ಕೂ ಮುನ್ನ ನಡೆದಿದ್ದ ಪಂದ್ಯಗಳಲ್ಲಿ ಜೋಶ್ ಬೌಲಿಂಗ್‌ನಿಂದಾಗಿ ಆರ್‌ಸಿಬಿಯು ತನ್ನ ಎದುರಾಳಿಗಳನ್ನು 200 ರನ್‌ಗಳ ಒಳಗಿನ ಮೊತ್ತದಲ್ಲಿಯೇ ಕಟ್ಟಿಹಾಕಿತ್ತು. ಆ ಅವಧಿಯ 10 ಪಂದ್ಯಗಳ ಪೈಕಿ ಕೇವಲ ಒಂದರಲ್ಲಿ ಮಾತ್ರ ಎದುರಾಳಿ ತಂಡವು 200ರ ಗಡಿ ದಾಟಿತ್ತು. ಆದರೆ ಅವರು ಗಾಯಗೊಂಡು ಹೊರಗುಳಿದ ಅವಧಿಯ ಪಂದ್ಯಗಳಲ್ಲಿ ಆರ್‌ಸಿಬಿಯ ಬೌಲಿಂಗ್ ಸ್ವಲ್ಪ ದಿಕ್ಕು ತಪ್ಪಿತ್ತು. ಆ ಪಂದ್ಯಗಳಲ್ಲಿ ಎದುರಾಳಿಗಳಿಗೆ ದ್ವಿಶತಕದ ಮೊತ್ತ ಪೇರಿಸುವುದು ಸುಲಭವಾಗಿತ್ತು.

ಆರೂವರೆ ಅಡಿ ಎತ್ತರದ ಹ್ಯಾಜಲ್‌ವುಡ್ ಟೆಸ್ಟ್ ಕ್ರಿಕೆಟ್‌ನಲ್ಲಿ ಬಹಳಷ್ಟು ಪರಿಣಾಮಕಾರಿ ಬೌಲರ್. ಚುಟುಕು ಮಾದರಿಯಲ್ಲಿಯೂ ಅವರ ಕೌಶಲಗಳು ಉತ್ತಮವಾಗಿವೆ. ಆದ್ದರಿಂದಲೇ ಅವರನ್ನು ಆರ್‌ಸಿಬಿಯು ₹ 12.5 ಕೋಟಿ ಕೊಟ್ಟು ಖರೀದಿಸಿತ್ತು. 2022ರಲ್ಲಿ ಜೋಶ್ ಅವರು ಆರ್‌ಸಿಬಿ ಪರವಾಗಿ 20 ವಿಕೆಟ್ ಗಳಿಸಿದ್ದರು. ಈ ಸಲವೂ 11 ಪಂದ್ಯಗಳಿಂದ 21 ವಿಕೆಟ್ ಪಡೆದಿದ್ದಾರೆ.

'ಜೋಶ್ ನಮ್ಮ ತಂಡದ ಪ್ರಮುಖ ಆಟಗಾರ. ಅವರೊಬ್ಬ ವಿಶ್ವದರ್ಜೆಯ ಆಟಗಾರನಾಗಿದ್ದಾರೆ. ಅವರು ತಮ್ಮ ಬೌಲಿಂಗ್ ನಲ್ಲಷ್ಟೇ ಅಲ್ಲ, ಶಾಂತಚಿತ್ತದ ಮೂಲಕವೂ ತಂಡದಲ್ಲಿ ಎಲ್ಲರಿಗೂ ಬೇಕಾದವರಾಗಿದ್ದಾರೆ. ಭುವಿ (ಭುವನೇಶ್ವರ್ ಕುಮಾರ್) ಕೂಡ ತಮ್ಮ ಹೊಣೆಯನ್ನು ನಿಭಾಯಿಸುತ್ತಿದ್ದಾರೆ. ಜೋಶ್ ತಂಡಕ್ಕೆ ಮರಳಿ ಬಂದಿರುವುದರಿಂದ ಬೌಲಿಂಗ್ ವಿಭಾಗದ ಮೌಲ್ಯವರ್ಧನೆಯಾಗಿದೆ' ಎಂದು ಆರ್‌ಸಿಬಿಯ ಬ್ಯಾಟರ್ ಫಿಲ್ ಸಾಲ್ಟ್ ಸಂತಸ ವ್ಯಕ್ತಪಡಿಸಿದ್ದಾರೆ.

ಜೂನ್ 11ರಂದು ಲಾರ್ಡ್ಸ್‌ನಲ್ಲಿ ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಆಡಲಿದೆ. ಹಾಲಿ ಚಾಂಪಿಯನ್ ಕೂಡ ಆಗಿರುವ ಆಸ್ಟ್ರೇಲಿಯಾಕ್ಕೆ ಪ್ರಶಸ್ತಿ ಉಳಿಸಿಕೊಡುವ ಗುರಿ ಹ್ಯಾಜಲ್‌ವುಡ್ ಅವರದ್ದು. ಅದಕ್ಕೂ ಮುನ್ನ ಆರ್‌ಸಿಬಿಗೆ ಚೊಚ್ಚಲ ಟ್ರೋಫಿಯ ಕಾಣಿಕೆ ನೀಡುವ ಛಲವೂ ಅವರಿಗಿದೆ.

ಆರ್‌ಸಿಬಿ ತಂಡದ ವೇಗಿ ಜೋಶ್ ಹ್ಯಾಜಲ್‌ವುಡ್

ಫ್ರೆಂಚ್ ಓಪನ್ ಟೆನಿಸ್: ಮುಸೆಟ್ಟಿ ಮುನ್ನಡೆ

ಪ್ರಿ ಕ್ವಾರ್ಟರ್‌ಗೆ ಸಬಲೆಂಕಾ, ಝೆಂಗ್

ಪ್ಯಾರಿಸ್ (ಎಎಫ್‌ಪಿ): ಅಗ್ರ ಶ್ರೇಯಾಂಕದ ಅರಿನಾ ಸಬಲೆಂಕಾ ಮತ್ತು ಒಲಿಂಪಿಕ್ ಚಾಂಪಿಯನ್ ಝೆಂಗ್ ಕ್ವಿನ್ವೆನ್ ಶುಕ್ರವಾರ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ನಿರಾಯಾಸ ಗೆಲುವಿನೊಂದಿಗೆ ಮಹಿಳೆಯರ ಸಿಂಗಲ್ಸ್‌ನ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಹಿನ್ನಡೆಯಿಂದ ಚೇತರಿಸಿಕೊಂಡ ಎಂಟನೇ ಶ್ರೇಯಾಂಕದ ಲೊರೆಂಜೊ ಮುಸೆಟ್ಟಿ ಪುರುಷರ ಸಿಂಗಲ್ಸ್‌ನಲ್ಲಿ ನಾಲ್ಕನೇ ಸುತ್ತಿಗೆ ಮುನ್ನಡೆದರು.

ಬೆಲಾರಸ್‌ನ ತಾರೆ ಸಬಲೆಂಕಾ 6-2, 6-3ರಿಂದ ಸರ್ಬಿಯಾದ ಎಡಗೈ ಆಟಗಾರ್ತಿ ಓಲ್ಗಾ ಡೇನಿಲೋವಿಕ್ ಅವರನ್ನು ಹಿಮ್ಮೆಟ್ಟಿಸಿದರು. 34ನೇ ಕ್ರಮಾಂಕದ ಓಲ್ಗಾ ಅವರನ್ನು ಕೇವಲ 79 ನಿಮಿಷದಲ್ಲಿ ಸಬಲೆಂಕಾ ಸೋಲಿಸಿದರು.

ಮೂರು ಗ್ರ್ಯಾನ್‌ಸ್ಲಾಮ್ ಕಿರೀಟಗಳಿಗೆ ಒಡತಿಯಾಗಿರುವ ಸಬಲೆಂಕಾ ಇಲ್ಲಿ ಚೊಚ್ಚಲ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದಾರೆ. ಮುಂದಿನ ಸುತ್ತಿನಲ್ಲಿ ಅವರಿಗೆ 16ನೇ ಶ್ರೇಯಾಂಕದ ಅಮಂಡಾ ಅನಿಸಿಮೊವಾ ಎದುರಾಳಿಯಾಗಿದ್ದಾರೆ.

ಎಂಟನೇ ಶ್ರೇಯಾಂಕದ ಝೆಂಗ್ 6-3, 6-4ರಿಂದ ಕೆನಡಾದ ವಿಕ್ಟೋರಿಯಾ ಎಂಬೊಕೊ ಅವರನ್ನು ಸೋಲಿಸಿದರು. ಕಳೆದ ವರ್ಷ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿರುವ ಚೀನಾ ಆಟಗಾರ್ತಿ ಈ ಗೆಲುವಿನೊಂದಿಗೆ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಗೆಲುವಿನ ಓಟವನ್ನು ಒಂಬತ್ತು ಪಂದ್ಯಗಳಿಗೆ ವಿಸ್ತರಿಸಿಕೊಂಡರು.

ಶ್ವಾಂಟೆಕ್ ಗೆಲುವಿನ ಓಟ: ಹಾಲಿ ಚಾಂಪಿಯನ್ ಇಗಾ ಶ್ವಾಂಟೆಕ್ ಮೂರನೇ ಸುತ್ತಿನಲ್ಲಿ 6-2, 7-5ರಿಂದ ರೊಮೇನಿಯಾದ ಜಾಕ್ವೆಲಿನ್ ಕ್ರಿಸ್ಟಿಯನ್ ಅವರನ್ನು ಸೋಲಿಸಿದರು.

ಫ್ರೆಂಚ್ ಓಪನ್‌ನಲ್ಲಿ ತನ್ನ ಗೆಲುವಿನ ಓಟವನ್ನು 24 ಪಂದ್ಯಗಳಿಗೆ ವಿಸ್ತರಿಸಿಕೊಂಡ ಪೋಲೆಂಡ್‌ನ ಶ್ವಾಂಟೆಕ್ ಇಲ್ಲಿ ಹ್ಯಾಟ್ರಿಕ್ ಸೇರಿದಂತೆ ನಾಲ್ಕು ಬಾರಿ ಚಾಂಪಿಯನ್ ಆಗಿದ್ದಾರೆ. ಐದನೇ ಶ್ರೇಯಾಂಕದ ಅವರು ಇಲ್ಲಿ ಐದನೇ ಪ್ರಶಸ್ತಿ ಗೆಲ್ಲುವ ಛಲದಲ್ಲಿದ್ದಾರೆ.

ಮುಸೆಟ್ಟಿಗೆ ಗೆಲುವು: ಇಟಲಿಯ ಮುಸೆಟ್ಟಿ 4-6, 6-4, 6-3, 6-2ರ ಸೆಟ್‌ಗಳಿಂದ ಅರ್ಜೆಂಟೀನಾದ ಮರಿಯಾನೊ ನವೋನ್ ಅವರ ಸವಾಲನ್ನು ಮೆಟ್ಟಿನಿಂತರು. ಮೊದಲ ಸೆಟ್‌ನಲ್ಲಿ ಶ್ರೇಯಾಂಕರಹಿತ ಮರಿಯಾನಿ ಮೇಲುಗೈ ಸಾಧಿಸಿದರೆ, ನಂತರದ ಮೂರು ಸೆಟ್‌ಗಳಲ್ಲಿ ಮುಸೆಟ್ಟಿ ಪಾರಮ್ಯ ಮೆರೆದರು.

12ನೇ ಶ್ರೇಯಾಂಕದ ಟಾಮಿ ಪಾಲ್ 6-3, 3-6, 7-6 (9/7), 3-6, 6-3ರ ಐದು ಸೆಟ್‌ಗಳ ಹೋರಾಟದಲ್ಲಿ ರಷ್ಯಾದ ಕರೆನ್ ಖಚನೋವ್ (24ನೇ ಶ್ರೇಯಾಂಕ) ಅವರನ್ನು ಸೋಲಿಸಿದರು.

ಚೀನಾ ಆಟಗಾರ್ತಿ ಝೆಂಗ್ ಕ್ವಿನ್ವೆನ್ ಎಎಫ್‌ಪಿ ಚಿತ್ರ

ಮೂರನೇ ಸುತ್ತಿಗೆ ಭಾಂಬ್ರಿ–ಗಾಲೊವೆ

ಭಾರತದ ಯುಕಿ ಭಾಂಬ್ರಿ, ಅವರ ಅಮೆರಿಕನ್ ಜೊತೆಗಾರ ರಾಬರ್ಟ್ ಗಾಲೊವೆ ಅವರು ಪುರುಷರ ಡಬಲ್ಸ್‌ನಲ್ಲಿ ಮೂರನೇ ಸುತ್ತಿಗೆ ಮುನ್ನಡೆದರು.

ಭಾಂಬ್ರಿ–ಗಾಲೊವೆ ಜೋಡಿ 6-7(4), 7-6(7), 6-3ರ ಮೂರು ಸೆಟ್‌ಗಳ ರೋಚಕ ಹಣಾಹಣಿಯಲ್ಲಿ ಏಳನೇ ಶ್ರೇಯಾಂಕದ ನಿಕೋಲಾ ಮೆಕ್ಟಿಕ್ ಮತ್ತು ಮೈಕೆಲ್ ವೀನಸ್ (ಕ್ರೊಯೇಷ್ಯಾ) ಅವರಿಗೆ ಆಘಾತ ನೀಡಿತು.

ವಿಶ್ವದ ಅಗ್ರಮಾನ್ಯ ಜೋಡಿಗೆ ಸೋಲುಣಿಸಿದ ಸಾತ್ವಿಕ್–ಚಿರಾಗ್

ಸಿಂಗಪುರ (ಪಿಟಿಐ): ಭಾರತದ ಅಗ್ರಮಾನ್ಯ ಪುರುಷರ ಡಬಲ್ಸ್ ಆಟಗಾರರಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಈ ವರುಷದ ಮೊದಲ ಪ್ರಶಸ್ತಿ ಗೆಲ್ಲುವ ಹಾದಿಯಲ್ಲಿ ದಿಟ್ಟಹೆಜ್ಜೆಯಿಟ್ಟರು. ವಿಶ್ವದ ಅಗ್ರ ಕ್ರಮಾಂಕದ ಡಬಲ್ಸ್ ಆಟಗಾರರಾದ ಗೊ ಸ್ಜೆ ಫೀ- ನೂರ್ ಇಝ್ಝುದ್ದೀನ್ ಜೋಡಿಯನ್ನು ನೇರ ಗೇಮ್‌ಗಳಿಂದ ಸೋಲಿಸಿದ ಭಾರತದ ಜೋಡಿ ಸಿಂಗಪುರ ಓಪನ್ ಸೂಪರ್ 750 ಟೂರ್ನಿಯ ಸೆಮಿಫೈನಲ್ ತಲುಪಿತು.

ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸಾತ್ವಿಕ್- ಚಿರಾಗ್ ಜೋಡಿ 21-17, 21-15 ರಿಂದ ಮಲೇಷ್ಯಾದ ಜೋಡಿಯನ್ನು ಸೋಲಿಸಿತು.

ಫಿಟ್ನೆಸ್ ಎದುರಿಸುತ್ತಿದ್ದ ಭಾರತದ ಆಟಗಾರರು ಈ ವರ್ಷ ಹೆಚ್ಚಿನ ಟೂರ್ನಿಗಳಲ್ಲಿ ಆಡಿರಲಿಲ್ಲ. ಈ ವರ್ಷ ಇದು ಭಾರತದ ಜೋಡಿಗೆ ಮೂರನೇ ಸೆಮಿಫೈನಲ್ ಆಗಿದೆ. ಈ ವರ್ಷದ ಆರಂಭದಲ್ಲಿ ಇವರಿಬ್ಬರು ಮಲೇಷ್ಯಾ ಮತ್ತು ಇಂಡಿಯನ್ ಓಪನ್ ಟೂರ್ನಿಗಳಲ್ಲಿ ಸೆಮಿಫೈನಲ್ ತಲುಪಿದ್ದರು.

ಈ ಟೂರ್ನಿಯಲ್ಲಿ ಉತ್ತಮವಾಗಿ ಆಡುತ್ತಿರುವ ಇವರಿಬ್ಬರು ಎಂಟರ ಘಟ್ಟದ ಪಂದ್ಯದಲ್ಲಿ ಪ್ರಬಲ ರಕ್ಷಣೆಯ ಆಟ ಪ್ರದರ್ಶಿಸಿದರು. ಕರಾರುವಾಕ್ ಹೊಡೆತಗಳಿಂದ ಕೋರ್ಟ್‌ನ ಮುಂಭಾಗವನ್ನೂ ನಿಯಂತ್ರಿಸಿ 39 ನಿಮಿಷಗಳಲ್ಲಿ ಪಂದ್ಯ ಗೆದ್ದರು.

ಶಾಟ್‌ಗನ್ ಶೂಟಿಂಗ್: ಭಾರತ ತಂಡಕ್ಕೆ ರೈಝಾ ದಿಲ್ಲೊನ್, ನರೂಕಾ

ರೈಝಾ ದಿಲ್ಲೊನ್

ನವದೆಹಲಿ (ಪಿಟಿಐ): ಒಲಿಂಪಿಯನ್ ಶೂಟರ್ ರೈಝಾ ದಿಲ್ಲೊನ್ ಮತ್ತು ಅನಂತಜೀತ್ ಸಿಂಗ್ ನರೂಕಾ ಅವರನ್ನು ಇಟಲಿಯ ಲೊನ್ಯಾಟೊದಲ್ಲಿ ನಡೆಯಲಿರುವ ಐಎಸ್‌ಎಸ್‌ಎಫ್ ಶಾಟ್‌ಗನ್ ವಿಶ್ವಕಪ್ ಸ್ಪರ್ಧೆಯಲ್ಲಿ ಭಾಗವಹಿಸುವ ಭಾರತ ತಂಡಕ್ಕೆ ಆಯ್ಕೆ ಮಾಡಲಾಗಿದೆ.

ಇವರಿಬ್ಬರೂ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದರು. ಹೋದ ವಾರ ನಡೆದಿದ್ದ ಜೂನಿಯರ್ ವಿಶ್ವಕಪ್ ಸ್ಪರ್ಧೆಯಲ್ಲಿ ರೈಝಾ ಬೆಳ್ಳಿ ಜಯಿಸಿದ್ದರು. ವಿಶ್ವಕಪ್ ಸ್ಪರ್ಧೆಯು ಜುಲೈ 4 ರಿಂದ 14ರವರೆಗೆ ನಡೆಯಲಿದೆ.

ತಂಡ ಇಂತಿದೆ: ಪುರುಷರು: ಸ್ಕೀಟ್ ಅನಂತಜೀತ್ ಸಿಂಗ್ ನರೂಕಾ, ಮೈರಾಜ್ ಅಹಮದ್ ಖಾನ್, ಭವತೇಜ್ ಸಿಂಗ್ ಗಿಲ್. ಟ್ರ್ಯಾಪ್: ಲಕ್ಷ್ಯ ಶೇರಾನ್, ಝೋರಾವರ್ ಸಿಂಗ್ ಸಂಧು, ಜಸ್ವಿಂದರ್ ಸಿಂಗ್..

ಮಹಿಳೆಯರು: ಸ್ಕೀಟ್: ರೈಝಾ ದಿಲ್ಲೊನ್, ಗಣೇಮತ್ ಶೆಕಾನ್, ಮಹೇಶ್ವರಿ ಚೌಹಾಣ. ಟ್ರ್ಯಾಪ್: ನೀರು ದಂಡಾ, ಪ್ರಗತಿ ದುಬೆ. ಪ್ರೀತಿ ರಜಾಕ್.

ಚೆಸ್: ಗುಕೇಶ್‌ಗೆ ಮತ್ತೊಂದು ಜಯ

ಸ್ಟಾವೆಂಜರ್ (ನಾರ್ವೆ), (ಪಿಟಿಐ): ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್, ನಾರ್ವೆ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ಫ್ಯಾಬಿಯಾನೊ ಕರುವಾನ ಅವರನ್ನು 'ಆರ್ಮ್‌ಗೆಡನ್'ನಲ್ಲಿ (ಟೈಬ್ರೇಕರ್) ಸೋಲಿಸಿದರು. ಆದರೆ ಭಾರತದ ಇನ್ನೊಬ್ಬ ಆಟಗಾರ ಅರ್ಜುನ್ ಇರಿಗೇಶಿ ಅವರು ಅತಿಥೇಯ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಸೋಲುವ ಮೂಲಕ ಭಾರತ 'ಓಪನ್' ವಿಭಾಗದಲ್ಲಿ ಶುಕ್ರವಾರ ಮಿಶ್ರಫಲ ಅನುಭವಿಸಿತು.

ವಿಶ್ವದ ಮೂರನೇ ಕ್ರಮಾಂಕದ ಆಟಗಾರ ಕರುವಾನ ಒಂದು ಪಾನ್ (ಕಾಲಾಳು) ಹೆಚ್ಚುವರಿ ಹೊಂದಿದ್ದರು. ಆದರೆ ಅದರ ಲಾಭವನ್ನು ಪಡೆಯಲಾಗಲಿಲ್ಲ. 19 ವರ್ಷ ವಯಸ್ಸಿನ ಗುಕೇಶ್ ಉತ್ತಮ ರಕ್ಷಣಾ ಕೌಶಲ ಪ್ರದರ್ಶಿಸಿದರು. ಹೀಗಾಗಿ ಪಂದ್ಯ ನಾಲ್ಕು ಗಂಟೆಗಳ ದೀರ್ಘ ಆಟದ ನಂತರ ಡ್ರಾ ಆಯಿತು. ಫಲಿತಾಂಶ ನಿರ್ಧರಿಸಲು ನಡೆಯುವ ಕಾಲಮಿತಿಯ ಆರ್ಮ್‌ಗೆಡನ್‌ನಲ್ಲಿ ಗುಕೇಶ್ ಜಯಶಾಲಿಯಾದರು. ಈ ಟೂರ್ನಿಯಲ್ಲಿ ಡ್ರಾಕ್ಕೆ ಮತ್ತು ಆರ್ಮ್‌ಗೆಡನ್‌ನಲ್ಲಿ ಗೆಲುವಿಗೆ ಪ್ರತ್ಯೇಕ ಪಾಯಿಂಟ್ ನೀಡಲಾಗುತ್ತದೆ.

ಡಿ.ಗುಕೇಶ್

ಗುಕೇಶ್ ಮತ್ತು ಇರಿಗೇಶಿ ಅವರು ನಾಲ್ಕನೇ ಸುತ್ತಿನ ನಂತರ ತಲಾ 4.5 ಪಾಯಿಂಟ್ಸ್ ಕಲೆಹಾಕಿದ್ದು ನಾಲ್ಕನೇ ಸ್ಥಾನದಲ್ಲಿದ್ದಾರೆ. ಹಾಲಿ ಚಾಂಪಿಯನ್ ಹಾಗೂ ವಿಶ್ವದ ಅಗ್ರ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ (8 ಪಾಯಿಂಟ್ಸ್) ಮೊದಲ ಸ್ಥಾನದಲ್ಲಿದ್ದಾರೆ. ಕರುವಾನ (7 ಪಾಯಿಂಟ್ಸ್) ಮತ್ತು ಅಮೆರಿಕದ ಇನ್ನೊಬ್ಬ ಗ್ರ್ಯಾಂಡ್‌ಮಾಸ್ಟರ್ ಹಿಕಾರು ನಕಾಮುರ (5.5) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ.

ಕಾರ್ಲ್‌ಸನ್ ಅವರು ಕ್ಲಾಸಿಕಲ್ ಗೇಮ್‌ನಲ್ಲೇ ಇರಿಗೇಶಿ ಅವರನ್ನು ಸೋಲಿಸುವ ಮೂಲಕ ಪೂರ್ಣ ಮೂರು ಪಾಯಿಂಟ್ ಪಡೆದರು. ಈ ಹಿಂದಿನ ಪಂದ್ಯದಲ್ಲಿ ಇರಿಗೇಶಿ, ಕರುವಾನ ಅವರಿಗೆ ಸೋತಿದ್ದರು. ನಕಾಮುರ (5.5) ಇನ್ನೊಂದು ಪಂದ್ಯದಲ್ಲಿ ಚೀನಾದ ವೀ ಯಿ (4) ಅವರಿಗೆ ಮಣಿದರು.

ಜಂಟಿ ಮುನ್ನಡೆಯಲ್ಲಿ ಹಂಪಿ: ಉತ್ತಮ ಪೈಪೋಟಿ ಕಾಣುತ್ತಿರುವ ಮಹಿಳೆಯರ ವಿಭಾಗದಲ್ಲಿ ವಿಶ್ವ ಚಾಂಪಿಯನ್, ಚೀನಾದ ಜು ವೆನ್‌ಜುನ್ (5.5) ಅವರು ಭಾರತದ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಅವರನ್ನು ಸೋಲಿಸಿದರು.

ಭಾರತದ ಇನ್ನೊಬ್ಬ ಆಟಗಾರ್ತಿ ಆರ್.ವೈಶಾಲಿ ಇನ್ನೊಂದು ಪಂದ್ಯದಲ್ಲಿ ಆರ್ಮ್‌ಗೆಡನ್‌ನಲ್ಲಿ ಉಕ್ರೇನ್‌ನ ಅನ್ನಾ ಮುಝಿಚುಕ್ ಅವರನ್ನು ಸೋಲಿಸಿ ಅರ್ಧ ಪಾಯಿಂಟ್ ಹೆಚ್ಚಿಗೆ ಪಡೆದರು. ಇವರಿಬ್ಬರ ನಡುವಣ ಕ್ಲಾಸಿಕಲ್ ಪಂದ್ಯ ಡ್ರಾ ಆಗಿತ್ತು.

ಶುಕ್ರವಾರದ ಹಿನ್ನಡೆ ಹೊರತಾಗಿಯೂ ನಾಲ್ಕನೇ ಸುತ್ತಿನ ನಂತರ ಹಂಪಿ, ಮುಝಿಚುಕ್ ಜೊತೆ (ತಲಾ 7 ಪಾಯಿಂಟ್ಸ್) ಮುನ್ನಡೆ ಹಂಚಿಕೊಂಡಿದ್ದಾರೆ. ವೈಶಾಲಿ (3.5) ಆರನೇ ಸ್ಥಾನದಲ್ಲಿದ್ದಾರೆ. ಸ್ಪೇನ್‌ನ ಸಾರಾ ಖಾಡೆಮ್ (5), ಇನ್ನೊಂದು ಪಂದ್ಯದಲ್ಲಿ ಚೀನಾದ ಲಿ ಟಿಂಗ್ಜಿ (4) ಅವರನ್ನು ಮಣಿಸಿದರು.

ಕ್ರಿಕೆಟ್: ಕರುಣ್ ನಾಯರ್ ಅಜೇಯ ಶತಕ

ಕ್ಯಾಂಟರ್‌ಬರಿ, ಇಂಗ್ಲೆಂಡ್ (ಪಿಟಿಐ): ಬೆಂಗಳೂರಿನ ಕರುಣ್ ನಾಯರ್ ಇಂಗ್ಲೆಂಡ್ ನೆಲದಲ್ಲಿ ಅಮೋಘ ಶತಕ ದಾಖಲಿಸಿದರು.

ಶುಕ್ರವಾರ ಇಂಗ್ಲೆಂಡ್ ಲಯನ್ಸ್ ವಿರುದ್ಧ ಆರಂಭವಾದ 'ಟೆಸ್ಟ್' ಪಂದ್ಯದಲ್ಲಿ ಭಾರತ ಎ ತಂಡವು 90 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 409 ರನ್ ಗಳಿಸಿತು. ಇದಕ್ಕೆ ಕರುಣ್ (ಬ್ಯಾಟಿಂಗ್ 186; 246ಎ, 4X24, 6X1) ಅವರ ಶತಕ ಕಾರಣವಾಯಿತು. ಎಂಟು ರನ್‌ಗಳ ಅಂತರದಲ್ಲಿ ಶತಕ ಕೈತಪ್ಪಿಸಿಕೊಂಡ ಸರ್ಫರಾಜ್ ಖಾನ್ (92; 119ಎ) ಮತ್ತು ಕರುಣ್ 3ನೇ ವಿಕೆಟ್ ಜೊತೆಯಾಟದಲ್ಲಿ 181 ರನ್ ಸೇರಿಸಿದರು.

ಖಾನ್ ಔಟಾದ ನಂತರ ಕ್ರೀಸ್‌ಗೆ ಬಂದ ಜುರೇಲ್ (ಬ್ಯಾಟಿಂಗ್ 82, 104ಎ, 4X9, 6X1) ಕೂಡ ಬೀಸಾಟ ವಾಡಿದರು. 3ನೇ ವಿಕೆಟ್ ಜೊತೆಯಾಟದಲ್ಲಿ ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 177 ರನ್ ಪೇರಿಸಿದರು. ಮೂರನೇ ಕ್ರಮಾಂಕದಲ್ಲಿ ಕರುಣ್ ಸೊಗಸಾದ ಬ್ಯಾಟಿಂಗ್ ಪ್ರದರ್ಶಿಸಿದರು. ಮುಂದಿನ ತಿಂಗಳು ಇಂಗ್ಲೆಂಡ್ ಎದುರಿಗೆ ನಡೆಯಲಿರುವ ಟೆಸ್ಟ್ ಸರಣಿಯಲ್ಲಿ ಆಡುವ ಭಾರತ ತಂಡದಲ್ಲಿಯೂ ಕರುಣ್ ಸ್ಥಾನ ಪಡೆದಿದ್ದಾರೆ.

ಕರುಣ್

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಎ: 90 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 409 (ಯಶಸ್ವಿ ಜೈಸ್ವಾಲ್ 24, ಕರುಣ್ ನಾಯರ್ ಬ್ಯಾಟಿಂಗ್ 186, ಸರ್ಫರಾಜ್ ಖಾನ್ 92, ಧ್ರುವ್ ಜುರೇಲ್ ಬ್ಯಾಟಿಂಗ್ 82, ಜೋಶ್ ಹಲ್ 38ಕ್ಕೆ2, ಎಡ್ವರ್ಡ್ ಜ್ಯಾಕ್ 34ಕ್ಕೆ1): ಇಂಗ್ಲೆಂಡ್ ಲಯನ್ಸ್ ವಿರುದ್ಧ

'ರ‍್ಯಾಲಿ ಆಫ್ ಚಿಕ್ಕಮಗಳೂರು' ಇಂದಿನಿಂದ

ಚಿಕ್ಕಮಗಳೂರು: ಇಂಡಿಯನ್ ಮೋಟಾರ್ ಸ್ಪೋರ್ಟ್ಸ್–2025ರ ದಕ್ಷಿಣ ವಲಯದ ಮೊದಲನೇ ಸುತ್ತಿನ 'ರ‍್ಯಾಲಿ ಆಫ್ ಚಿಕ್ಕಮಗಳೂರು' ಕಾರ್ ರ‍್ಯಾಲಿ ಮೇ 31 ಮತ್ತು ಜೂನ್1 ರಂದು ನಗರದ ಸುತ್ತ ನಡೆಯಲಿದೆ. ವಿಜೇತರಿಗೆ ಟ್ರೋಫಿ ಹಾಗೂ ₹3.5 ಲಕ್ಷ ನಗದು ಬಹುಮಾನ ನೀಡಲಾಗುತ್ತದೆ ಎಂದು ಮೋಟರ್ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಜಯಂತ್ ಪೈ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎನ್‌ಆರ್‌ಜೆ ರಾಜ್ಯ ಸೀನಿಯರ್ ವಾಟರ್‌ಪೋಲೊ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದ ಬಸವನಗುಡಿ ಈಜು ಕೇಂದ್ರದ ಮಹಿಳಾ ತಂಡ

ವಾಟರ್ ಪೋಲೊ: ಬಿಎಸಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ಈಜು ಕೇಂದ್ರ (ಬಿಎಸಿ) ತಂಡಗಳು ಹಲಸೂರು ಕೆನ್ಸಿಂಗ್ಟನ್ ಈಜುಕೊಳದಲ್ಲಿ ನಡೆದ ಎನ್‌ಆರ್‌ಜೆ ರಾಜ್ಯ ಸೀನಿಯರ್ ವಾಟರ್‌ಪೋಲೊ ಚಾಂಪಿಯನ್‌ಷಿಪ್‌ನಲ್ಲಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದವು. ನೆಟ್ಟಕಲ್ಲಪ್ಪ ಈಜು ಕೇಂದ್ರದ (ಎನ್‌ಎಸಿ) ತಂಡಗಳು ಎರಡೂ ವಿಭಾಗದಲ್ಲಿ ರನ್ನರ್ಸ್ ಅಪ್ ಆದವು.

ಶುಕ್ರವಾರ ನಡೆದ ಪುರುಷರ ರೋಚಕ ಫೈನಲ್ ಹಣಾಹಣಿಯಲ್ಲಿ ಬಿಎಸಿ ತಂಡವು 12–11ರಿಂದ ಎನ್‌ಎಸಿ ತಂಡವನ್ನು ಮಣಿಸಿ ಚಿನ್ನ ಗೆದ್ದಿತು. ಎನ್‌ಎಸಿ ತಂಡವು ಬೆಳ್ಳಿ ಪದಕ ಗೆದ್ದುಕೊಂಡಿತು. ಕಂಚಿನ ಪದಕಕ್ಕೆ ನಡೆದ ಹಣಾಹಣಿಯಲ್ಲಿ ಸ್ಟಾರ್ ಅಕ್ವಟಿಕ್ಸ್ ತಂಡವು 16–13ರಿಂದ ಸ್ವಿಮ್‌ಲೈಫ್ ತಂಡವನ್ನು ಸೋಲಿಸಿತು.

ಮಹಿಳೆಯರ ವಿಭಾಗದಲ್ಲಿ ಎನ್‌ಎಸಿ ಮತ್ತು ಸ್ವಿಮ್‌ಲೈಫ್ ತಂಡಗಳು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದವು. ಚೈತನ್ಯ ಉಮಾಶಂಕರ್ (ಬಿಎಸಿ) ಉತ್ತಮ ಆಟಗಾರನಾಗಿ ಮತ್ತು ಉತ್ತಮ ಆಟಗಾರ್ತಿಯಾಗಿ ನಿತ್ಯಾ ಸಿ. (ಬಿಎಸಿ) ಹೊರಹೊಮ್ಮಿದರು.

ಏಷ್ಯನ್ ಅಥ್ಲೆಟಿಕ್ಸ್: ಚಿನ್ನದ ಬೇಟೆ ಮುಂದುವರಿಸಿದ ಭಾರತ

ಗುಲ್ವೀರ್, ಪೂಜಾ, ನಂದಿನಿಗೆ ಸ್ವರ್ಣ ಪದಕ

ಗುಮಿ(ದಕ್ಷಿಣ ಕೊರಿಯಾ), (ಪಿಟಿಐ): ದೂರ ಅಂತರದ ಓಟಗಾರ ಗುಲ್ವೀರ್ ಸಿಂಗ್ ಅವರು 5,000 ಮೀ. ಓಟದಲ್ಲಿ ಚಿನ್ನದ ಪದಕ ಗೆದ್ದುಕೊಂಡು ದಶಕದ ಹಿಂದಿನ ದಾಖಲೆ ಮುರಿದರು. ಅದೇ ಹಾದಿಯಲ್ಲಿ ಚಿನ್ನದ ಡಬಲ್ ಕೂಡ ಪೂರೈಸಿದರು. ಏಷ್ಯನ್ ಅಥ್ಲೆಟಿಕ್ ಕೂಟದಲ್ಲಿ ಭಾರತದ ಚಿನ್ನದ ಬೇಟೆ ಮುಂದುವರಿದಿದ್ದು, ಹೈಜಂಪ್‌ನಲ್ಲಿ ಪೂಜಾ ಸಿಂಗ್ ಮತ್ತು ಹೆಪ್ಟಾಥ್ಲಾನ್‌ನಲ್ಲಿ ನಂದಿನಿ ಅಗಸರ ಅವರೂ ಚಿನ್ನ ಗೆದ್ದು ಗಮನ ಸೆಳೆದರು.

ಐದು ದಿನಗಳ ಕೂಟದ ನಾಲ್ಕನೇ ದಿನವಾದ ಶುಕ್ರವಾರದವರೆಗೆ ಭಾರತ ಎಂಟು ಚಿನ್ನ, ಏಳು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳನ್ನು ಒಳಗೊಂಡಂತೆ 18 ಪದಕಗಳನ್ನು ಗಳಿಸಿ ಉತ್ತಮ ಪ್ರದರ್ಶನ ನೀಡಿದೆ. 2023ರ ಆವೃತ್ತಿಯಲ್ಲಿ ಪಡೆದಿದ್ದ 27 ಪದಕಗಳ ಸಾಧನೆ ದಾಟುವ ವಿಶ್ವಾಸದಲ್ಲಿದೆ. ಆ ವರ್ಷ ಆರು ಚಿನ್ನ ಗೆದ್ದಿದ್ದು, ಭಾರತ ಈಗಾಗಲೇ ಅದನ್ನು ಇಲ್ಲಿ ಉತ್ತಮಪಡಿಸಿದೆ.

ಕೂಟದ ಮೊದಲ ದಿನ 10000 ಮೀ. ಓಟದಲ್ಲಿ ಚಿನ್ನ ಗೆದ್ದಿದ್ದ ಗುಲ್ವೀರ್, ತೀವ್ರ ಪೈಪೋಟಿ ಕಂಡುಬಂದ ಪುರುಷರ 5000 ಮೀ. ಓಟದಲ್ಲೂ ಮೊದಲಿಗರಾಗಿ ದೇಶದ ಶ್ರೇಷ್ಠ ದೂರ ಅಂತರ ಓಟಗಾರರಲ್ಲಿ ಒಬ್ಬರಾಗಿ ಗುರುತಿಸಿಕೊಂಡರು. ಉತ್ತರ ಪ್ರದೇಶದ ಅತ್ರೌಲಿಯ ಗುಲ್ವೀರ್, 2023ರಲ್ಲಿ ಈ ಓಟದಲ್ಲಿ ಕಂಚಿನ ಪದಕ ಗಳಿಸಿದ್ದರು.

ರಾಷ್ಟ್ರೀಯ ದಾಖಲೆ ಹೊಂದಿರುವ ಗುಲ್ವೀರ್ 13ನಿ.24.77 ಸೆ. ಗಳೊಂದಿಗೆ ಓಟ ಪೂರೈಸಿ, ತಮಗೆ ತೀವ್ರ ಸ್ಪರ್ಧೆ ನೀಡಿದ್ದ ಥಾಯ್ಲೆಂಡ್‌ನ ಕೀರನ್ ತುಂತಿವೇಟ್ (13ನಿ.24.97 ಸೆ.) ಅವರನ್ನು ಹಿಂದೆಹಾಕಿದರು. ಜಪಾನ್‌ನ ನಗಿಯಾ ಮೊರಿ (13:25.06 ಸೆ.) ಕಂಚಿನ ಪದಕ ತಮ್ಮದಾಗಿಸಿಕೊಂಡರು. ಈ ಹಿಂದಿನ ಚಾಂಪಿಯನ್‌ಷಿಪ್ ದಾಖಲೆಯನ್ನು (13:34.47 ಸೆ.) ಕತಾರ್‌ನ ಮೊಹಮದ್ ಅಲ್ ಗರ್ನಿ ಅವರು 2015ರಲ್ಲಿ ಸ್ಥಾಪಿಸಿದ್ದರು.

ಈ ಹಿಂದೆ ಭಾರತದ ಜಿ.ಲಕ್ಷ್ಮಣನ್ ಮಾತ್ರ 2017ರಲ್ಲಿ 10,000 ಮೀ. ಮತ್ತು 5,000 ಮೀ. ಓಟಗಳಲ್ಲಿ ಚಿನ್ನ ಗೆದ್ದಿದ್ದಾರೆ.

18 ವರ್ಷ ವಯಸ್ಸಿನ ಪೂಜಾ ಅವರು ಲಾಂಗ್‌ಜಂಪ್‌ನಲ್ಲಿ ತಮ್ಮ ಐದನೇ 1.89 ಮೀ. ದೂರ ಜಿಗಿದು, ಉಜ್ಬೇಕಿಸ್ತಾನದ ಸಫಿನಾ ಸದುಲ್ಲೇವಾ (1.86 ಮೀ.) ಅವರನ್ನು ಎರಡನೇ ಸ್ಥಾನಕ್ಕೆ ತಳ್ಳಿದರು.

ಕಟ್ಟಡ ಕಾರ್ಮಿಕರ ಪುತ್ರಿ ಆಗಿರುವ ಹರಿಯಾಣದ ಹದಿಹರೆಯದ ಈ ಅಥ್ಲೀಟ್ ಪ್ರಮುಖ ಕ್ರೀಡಾಕೂಟಗಳಲ್ಲಿ ಉತ್ತಮ ಸಾಧನೆ ತೋರಿದ್ದಾರೆ. 2023ರಲ್ಲಿ ಏಷ್ಯನ್ 23 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದರು.

ಮೂರನೇ ಅಥ್ಲೀಟ್: ನಂದಿನಿ ಅವರು ಏಷ್ಯನ್ ಚಾಂಪಿಯನ್‌ಷಿಪ್‌ನ ಹೆಪ್ಟಥ್ಲಾನ್‌ನಲ್ಲಿ ಚಿನ್ನ ಗೆದ್ದ ಭಾರತದ ಮೂರನೇ ಅಥ್ಲೀಟ್ ಎನಿಸಿದರು. ಈ ಹಿಂದೆ ಸ್ವಪ್ನಾ ಬರ್ಮನ್ (2017) ಮತ್ತು ಸೋಮಾ ಬಿಸ್ವಾಸ್ (2005) ಚಿನ್ನ ಗೆದ್ದಿದ್ದರು.

ನಂದಿನಿ 5941 ಪಾಯಿಂಟ್ಸ್ ಸಂಗ್ರಹಿಸಿದರು. ಜಾವೆಲಿನ್ ಥ್ರೋನಲ್ಲಿ ಅವರು ಕಳಪೆ ಸಾಧನೆ (34.18 ಮೀ.) ತೋರಿದರೂ, 800 ಮೀ. ಓಟದಲ್ಲಿ ಉತ್ತಮ ಪ್ರದರ್ಶನ ನೀಡಿ ಮರಳಿ ಅಗ್ರಸ್ಥಾನಕ್ಕೆ ಲಗ್ಗೆಯಿಟ್ಟರು. ಚೀನಾದ ಲಿಯು ಜಿಂಗ್ವಿ (5869) ಬೆಳ್ಳಿ ಪದಕ ಗೆದ್ದರು.

ಮಹಿಳೆಯರ ಸ್ಟೀಪಲ್‌ಚೇಸ್‌ನಲ್ಲಿ ಹಾಲಿ ಚಾಂಪಿಯನ್ ಪಾರುಲ್ ಚೌಧರಿ ಬೆಳ್ಳಿಗೆ ತೃಪ್ತಿಪಡಬೇಕಾಯಿತು. ಅವರು 9ನಿ.12.46ಸೆ. ಅವಧಿ ತೆಗೆದುಕೊಂಡರು. ಕಜಕಸ್ತಾನದ ನೊರಾ ಜೆರುಟೊ ತನುಯಿ (9:10.46) ಮತ್ತು ಡೇಯ್ಸಿ ಜೆಪ್ಕೆಮಿ (9:27.51) ಕ್ರಮವಾಗಿ ಚಿನ್ನ ಮತ್ತು ಕಂಚಿನ ಪದಕ ಪಡೆದರು.

ಜಾವೆಲಿನ್ ಫೈನಲ್: ಭಾರತದ ಸಚಿನ್ ಯಾದವ್ ಮತ್ತು ಯುದ್ಧವೀರ್ ಸಿಂಗ್ ಅವರು 12 ಸ್ಪರ್ಧಿಗಳನ್ನು ಒಳಗೊಂಡಿರುವ ಜಾವೆಲಿನ್ ಥ್ರೊ ಫೈನಲ್ ಸುತ್ತಿಗೆ ಅರ್ಹತೆ ಪಡೆದರು. ಒಲಿಂಪಿಕ್ ಚಾಂಪಿಯನ್ ಅರ್ಷದ್ ನದೀಮ್ (ಪಾಕಿಸ್ತಾನ) ಸಹ ಅಂತಿಮ ಸುತ್ತಿಗೆ ಮುನ್ನಡೆದಿದ್ದಾರೆ.

ಸಚಿನ್ 79.62 ಮೀ. ದೂರ ಎಸೆದರೆ, ಯುದ್ಧವೀರ್ 76.67 ಮೀ. ದೂರ ಥ್ರೋ ಮಾಡಿದರು. ಅರ್ಹತಾ ಸುತ್ತಿನಲ್ಲಿ ನದೀಮ್ 86.34 ಮೀ. ದೂರ ಎಸೆದು ಮೊದಲಿಗರಾದರು.

ಗುಲ್ವೀರ್ ಸಿಂಗ್

ಪೂಜಾ ಸಿಂಗ್

ಪುರುಷರ ರಿಲೇ ತಂಡ ಅನರ್ಹ

ಭಾರತದ ಪುರುಷರ 4x100 ಮೀ ರಿಲೇ ತಂಡವನ್ನು, ಬ್ಯಾಟನ್ ವಿನಿಯಮದ ವೇಳೆ ಆದ ಲೋಪದ ಕಾರಣ ಪೂರ್ವಭಾವಿ ಸುತ್ತಿನ ವೇಳೆ ಅನರ್ಹಗೊಳಿಸಲಾಗಿತ್ತು. ಪ್ರಣವ್ ಪ್ರಮೋದ್ ಗುರವ್, ರಗುಲ್ ಕುಮಾರ್ ಗನೇಶ್, ಮಣಿಕಂಡ ಹೋಬಳಿದಾರ ಮತ್ತು ಆಮ್ಲನ್ ಬೊರ್ಗೊಹೈನ್ ಅವರು ತಂಡದಲ್ಲಿದ್ದು, ವಿಶ್ವ ಅಥ್ಲೆಟಿಕ್ಸ್‌ನ ತಾಂತ್ರಿಕ ನಿಯಮ 24.7 ಉಲ್ಲಂಘಿಸಿದ ಕಾರಣ ಅನರ್ಹಗೊಳಿಸಲಾಯಿತು. ಇಂಥಹದೇ ಕಾರಣಕ್ಕೆ ಮಲೇಷ್ಯಾದ ತಂಡವನ್ನೂ ಅನರ್ಹಗೊಳಿಸಲಾಯಿತು.

ಪಿಕೆಎಲ್: ಆಟಗಾರರ ಹರಾಜು ಇಂದಿನಿಂದ

ಮುಂಬೈ: ಪ್ರೊ ಕಬಡ್ಡಿ ಲೀಗ್ (ಪಿಕೆಎಲ್) 12ನೇ ಆವೃತ್ತಿಯ ಆಟಗಾರರ ಹರಾಜು ಪ್ರಕ್ರಿಯೆ ಮೇ 31 ಮತ್ತು ಜೂನ್ 1ರಂದು ಮುಂಬೈನಲ್ಲಿ ನಡೆಯಲಿದೆ. ಲೀಗ್‌ನಲ್ಲಿರುವ 12 ಫ್ರಾಂಚೈಸಿಗಳು ಬಲಿಷ್ಠ ಆಟಗಾರರನ್ನು ತನ್ನತ್ತ ಸೆಳೆಯಲು ಪೈಪೋಟಿ ನಡೆಸಲಿವೆ.

ಒಟ್ಟು 83 ಆಟಗಾರರನ್ನು 12 ತಂಡಗಳು ತನ್ನಲ್ಲೇ ಉಳಿಸಿಕೊಂಡಿವೆ. ಅನುಭವಿಗಳಾದ ಪವನ್ ಸೆಹ್ರಾವತ್, ಅರ್ಜುನ್ ದೇಶ್ವಾಲ್, ಆಶು ಮಲಿಕ್, ದೇವಾಂಕ್ ದಲಾಲ್, ನವೀನ್ ಕುಮಾರ್, ಮತ್ತು ಫಜಲ್ ಅತ್ರಾಚಲಿ ಮುಂತಾದವರು ತಂಡಗಳಿಂದ ಬಿಡುಗಡೆಯಾಗಿದ್ದಾರೆ. ಹರಾಜಿನಲ್ಲಿ ದೇಶ, ವಿದೇಶಗಳ 500ಕ್ಕೂ ಹೆಚ್ಚು ಆಟಗಾರರು ಪಾಲ್ಗೊಳ್ಳಲಿದ್ದಾರೆ.

ಉಜ್ಬೇಕಿಸ್ತಾನಕ್ಕೆ ಮಣಿದ ಭಾರತ

ಬೆಂಗಳೂರು: ಆತಿಥೇಯ ಭಾರತ ಮಹಿಳಾ ಫುಟ್‌ಬಾಲ್ ತಂಡವು ಇಲ್ಲಿ ಶುಕ್ರವಾರ ನಡೆದ ಫಿಫಾ ಅಂತರ ರಾಷ್ಟ್ರೀಯ ಸೌಹಾರ್ದ ಪಂದ್ಯಗಳಲ್ಲಿ 0–1 ಗೋಲಿನಿಂದ ಉಜ್ಬೇಕಿಸ್ತಾನ ತಂಡದ ವಿರುದ್ಧ ಪರಾಭವಗೊಂಡಿತು.

ಇಲ್ಲಿನ ಪಡುಕೋಣೆ- ದ್ರಾವಿಡ್ ಸೆಂಟರ್ ಫಾರ್ ಸ್ಪೋರ್ಟ್ಸ್ ಎಕ್ಸಲೆನ್ಸ್‌ನಲ್ಲಿ ನಡೆದ ಪಂದ್ಯದಲ್ಲಿ ದಿಯೋರಾಖೋನ್ ಖಬಿಬುಲ್ಲಾಯೆವಾ ಅವರು 56ನೇ ನಿಮಿಷದಲ್ಲಿ ಉಜ್ಬೇಕಿಸ್ತಾನ ಪರ ಗೆಲುವಿನ ಗೋಲು ದಾಖಲಿಸಿದರು.

ಜೂನ್ 3ರಂದು ಎರಡನೇ ಸೌಹಾರ್ದ ಪಂದ್ಯದಲ್ಲಿ ಈ ತಂಡಗಳು ಮತ್ತೆ ಮುಖಾಮುಖಿಯಾಗಲಿವೆ.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

CHRIST ACADEMY
INSTITUTE FOR ADVANCED STUDIES
Your Future, Redefined

10 YEARS CAIAS
Light to Enlighten

PG courses
MBA
MCom
MCA
MSc
MA

UG courses
BBA
BUSINESS ANALYTICS
BCA
AI&ML | DS
BCom
CA | ACCA
BSC
PCMS | PJCS
B.A.
JPE

Scan to Check your Eligibility

For more Details:
+91-8884 421053
admissions@caias.in
www.caias.in
Christ Nagar, Hullahalli, Begur-Koppa Road, Sakkalwara Post, Bengaluru 560 083

Call for Registration
8884421053,
8884421057,
8884421052

ಪೊಲೀಸ್ ಇಲಾಖೆಯ ಅನರ್ಘ್ಯರತ್ನ

ಶ್ರೀ ಬಿ.ಉಮೇಶ್
ಉಪ ಪೊಲೀಸ್ ಆಯುಕ್ತರ ಆಪ್ತ ಸಹಾಯಕರು
ಪೂರ್ವ ವಿಭಾಗ, ಬೆಂಗಳೂರು ನಗರ

1989ರಲ್ಲಿ ಕರ್ನಾಟಕ ಸರ್ಕಾರದ ಶೀಘ್ರಲಿಪಿಗಾರರ ಹಾಗೂ ಬೆರಳಚ್ಚುಗಾರರ ಆಯ್ಕೆ ಪ್ರಾಧಿಕಾರದಿಂದ ನೇಮಕಾತಿ ಹೊಂದಿ, 36 ವರ್ಷಗಳ ವೃತ್ತಿಬದುಕಿನಲ್ಲಿ ಘನತೆ, ಪ್ರಾಮಾಣಿಕತೆ, ಶಿಸ್ತು, ಸವಿನಯಗಳಿಂದ ಕೂಡಿದ ನಡವಳಿಕೆಯಿಂದಲೇ ಎಸ್.ಪಿ., ದರ್ಜೆಯಿಂದ ಎ.ಡಿ.ಜಿ.ಪಿ., ದರ್ಜೆವರೆಗಿನ 26ಕ್ಕೂ ಹೆಚ್ಚು ಐ.ಪಿ.ಎಸ್., ಅಧಿಕಾರಿಗಳ ಮನಸ್ಸು ಗೆದ್ದು, ನಿಷ್ಕಳಂಕ ಸೇವೆ ಸಲ್ಲಿಸಿ, ಇಂದು ವಯೋನಿವೃತ್ತಿ ಹೊಂದುತ್ತಿರುವ ನನ್ನ ವಿದ್ಯಾರ್ಥಿ, ಸದ್ಗುಣ ಸಂಪನ್ನ ಶ್ರೀ ಬಿ.ಉಮೇಶ್‌ರವರ ಭವಿಷ್ಯ ಉಜ್ವಲವಾಗಿರಲೆಂದು ಹಾರೈಸುತ್ತೇನೆ.

ಡಾ: ವಿ.ಪಿ.ಕುಮಾರಸ್ವಾಮಿ, ಎಂ.ಎ., ಬಿ.ಎಡ್.,
ನಿವೃತ್ತ ಮುಖ್ಯೋಪಾಧ್ಯಾಯರು

REAL ESTATE SELLING

Sites

Anjanapura

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call:9964627255

ANJANAPURA 2ND Block 40×60 East Facing Ready To Construct BDA Site For Sale Contact: 9972223222

Banashankari

BANASHANKARI 6TH Stage, 9th Block, #33/A, 40x60 S/F, 100 Feet Parallel, 2.60Cr. Negotiable. OWNER: 9799099699, 9740075563.

"AVAILABLE' WANTED, BDA Sites Banashankari 6TH Stage, 20x30, 30x40, 40x60, 50x80,Genuine Buyers/Sellers 9902764626, 9513332646

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

AVAILABLE BANSHANKARI 6TH STAGE, 6TH BLOCK, 20×30 #971 W/F 68 LAKHS CONTACT OWNER 8050908920

AUCTION BDA 30x40 Site for Sale, N/W Corner, 6th Stage,4th Block. Broker Excuse. Contact: 9845753489.

Basaweshwaranagar

BASVESHWARNAGAR RESIDENTIAL 40×60 East, North and Commercial 40×60 South Facing Super Location Immediate Sale 8660075308

Devanahalli

DC CONVERSION DTCP Approved 'A' KATHA 20x40 site 7,00,000/-. Gated Community Ready Registration. DEVANAHALLI 9663884211

Kanakapura Road

50X28 NORTH facing E Khata DC conversion Site for sale, Manjunatha layout, Raghuvanahalli. Mob. 9008030008/ 9844133389

Koppal

FOR SALE: 4 SITES Total-5200 Sqft at Hanumasagara city, Koppal District, State Highway-59. Contact: 9902752633 (Brokers excuse).

DH Classifieds
DECCAN HERALD
More value, more impact
ಪ್ರಜಾವಾಣಿ

REAL ESTATE

BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY

@ 2481/-*
FOR 15 WORDS

www.dhclassifieds.com
BOOK NOW
*Conditions apply

Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164

Kempegowda Layout

SITE FOR SALE Kempegowda layout 41 block 6th 80ft Road 50/80 East, 4734 block 5th 40ft Road 40/60 East, 5718 block 5th 100ft Road 34/60 West, Owner Meeting: 8884709409/ 7899570235

KEMPEGOWDA LAYOUT 50x80,Site #4233,West-facing 3rd Block"L"sector 300feet-road and 40x60 Site #547,East-facing 1st Block "K"sector 40feet-road. Contact:9845143613

KEMPEGOWDA LAYOUT, Commercial/ Residential BDA Site for Sale 30x40, 40x60, 50x80. Contact Kumar 9945119449

Outer Ring Road

93,547SFT, DC Converted, Clear Title, Fully Compounded, Prime Site, suitable for both Commercial and Residential development, with 280ft frontage, facing 120ft, 6 lane ring road, close to Tata Value homes, on Nelmangala-Devenahalli Road for sale. Sainath: 9886371998.

Vishweshwariah Layout

BDA-SITE FOR-SALE 30x40 East Facing at Sir.M Vishveshwaraiya Layout 1st & 3rd Block Good Location Call:7676900174 6363496142

DC CONVERTED BBMP E-Katha Sites Available for Sale Visveswaraiah Layout East & West Facing Measuring 3500 Sqft to 9000 Sqft 6366232222/ 6366242222

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

"50X80 EF 60 FEET ROAD VISHWESHWARAIH LAYOUT 6TH BLOCK [80% WHITE] BDA SITE SALE-9845143579"

VISVESWARAIAH LAYOUT 8th Block 30x40 BDA Site For Sale, 40' Road 14000/- Per Sft.:9845488488

Kodigehalli

KODIGEHALLI MUNISWAMAPPA LAYOUT 1150 Sft. South Face, Site for Sale. Price 6500/- Sft. Call: 7019135289.

Agricultural Land

Nelamangala

4.5 ACRE Land Available For Sale at Nelamangala Contact: 99161 19936

Sunkadakatte

LAND FOR Sale 16000 Sqft, A Khatha, East Facing Hegganahalli Cross Bengaluru- 91: 9900287834/ 9448377834

Flat

Basaveshwaranagar

FULLY FURNISHED1950SQFT 3BHK 2nd Floor Flatwith lift, Car parking for saleKirloskar Colony 2ndStage1.50Cr Mob:9611230511/9740398605

Kanakapura Road

SALE LUXURY 2/3 BHK Apartment Starts from 8599/-sft at Doddakalasandra, Near Forum Mall. Contact:7204020888 7204030888

House

HRBR Layout

SALE NORTH facing New Architect Design Triplex House in HRBR 3rd Block 4BHK all attach+study, marble/ vitrified, woodwork, carpark. 4.10Crores 'CONNECTIONS'-9945449432

Indiranagar

PROPERTY FOR SALE DEFENCE COLONY INDIRA NAGAR BLR 8000,7000 sqft. Contact: 9448056966

Sanjaynagar

NAGASHETTIHALLI-SANJAYNAGAR HOUSE for Sale 30X45 South Face G +1 Brokers excuse 9880886377

Vishweshwariah Layout

HOUSE FOR Sale BDA Property located at Vishveshwaraiah Layout 4 floors triplex house, single occupancy, lift facility, water facility with corporation and borewell. 3.95cr, slightly negotiable with bank loan available. Call: 9980990656.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

REAL ESTATE BUYING

Commercial Land

Sarjapur Road

WANTED COMMERCIAL sites Sarjapur Road 10,000-40,000sft, Basavangudi- 1 acre, Hoskote- Narsapur 25 acres. 9538254365

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Kanakapura Road

WANTED SITE 30X40, Anjanapura BDA and Kanakapura Road for Investment. Agents Excuse. Call: 9663454878.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

DS MARCOM Properties and Promoter Presents
DS PROPERTIES AND PROMOTER
CRS Enclave
SITES FOR SALE
BMRDA Approved 'A' KHATA
NPA Approved Individual sites for sale Ready for Registration and Constructions
Bank Loan Available upto 80% Nationalised Bank
@ Nelamangala Near Nelamangala Railway Station
9611166681, 9606342643
web:dsmarcom.com Email: info@dsmarcom.com

WANTED PLOTS 1000 to 3000 Sqft BDA/ BDA Approved Layouts 25-30 Kms Radius From MG Road. FALCON 9845447868/ 9845061345 whatsapp message

RENTAL PROPERTIES

Accommodation Available

Commercial

COMMERCIAL OFFICE for RENT 2400 or 4500 SFT Furnished. OC available. Near Yeshwanthpur Metro. Contact: 9916155055.

BANASWADI FOR RENT SHOWROOM SPACE GROUND FLOOR5000+1500-6,500 Sqft NEAR BANASWADI MAIN ROAD: 9845350609

House

SPACIOUS 3 BHK DUPLEX INDEPENDENT HOUSE FOR RENT, NO. 65, 2nd Cross GRACE TOWN HENNUR. 9845044777/7338044777

2 BHK semi-furnished house 1st & 2nd floor with lift near Kengeri Metro 9448479766

Accommodation Wanted

Commercial

MULTINATIONAL E-COMMERCE COMPANY WANTED 3000-50000SQFT COMMERCIAL SPACE, GODOWN, WAREHOUSE FOR RENT IN BANGALORE "HN": 9900339878/9019144869

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

MORE Classifieds IN MAIN ISSUE

BUSINESS

Business to Business

Business

CORPORATE SALES TRAINING. Don't send them to field without giving Marketing skills. Call for a demonstration. Dr. Swamynaidu, MBA U.S.A. Vamshadhara Sales School, Bangalore. Mobile-9342247637.

GOA WINE/ Hot Drink Bottling Factory with 2.5 Acre industrial land with all Licences, water, proven brands for sale. Direct owners Link. Contact:- Dr. Swamy. Vamshadhara Consultants:- 9342247637.

SUITABLE AGENCY for Agriculture Borewell work at Chickballapur. Contact: 9845286168.

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

DS-MAX PROPERTIES

EXPERIENCE THE JOY OF LIVING

www.dsmaxproperties.com

DS-MAX SISTA GRAND

PRM/KA/RERA/1251/310/PR/151223/006489

ಡಿಎಸ್ ಮ್ಯಾಕ್ಸ್ ಸಿಸ್ಟಾ ಗ್ರಾಂಡ್

Banashankari

OPP. NATIONAL PUBLIC SCHOOL

Super Luxurious

3 & 4-BHK APARTMENTS | BBMP APPROVED

3-BHK STARTS @ ₹ 1.05 Cr*

4-BHK STARTS @ ₹ 1.96 Cr*

8050 161 222

2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1250/304/PR/150224/006622
WHITEFIELD
ON SOUKYA ROAD
₹ 60.84 L - 1.01 Cr*
8088 773 773

PRM/KA/RERA/1251/310/PR/150223/005721
MYSORE ROAD
NEAR RR DENTAL COLLEGE
₹ 59.56 - 87.47 Lakhs*
8088 445 445

PRM/KA/RERA/1250/301/PR/251024/007178
YELAHANKA
5 MINS. RAJANUKUNTE
₹ 49.36 L - 88.53 Lakhs*
8880 758 758

PRM/KA/RERA/1251/308/PR/160824/006972
ELECTRONIC CITY
10 MINS. HOSA ROAD METRO
₹ 62.26 L - 1.24 Cr*
9164 045 000

PRM/KA/RERA/1251/308/PR/160824/006973
BANNERGHATTA RD
NEAR KOPPA GATE
₹ 56.64 - 93.23 Lakhs*
8880 461 461

PRM/KA/RERA/1251/309/PR/060923/006244
TUMKUR ROAD
10 MINS. MADAVARA METRO
₹ 57.20 - 91.68 Lakhs*
8880 465 465

PRM/KA/RERA/1251/310/PR/210324/006724
SILKBOARD
NEAR SINGASANDRA METRO
₹ 79.10 L - 1.22 Cr*
8880 472 472

PRM/KA/RERA/1251/308/PR/290122/004660
SARJAPURA
SARJAPUR - ATTIBELE RD
₹ 43.68 - 48.87 Lakhs*
9164 122 000

PRM/KA/RERA/1251/308/PR/280222/004739
CHANDAPURA
10 MINS. BOMMASANDRA METRO
₹ 42.30 - 55.80 Lakhs*
8880 013 310

PRM/KA/RERA/1250/304/PR/251024/007179
WHITEFIELD
15 MINS. HOPEFARM METRO
₹ 72.34 L - 1.30 Cr*
8880 003 003

TRENDING PROJECT

PRM/KA/RERA/1251/472/PR/250225/007524
AIRPORT ROAD
NAVARATHNA AGRAHARA
₹ 68.64 L - 1.18 Cr*
8880 073 370

FACILITY MANAGEMENT SERVICES

For Apartment & Commercial Complexes

MEP | Security Services | Gardening | Landscaping
STP | WTP | RO Maintenance | Housekeeping
Swimming Pool Maintenance

CALL : 9164 022 000

ELEGANT INTERIORS



Directly From Our Factory

Modular Kitchens | TV Units | Wardrobes
Painting & Wallpapers | Storage Units
False Ceilings | Furniture

CALL : 9164 056 000

REFER & EARN

Refer Us To Your Friends & Relatives
And Get Handsomely Rewarded

2, 3 & 4-BHK Homes | Full / Partial Interiors
Facility Management Services
(For Apartment & Commercial Complexes) *T & C Apply

CALL : 9164 043 000

REFER & EARN

Refer Us To A Landowner For
JV / Outright Purchase In Any Part Of
Bengaluru And Get A 2-BHK
ABSOLUTELY FREE*

Residential Land | Commercial Land

*T & C Apply

CALL : 8880 463 463

ಡಿಎಸ್ ಮ್ಯಾಕ್ಸ್

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

*T & C Apply

CREDAI BENGALURU

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

• 50+ Amenities • 76% Open Space • As per Vastu • No Common Walls • North & East Facing Flats Only

• Kengeri Metro Station - 400 Mtrs • BGS Global Hospital - 2 KM • Gopalan Arcade Mall - 6 KM • Raja Rajeshwari Temple - 5 KM

V2 HOLDINGS
HDPL

V2 Vajra Elegance,
Uttarahalli Main Road, (Dr. Vishnuvardhan Road), Kengeri, Bengaluru - 560060.
www.v2holdings.co | v2vajraelegance@gmail.com, v2holdings.blr@gmail.com

Scan QR code for location

Call: 99452 55550 | 99452 55552 | 99452 55553

ATRIA UNIVERSITY

India's Only Future-Ready Engineering Education
ADMISSIONS OPEN 2025

m2e eduportal since 2001 MYMATHEWS EDUCARE PVT LTD

Located in the Heart of Bangalore | 4-Year B.S. (Engg.) Degrees | NEP Aligned

Why Choose Atria University?

- Freedom to Choose Major-Minor Combination
- Build 40+ Project Portfolio
- Industry Oriented Sprint Style Curriculum
- Gain 12 Months of Internship Experience
- Pursue Startup Dreams at Beyonder Studios
- Top Indian and Foreign University Collaborations
- Upto 90% Scholarships

Study High-Growth Domain Majors

- Digital Transformation (Computer Science-AI | ML)
- Life Sciences
- Energy Sciences
- eMobility (Mechanical & Automotive)
- Sustainable Entrepreneurship

Internship and Placement Opportunities

pwc, amazon, IBM, Microsoft, VOLVO INDIA, RC Labs, Tata Memorial Centre

Contact Us
+91 82810 10862